ಸೋಮವಾರ, ಜುಲೈ 15, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 196 | ಪುಟ 12
• www.prajavani.net
prajavani.net prajavani prajavani prajavani

ಪ್ರಜಾ ವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ವಿಂಬಲ್ಡನ್ ಚಾಂಪಿಯನ್
ಸ್ಪೇನ್ ದೇಶದ ಆಟಗಾರ ಕಾರ್ಲೋಸ್ ಅಲ್ಕರಾಜ್ ಅವರು ಭಾನುವಾರ ವಿಂಬಲ್ಡನ್ ಟೆನಿಸ್ ಪ್ರಶಸ್ತಿ ಜಯಿಸಿ ಸಂಭ್ರಮಿಸಿದರು...

ವಿದೇಶ ವಿದ್ಯಮಾನ
ಅಮೆರಿಕ: ಆಟಿಕೆ ಆದ ಬಂದೂಕು
ಮುಡಾ: ತನಿಖೆಗೆ ಏಕ ಸದಸ್ಯ ಆಯೋಗ ರಚನೆ 2
46 ವರ್ಷದ ಬಳಿಕ ತೆರೆದ 'ರತ್ನ ಭಂಡಾರ' 9

ಇಂದಿನಿಂದ ಅಧಿವೇಶನ • ಪ್ರತಿಪಕ್ಷಗಳಿಗೆ ಅಸ್ತ್ರವಾದ ಹಗರಣಗಳ ಆರೋಪಗಳು

ವಿಧಾನಮಂಡಲ: ಕದನಕ್ಕೆ ಕಣ ಸಜ್ಜು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರಣಿಯೋಪಾದಿಯಲ್ಲಿ ಹೊರ ಬರುತ್ತಿರುವ ಹಗರಣ ಆರೋಪಗಳು ವಿಧಾನಮಂಡಲದ ಮುಂಗಾರು ಅಧಿವೇಶನದ ಹೊಸ್ತಿಲಲ್ಲೇ ವಿರೋಧ ಪಕ್ಷಗಳ ಕೈಗೆ ಬಲವಾದ ಅಸ್ತ್ರಗಳನ್ನು ಒದಗಿಸಿವೆ. ಸೋಮವಾರದಿಂದ ಆರಂಭವಾಗುವ ಮುಂಗಾರು ಅಧಿವೇಶನದಲ್ಲಿ ಹಗರಣಗಳ ಅಸ್ತ್ರವನ್ನೇ ಮುಂದಿಟ್ಟುಕೊಂಡು ಸರ್ಕಾರವನ್ನು ಕಟ್ಟಿಹಾಕಲು ಪ್ರತಿಪಕ್ಷಗಳು ಅಣಿಯಾಗಿವೆ. ಪ್ರತ್ಯಸ್ತ್ರಗಳೊಂದಿಗೆ ಸರ್ಕಾರವೂ ಸಿದ್ಧವಾಗುತ್ತಿದೆ. ಈ ಜಟಾಪಟಿಯಲ್ಲಿ ಕಲಾಪವು 'ಕದನ ಕಣ'ದಂತಾಗುವ ಲಕ್ಷಣಗಳಿವೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ 14 ತಿಂಗಳು ಪೂರೈಸಿದೆ. ಈವರೆಗಿನ ನಾಲ್ಕು ಅಧಿವೇಶನಗಳಿಗೆ ಹೋಲಿಸಿದರೆ ಈ ಬಾರಿ ವಿರೋಧ ಪಕ್ಷಗಳು ಗಟ್ಟಿ ದನಿಯಲ್ಲಿ ಗರ್ಜಿಸುವ ಸಂಭವವಿದೆ. ವಿರೋಧ ಪಕ್ಷಗಳಾದ ಬಿಜೆಪಿ ಮತ್ತು ಜೆಡಿಎಸ್ ಬಲವಾಗಿ ಒಗ್ಗೂಡಿದ್ದು, ಜಂಟಿ ಹೋರಾಟದಲ್ಲಿ ಸರ್ಕಾರವನ್ನು ಮಣಿಸುವ ಹುರುಪಿನಲ್ಲಿವೆ.

ಒಟ್ಟು ಒಂಬತ್ತು ದಿನ ವಿಧಾನ ಮಂಡಲದ ಕಲಾಪ ನಡೆಯಲಿದೆ. ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನಗಳ ಅಕ್ರಮ ಹಂಚಿಕೆ ಆರೋಪ, ಪರಿಶಿಷ್ಟ ಜಾತಿ ಉಪ ಯೋಜನೆ (ಎಸ್‌ಸಿಎಸ್‌ಪಿ) ಮತ್ತು ಪರಿಶಿಷ್ಟ ಪಂಗಡಗಳ ಉಪ ಯೋಜನೆ (ಟಿಎಸ್‌ಪಿ) ಅನುದಾನವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸುವುದು, ವರ್ಗಾವಣೆ ದಂಧೆಯ ಆರೋಪ, ಡೆಂಗಿ ನಿರ್ವಹಣೆಯಲ್ಲಿ ವೈಫಲ್ಯ, ರೈತರ ಆತ್ಮಹತ್ಯೆ, ರಾಜ್ಯ ಸರ್ಕಾರದ ಆರ್ಥಿಕ ಬಿಕ್ಕಟ್ಟು ಸೇರಿದಂತೆ ಹಲವು ವಿಷಯಗಳ ಕುರಿತು ಚರ್ಚೆಗೆ ಪಟ್ಟು ಹಿಡಿಯಲು ವಿರೋಧ ಪಕ್ಷಗಳು ತಯಾರಿ ಮಾಡಿಕೊಂಡಿವೆ.

ವಾಲ್ಮೀಕಿ ನಿಗಮದ ಸದ್ದು: ಲೋಕಸಭಾ ಚುನಾವಣೆಯ ಬೆನ್ನಲ್ಲೇ ಕರ್ನಾಟಕ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಬ್ಯಾಂಕ್ ಖಾತೆಯಿಂದ ₹94 ಕೋಟಿ ಅಕ್ರಮವಾಗಿ ವರ್ಗಾವಣೆಯಾಗಿರುವ ಹಗರಣ ಹೊರಬಂದಿತ್ತು.

5ನೇ ಪುಟ ನೋಡಿ

ಸಂಗ್ರಹ ಚಿತ್ರ

ವಿರೋಧ ಪಕ್ಷಗಳಲ್ಲಿ ಒಗ್ಗಟ್ಟು

ಹಿಂದಿನ ಅಧಿವೇಶನಗಳಿಗಿಂತ ಈ ಬಾರಿ ಬಿಜೆಪಿ–ಜೆಡಿಎಸ್ ಒಗ್ಗಟ್ಟು ಬಲವಾಗಿದೆ. ಜೆಡಿಎಸ್ ಈಗ ಅಧಿಕೃತವಾಗಿ ಎನ್‌ಡಿಎ ಮೈತ್ರಿಕೂಟದ ಭಾಗವಾಗಿರುವುದರಿಂದ ಬಿಜೆಪಿ ಜತೆ ಸೇರಿ ಸರ್ಕಾರದ ವಿರುದ್ಧ ಬಲವಾಗಿಯೇ ಹೋರಾಟಕ್ಕೆ ಇಳಿಯುವ ನಿರೀಕ್ಷೆ ಇದೆ. ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರು ಕೆಲವು ದಿನಗಳಿಂದ ಜೋರು ದನಿಯಲ್ಲೇ ಸರ್ಕಾರದ ವಿರುದ್ಧ ವಾಗ್ದಾಳಿಗೆ ಇಳಿದಿದ್ದಾರೆ. ಈ ಬಾರಿ ಸರ್ಕಾರದ ವಿರುದ್ಧ ಸಿಕ್ಕಿರುವ ಹಗರಣಗಳ 'ಅಸ್ತ್ರ'ವನ್ನು ಜೋರಾಗಿಯೇ ಬಳಸಿಕೊಳ್ಳುವ ಸಾಧ್ಯತೆ ಇದೆ.

5ನೇ ಪುಟ ನೋಡಿ

'ಕೈ'ಗೆ ಶಾಸಕರ ಮುನಿಸಿನದ್ದೇ ಸಮಸ್ಯೆ

ಆಡಳಿತಾರೂಢ ಕಾಂಗ್ರೆಸ್‌ನಲ್ಲಿ ಹಲವು ಶಾಸಕರು ಸಚಿವರ ವಿರುದ್ಧ ಮುನಿಸಿಕೊಂಡಿದ್ದಾರೆ. ಅನುದಾನ ಹಂಚಿಕೆ, ಅಧಿಕಾರಿಗಳ ವರ್ಗಾವಣೆ ವಿಚಾರದಲ್ಲಿ ಸಚಿವರು ತಮ್ಮದೇ ಪಕ್ಷದ ಶಾಸಕರ ಮಾತಿಗೆ ಬೆಲೆ ಕೊಡುತ್ತಿಲ್ಲ ಎಂಬ ದೂರುಗಳಿವೆ. ಸಚಿವರು ತಮಗೆ ಗೌರವ ಕೊಡುತ್ತಿಲ್ಲ ಎಂಬ ಸಿಟ್ಟೂ ಕಾಂಗ್ರೆಸ್ ಶಾಸಕರಲ್ಲಿದೆ.

ಸಚಿವರ ವಿರುದ್ಧ ಅಸಮಾಧಾನಗೊಂಡಿರುವ ಶಾಸಕರು, ವಿಧಾನಮಂಡಲದೊಳಗೆ ಪ್ರತಿಪಕ್ಷಗಳನ್ನು ಪ್ರಬಲವಾಗಿ ಎದುರಿಸದೇ ಅಸಹಕಾರ ಧೋರಣೆ ತಳೆದರೆ ಕಷ್ಟವಾಗಬಹುದು ಎಂಬ ಚಿಂತೆ ಕಾಂಗ್ರೆಸ್ ನಾಯಕರಲ್ಲಿದೆ. ಅಧಿವೇಶನದ ಹೊತ್ತಿನಲ್ಲೇ ಶಾಸಕರ ಮುನಿಸು ತಣಿಸುವ ಕೆಲಸವೂ ಆರಂಭವಾಗಿದೆ ಎನ್ನುತ್ತವೆ ಮೂಲಗಳು.

ಕಾವೇರಿ ನೀರು ನಿಯಂತ್ರಣ ಸಮಿತಿಯ ಸೂಚನೆಗೆ ಸಂಬಂಧಿಸಿ ಸರ್ವಪಕ್ಷ ಸಭೆ

ತಮಿಳುನಾಡಿಗೆ ನೀರು: ಮೇಲ್ಮನವಿಗೆ ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಮಿಳುನಾಡಿಗೆ ನಿತ್ಯ 8 ಸಾವಿರ ಕ್ಯುಸೆಕ್ ನೀರು ಬಿಡಲು ಮತ್ತು ಜುಲೈ 12ರಿಂದ ಈ ತಿಂಗಳ ಕೊನೆಯವರೆಗೆ ಸುಮಾರು 20 ದಿನ ನಿತ್ಯ ಒಂದು ಟಿಎಂಸಿ ಅಡಿ ನೀರು ಹರಿಸುವಂತೆ ಕಾವೇರಿ ನೀರು ನಿಯಂತ್ರಣ ಸಮಿತಿಯ ಆದೇಶವನ್ನು ವಿರೋಧಿಸಿ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಕಾವೇರಿ ನೀರು ಹರಿಸುವ ಕುರಿತು ಕಾವೇರಿ ನೀರು ನಿಯಂತ್ರಣ ಸಮಿತಿ ಹೊರಡಿಸಿರುವ

ಸಾಮಾನ್ಯವಾಗಿ ಜೂನ್ ತಿಂಗಳಲ್ಲಿ 9.40 ಟಿಎಂಸಿ ಅಡಿ, ಜುಲೈನಲ್ಲಿ 31.24 ಟಿಎಂಸಿ ನೀರು ತಮಿಳುನಾಡಿಗೆ ಹರಿಸಬೇಕಾಗಿದೆ. ಆದರೆ, ಈ ಎರಡೂ ತಿಂಗಳಲ್ಲಿ ಒಟ್ಟು 5 ಟಿಎಂಸಿ ಅಡಿಗೂ ಹೆಚ್ಚು ನೀರು ಬಿಡಲು ಸಾಧ್ಯವಾಗಿದೆ

ಸಿದ್ದರಾಮಯ್ಯ, ಮುಖ್ಯಮಂತ್ರಿ

ಸೂಚನೆಗೆ ಸಂಬಂಧಿಸಿ ಚರ್ಚಿಸಲು ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಭಾನುವಾರ ನಡೆದ ಸರ್ವಪಕ್ಷಗಳ ಸಭೆಯ ಬಳಿಕ ಮುಖ್ಯಮಂತ್ರಿ ಸಿದ್ದರಾಮಯ್ಯ ಈ ವಿಷಯ ತಿಳಿಸಿದರು.

'ಹೆಚ್ಚು ಮಳೆ ಬಿದ್ದರೆ ಮಾತ್ರ, ಮಳೆ ಪ್ರಮಾಣಕ್ಕೆ ತಕ್ಕಂತೆ ಕಾವೇರಿ ನೀರು ನಿಯಂತ್ರಣ ಸಮಿತಿ ಆದೇಶಕ್ಕೆ ಅನುಗುಣವಾಗಿ ತಮಿಳುನಾಡಿಗೆ ನೀರು ಹರಿಸಬಹುದು. ಇಲ್ಲದಿದ್ದರೆ ಕೇವಲ 8 ಸಾವಿರ ಕ್ಯುಸೆಕ್ ನೀರು ಹರಿಸಬೇಕಾಗುತ್ತದೆ. ಜೊತೆಗೆ, ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸೋಣ. ನೀರು ಬಿಡದೆ ಮೊಂಡಾಟ ಆಡುತ್ತಿದ್ದೇವೆಂದು ಮೇಲ್ಮನವಿ ವಿಚಾರಣೆಯ ಸಂದರ್ಭದಲ್ಲಿ ಪ್ರಾಧಿಕಾರಕ್ಕೆ ಅನ್ನಿಸಬಾರದು ಎಂದು ಕಾನೂನು ತಂಡ ಸಲಹೆ ನೀಡಿದೆ. ಅದರಂತೆ ಸರ್ವಪಕ್ಷಗಳ ಸಭೆಯಲ್ಲಿ ತೀರ್ಮಾನ ತೆಗೆದುಕೊಳ್ಳಲಾಗಿದೆ' ಎಂದು ವಿವರಿಸಿದರು.

'ಜುಲೈ 11ರಂದು ನಡೆದಿದ್ದ ಕಾವೇರಿ ನೀರು ನಿಯಂತ್ರಣ ಸಮಿತಿಯ ಮೂರನೇ ಸಭೆಯಲ್ಲಿ, ಜುಲೈ 12ರಿಂದ ಈ ತಿಂಗಳ ಕೊನೆಯವರೆಗೆ ನಿತ್ಯ ಒಂದು ಟಿಎಂಸಿ ಅಡಿಯಂತೆ ನೀರು ಬಿಡಲು ಆದೇಶಿಸಲಾಗಿದೆ. ಕಾವೇರಿ ತೀರದ ಸಚಿವರು, ಶಾಸಕರು, ಸಂಬಂಧಪಟ್ಟ ಅಧಿಕಾರಿಗಳು 12ರಂದು ಸಭೆ ನಡೆಸಿ, ಮಳೆ ಅಭಾವದಿಂದ ಒಳಹರಿವಿನಲ್ಲಿ ಕೊರತೆ ಇದ್ದು, ನೀರು ಬಿಡದಿರಲು ಮತ್ತು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಮುಂದೆ ಮೇಲ್ಮನವಿ ಸಲ್ಲಿಸಲು ತೀರ್ಮಾನಿಸಲಾಗಿತ್ತು' ಎಂದರು.

5ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಟ್ರಂಪ್ ಮೇಲೆ ಗುಂಡಿನ ದಾಳಿ

ಕಿವಿಗೆ ಗಾಯ • ದಾಳಿ ಮಾಡಿದ ಯುವಕನ ಹತ್ಯೆ

ಶಿಕಾಗೊ (ಪಿಟಿಐ): ಅಮೆರಿಕದ ಮಾಜಿ ಅಧ್ಯಕ್ಷ ಮತ್ತು ಅಧ್ಯಕ್ಷ ಸ್ಥಾನದ 'ರಿಪಬ್ಲಿಕನ್' ಅಭ್ಯರ್ಥಿ ಡೊನಾಲ್ಡ್ ಟ್ರಂಪ್ (78) ಅವರ ಮೇಲೆ ಶನಿವಾರ ಗುಂಡಿನ ದಾಳಿ ನಡೆದಿದ್ದು, ಅವರು ಕೂದಲೆಳೆ ಅಂತರದಲ್ಲಿ ಪಾರಾಗಿದ್ದಾರೆ.

ಗುಂಡು ಹಾರಿಸಿದ್ದರಿಂದ 50 ವರ್ಷದ ವ್ಯಕ್ತಿಯೊಬ್ಬರು ಮೃತಪಟ್ಟಿದ್ದು, ಇಬ್ಬರಿಗೆ ತೀವ್ರ ಗಾಯಗಳಾಗಿವೆ. ಗುಂಡಿನ ದಾಳಿ ನಡೆಸಿದ ವ್ಯಕ್ತಿಯನ್ನು ಥಾಮಸ್ ಮ್ಯಾಥ್ಯೂ ಕ್ರೂಕ್ಸ್ ಎಂದು ಗುರುತಿಸಲಾಗಿದ್ದು, ಅಮೆರಿಕದ ಸೀಕ್ರೆಟ್ ಸರ್ವೀಸ್‌ನ ಭದ್ರತಾ ಸಿಬ್ಬಂದಿ ಆತನನ್ನು ಹತ್ಯೆಗೈದಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪೆನ್ಸಿಲ್ವೇನಿಯಾದ ಬಟ್ಲರ್ ನಗರದಲ್ಲಿ ಶನಿವಾರ ಸಂಜೆ ಟ್ರಂಪ್ ಹಮ್ಮಿಕೊಂಡಿದ್ದ ಚುನಾವಣಾ ರ್‍ಯಾಲಿಯಲ್ಲಿ ಈ ಘಟನೆ ನಡೆದಿದೆ. ಸಾವಿರಾರು ಜನರನ್ನು ಉದ್ದೇಶಿಸಿ ಟ್ರಂಪ್ ಭಾಷಣ ಮಾಡುತ್ತಿದ್ದಾಗ, ಸಂಜೆ 6.15ರ ವೇಳೆಗೆ ಬಂದೂಕುಧಾರಿಯೊಬ್ಬ, ಹೊರಗಿನ ಕಟ್ಟಡದ ಎತ್ತರದ ಜಾಗದಿಂದ ವೇದಿಕೆಯತ್ತ ಅನೇಕ ಸುತ್ತು ಗುಂಡುಗಳನ್ನು ಹಾರಿಸಿದ್ದಾನೆ.

ಟ್ರಂಪ್ ಬಲ ಕಿವಿಗೆ ಗಾಯ: ಈ ವೇಳೆ ಟ್ರಂಪ್ ಅವರ ಬಲ ಕಿವಿಯ ಭಾಗಕ್ಕೆ ಗುಂಡೇಟು ತಗುಲಿತು. ಕೂಡಲೇ ಅವರು ವೇದಿಕೆಯ ಕೆಳಗಡೆ ಕುಳಿತುಕೊಳ್ಳುವ ಮೂಲಕ, ಮತ್ತಷ್ಟು ದಾಳಿಯಿಂದ ಪಾರಾದರು. ತಕ್ಷಣವೇ ಭದ್ರತಾ ಸಿಬ್ಬಂದಿಯು ಗಾಯಗೊಂಡ ಟ್ರಂಪ್ ಅವರನ್ನು ಸುತ್ತುವರಿದು, ಸುರಕ್ಷಿತ ಪ್ರದೇಶಕ್ಕೆ ಕರೆದೊಯ್ದರು.

ಭದ್ರತಾ ಸಿಬ್ಬಂದಿಯ ಕಾವಲಿನಲ್ಲಿ ವೇದಿಕೆಯಿಂದ ತೆರಳುತ್ತಿದ್ದಾಗ ಟ್ರಂಪ್ ಅವರು ಸಭಿಕರತ್ತ ನೋಡುತ್ತಾ, ಬಿಗಿ ಮುಷ್ಟಿ ಹಿಡಿದು ಗಾಳಿಯಲ್ಲಿ ಗುದ್ದಿ ಆಕ್ರೋಶ ವ್ಯಕ್ತಪಡಿಸಿದರು.

8ನೇ ಪುಟ ನೋಡಿ

ಪೆನ್ಸಿಲ್ವೇನಿಯಾದ ಬಟ್ಲರ್ ನಗರದಲ್ಲಿ ಶನಿವಾರ ನಡೆದ ಚುನಾವಣಾ ರ್‍ಯಾಲಿ ವೇಳೆ ಬಂದೂಕುಧಾರಿಯೊಬ್ಬನ ಗುಂಡಿನ ದಾಳಿಯಿಂದ ಗಾಯಗೊಂಡ ಡೊನಾಲ್ಡ್ ಟ್ರಂಪ್ ಅವರನ್ನು ಭದ್ರತಾ ಸಿಬ್ಬಂದಿ ಕರೆದೊಯ್ದರು —ಎಪಿ/ಪಿಟಿಐ ಚಿತ್ರ

ಗೆಳೆಯ ಡೊನಾಲ್ಡ್ ಟ್ರಂಪ್ ಮೇಲಿನ ದಾಳಿಯಿಂದ ಕಳವಳಗೊಂಡಿದ್ದೇನೆ. ರಾಜಕೀಯ ಮತ್ತು ಪ್ರಜಾಪ್ರಭುತ್ವದಲ್ಲಿ ಹಿಂಸೆಗೆ ಸ್ಥಾನವಿಲ್ಲ. ಅವರು ಶೀಘ್ರವಾಗಿ ಚೇತರಿಸಿಕೊಳ್ಳಲಿ

ನರೇಂದ್ರ ಮೋದಿ, ಪ್ರಧಾನಿ

ಟ್ರಂಪ್ ಅವರ ಹತ್ಯೆ ಯತ್ನದಿಂದ ತೀವ್ರ ಕಳವಳಗೊಂಡಿದ್ದೇನೆ. ಅಂತಹ ಕೃತ್ಯಗಳನ್ನು ತೀವ್ರವಾಗಿ ಖಂಡಿಸಬೇಕು

ರಾಹುಲ್ ಗಾಂಧಿ

ಲೋಕಸಭೆಯ ವಿರೋಧ ಪಕ್ಷದ ನಾಯಕ



ಪಂಢರಪುರದ ವಿಠ್ಠಲನ ಸನ್ನಿಧಿಗೆ ಹರಿದು ಬರುತ್ತಿರುವ ಲಕ್ಷಾಂತರ ಜನ

ಭೀಮಾನದಿ ತಟದಲ್ಲಿ 'ಭಕ್ತಿ'ಯ ಹೊಳೆ

• ಇಮಾಮ್‌ಹುಸೇನ್ ಗೂಡುನವರ/ ಚಂದ್ರಶೇಖರ ಚಿನಕೇಕರ

ಪಂಢರಪುರ (ಮಹಾರಾಷ್ಟ್ರ): ಭೀಮಾನದಿ ತಟದಲ್ಲಿರುವ ಪುರಾಣ ಪ್ರಸಿದ್ಧ ವಿಠ್ಠಲನ ಸನ್ನಿಧಿಯಲ್ಲಿ ಈಗ ಭಕ್ತಿಯ ಹೊಳೆಯೇ ಹರಿಯುತ್ತಿದೆ. ಆಷಾಢ ಏಕಾದಶಿ ಪ್ರಯುಕ್ತ ಕರ್ನಾಟಕ, ಮಹಾರಾಷ್ಟ್ರ, ಗೋವಾ, ಆಂಧ್ರಪ್ರದೇಶ, ತೆಲಂಗಾಣದಿಂದ ಲಕ್ಷ ಲಕ್ಷ ಸಂಖ್ಯೆಯಲ್ಲಿ ಭಕ್ತರು ಹರಿದುಬರುತ್ತಿದ್ದಾರೆ. ಈ ತಿಂಗಳ 17ರಂದು ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಉಪಸ್ಥಿತಿಯಲ್ಲಿ ವಿಶೇಷ ಪೂಜೆಗೆ ಭಕ್ತಗಣ ಸಾಕ್ಷಿಯಾಗಲಿದೆ.

'ಆಷಾಢ ಏಕಾದಶಿಯಂದು ಪಂಢರಪುರದಲ್ಲಿ 15 ಲಕ್ಷಕ್ಕೂ ಅಧಿಕ ಭಕ್ತರು ಸೇರಲಿದ್ದಾರೆ. ಭೀಮಾನದಿಯಲ್ಲಿ ಪವಿತ್ರ ಸ್ನಾನ ಮಾಡಿ ವಿಠ್ಠಲ–ರುಕ್ಮಿಣಿಗೆ ವಿಶೇಷ ಪೂಜೆ ಸಲ್ಲಿಸಲಿದ್ದಾರೆ. 24x7 ಮಾದರಿಯಲ್ಲಿ ದರ್ಶನಕ್ಕೆ ವ್ಯವಸ್ಥೆ ಕಲ್ಪಿಸಿದ್ದೇವೆ' ಎಂದು ವಿಠ್ಠಲ–ರುಕ್ಮಿಣಿ ಮಂದಿರ ಸಮಿತಿಯ ಟ್ರಸ್ಟಿ ಜ್ಞಾನೇಶ್ವರ ಜಳಗಾಂವಕರ ತಿಳಿಸಿದರು.

'ಈ ವರ್ಷ ಮಳೆ ಮಧ್ಯೆಯೂ ಲಕ್ಷಾಂತರ ಸಂತರು ಪಂಢರಪುರಕ್ಕೆ ಬರುತ್ತಿದ್ದಾರೆ. ಕೆಲವರು 300ರಿಂದ 500 ಕಿ.ಮೀ ದೂರದಿಂದ ಪಲ್ಲಕ್ಕಿ ಹೊತ್ತು ಬರುತ್ತಿದ್ದಾರೆ. ಜುಲೈ 16ರ ಸಂಜೆಯ ಹೊತ್ತಿಗೆ ಇಡೀ ಧಾರ್ಮಿಕ ಕ್ಷೇತ್ರ ಜನರಿಂದ ಕಿಕ್ಕಿರಿದು ತುಂಬಲಿದೆ' ಎಂದು ಸ್ಥಳೀಯ ಮುಖಂಡ ಸೂರ್ಯಕಾಂತ ಭಿಸೆ ಹೇಳಿದರು.

ಹೆದ್ದಾರಿಯುದ್ದಕ್ಕೂ ವಿಠ್ಠಲನ ಗಾನ: ಪಂಢರಪುರಕ್ಕೆ ಸಂಪರ್ಕ ಕಲ್ಪಿಸುವ ಯಾವುದೇ ರಸ್ತೆಯಲ್ಲಿ ಈಗ ವಿಠ್ಠಲನ ಗುಣಗಾನ ನಡೆದಿದೆ. ದಕ್ಷಿಣ ಭಾರತದ ವಿವಿಧ ರಾಜ್ಯಗಳಿಂದ ಆಗಮಿಸುತ್ತಿರುವ ಸಂತರು, ಮಳೆ–ಬಿಸಿಲು ಲೆಕ್ಕಿಸದೆ ನಿತ್ಯ 25 ಕಿ.ಮೀ ಹೆಜ್ಜೆ ಹಾಕುತ್ತಿದ್ದಾರೆ.

2Bನೇ ಪುಟ ನೋಡಿ

ಬೆಳಗಾವಿ ಜಿಲ್ಲೆಯ ಚಿಕ್ಕೋಡಿಯಿಂದ ಪಂಢರಪುರಕ್ಕೆ ತೆರಳಿದ ಸಂತರು

'14 ವರ್ಷಗಳಿಂದ ಹೋಗುತ್ತಿದ್ದೇವೆ'

'14 ವರ್ಷಗಳಿಂದ ಪಾದಯಾತ್ರೆ ಮೂಲಕ ಪಂಢರಪುರಕ್ಕೆ ಹೋಗು ತ್ತಿದ್ದೇವೆ. ನಮ್ಮ ತಂಡದಲ್ಲಿ 250 ಜನರಿದ್ದಾರೆ. 8 ದಿನಗಳಲ್ಲಿ 210 ಕಿ.ಮೀ ದೂರ ಕ್ರಮಿಸಿ, ಜುಲೈ 15ರಂದು ವಿಠ್ಠಲನ ಕ್ಷೇತ್ರಕ್ಕೆ ಹೋಗುತ್ತಿದ್ದೇವೆ. 16ರಂದು ಇಡೀ ಊರಿನ ಪ್ರದಕ್ಷಿಣೆ ಹಾಕುತ್ತೇವೆ. ಆಷಾಢ ಏಕಾದಶಿಯಂದು ನದಿಯಲ್ಲಿ ಸ್ನಾನ ಮಾಡಿ, ದೇವರ ದರ್ಶನ ಪಡೆದು ದ್ವಾದಶಿಯಂದು ನಮ್ಮೂರಿಗೆ ಮರಳುತ್ತೇವೆ' ಎಂದು ಚಿಕ್ಕೋಡಿ ತಾಲ್ಲೂಕಿನ ಡೋಣವಾಡದ ಸಂತರಾದ ರಾಚಪ್ಪ ಬಾಗಿ, ಶಂಕರ ಕಿವಡ, ಕಲ್ಮೇಶ ಕಿವಡ ತಿಳಿಸಿದರು.

ರೋಗಿಗಳ ನೋಂದಣಿ ಆಧರಿಸಿ ನಗರದ ಕಡಬಮ್ಸ್ ಆಸ್ಪತ್ರೆ ಅಧ್ಯಯನ • ಶೇ 30ರಷ್ಟು ರೋಗಿಗಳಿಗೆ ತುರ್ತುಸೇವೆ

ಮಾನಸಿಕ ಅನಾರೋಗ್ಯ: ದಾಖಲಾತಿ ಏರಿಕೆ

• ವರುಣ ಹೆಗಡೆ

ಬೆಂಗಳೂರು: ಮಾನಸಿಕ ಅನಾರೋಗ್ಯ ಸಮಸ್ಯೆ ಎದುರಿಸುವವರ ಜತೆಗೆ ಮನೋವೈದ್ಯಕೀಯ ತುರ್ತುಸ್ಥಿತಿಯ ದಾಖಲಾತಿಯಲ್ಲಿಯೂ ಏರಿಕೆಯಾಗುತ್ತಿದೆ ಎನ್ನುವುದು ಇಲ್ಲಿನ ಕಡಬಮ್ಸ್ ಆಸ್ಪತ್ರೆ ನಡೆಸಿದ ಅಧ್ಯಯನದಿಂದ ದೃಢಪಟ್ಟಿದೆ.

ಜೆ.ಪಿ.ನಗರದಲ್ಲಿರುವ ಈ ಆಸ್ಪತ್ರೆಯು ಮಾನಸಿಕ ಆರೋಗ್ಯ ಸೇವೆಗಳನ್ನು ಒದಗಿಸುತ್ತಿದೆ. ಏಳು ತಿಂಗಳ ರೋಗಿಗಳ ನೋಂದಣಿ ಆಧರಿಸಿ ಆಸ್ಪತ್ರೆಯು ಅಧ್ಯಯನ ನಡೆಸಿದೆ. ಈ ಅವಧಿಯಲ್ಲಿ 19,118 ಮಂದಿ ಒಳ ರೋಗಿಗಳು ಹಾಗೂ ಹೊರ ರೋಗಿಗಳಾಗಿ ಆಸ್ಪತ್ರೆಗೆ ಭೇಟಿ ನೀಡಿದ್ದಾರೆ. ಅವರ ಪರಿಸ್ಥಿತಿ ಹಾಗೂ ಅವರು ಎದುರಿಸುತ್ತಿದ್ದ ಸಮಸ್ಯೆಯನ್ನು ವಿಶ್ಲೇಷಿಸಿರುವ ಆಸ್ಪತ್ರೆಯ ವೈದ್ಯರು, ಶೇ 30ರಷ್ಟು ರೋಗಿಗಳಿಗೆ ತುರ್ತುಸೇವೆ ಕಲ್ಪಿಸಿದ್ದಾರೆ. ಆಸ್ಪತ್ರೆಗೆ ದಾಖಲಾಗುವವರಲ್ಲಿ ಪ್ರತಿ ತಿಂಗಳು ಸರಾಸರಿ 18 ರಿಂದ 20 ಮಂದಿಗೆ ಆಂಬುಲೆನ್ಸ್ ಸೇವೆ ಅಗತ್ಯ ಎನ್ನುವುದು ಈ ಅಧ್ಯಯನದಿಂದ ದೃಢಪಟ್ಟಿದೆ.

ಒಳ ರೋಗಿಗಳಾಗಿ ದಾಖಲಾದವರು ಹಾಗೂ ಹೊರ ರೋಗಿಗಳಾಗಿ ಚಿಕಿತ್ಸೆ ಪಡೆದವರಲ್ಲಿ ವ್ಯಥೆಗೆ ಒಳಪಟ್ಟವರು, ಕೌಟುಂಬಿಕ ಸಮಸ್ಯೆಗೆ ಒಳಗಾದವರು, ಶೈಕ್ಷಣಿಕ ಒತ್ತಡಕ್ಕೆ ಒಳಗಾದವರು, ಆತ್ಮಹತ್ಯೆಯ ಆಲೋಚನೆ ಮಾಡುತ್ತಿರುವವರು, ಮಾದಕ ವಸ್ತುಗಳ ಸೇವನೆಯ ವ್ಯಸನಕ್ಕೆ ಒಳಗಾದವರು, ಜ್ಞಾಪಕ ಶಕ್ತಿ ತೊಂದರೆ ಇರುವವರು, ಆರ್ಥಿಕ ಒತ್ತಡದಲ್ಲಿ ಇರುವವರು ಸೇರಿದ್ದಾರೆ.

ಯುವಜನರೇ ಅಧಿಕ: ಮಾನಸಿಕ ಅನಾರೋಗ್ಯ ಸಮಸ್ಯೆಗಳಿಗೆ ಸಂಬಂಧಿಸಿದಂತೆ ದಾಖಲಾಗುತ್ತಿರುವವರಲ್ಲಿ ಯುವಜನರೇ ಅಧಿಕ ಎನ್ನುವುದು ಈ ಅಧ್ಯಯನದಿಂದ ದೃಢಪಟ್ಟಿದೆ. ಒಟ್ಟಾರೆ ದಾಖಲಾತಿಯಲ್ಲಿ

ಶೇ 34.6ರಷ್ಟು ಮಂದಿ 30ರಿಂದ 40 ವರ್ಷದವರಾಗಿದ್ದಾರೆ. ಶೇ 28.8ರಷ್ಟು ಮಂದಿ 20ರಿಂದ 30 ವರ್ಷದೊಳಗಿನವರಾಗಿದ್ದಾರೆ. ಇವರಲ್ಲಿ ಹೆಚ್ಚಿನವರು ಖಿನ್ನತೆಗೆ ಒಳಗಾದವರು, ಮಾದಕ ವ್ಯಸನದಿಂದ ಸಮಸ್ಯೆ ಎದುರಿಸುತ್ತಿರುವವರು ಆಗಿದ್ದಾರೆ.

'ಮನೋವೈದ್ಯಕೀಯ ತುರ್ತುಸ್ಥಿತಿಗೆ ಹೆಚ್ಚಿನ ಆದ್ಯತೆ ನೀಡಬೇಕಿದೆ. ಯುವಜನರು ಹೆಚ್ಚಿನ ಸಂಖ್ಯೆಯಲ್ಲಿ ಮನೋರೋಗಗಳಿಗೆ ಒಳಗಾಗಿ, ದಾಖಲಾಗುತ್ತಿರುವುದು ಕಳವಳಕಾರಿ. ವೃತ್ತಿ ಮತ್ತು ವೈಯುಕ್ತಿಕ ಜೀವನದ ಮಧ್ಯೆ ಸಮತೋಲನ ತರಲಾರದೆ ವಿವಿಧ ಮಾನಸಿಕ ಒತ್ತಡಗಳಿಗೆ ಒಳಗಾಗುತ್ತಿದ್ದಾರೆ. ಕೆಲಸದ ಸ್ಥಳದಲ್ಲಿ ಮಾನಸಿಕ ಆರೋಗ್ಯ ತುರ್ತುಸ್ಥಿತಿಯ ಬಗ್ಗೆ ಜಾಗೃತಿ ಮೂಡಿಸಬೇಕು. ಈ ಮೂಲಕ ಉಲ್ಬಣಗೊಳ್ಳುತ್ತಿರುವ ಮಾನಸಿಕ ಸಮಸ್ಯೆಯನ್ನು ಆರಂಭಿಕ ಹಂತದಲ್ಲಿಯೇ ತಡೆಯಬೇಕು' ಎಂದು ಕಡಬಮ್ಸ್ ಆಸ್ಪತ್ರೆಯ ನಿರ್ದೇಶಕ ಡಾ. ಸುನೀಲ್ ತಿಳಿಸಿದರು.

ದಾಖಲಾದವರಲ್ಲಿ ಪುರುಷರೇ ಅಧಿಕ

ಒಳ ರೋಗಿಗಳು ಹಾಗೂ ಹೊರ ರೋಗಿಗಳಾಗಿ ಕಡಬಮ್ಸ್ ಆಸ್ಪತ್ರೆಗೆ ಕಳೆದ ಏಳು ತಿಂಗಳಲ್ಲಿ ಭೇಟಿ ನೀಡಿದವರಲ್ಲಿ ಪುರುಷರ ಸಂಖ್ಯೆ ಶೇ 60ರಷ್ಟಿದ್ದರೆ, ಮಹಿಳೆಯರ ಸಂಖ್ಯೆ ಶೇ 40ರಷ್ಟಿದೆ. ಶೇ 69ರಷ್ಟು ರೋಗಿಗಳು ಸಮಯಕ್ಕೆ ಸರಿಯಾಗಿ ಮನೋವೈದ್ಯರನ್ನು ಸಂಪರ್ಕಿಸುತ್ತಿಲ್ಲ. ಇದರಿಂದಾಗಿ ಅವರಲ್ಲಿನ ಸಮಸ್ಯೆ ಉಲ್ಬಣಿಸಿ, ಅವರ ಜತೆಗೆ ಇತರರಿಗೂ ಹಾನಿಯಾಗುವ ಸಾಧ್ಯತೆಗಳಿವೆ ಎಂದು ಅಧ್ಯಯನ ವರದಿಯಲ್ಲಿ ವಿಶ್ಲೇಷಿಸಲಾಗಿದೆ.

'ಮಾನಸಿಕ ಆರೋಗ್ಯಕ್ಕೆ ಸಂಬಂಧಿಸಿದಂತೆ ತಪ್ಪು ಗ್ರಹಿಕೆಗಳು ಮತ್ತು ಮೂಢನಂಬಿಕೆಗಳಿವೆ. ಪುರುಷರಿಗೆ ಹೋಲಿಸಿದರೆ ಮಹಿಳೆಯರಿಗೆ ಮನೋವೈದ್ಯಕೀಯ ಚಿಕಿತ್ಸೆ ಪಡೆಯಲು ಹಲವು ತೊಡಕುಗಳಿವೆ. ಸೂಕ್ತ ಸಮಯದಲ್ಲಿ ಚಿಕಿತ್ಸೆ ಒದಗಿಸಿದಲ್ಲಿ ಸಹಜ ಸ್ಥಿತಿಗೆ ತರಲು ಸಾಧ್ಯವಾಗುತ್ತದೆ' ಎಂದು ಆಸ್ಪತ್ರೆಯ ಕಾರ್ಯನಿರ್ವಾಹಕ ನಿರ್ದೇಶಕಿ ಹಾಗೂ ಹಿರಿಯ ಮನೋವೈದ್ಯೆ ಡಾ. ನೇಹಾ ಕಡಬಮ್ ವಿವರಿಸಿದರು.

ಸುದ್ದಿ 2 ನಿಮಿಷ

ಬಸ್ ಪ್ರಯಾಣ ದರ ಏರಿಕೆ ಇಲ್ಲ: ರಾಮಲಿಂಗಾರೆಡ್ಡಿ

ಬೆಂಗಳೂರು: ಕೆಎಸ್ಆರ್‌ಟಿಸಿ ಸಹಿತ ಎಲ್ಲ ನಾಲ್ಕು ನಿಗಮಗಳಲ್ಲಿ ಬಸ್ ಪ್ರಯಾಣ ದರ ಏರಿಸುವ ಯಾವುದೇ ಪ್ರಸ್ತಾವ ಇಲ್ಲ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ಸ್ಪಷ್ಟಪಡಿಸಿದ್ದಾರೆ.

ಕೆಎಸ್ಆರ್‌ಟಿಸಿ ಅಧ್ಯಕ್ಷ ಎಸ್.ಆರ್. ಶ್ರೀನಿವಾಸ್ ಹೇಳಿಕೆಗೆ ಪ್ರತಿಕ್ರಿಯೆ ನೀಡಿದ ಅವರು, 'ಶ್ರೀನಿವಾಸ್ ಪ್ರಸ್ತಾವ ಸಲ್ಲಿಸಲಾಗುವುದು ಎಂದು ಹೇಳಿದ್ದಾರೆ. ಇನ್ನೂ ಪ್ರಸ್ತಾವ ಬಂದಿಲ್ಲ. ಟಿಕೆಟ್ ದರ ಏರಿಸುವ ಚಿಂತನೆ ನಡೆಸಿಲ್ಲ' ಎಂದು ಹೇಳಿದ್ದಾರೆ.

ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ಪ್ರಯಾಣ ದರ ಹೆಚ್ಚಿಸಲು ಚಿಂತನೆ ನಡೆದಿದೆ ಎಂದು ಶ್ರೀನಿವಾಸ್ ಶನಿವಾರವಷ್ಟೇ ಸುಳಿವು ನೀಡಿದ್ದರು.

ಗುಬ್ಬಿ ತಾಲ್ಲೂಕಿನ ಮಣ್ಣೆಮ್ಮ ದೇವಸ್ಥಾನದಲ್ಲಿ ಶನಿವಾರ ಪೂಜೆ ಸಲ್ಲಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇಂಧನ ದರ, ವಾಹನ ಬಿಡಿ ಭಾಗಗಳ ಬೆಲೆ ಏರಿಕೆ ಹಾಗೂ ಸಿಬ್ಬಂದಿ ವೇತನ ವೆಚ್ಚದಿಂದಾಗಿ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ನಷ್ಟ ಅನುಭವಿಸುತ್ತಿದೆ. ಈ ನಷ್ಟ ಸರಿದೂಗಿಸಲು ಪ್ರಯಾಣ ದರ ಏರಿಕೆ ಅನಿವಾರ್ಯ ಎಂದು ಹೇಳಿದ್ದರು.

ರಸ್ತೆ ಕಾಮಗಾರಿ: ಮಾರ್ಗ ಬದಲು

ಬೆಂಗಳೂರು: ಬಿಬಿಎಂಪಿ ವತಿಯಿಂದ ಸಿಟಿ ಮಾರುಕಟ್ಟೆ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ವಿವಿಧ ಮಾರ್ಗಗಳಲ್ಲಿ ಸಿಮೆಂಟ್ ಕಾಂಕ್ರೀಟ್ (ಸಿಸಿ) ಕಾಮಗಾರಿ ಹಮ್ಮಿಕೊಂಡಿರುವುದರಿಂದ ಬದಲಿ ಮಾರ್ಗದ ವ್ಯವಸ್ಥೆ ಮಾಡಲಾಗಿದೆ.

ಮೈಸೂರು ರಸ್ತೆಯಿಂದ ಗುಂಡೋಪಂತ್ ರಸ್ತೆವರೆಗೆ ಸೇತುರಾವ್ ಸ್ಟ್ರೀಟ್ ರಸ್ತೆ, ಸೇತುರಾವ್ ಸ್ಟ್ರೀಟ್ ರಸ್ತೆಯಿಂದ ಅರ್ಕಾಟ್ ಶ್ರೀನಿವಾಸಾಚಾರ್ ರಸ್ತೆವರೆಗೆ ಪೊಲೀಸ್ ರಸ್ತೆ ಮತ್ತು ಎಸ್.ಆರ್. ಕ್ರಾಸ್ ರಸ್ತೆಗಳಲ್ಲಿ ಸಿ.ಸಿ. ಕಾಮಗಾರಿ ನಡೆಯಲಿದೆ.

ಮೊದಲ ಹಂತದಲ್ಲಿ ಜುಲೈ 15ರಿಂದ 29ರವರೆಗೆ ಮೈಸೂರು ರಸ್ತೆಯಿಂದ ಜಿ.ಪಿ. ಸ್ಟ್ರೀಟ್ ಜಂಕ್ಷನ್‌ವರೆಗೆ ಕಾಮಗಾರಿ ನಡೆಯಲಿದೆ. ವಾಹನಗಳು ಎಸ್.ಆರ್.ರಸ್ತೆ ಮಾರ್ಗವಾಗಿ ಸಂಚರಿಸಿ ಜಿ.ಪಿ. ಸ್ಟ್ರೀಟ್ ಸಂಪರ್ಕಿಸುವ ವಾಹನಗಳು ಮೈಸೂರು ರಸ್ತೆಯಲ್ಲಿ ಸಾಗಿ ಮಾರುಕಟ್ಟೆ ವೃತ್ತದಲ್ಲಿ ಎಡತಿರುವು ಪಡೆದು ಅವೆನ್ಯೂ ರಸ್ತೆ ಮಾರ್ಗವಾಗಿ ಜಿ.ಟಿ. ಸ್ಟ್ರೀಟ್ ರಸ್ತೆ ಸಂಪರ್ಕಿಸಬೇಕು.

ಎರಡನೇ ಹಂತದಲ್ಲಿ ಜುಲೈ 31ರಿಂದ ಆಗಸ್ಟ್ 16ರವರೆಗೆ ಪೊಲೀಸ್ ರಸ್ತೆ ಹಾಗೂ ಎಸ್.ಆರ್. ಕ್ರಾಸ್ ರಸ್ತೆಗಳಲ್ಲಿ ಕಾಮಗಾರಿ ನಡೆಯಲಿದ್ದು, ಎಸ್.ಆರ್.ರಸ್ತೆ ಮಾರ್ಗವಾಗಿ ಜಿ.ಪಿ.ಸ್ಟ್ರೀಟ್‌ವರೆಗೆ ಸಾಗಿ, ಜಿ.ಪಿ. ಸ್ಟ್ರೀಟ್ ರಸ್ತೆಯಲ್ಲಿ ಎಡತಿರುವು ಪಡೆದು ಅರ್ಕಾಟ್ ಶ್ರೀನಿವಾಸಾಚಾರ್ ರಸ್ತೆ ಸಂಪರ್ಕಿಸಬೇಕು.

'ಕಾರ್ಪೊರೇಟ್ ಕ್ಷೇತ್ರಕ್ಕೆ ಆಕರ್ಷಿತರಾಗಬೇಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾನೂನು ಪದವೀಧರರು ಕಾರ್ಪೊರೇಟ್ ವಲಯಕ್ಕೆ ಹೆಚ್ಚು ಆಕರ್ಷಿತರಾಗದೇ, ನ್ಯಾಯಾಲಯಗಳಲ್ಲಿ ವಕೀಲಿ ವೃತ್ತಿ ಜೀವನವನ್ನು ಪ್ರಾರಂಭಿಸಬೇಕು' ಎಂದು ಹೈಕೋರ್ಟ್ ನ್ಯಾಯಮೂರ್ತಿ ಕೃಷ್ಣ ಕುಮಾರ್ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಬಿ.ಎಂ.ಎಸ್. ಕಾನೂನು ಕಾಲೇಜು ನಗರದಲ್ಲಿ ಭಾನುವಾರ ಹಮ್ಮಿಕೊಂಡ ಬಿ.ಎಂ. ಶ್ರೀನಿವಾಸಯ್ಯ ಸ್ಮಾರಕ '9ನೇ ಅಣಕು ನ್ಯಾಯಾಲಯ ಸ್ಪರ್ಧೆ–2024'ರ ಸಮಾರೋಪ ಸಮಾರಂಭ ಉದ್ಘಾಟಿಸಿ, ಅವರು ಮಾತನಾಡಿದರು.

'ವಕೀಲರ ನೈಜ ಪ್ರತಿಭೆ ಹೊರಬರುವುದೇ ನ್ಯಾಯಾಲಯಗಳಲ್ಲಿ. ಆದ್ದರಿಂದ ಕಾನೂನು ಪದವೀಧರರು ಕೌಶಲವನ್ನು ವೃದ್ಧಿಸಿಕೊಳ್ಳಬೇಕು. ಆರೋಪಿ, ದೂರುದಾರ, ಸಾಕ್ಷಿದಾರರಿಗೆ ಕ್ಷಣ ಮಾತ್ರದಲ್ಲಿ ಪಾಟಿ ಸವಾಲು ನಡೆಸಿ ಉತ್ತರ ಪಡೆಯುವುದೇ ಕಲೆ. ಕಾನೂನು ಪದವಿ ಪಡೆದ ಮುಂದಿನ ಐದು ವರ್ಷಗಳು ನ್ಯಾಯಾಲಯಗಳಲ್ಲಿ ಕೌಶಲ ವೃದ್ಧಿಸಿಕೊಳ್ಳುವ ಕಡೆಗೆ ಗಮನ ಕೊಡಬೇಕು. ಕೌಶಲ ವೃದ್ಧಿಸಿಕೊಂಡಲ್ಲಿ ಪ್ರಕರಣಗಳನ್ನು ಜಯಿಸುವುದು ಸುಲಭವಾಗುತ್ತದೆ' ಎಂದು ಹೇಳಿದರು.

ಹೈಕೋರ್ಟ್ ವಕೀಲ ಸುದೀಶ್ ಪೈ ಮಾತನಾಡಿ, 'ವಕೀಲರಿಗೆ ಪ್ರಕರಣಗಳ ಬಗ್ಗೆ ಸಂಪೂರ್ಣ ಜ್ಞಾನವಿರಬೇಕು. ಕಾನೂನನ್ನು ಅರ್ಥೈಸಿಕೊಂಡು ಉತ್ತಮ ಸಂವಹನ ಕಲೆಯನ್ನು ಬೆಳೆಸಿಕೊಳ್ಳುವುದು ಮುಖ್ಯ. ಕಾನೂನು ಕಾಲೇಜುಗಳಲ್ಲಿ ಇಂತಹ ಸ್ಪರ್ಧೆ ಏರ್ಪಡಿಸಿದಲ್ಲಿ ವಕೀಲ ವೃತ್ತಿಯ ಆಳ–ಅಗಲವನ್ನು ತಿಳಿದುಕೊಳ್ಳಬಹುದು' ಎಂದರು.

ರಾಷ್ಟ್ರೀಯ ಕಾನೂನು ಶಾಲೆಯ ನಿವೃತ್ತ ಪ್ರಾಧ್ಯಾಪಕ ಎಂ.ಕೆ. ರಮೇಶ್ ಮಾತನಾಡಿ, 'ಇಂತಹ ಸ್ಪರ್ಧೆಗಳಿಂದ ವಿಚಾರಣೆ ಮತ್ತು ವಾದ ಮಂಡನೆಯ ವಿವಿಧ ಆಯಾಮಗಳನ್ನು ತಿಳಿದುಕೊಳ್ಳಬಹುದು. ವೃತ್ತಿ ಜೀವನದಲ್ಲಿ ವಾದ ಮಂಡಿಸುವಾಗ ನ್ಯಾಯಸಮ್ಮತವಾದ ನಿರ್ಧಾರಗಳನ್ನು ತೆಗೆದುಕೊಳ್ಳುವತ್ತ ಗಮನಹರಿಸಬೇಕು' ಎಂದು ಹೇಳಿದರು.

ಅನೋಮಾ ಲೀಗಲ್‌ನ ವಿಶಾಲ್ ಭಟ್, ಬಿಎಂಎಸ್ ಕಾನೂನು ಕಾಲೇಜಿನ ಪ್ರಾಂಶುಪಾಲರಾದ ಅನಿತಾ ಎಫ್. ಎನ್. ಡಿಸೋಜಾ ಉಪಸ್ಥಿತರಿದ್ದರು.

ಅಣಕು ನ್ಯಾಯಾಲಯ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದ ನವಮಿ ಗೋಪನ್ ಮತ್ತು ಗಿಪ್ಪಿ ಮಾರಿಯಾ ಮ್ಯಾಥ್ಯೂ ಅವರಿಗೆ ನ್ಯಾಯಮೂರ್ತಿ ಕೃಷ್ಣ ಕುಮಾರ್ ಅವರು ಟ್ರೋಫಿ ವಿತರಿಸಿದರು. (ಎಡದಿಂದ) ಎಂ.ಕೆ. ರಮೇಶ್ ಮತ್ತು ಸುಧೀಶ್ ಪೈ ಅವರು ಉಪಸ್ಥಿತರಿದ್ದರು – ಪ್ರಜಾವಾಣಿ ಚಿತ್ರ

32 ತಂಡಗಳು ಭಾಗಿ

ಅಣಕು ನ್ಯಾಯಾಲಯ ಸ್ಪರ್ಧೆಯಲ್ಲಿ ದೇಶದ ವಿವಿಧ ಕಾನೂನು ಕಾಲೇಜುಗಳ 32 ತಂಡಗಳು ಪಾಲ್ಗೊಂಡಿದ್ದವು. ಕೇರಳದ ಮಾರ್ ಗ್ರೆಗೊರಿಯಸ್ ಕಾನೂನು ಕಾಲೇಜಿನ ವಿದ್ಯಾರ್ಥಿಗಳಾದ ನವಮಿ ಗೋಪನ್ ಹಾಗೂ ಗಿಪ್ಪಿ ಮಾರಿಯಾ ಮ್ಯಾಥ್ಯೂ ₹ 35 ಸಾವಿರ ನಗದು ಸಹಿತ ಪ್ರಥಮ ಬಹುಮಾನ ಪಡೆದುಕೊಡರು. ಬೆಂಗಳೂರಿನ ಕ್ರೈಸ್ಟ್ ಅಕಾಡೆಮಿ ಇನ್‌ಸ್ಟಿಟ್ಯೂಟ್ ಆಫ್ ಲಾನ ಅಲಕಮ್ಮೈ ಜಿ., ಉಷಾ ಜಿ. ಹಾಗೂ ಎಂ. ಆಶ್ರಿತಾ ಒಳಗೊಂಡ ತಂಡ ₹ 30 ಸಾವಿರ ನಗದು ಸಹಿತ ದ್ವಿತೀಯ ಬಹುಮಾನ ಪಡೆದುಕೊಂಡಿತು.

ಮುಡಾ: ತನಿಖೆಗೆ ಏಕ ಸದಸ್ಯ ಆಯೋಗ ರಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ (ಮುಡಾ) ನಿವೇಶನಗಳನ್ನು ಅಕ್ರಮವಾಗಿ ಹಂಚಿಕೆ ಮಾಡಿರುವ ಆರೋಪಗಳ ಬಗ್ಗೆ ವಿಚಾರಣೆ ನಡೆಸಲು ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಪಿ.ಎನ್. ದೇಸಾಯಿ ನೇತೃತ್ವದಲ್ಲಿ ಏಕ ಸದಸ್ಯ ವಿಚಾರಣಾ ಆಯೋಗವನ್ನು ರಚಿಸಿ ರಾಜ್ಯ ಸರ್ಕಾರವು ಭಾನುವಾರ ಆದೇಶ ಹೊರಡಿಸಿದೆ.

ಆರೋಪಗಳಿಗೆ ಸಂಬಂಧಿಸಿದಂತೆ ತನಿಖೆ ನಡೆಸಿ ಆರು ತಿಂಗಳ ಒಳಗೆ ವರದಿ ಸಲ್ಲಿಸಬೇಕು ಎಂದು ಆದೇಶದಲ್ಲಿ ವಿವರಿಸಲಾಗಿದೆ.

ಸಮಗ್ರ ಮಾಹಿತಿ, ದಾಖಲೆಗಳನ್ನು ಒದಗಿಸಿ, ಆಯೋಗವು ವಿಚಾರಣೆಯನ್ನು ಪೂರ್ಣಗೊಳಿಸಲು, ತಾಂತ್ರಿಕ, ಆರ್ಥಿಕ ಮತ್ತು ಆಡಳಿತಾತ್ಮಕ ಸಲಹೆಗಾರರನ್ನು ನೀಡಲು ನಗರಾಭಿವೃದ್ಧಿ ಇಲಾಖೆ ಮತ್ತು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಸಹಕರಿಸಬೇಕು ಎಂದೂ ಆದೇಶದಲ್ಲಿ ತಿಳಿಸಲಾಗಿದೆ.

ಆಯೋಗವು ವಿಚಾರಣೆಗೆ ಬಯಸುವ ಎಲ್ಲ ಕಡತಗಳು ಮತ್ತು ದಾಖಲಾತಿಗಳನ್ನು ನಗರಾಭಿವೃದ್ಧಿ ಇಲಾಖೆ ಮತ್ತು ಮುಡಾ ಅಧಿಕಾರಿಗಳು ಒದಗಿಸಬೇಕು. ಅಲ್ಲದೆ, ವಿಚಾರಣೆ ಸಂದರ್ಭದಲ್ಲಿ ಹಾಜರಿದ್ದು ಸಂಪೂರ್ಣವಾಗಿ ಸಹಕರಿಸಬೇಕು ಎಂದೂ ಆದೇಶದಲ್ಲಿ ತಿಳಿಸಲಾಗಿದೆ.

ಸಿಎಲ್–4 ಪರವಾನಗಿ ಕ್ಲಬ್ ನಿಯಮ ಸಡಿಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಬಕಾರಿ ನಿಯಮಗಳಡಿ ಕ್ಲಬ್‌ಗಳಿಗೆ ಸಿಎಲ್–4 ಪರವಾನಗಿ ನೀಡಲು ಷರತ್ತುಗಳನ್ನು ಅಬಕಾರಿ ಇಲಾಖೆಯು ಸಡಿಲಗೊಳಿಸಿದೆ. 20 ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆ ಇರುವ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಮಾತ್ರ ಈ ನೂತನ ನಿಯಮ ಅನ್ವಯವಾಗಲಿದೆ.

ಈ ಮೊದಲು ಸಿಎಲ್–4 ಪರವಾನಗಿ ಪಡೆಯಲು ಕ್ಲಬ್‌ಗಳು ಕನಿಷ್ಠ ಮೂರು ಒಳಾಂಗಣ ಮತ್ತು ಕನಿಷ್ಠ ಎರಡು ಹೊರಾಂಗಣ ಆಟ ಸೇರಿ, ಕನಿಷ್ಠ ಐದು ಆಟಗಳಿಗೆ ಸೌಲಭ್ಯ ಹೊಂದಿರಬೇಕಿತ್ತು. ನಗರಗಳಲ್ಲಿ ಒಳಾಂಗಣ, ಹೊರಾಂಗಣದಲ್ಲಿ ಐದು ಆಟಗಳಿಗೆ ಸ್ಥಳ ಹೊಂದಿಸುವುದು ಕಷ್ಟ. ಹೀಗಾಗಿಯೇ ಈ ನಿಯಮಗಳನ್ನು ಸಡಿಲಗೊಳಿಸಲಾಗಿದೆ ಎಂದು ಇಲಾಖೆಯ ಜಂಟಿ ಆಯುಕ್ತ (ಐಎಂಎಲ್) ಟಿ. ನಾಗರಾಜಪ್ಪ ಮಾಹಿತಿ ನೀಡಿದ್ದಾರೆ.

ಬದಲಾದ ನಿಯಮಗಳ ಪ್ರಕಾರ ಕ್ಲಬ್‌ಗಳು ಹೊಂದಿರಬೇಕಾದ ಹೊರಾಂಗಣ ಮತ್ತು ಒಳಾಂಗಣ ಆಟಗಳ ಕನಿಷ್ಠ ಮಿತಿಯನ್ನು ಸಡಿಲಿಸಲಾಗಿದೆ. ಕ್ಲಬ್‌ಗಳು ಒಟ್ಟು ಐದು ಆಟಗಳಿಗೆ ವ್ಯವಸ್ಥೆ ಹೊಂದಿರಬೇಕು. ಆ ಆಟಗಳು ಒಳಾಂಗಣ ಅಥವಾ ಹೊರಾಂಗಣ ಆಗಿರಬಹುದು. ಆದರೆ, ಕ್ಲಬ್‌ಗಳು ಕನಿಷ್ಠ 10,000 ಚದರ ಅಡಿಗಳಷ್ಟು ಬಿಲ್ಟ್‌ಅಪ್ ಏರಿಯಾ ಹೊಂದಿರಬೇಕು. ಪರವಾನಗಿ ಹೊಂದಿರುವ ಕ್ಲಬ್‌ಗಳಿಗೂ ಈ ನಿಯಮ ಅನ್ವಯವಾಗುತ್ತದೆ. ಈ ನಿಯಮಗಳ ಅಡಿಯಲ್ಲೇ ಪರವಾನಗಿಯನ್ನು ನವೀಕರಿಸಲಾಗುತ್ತದೆ.

ಈ ಸಂಬಂಧ ಕರ್ನಾಟಕ ಅಬಕಾರಿ (ದೇಶಿ ಮತ್ತು ವಿದೇಶಿ ಮದ್ಯಗಳ ಮಾರಾಟ) ನಿಯಮಗಳಿಗೆ ತಿದ್ದುಪಡಿ ತರಲಾಗಿದೆ. ಸಂಬಂಧಿತ ತಿದ್ದುಪಡಿ ನಿಯಮಗಳು ಇದೇ 9ರ ರಾಜ್ಯಪತ್ರದಲ್ಲಿ ಪ್ರಕಟವಾಗಿದೆ.

ಕರ್ನಾಟಕ ಮಾಧ್ಯಮ ಅಕಾಡೆಮಿಯ ನೂತನ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡಿರುವ ಆಯೇಷಾ ಖಾನಂ ಅವರು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಸದಾಶಿವನಗರ ನಿವಾಸದಲ್ಲಿ ಭೇಟಿ ಮಾಡಿದರು. ಉಪಮುಖ್ಯಮಂತ್ರಿಯ ಮಾಧ್ಯಮ ಸಲಹೆಗಾರ ಪಿ. ತ್ಯಾಗರಾಜ್ ಜೊತೆಗಿದ್ದರು

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

JOB OPPORTUNITIES

Engg/ Production Technical

WANTED ITI/ Diploma (Mech) CNC Milling Operators in Bangalore, Experience 1 year. Contact 9845247173/ 9845438003. Email: shanmukhaind@gmail.com

Wanted

WANTED FEMALE Office Assistant- Any Degree, Good Communication Skills English & Hindi for Pvt Ltd Company in Rajajinagar Contact: 9108458798/ 9845579620

BUSINESS

Business Offers

Finance

NEED INSTANT loan available @ 3.5% per annum personal business property projects takeover all types loan. OM Finance call. 7678360713

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

ನಗರದಲ್ಲಿ ಇಂದು

'ಡಾ. ಪದ್ಮಿನಿ ಮಕ್ಕಳ ಹಕ್ಕುಗಳ ಪ್ರಶಸ್ತಿ–2024' ಪ್ರದಾನ: ಉಪನ್ಯಾಸ: ಸುಧಾ ಮುರಳಿ, ಪ್ರಶಸ್ತಿ ಪುರಸ್ಕೃತರು: ಸುಶೀಲಾ ವಿ., ಶೋಭಾ ಮನ್ವೆಲ್ ಕಿಣಗಿ, ಸುಮನಾ ಮ್ಯಾಥ್ಯೂ, ಅಂಕಲೇಶ್, ಶೈಲಜಾ ಎಚ್.ಸಿ., ಶ್ರುತಿ, ಅಂಜಿನಪ್ಪ, ಆಯೋಜನೆ: ಚೈಲ್ಡ್ ರೈಟ್ಸ್ ಟ್ರಸ್ಟ್, ಸ್ಥಳ: ಎಸ್‌ಸಿಎಂ ಹೌಸ್, 2ನೇ ಕ್ರಾಸ್, ಸಿಎಸ್‌ಐ ಕಾಂಪೌಂಡ್, ಪಿ. ಕಾಳಿಂಗ ರಾವ್ ರಸ್ತೆ, ಬೆಳಿಗ್ಗೆ 10.30

ಐಐಎಸ್‌ಸಿ ಘಟಿಕೋತ್ಸವ–2024: ಅತಿಥಿಗಳು: ವಿಶ್ವನಾಥ್ ಆನಂದ್, ಕ್ರಿಸ್ ಗೋಪಾಲಕೃಷ್ಣನ್, ಆಯೋಜನೆ ಮತ್ತು ಸ್ಥಳ: ಜೆ.ಎನ್. ಟಾಟಾ ಸಭಾಂಗಣ, ಐಐಎಸ್‌ಸಿ, ಬೆಳಿಗ್ಗೆ 11

41ನೇ ಅಂತರ ವಿಭಾಗ ನಾಟಕ ಸ್ಪರ್ಧೆ: 'ನಾರದ ವಿನೋದ' ನಾಟಕ ಪ್ರದರ್ಶನ: ಅಧ್ಯಕ್ಷತೆ: ಮೋಹನ್ ಆರ್.ಪಿ., ಅತಿಥಿ: ಶ್ರೀನಿವಾಸ ಪ್ರಭು, ಉಪಸ್ಥಿತಿ: ಸುಂದರರಾಜ್ ಕೆ., ನಿರ್ದೇಶನ: ಆಂಜನಪ್ಪ, ಆಯೋಜನೆ: ಕನ್ನಡ ಸಾಹಿತ್ಯ ಕೂಟ, ಸ್ಥಳ: ರಾಷ್ಟ್ರಕವಿ ಕುವೆಂಪು ಕಲಾಕ್ಷೇತ್ರ, ಜಾಲಹಳ್ಳಿ, ಸಂಜೆ 5.30

ಚಾರ್ಟರ್ ಡೆ: ಆಯೋಜನೆ: ರೋಟರಿ, ಸ್ಥಳ: ರೋಟರಿ ಹೌಸ್ ಆಫ್ ಫ್ರೆಂಡ್‌ಶಿಪ್, ಲ್ಯಾವೆಲ್ಲೆ ರಸ್ತೆ, ಸಂಜೆ 6.30

'ಗೋರ್‌ಮಾಟಿ' ನಾಟಕ ಪ್ರದರ್ಶನ: ರಂಗರೂಪ: ಶಿರಗಾನಹಳ್ಳಿ ಶಾಂತನಾಯಕ್, ರಂಗವಿನ್ಯಾಸ: ಶಶಿಧರ್ ಅಡಪ, ವಸ್ತ್ರ ವಿನ್ಯಾಸ: ಪ್ರಮೋದ್ ಶಿಗ್ಗಾಂವ್, ಶಶಿಕಲಾ ಬಿ.ಎನ್., ಬೆಳಕಿನ ವಿನ್ಯಾಸ: ಕೃಷ್ಣಕುಮಾರ್ ನಾರ್ಣಕಜೆ, ನಿರ್ದೇಶನ: ಸಿ. ಬಸವಲಿಂಗಯ್ಯ, ಆಯೋಜನೆ: ರಂಗಾಯಣ, ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ. nagaradalli_indu@prajavani.co.in

ಗುಜರಾತ್ ಪೆಟ್ರೋಸಿಂಥಿಸ್ ಲಿಮಿಟೆಡ್

ನೋಂದಾಯಿತ ಕಚೇರಿ: ನಂ.24, 2ನೇ ಮುಖ್ಯರಸ್ತೆ, ದೊಡ್ಡನೆಕ್ಕುಂಡಿ ಕೈಗಾರಿಕಾ ಪ್ರದೇಶ, 1ನೇ ಹಂತ, ಮಹದೇವಪುರ ಅಂಚೆ, ಬೆಂಗಳೂರು–560048. ದೂರವಾಣಿ: 080–2852 4133 E-mail: info@gpl.in, Web: www.gpl.in CIN : L23209KA1977PLC043357

ವಿಡಿಯೋ ಕಾನ್ಫರೆನ್ಸಿಂಗ್ (ವಿಸಿ)/ಇನ್ನಿತರ ಆಡಿಯೋ ವಿಷ್ಯುಯಲ್ ಮಾಧ್ಯಮಗಳ (ಒಎವಿಎಂ) ಮುಖಾಂತರ ಏರ್ಪಡಿಸಲಾಗುವ 47ನೇ ವಾರ್ಷಿಕ ಮಹಾಸಭೆ (ಎಜಿಎಂ) ಕುರಿತ ಮಾಹಿತಿ

ಈ ಮೂಲಕ ತಿಳಿಸುವುದು ಏನೆಂದರೆ, ಗುಜರಾತ್ ಪೆಟ್ರೋಸಿಂಥೀಸ್ ಲಿಮಿಟೆಡ್‌ನ ("ದಿ ಕಂಪನಿ")ಯ 47ನೇ ವಾರ್ಷಿಕ ಮಹಾಸಭೆಯನ್ನು ("ಎಜಿಎಂ")ನ್ನು **ಶುಕ್ರವಾರ, ಆಗಸ್ಟ್ 09, 2024 ರಂದು ಬೆಳಗ್ಗೆ 11.00 (ಐಎಸ್‌ಟಿ) ಗಂಟೆಗೆ** ವಿಸಿ/ಒಎವಿಎಂ ಮುಖಾಂತರ ಕೈಗೊಳ್ಳಲಾಗುತ್ತದೆ ಮತ್ತು ಕಂಪನಿಗಳ ಕಾಯ್ದೆ, 2013 ಮತ್ತು ಅದರ ಅಡಿಯಲ್ಲಿ ರಚಿಸಲಾದ ನಿಯಮಗಳು, ಮೇ 05, 2020 ರ ಸುತ್ತೋಲೆ ಸಂಖ್ಯೆ 20/2020 ಮತ್ತು ಸುತ್ತೋಲೆ ಸಂ. 02/2021 ದಿನಾಂಕ ಜನವರಿ 13, 2021 ರ ಸುತ್ತೋಲೆ ಸಂಖ್ಯೆ 14/2020 ಮತ್ತು 17/2020 ದಿನಾಂಕ ಏಪ್ರಿಲ್ 08 ರ 2020 ಜೊತೆಗೆ ಓದಲಾಗಿದೆ ಮತ್ತು ಏಪ್ರಿಲ್ 13, 2020 ಮತ್ತು ಸುತ್ತೋಲೆ ಸಂಖ್ಯೆ 2/2022 ದಿನಾಂಕ ಮೇ 5, 2022 ನಂತರ ಸುತ್ತೋಲೆ ಸಂಖ್ಯೆ. 10/2022 ಮತ್ತು 11/2022 ದಿನಾಂಕ ಡಿಸೆಂಬರ್ 28, 2022, ಸುತ್ತೋಲೆ ಸಂಖ್ಯೆ. 09/2023 ದಿನಾಂಕ ಸೆಪ್ಟೆಂಬರ್ 25, 2023 ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು ಅನುಕ್ರಮವಾಗಿ (ಒಟ್ಟಾರೆಯಾಗಿ **"ಎಂಸಿಎ ಸುತ್ತೋಲೆಗಳು"**) ಹೊರಡಿಸಿದೆ ಮತ್ತು ಸುತ್ತೋಲೆ ಸಂಖ್ಯೆ. SEBI/HO/CFD/CMD1/CIR/P/2020/79 ಮೇ 12, 2020, ಸುತ್ತೋಲೆ ಸಂಖ್ಯೆ SEBI/HO/CFD/CMD2/CIR/P/2021/11 ದಿನಾಂಕ ಜನವರಿ 15, 2021 ಮತ್ತು ಸುತ್ತೋಲೆ SEBI/HO/CFD/CMD2/CIR/P/2022/62 ದಿನಾಂಕ ಮೇ 13, 2022, ಸುತ್ತೋಲೆ ಸಂಖ್ಯೆ SEBI/HO/CFD/CFD-PoD-2/P/CIR/2023/167 ದಿನಾಂಕ ಅಕ್ಟೋಬರ್ 7, 2023 ರಂದು ಸೆಕ್ಯುರಿಟೀಸ್ ಮತ್ತು ಎಕ್ಸ್ಚೇಂಜ್ ಬೋರ್ಡ್ ಆಫ್ ಇಂಡಿಯಾ (**'SEBI ಸುತ್ತೋಲೆ'**) ಈ ಸಭೆಯಲ್ಲಿ ಎಜಿಎಂ ಕನ್ವಿನಿಂಗ್ ಪ್ರಕಟಣೆಯಲ್ಲಿ ಉಲ್ಲೇಖಿಸಲಾಗಿರುವ ವ್ಯಾಪಾರ ವಹಿವಾಟುಗಳನ್ನು ಚರ್ಚಿಸಲಾಗುತ್ತದೆ.

ಕಂಪನಿಯ ಹಣಕಾಸು ವರ್ಷ 2023–24ನೇ ಸಾಲಿನ ಎಜಿಎಂ ಪ್ರಕಟಣೆ ಹಾಗೂ ವಾರ್ಷಿಕ ವರದಿಯ ವಿದ್ಯುನ್ಮಾನ ಪ್ರತಿಗಳನ್ನು, ಕಂಪನಿ/ಡೆಪಾಸಿಟರೀ ರಜಿಸ್ಟ್ರಾರ್ ಮತ್ತು ಟ್ರಾನ್ಸ್‌ಫರ್ ಏಜಂಟ್‌ರೊಂದಿಗೆ ತಮ್ಮ ಇಮೇಲ್ ವಿಳಾಸಗಳನ್ನು ನೊಂದಾಯಿಸಿಕೊಂಡಿರುವ ಸದಸ್ಯರಿಗೆ ವಿದ್ಯುನ್ಮಾನ ವಿಧಾನದಲ್ಲಿ ಮಾತ್ರ ರವಾನಿಸಲಾಗುತದೆ. ಎಂಸಿಎ ಸುತ್ತೋಲೆಗಳು ಮತ್ತು ಸೆಬಿ ಸುತ್ತೋಲೆಗಳ ಪ್ರಕಾರ, ಕಂಪನಿಯ ಎಜಿಎಂ ಪ್ರಕಟಣೆ ಮತ್ತು ವಾರ್ಷಿಕ ವರದಿಯ ಭೌತಿಕ ಪ್ರತಿಗಳನ್ನು ಯಾವುದೇ ಸದಸ್ಯರಿಗೂ ರವಾನಿಸಲಾಗುವುದಿಲ್ಲ.

ಎಜಿಎಂ ಪ್ರಕಟಣೆ ಮತ್ತು ವಾರ್ಷಿಕ ವರದಿ ಪ್ರತಿಗಳು ಕಂಪನಿಯ www.gpl.in ವೆಬ್‌ಸೈಟ್‌ನಲ್ಲಿ ಮತ್ತು ಎನ್‌ಎಸ್‌ಡಿಎಲ್ ರವರ www.evotingindia.com ವೆಬ್‌ಸೈಟ್‌ನಲ್ಲಿ ಹಾಗೂ ಕಂಪನಿಯ ಷೇರುಗಳು ಲಿಸ್ಟ್ ಆಗಿರುವ ಸ್ಟಾಕ್ ಎಕ್ಸ್‌ಚೇಂಜ್ www.bseindia.com ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತವೆ.

ಇಮೇಲ್ ವಿಳಾಸಗಳನ್ನು ರಜಿಸ್ಟರ್/ಅಪ್ಡೇಟ್ ಮಾಡಿಕೊಳ್ಳುವ ವಿಧಾನ:

ಡಿಮ್ಯಾಟ್‌ರೂಪದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರುಗಳು ತಮ್ಮ ಇ–ಮೇಲ್ ಐ.ಡಿ ಮತ್ತು ಮೊಬೈಲ್ ನಂಬರ್‌ಅನ್ನು ತಮ್ಮ ಡಿಪಾಸಿಟರಿ ಪಾರ್ಟಿಸಿಪೆಂಟ್ ಮೂಲಕ ಡಿಪಾಸಿಟರಿಸ್‌ನೊಂದಿಗೆ ನೊಂದಾಯಿಸಿಕೊಳ್ಳಬೇಕು. ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು ತಮ್ಮ ಇ–ಮೇಲ್ ವಿಳಾಸ ಮತ್ತು ಮೊಬೈಲ್ ಸಂಖ್ಯೆಯನ್ನು ಕಂಪನಿಯ ರಿಜಿಸ್ಟ್ರಾರ್‌ಗಳು ಮತ್ತು ಷೇರುವರ್ಗಾವಣೆ ("ಆರ್‌ಟಿಎ") ಏಜಂಟ್‌ರಾದ ಬಿಗ್‌ಶೇರ್ ಸರ್ವೀಸೆಸ್ ಪ್ರೈವೇಟ್ ಲಿಮಿಟೆಡ್, ವಿಳಾಸ: ಕಛೇರಿ ಸಂಖ್ಯೆ. ಎಸ್6–2, 6ನೇ ಮಹಡಿ, ಪಿನಾಕಲ್ ಬ್ಯುಸಿನೆಸ್ ಪಾರ್ಕ್, ಮುಂದಿನ ಅಹುರಾ ಸೆಂಟರ್, ಮಹಾಕಾಳಿ ಕೇವ್ ರಸ್ತೆ, ಅಂಧೇರಿ(ಇ), ಮುಂಬೈ – 400093 ಭಾರತ, ದೂರವಾಣಿ ಸಂಖ್ಯೆ: 022–62638236, ಇ–ಮೇಲ್ ಐಡಿ : investor@bigshareonline.com, ವೆಬ್‌ಸೈಟ್: www.bigshareonline.com ರೊಂದಿಗೆ ನವೀಕರಿಸಲು ಫಾರ್ಮ್ ಆ– ಐಎಸ್‌ಆರ್–1 ಅನ್ನು ಸಲ್ಲಿಸಲು ವಿನಂತಿಸಲಾಗಿದೆ.

ಇನ್ನೂವರೆಗೆ ತಮ್ಮ ಇಮೇಲ್ ವಿಳಾಸಗಳನ್ನು ನೊಂದಾಯಿಸಿಕೊಳ್ಳದಿರುವ ಸದಸ್ಯರುಗಳು, ತಮ್ಮ ಇಮೇಲ್ ವಿಳಾಸಗಳನ್ನು ನೊಂದಾಯಿಸಿಕೊಳ್ಳಲು ಈ ಕೆಳಗಿನ ಹಂತಗಳನ್ನು ಅನುಸರಿಸಿ, ಎಜಿಎಂ ಪ್ರಕಟಣೆ ಮತ್ತು ವಾರ್ಷಿಕ ವರದಿಗಳನ್ನು ವಿದ್ಯುನ್ಮಾನ ವಿಧಾನದಲ್ಲಿ ಪಡೆದುಕೊಳ್ಳಬಹುದು ಹಾಗೂ ರಿಮೋಟ್ ಇ–ವೋಟಿಂಗ್ ಪ್ರಕ್ರಿಯೆಗಾಗಿ ತಮ್ಮ ಲಾಗಿನ್ ಐಡಿ ಮತ್ತು ಪಾಸ್‌ವರ್ಡ್ ಕೂಡ ಪಡೆದುಕೊಳ್ಳಬಹುದು:

1. ಈ ಲಿಂಕ್‌ಗೆ ಭೇಟಿ ಕೊಡಿ : https://www.bigshareonline.com/InvestorRegistration.aspx 2. ಕಂಪನಿಯ ಹೆಸರನ್ನು ಆಯ್ಕೆ ಮಾಡಿರಿ – **ಗುಜರಾತ್ ಪೆಟ್ರೋಸಿಂಥೀಸ್ ಲಿಮಿಟೆಡ್** 3. ಫೋಲಿಯೊ ನಂ./ಡಿಪಿ/ಕ್ಲೈಂಟ್ ಐಡಿ ನಮೂದಿಸಿರಿ 4. ಪ್ಯಾನ್ ನಂಬರ್ ನಮೂದಿಸಿರಿ 5. ಷೇರುದಾರರ ಹೆಸರು ನಮೂದಿಸಿರಿ 6. ಇಮೇಲ್ ಐಡಿ ನಮೂದಿಸಿರಿ 7. ಮೊಬೈಲ್ ನಂಬರ್ ನಮೂದಿಸಿರಿ 8. ಒಟಿಪಿ ಸಲ್ಲಿಸಿ 9. ತದನಂತರ ಸಿಸ್ಟಮ್‌ನಿಂದ ನಿಮ್ಮ ಇ–ಮೇಲ್ ವಿಳಾಸ ಖಚಿತಗೊಂಡು ಎಜಿಎಂ ಪ್ರಕಟಣೆ ರವಾನೆಗೊಳ್ಳುತ್ತದೆ. 10.ಇ–ಮೇಲ್ ವಿಳಾಸ ನೊಂದಾಯಿಸಿಕೊಳ್ಳುವ ನಿಟ್ಟಿನಲ್ಲಿ ಇನ್ನೂ ಹೆಚ್ಚಿನ ವಿಚಾರಣೆಗಳು/ಅನಾನುಕೂಲತೆಗಳು ಇದ್ದಲ್ಲಿ, ಅಂತಹ ಸದಸ್ಯರು investor@bigshareonline.com ವಿಳಾಸಕ್ಕೆ ಬರೆಯಬಹುದು.

ಇ–ಮೇಲ್ ವಿಳಾಸಗಳ ಶಾಶ್ವತ ನೊಂದಣಿಗಾಗಿ, ಡಿಮ್ಯಾಟ್ ರೂಪದ ಷೇರುಗಳನ್ನು ಹೊಂದಿರುವ ಸದಸ್ಯರು ಡೆಪಾಸಿಟರಿ ಪಾರ್ಟಿಸಿಪಂಟ್ (**ಡಿಪಿ**) ಇವರಲ್ಲಿ ಅಪ್ಡೇಟ್ ಮಾಡಿಕೊಳ್ಳಬೇಕು ಮತ್ತು ಭೌತಿಕ ರೂಪದ ಷೇರುಗಳನ್ನು ಹೊಂದಿರುವ ಸದಸ್ಯರು ರಜಿಸ್ಟಾರ್ ಮತ್ತು ಟ್ರಾನ್ಸ್‌ಫರ್ ಏಜಂಟ್ ಇವರೊಂದಿಗೆ ಅಪ್ಲೇಟ್ ಮಾಡಿಕೊಳ್ಳಬೇಕೆಂದು ಕೋರಲಾಗಿದೆ.

ಎಜಿಎಂ ಅವಧಿಯಲ್ಲಿ ರಿಮೋಟ್ ಇ–ವೋಟಿಂಗ್ ಅಥವಾ ಇ–ವೋಟಿಂಗ್ ಮುಖಾಂತರ ಮತ ಚಲಾಯಿಸುವ ಮಾದರಿ:

ರಿಮೋಟ್ ಇ–ವೋಟಿಂಗ್ ಸಿಸ್ಟಮ್ ಮುಖಾಂತರ ಎಜಿಎಂ ಪ್ರಕಟಣೆಯಲ್ಲಿ ಉಲ್ಲೇಖಿಸಲಾಗಿರುವ ವಹಿವಾಟುಗಳಿಗೆ, ಸದಸ್ಯರು ದೂರದಿಂದಲೇ ತಮ್ಮ ಮತ ಚಲಾಯಿಸುವ ಅವಕಾಶ ನೀಡಲಾಗಿರುತ್ತದೆ.

ಮೇಲೆ ತಿಳಿಸಲಾಗಿರುವ ವಿಧಾನದಲ್ಲಿ ಯಶಸ್ವಿಯಾಗಿ ತಮ್ಮ ಇಮೇಲ್ ವಿಳಾಸಗಳನ್ನು ನೊಂದಾಯಿಸಿಕೊಂಡಿರುವ ಸದಸ್ಯರಿಗೆ, ಇ–ವೋಟಿಂಗ್‌ಮುಖಾಂತರ ಮತಗಳನ್ನು ಚಲಾಯಿಸಲು ಲಾಗಿನ್ ಡೆನ್ಷಿಯಲ್‌ಗಳನ್ನು ಒದಗಿಸಲಾಗುತ್ತದೆ.

ಎಜಿಎಂ ಪ್ರಕಟಣೆಯಲ್ಲಿ ನಿಗದಿಪಡಿಸಲಾಗಿರುವ ಎಲ್ಲಾ ಠರಾವುಗಳಿಗೆ ಕಂಪನಿಯು ತನ್ನ ಎಲ್ಲಾ ಸದಸ್ಯರಿಗೆ ಮತಗಳನ್ನು ಚಲಾಯಿಸಲು ಸಿಡಿಎಸ್‌ಎಲ್'ರವರ ರಿಮೋಟ್ ಇ–ವೋಟಿಂಗ್ ಸೌಲಭ್ಯ (**'ರಿಮೋಟ್ ಇ–ವೋಟಿಂಗ್'**) ಒದಗಿಸಲು ಸಜ್ಜಾಗಿದೆ. ಹೆಚ್ಚುವರಿಯಾಗಿ, ಸಭೆಯ ಅವಧಿಯಲ್ಲಿ ಕೂಡ ಕಂಪನಿಯು ಇ–ವೋಟಿಂಗ್ ಸೌಲಭ್ಯವನ್ನು ಒದಗಿಸುತದೆ. ಎಜಿಎಂ ಅವಧಿಯಲ್ಲಿ ಎಜಿಎಂ/ಇ–ವೋಟಿಂಗ್ ಎದುರು ರಿಮೋಟ್ ಇ–ವೋಟಿಂಗ್ ಪ್ರಕ್ರಿಯೆಯ ವಿವರಗಳನ್ನು ಎಜಿಎಂ ಪ್ರಕಟಣೆಯಲ್ಲಿ ನೀಡಲಾಗುತದೆ.

ಗುಜರಾತ್ ಪೆಟ್ರೋಸಿಂಥಿಸ್ ಲಿಮಿಟೆಡ್‌ನ ಪರವಾಗಿ
ಸಹಿ/– ಊರ್ಮಿ. ಎನ್. ಪ್ರಸಾದ್
ಜಂಟಿ ವ್ಯವಸ್ಥಾಪಕ ನಿರ್ದೇಶಕ ಡಿ.ಐ.ಎನ್ : 00319482

ದಿನಾಂಕ: 15ನೇ ಜುಲೈ, 2024
ಸ್ಥಳ : ಮುಂಬೈ

ಸಿದ್ದರಾಮಯ್ಯ ವಿರುದ್ಧ ಕೆಲವರಿಗೆ ಅಸೂಯೆ: ಎಚ್. ಆಂಜನೇಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಅವರು ಐದು ವರ್ಷಗಳವರೆಗೆ ಕಾರ್ಯ ನಿರ್ವಹಿಸಬೇಕು. ಅವರು ಯಾವುದೇ ಟೀಕೆ–ಆರೋಪಗಳಿಗೆ ಎದೆಗುಂದಬೇಕಿಲ್ಲ. ಅವರ ಬೆಂಬಲಕ್ಕೆ ಇಡೀ ದಲಿತ ಸಮುದಾಯವೇ ಇರಲಿದೆ' ಎಂದು ಕಾಂಗ್ರೆಸ್ ಮುಖಂಡ ಎಚ್.ಆಂಜನೇಯ ಅವರು ಹೇಳಿದರು.

ಬಾಬು ಜಗಜೀವನರಾಮ್ ಭವನ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿದ ಅವರು, 'ಈ ಭವನ ನಿರ್ಮಾಣದಲ್ಲಿ, ಸಮಾಜ ಕಲ್ಯಾಣ ಇಲಾಖೆ ನಿರ್ವಹಣೆಯಲ್ಲಿ ಸಿದ್ದರಾಮಯ್ಯ ನನಗೆ ಬೆಂಬಲವಾಗಿ ನಿಂತಿದ್ದರು' ಎಂದು ನೆನಪಿಸಿಕೊಂಡರು.

'ನೊಂದವರು, ಬಡವರು, ಶೋಷಿತರು, ಅಹಿಂದ ವರ್ಗದ ಪ್ರಗತಿಗೆ ಯೋಜನೆಗಳನ್ನು ರೂಪಿಸಿರುವ ಕಾರಣಕ್ಕೆ ಅವರ ಕುರಿತು ಅಸೂಯೆ ಉಂಟಾಗಿದೆ. ಇದೇ ಕಾರಣಕ್ಕೆ ಕೆಲವರು ಅವರ ವಿರುದ್ಧ ಸುಳ್ಳು ಆರೋಪಗಳಲ್ಲಿ ತೊಡಗಿದ್ದಾರೆ' ಎಂದು ಆರೋಪಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿ, ಆಂಜನೇಯ ಸಚಿವರಾಗಿದ್ದ ಕಾಲದಲ್ಲಿ ಈ ಭವನದ ನಿರ್ಮಾಣಕ್ಕೆ ಅಡಿಗಲ್ಲು ಹಾಕಿದ್ದರು. ಈಗ ಭವ್ಯ ಭವನ ಎದ್ದುನಿಂತಿದೆ ಎಂದರು.

ದಲಿತ ಸಂಘಟನೆಗಳು ಆಂಜನೇಯ ಅವರಿಗೆ ಬೆಳ್ಳಿಗದೆ ನೀಡಿ ಗೌರವಿಸಿದವು.

ಕಾರ್ಯಕ್ರಮದಲ್ಲಿ ಎಚ್ ಆಂಜನೇಯ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸನ್ಮಾನಿಸಿದರು. ಸಚಿವ ಕೆ.ಎಚ್ ಮುನಿಯಪ್ಪ, ಲೋಕಸಭೆಯ ಮಾಜಿ ಸ್ಪೀಕರ್ ಮೀರಾಕುಮಾರಿ ಇದ್ದರು

ಸಂಸದ ತುಕಾರಾಂ ಅನರ್ಹತೆಗೆ ಬಿಜೆಪಿ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಲ್ಮೀಕಿ ನಿಗಮದ ಹಣ ಅಕ್ರಮವಾಗಿ ಬಳಕೆ ಮಾಡಿಕೊಂಡು ಸಂಸದರಾಗಿ ಆಯ್ಕೆಯಾದ ಇ.ತುಕಾರಾಂ ಅವರನ್ನು ಸಂಸದ ಸ್ಥಾನದಿಂದ ಅನರ್ಹಗೊಳಿಸಬೇಕು ಎಂದು ಬಿಜೆಪಿ ರಾಜ್ಯ ಪ್ರಧಾನಕಾರ್ಯದರ್ಶಿ ಪಿ.ರಾಜೀವ್ ಒತ್ತಾಯಿಸಿದ್ದಾರೆ.

ಭಾನುವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ಚುನಾವಣಾ ಆಯೋಗಕ್ಕೆ ಈ ಕುರಿತು ಮನವಿ ಸಲ್ಲಿಸುತ್ತೇವೆ ಎಂದು ತಿಳಿಸಿದರು.

ಅಕ್ರಮ ಹಣ ಬಳಸಿ ಚುನಾವಣೆ ಗೆದ್ದಿರುವ ತುಕಾರಾಂ ಅವರಿಗೆ ಸಂಸತ್ತಿನಲ್ಲಿ ಕುಳಿತುಕೊಳ್ಳಲು ನೈತಿಕತೆ ಇಲ್ಲ ಎಂದರು.

ವಾಲ್ಮೀಕಿ ನಿಗಮದ ಹಗರಣದಲ್ಲಿ ಭಾಗಿಯಾಗಿ ಬಂಧಿತರಾಗಿರುವ ನಾಗೇಂದ್ರ ಅವರು ಜಾರಿ ನಿರ್ದೇಶನಾಲಯದ ನ್ಯಾಯಾಲಯಕ್ಕೆ ಸಲ್ಲಿಸಿದ ರಿಮಾಂಡ್ ಅರ್ಜಿಯಲ್ಲಿ ಚುನಾವಣೆಗೆ ₹29.19 ಕೋಟಿ ಬಳಕೆ ಆಗಿದೆ ಎಂಬುದನ್ನು ಒಪ್ಪಿಕೊಂಡಿದ್ದಾರೆ ಎಂದು ಹೇಳಿದರು.

Government of Madhya Pradesh
Office of the Engineer-in-Chief Water Resources Department, Jal Sansadhan Bhawan, Tulsi Nagar, Bhopal (MP.) Email Id: ceproc.encwrd.bpl@nic.in Tel: 0755-2767635 Fax: 0755-2552406

N.I.T. No. 1077/2023-24/E-in-C/e-tendering Bhopal, Dated 09.07.2024

Bids for following works are invited on website https://www.mptenders.gov.in Last Date of purchase/download of Bid Document and submission of bid is **05-08-2024, 17:30 hrs.** Any amendment/modification can be seen only on the website. Detailed N.I.T. and other details can be viewed on above mentioned website.

S. No.	Tender No.	Work	District	Amount (Lakhs)
1.	2024_WRD_355620	**On Turnkey Basis:-** Construction of additional irrigation system in villages of Lateri from Tem medium project, as per detailed scope of work but not limited to that.	Vidisha	2641.88

G13466/24 **Sd/- Chief Engineer (Procurement)**

ನಿಧನ ವಾರ್ತೆ

ನಾಗಮ್ಮ

ಬೆಂಗಳೂರು: ಚಾಮರಾಜನಗರ ಜಿಲ್ಲೆಯ ಹರವೆ ಗ್ರಾಮದ ನಿವಾಸಿ ನಾಗಮ್ಮ (82) ಅವರು ಬೆಂಗಳೂರಿನ ಕಾಮಾಕ್ಷಿಪಾಳ್ಯದ ಪಟ್ಟೆಗಾರಪಾಳ್ಯದಲ್ಲಿ ಭಾನುವಾರ ನಿಧನರಾದರು. ಅವರಿಗೆ ಪುತ್ರ, ಪುತ್ರಿ ಇದ್ದಾರೆ.

ಕನ್ನಹಳ್ಳಿ ವೀರಶೈವ ರುದ್ರಭೂಮಿಯಲ್ಲಿ ನಾಗಮ್ಮ ಅವರ ಅಂತ್ಯಕ್ರಿಯೆ ನಡೆಯಿತು ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ.

ದೇವಸ್ಥಾನದಲ್ಲಿ ಪಂಜಾಗಳ ಪ್ರತಿಷ್ಠಾಪನೆ, ಐದು ದಿನ ಶ್ರದ್ಧೆ– ಭಕ್ತಿಯ ಆಚರಣೆ

ಮುಸ್ಲಿಮರಿಲ್ಲದ ಊರಲ್ಲಿ ಮೊಹರಂ

• ಚಂದ್ರಶೇಖರ ಎಸ್. ಚಿನಕೇಕರ

ಚಿಕ್ಕೋಡಿ (ಬೆಳಗಾವಿ ಜಿಲ್ಲೆ): ತಾಲ್ಲೂಕಿನ ಬೈನಕವಾಡಿ ಗ್ರಾಮ ಸೌಹಾರ್ದ, ಸಹಬಾಳ್ವೆಗೆ ಹೆಸರಾಗಿದೆ. ಈ ಊರಿನಲ್ಲಿ ಒಂದೇ ಒಂದು ಮುಸ್ಲಿಂ ಕುಟುಂಬ ಕೂಡ ಇಲ್ಲ. ಆದರೂ, ಪ್ರತಿವರ್ಷ ಮೊಹರಂ ಆಚರಿಸುತ್ತಾರೆ. ಈ ಬಾರಿ ಕೂಡ ಗ್ರಾಮದ ಮುರಸಿದ್ಧೇಶ್ವರ ಹಾಗೂ ಮಹಾದೇವ ದೇವಸ್ಥಾನದಲ್ಲಿ ಪಂಜಾ ಪ್ರತಿಷ್ಠಾಪಿಸಿದ್ದಾರೆ.

ಸದಲಗಾ ಪುರಸಭೆ ವ್ಯಾಪ್ತಿಯ ಬೈನಕವಾಡಿಯಲ್ಲಿ ಲಿಂಗಾಯತರು, ಮರಾಠರು, ಜೈನರು, ಕ್ಷತ್ರಿಯರು, ಕುರುಬರು ಸೇರಿದಂತೆ ವಿವಿಧ ಸಮುದಾಯದ 200ಕ್ಕೂ ಹೆಚ್ಚು ಕುಟುಂಬಗಳಿವೆ. ಯುಗಾದಿ, ದೀಪಾವಳಿ, ಮಹಾನವಮಿ ಯಷ್ಟೇ ಶ್ರದ್ಧೆ-ಭಕ್ತಿಯಿಂದ ಮೊಹರಂ ಇಲ್ಲಿ ಆಚರಿಸಲಾಗುತ್ತದೆ. ಈ ಭಾವೈಕ್ಯ ನಾಲ್ಕು ತಲೆಮಾರುಗಳಿಂದ ಮುಂದುವರಿದುಕೊಂಡು ಬಂದಿದೆ.

ಪ್ರವಾದಿ ಮೊಹಮ್ಮದ್ ಪೈಗಂಬರ ಅವರ ಮೊಮ್ಮಕ್ಕಳಾದ ಇಮಾಮ್‌ಹಸನ್ ಹಾಗೂ ಇಮಾಮ್‌ಹುಸೇನ್ ಅವರ ಬೆಳ್ಳಿಯ ಪಂಜಾಗಳನ್ನು ದೇವಸ್ಥಾನದಲ್ಲಿ ಪ್ರತಿಷ್ಠಾಪನೆ ಮಾಡಲಾಗಿದೆ. ದೇವಸ್ಥಾನದ ಅರ್ಚಕ ಮುರಾರಿ ಕುರಬೆಟ್ಟ ಮುರ-ಸಿದ್ಧೇಶ್ವರ ದೇವರ ಪೂಜೆಯೊಂದಿಗೆ ಪಂಜಾಗಳಿಗೂ ಪೂಜೆ ಮಾಡುತ್ತಾರೆ. ಮಲ್ಲಣ್ಣವರ ತೋಟದ ವಸತಿ ಪ್ರದೇಶದ ಸುಭಾಷ ಕಮತೆ ಅವರ ಮನೆಯಲ್ಲಿ ಇನ್ನೊಂದು ಪಂಜಾ ಪ್ರತಿಷ್ಠಾಪಿಸ ಲಾಗುತ್ತದೆ. ಅದನ್ನು ಅಜಿತ ಗಾವಡೆ ಅವರು ಹೊತ್ತುಕೊಳ್ಳುತ್ತಾರೆ.



ಚಿಕ್ಕೋಡಿ ತಾಲ್ಲೂಕಿನ ಬೈನಕವಾಡಿಯ ಮುರಸಿದ್ಧೇಶ್ವರ ಹಾಗೂ ಮಹಾದೇವ ದೇವಸ್ಥಾನದಲ್ಲಿ ಪ್ರತಿಷ್ಠಾಪಿಸಿದ ಪಂಜಾಗಳು

ನಮ್ಮೂರಲ್ಲಿ ದರ್ಗಾ, ಮಸೀದಿ ಇಲ್ಲ. ಹಾಗೆಂದ ಮಾತ್ರಕ್ಕೆ ಪಂಜಾಗಳನ್ನು ಪ್ರತ್ಯೇಕ ಶಾಮಿಯಾನ ಮಾಡಿ ಪ್ರತಿಷ್ಠಾಪಿಸಿಲ್ಲ. ದೇವಸ್ಥಾನದಲ್ಲೇ ಇಡುವುದು ನಮಗೆ ಹೆಮ್ಮೆ

ಯುವರಾಜ ಖೋತ
ಬೈನಕವಾಡಿ ನಿವಾಸಿ

ಹಿಂದೂ– ಮುಸ್ಲಿಂ ಸಂಘರ್ಷ ನಡೆದ ಕಾಲದಿಂದಲೂ ಬೈನಕವಾಡಿಯಲ್ಲಿ ಸೌಹಾರ್ದ ಬದುಕು ಇದೆ. ಭಕ್ತಿ ತೋರು ವವರಿಗೆ ಧರ್ಮದ ಪರಿಧಿ ಇಲ್ಲ ಎಂದು ಹಿರಿಯರು ಹೇಳಿದ್ದನ್ನು ಪಾಲಿಸುತ್ತಿದ್ದೇವೆ

ಸುಭಾಷ ಕಮತೆ, ಭಕ್ತ

ದೇವಸ್ಥಾನದಲ್ಲಿ ಅಲಾಯಿ ದೇವರನ್ನು ಪ್ರತಿಷ್ಠಾಪಿಸುವುದನ್ನು ಮುತ್ತಜ್ಜನ ಕಾಲದಿಂದ ನೋಡಿದ್ದೇನೆ. ಹಿರಿಯರು ಹಾಕಿಕೊಟ್ಟ ಹಾದಿಯಲ್ಲೇ ಯುವಜನರೂ ನಡೆದಿದ್ದೇವೆ

ರಾಹುಲ ಕಾಟೆ
ಬೈನಕವಾಡಿ ನಿವಾಸಿ

ಹಸನ್ ದೇವರನ್ನು ಮಹಾಂತೇಶ ದೇಸಾಯಿ, ಹುಸೇನ್ ದೇವರನ್ನು ಜಯರಾಂ ಜಾಧವ ಹೊತ್ತುಕೊಂಡು ಪ್ರತಿ ಮನೆಗೆ ತೆರಳಿ ನೈವೇದ್ಯ ಪಡೆಯುವುದು ಇಲ್ಲಿನ ರೂಢಿ. ಈ ಬಾರಿ ಜುಲೈ 16ರಂದು ಎರಡೂ ಪಂಜಾಗಳ ಭೆಟ್ಟಿ, 17ರಂದು ಹೊಳೆಗೆ ಕಳುಹಿಸುವ ಆಚರಣೆ ಸಿದ್ಧತೆ ನಡೆದಿದೆ.

ಐದು ದಿನಗಳ ಕಾಲ ಸಾಂಸ್ಕೃತಿಕ ಕಾರ್ಯಕ್ರಮ, ಅಲಾಯಿ ದೇವರುಗಳ ಕುಣಿತ, ವಾದ್ಯಮೇಳಗಳ ಸಡಗರ, ಗ್ರಾಮೀಣ ಕ್ರೀಡಾಕೂಟ, ಸಿಹಿ ಖಾದ್ಯಗಳ ಭೋಜನ ಎಲ್ಲ ಕಾರ್ಯ-ಕ್ರಮಗಳಲ್ಲಿ ಎಲ್ಲರೂ ಒಮ್ಮತದಿಂದ ಪಾಲ್ಗೊಳ್ಳುವುದೇ ಈ ಊರಿನ ವಿಶೇಷ.

ಹುಲಿ ಗೋಚರ...

ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನ ಹೊಂಡರಬಾಳು ಗ್ರಾಮದ ಸಿದ್ದೇಶ್ವರ ಬೆಟ್ಟದ ತಪ್ಪಲಲ್ಲಿ ಹುಲಿಯೊಂದು ಕಾಣಿಸಿಕೊಂಡಿದ್ದು, ಗ್ರಾಮಸ್ಥರು ಭಯಭೀತರಾಗಿ ಜಮೀನುಗಳಿಗೆ ಹೋಗಲು ಹಿಂಜರಿಯುತ್ತಿದ್ದಾರೆ. 15 ದಿನಗಳ ಹಿಂದೆ ಇದೇ ಜಾಗದಲ್ಲಿ ಮೇಯಲು ಬಿಟ್ಟಿದ್ದ 15ಕ್ಕೂ ಕುರಿಮರಿಗಳನ್ನು ಚಿರತೆಯೊಂದು ಕೊಂದಿತ್ತು. ಅರಣ್ಯ ಇಲಾಖೆಯವರು ಚಿರತೆಯನ್ನು ಸೆರೆ ಹಿಡಿದು ದಟ್ಟ ಅರಣ್ಯಕ್ಕೆ ಬಿಟ್ಟಿದ್ದರು. ಹುಲಿಯನ್ನೂ ಸೆರೆಹಿಡಿಯುವಂತೆ ಗ್ರಾಮಸ್ಥರು ಒತ್ತಾಯಿಸಿದ್ದಾರೆ

ಡೆಂಗಿ: 445 ಪ್ರಕರಣ ದೃಢ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ 294 ಸೇರಿ ರಾಜ್ಯದಲ್ಲಿ 445 ಡೆಂಗಿ ಪ್ರಕರಣಗಳು ಹೊಸದಾಗಿ ಭಾನುವಾರ ದೃಢಪಟ್ಟಿವೆ.

ಆರೋಗ್ಯ ಇಲಾಖೆ ಮಾಹಿತಿ ಪ್ರಕಾರ, 24 ಗಂಟೆಗಳಲ್ಲಿ 2,630 ಪರೀಕ್ಷೆಗಳನ್ನು ಮಾಡಲಾಗಿದೆ. 17 ಮಂದಿ ಒಂದು ವರ್ಷದೊಳಗಿನವ-ರಾದರೆ, 145 ಮಂದಿ ಒಂದರಿಂದ 18 ವರ್ಷದವರು, 283 ಮಂದಿ 18 ವರ್ಷ ಮೇಲ್ಪಟ್ಟವರಿಗೆ ಸೋಂಕು ದೃಢಪಟ್ಟಿದೆ. ಸದ್ಯ ಡೆಂಗಿ ಪೀಡಿತರಲ್ಲಿ 308 ಮಂದಿ ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

9 ಜಿಲ್ಲೆಗಳಲ್ಲಿ ಹೊಸದಾಗಿ ಡೆಂಗಿ ಪ್ರಕರಣಗಳು ಖಚಿತಪಟ್ಟಿವೆ. ದಕ್ಷಿಣಕನ್ನಡ ದಲ್ಲಿ 62, ಮಂಡ್ಯದಲ್ಲಿ 33, ತುಮಕೂರಿನಲ್ಲಿ 19, ಚಿಕ್ಕಮಗಳೂರಿನಲ್ಲಿ 13, ಧಾರವಾಡದಲ್ಲಿ 12, ಉಡುಪಿಯಲ್ಲಿ 5, ಬೀದರ್‌ನಲ್ಲಿ 4, ಬಳ್ಳಾರಿಯಲ್ಲಿ3 ಮೂರು ಪ್ರಕರಣ ವರದಿಯಾಗಿವೆ.

ಮುಂದುವರೆದ ನಾಗೇಂದ್ರ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಹಣ ದುರ್ಬಳಕೆ ಪ್ರಕರಣ ದಲ್ಲಿ ಕಾಂಗ್ರೆಸ್ ಶಾಸಕ ಮತ್ತು ಮಾಜಿ ಸಚಿವ ಬಿ.ನಾಗೇಂದ್ರ ಅವರನ್ನು ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಭಾನುವಾರವೂ ತೀವ್ರ ವಿಚಾರಣೆಗೆ ಒಳಪಡಿಸಿದರು.

ಈ ಪ್ರಕರಣದಲ್ಲಿ ಇ.ಡಿ, ನಾಗೇಂದ್ರ ಅವರನ್ನು ಜುಲೈ 18ರವರೆಗೆ ಕಸ್ಟಡಿಗೆ ಪಡೆದಿದೆ. ನಿಗಮದ ನೌಕರ ಚಂದ್ರಶೇಖರನ್ ತನ್ನ ಮರಣ ಪತ್ರದಲ್ಲಿ, 'ಸಚಿವರ ಸೂಚನೆಯಂತೆ ಹಣ ವರ್ಗಾವಣೆ ಮಾಡಲಾಗಿತ್ತು' ಎಂದು ಬರೆದಿದ್ದರು. ಈ ಬಗ್ಗೆ ಮತ್ತು ಹಣ ವರ್ಗಾವಣೆಯ ಇತರ ಹಂತಗಳ ಬಗ್ಗೆ ನಾಗೇಂದ್ರ ಅವರಿಗೆ ಭಾನುವಾರವೂ ಹಲವು ಪ್ರಶ್ನೆ ಕೇಳಲಾಗಿದೆ ಎಂದು ಇ.ಡಿ ಮೂಲಗಳು ಹೇಳಿವೆ.

ಶಾಸಕ ದದ್ದಲ್‌ಗೆ ಹುಡುಕಾಟ

ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧ್ಯಕ್ಷ, ಕಾಂಗ್ರೆಸ್ ಶಾಸಕ ಬಸನಗೌಡ ದದ್ದಲ್ ಅವರಿಗೆ ಹುಡುಕಾಟ ಮುಂದುವರೆದಿದೆ. ಶನಿವಾರ ಬೆಂಗಳೂರಿನಿಂದ ಹೊರಗೆ ಹೊರಟ ಅವರು ಎಲ್ಲಿದ್ದಾರೆ ಎಂಬುದು ಪತ್ತೆಯಾಗಿಲ್ಲ.

ರಾಯಚೂರಿನಲ್ಲಿನ ಅವರ ಮನೆಗೆ ಬೀಗ ಹಾಕಿದ್ದು, ಅವರ ಕುಟುಂಬದ ಯಾರೊಬ್ಬರೂ ಮನೆಯಲ್ಲಿ ಇಲ್ಲ. ಸೋಮವಾರ ವಿಚಾರಣೆಗೆ ಹಾಜರಾಗಿ ಎಂದು ವಿಶೇಷ ತನಿಖಾ ದಳ (ಎಸ್‌ಐಟಿ) ಸಹ ದದ್ದಲ್ ಅವರಿಗೆ ಈ ಹಿಂದೆಯೇ ಸೂಚಿಸಿತ್ತು.

'ಅಗತ್ಯವಿದ್ದರೆ ಮಧ್ಯಪ್ರವೇಶ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಧಾನಮಂಡಲ ಅಧಿವೇಶನದಲ್ಲಿ ಎಲ್ಲ ಇಲಾಖೆಗಳ ಕಾರ್ಯದರ್ಶಿಗಳು, ಮುಖ್ಯಸ್ಥರು ಹಾಜರಿದ್ದು, ಸಚಿವರಿಗೆ ಸಮರ್ಪಕವಾಗಿ ಮಾಹಿತಿ ನೀಡಬೇಕು. ಆಯಾ ಇಲಾಖೆಯ ಸಚಿವರು ಚರ್ಚೆಯ ವಿಷಯಗಳಿಗೆ ಉತ್ತರಿಸಬೇಕು. ಅಗತ್ಯ-ವಿದ್ದರೆ ನಾನು ಮಧ್ಯಪ್ರವೇಶಿಸುತ್ತೇನೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಅಧಿವೇಶನಕ್ಕೆ ಪೂರ್ವಭಾವಿಯಾಗಿ ಇಲಾಖೆಗಳ ಹೆಚ್ಚುವರಿ ಮುಖ್ಯ ಕಾರ್ಯ-ದರ್ಶಿಗಳು, ಪ್ರಧಾನ ಕಾರ್ಯದರ್ಶಿಗಳು ಹಾಗೂ ಕಾರ್ಯದರ್ಶಿಗಳ ಸಭೆ ಗೃಹ ಕಚೇರಿ ಕೃಷ್ಣಾದಲ್ಲಿ ಭಾನುವಾರ ನಡೆಸಿದ ಮುಖ್ಯಮಂತ್ರಿ ಈ ಸೂಚನೆ ನೀಡಿದರು.

ವಿವಿಧ ಇಲಾಖೆಗಳಲ್ಲಿ ಚರ್ಚೆಗೆ ಬರುವ ಸಾಧ್ಯತೆ ಇರುವ ವಿಷಯಗಳ ಕುರಿತು ಇಲಾಖೆಗಳ ಕಾರ್ಯದರ್ಶಿ-ಗಳಿಂದ ಮುಖ್ಯಮಂತ್ರಿ ಮಾಹಿತಿ ಪಡೆದರು. ಅಲ್ಲದೆ, ಚರ್ಚೆಯ ಸಾಧ್ಯತೆ ಇರುವ ವಿಷಯಗಳ ಕುರಿತು ದತ್ತಾಂಶ ಗಳನ್ನು ಸಂಗ್ರಹಿಸಲೂ ಸೂಚನೆ ನೀಡಿದರು.

ಒಂದೇ ಕಡೆ 5 ವರ್ಷ ಕರ್ತವ್ಯ: ಪಟ್ಟಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಂದೇ ಹುದ್ದೆ ಅಥವಾ ಒಂದೇ ಸ್ಥಳದಲ್ಲಿ ಐದು ವರ್ಷಕ್ಕಿಂತ ಹೆಚ್ಚು ಅವಧಿ ಕರ್ತವ್ಯದಲ್ಲಿ ಇರುವ ಕಂದಾಯ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ಪಟ್ಟಿ ನೀಡುವಂತೆ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಇಲಾಖೆಯು ಸುತ್ತೋಲೆ ಹೊರಡಿಸಿದೆ.

ಅಂತಹ ಸಿಬ್ಬಂದಿ ವರ್ಗಾವಣೆ ಅಗತ್ಯ ವಿದ್ದರೆ, ಸಂಬಂಧಿಸಿದ ಪ್ರಸ್ತಾವನೆ ಯನ್ನೂ ಸಲ್ಲಿಸಿ ಎಂದು ಸೂಚಿಸಿದೆ.

ದೀರ್ಘಾವಧಿ ಒಂದೇ ಸ್ಥಳದಲ್ಲಿ-ರುವ ಸಿಬ್ಬಂದಿ ವಿರುದ್ಧ ಸಾರ್ವಜನಿಕ ರಿಂದ ಹಲವಾರು ದೂರುಗಳು ಬಂದಿವೆ. ಇದೇ 8ರಂದು ಜಿಲ್ಲಾಧಿಕಾರಿ ಗಳು, ಜಿಲ್ಲಾಪಂಚಾಯಿತಿ ಸಿಇಒಗಳ ಜತೆಗೆ ಮುಖ್ಯಮಂತ್ರಿ ನಡೆಸಿದ ಸಭೆಯಲ್ಲಿ ದೂರುಗಳ ವಿಚಾರವು ಪ್ರಸ್ತಾಪವಾಗಿತ್ತು.

ಸಿಬ್ಬಂದಿ ವಿರುದ್ಧ ಬಂದಿರುವ ದೂರುಗಳು ಮತ್ತು ಅವರ ಕರ್ತವ್ಯದ ಅವಧಿ ವಿವರಗಳನ್ನು ಸಿದ್ದಪಡಿಸಿ. ಅಂತಹವರ ವಿರುದ್ಧ ಶಿಸ್ತುಕ್ರಮ ಹಾಗೂ ಅಗತ್ಯವಿದ್ದರೆ ವರ್ಗಾವಣೆ ಮಾಡಲು ಪ್ರಸ್ತಾವ ಸಲ್ಲಿಸಿ ಎಂದು ಮುಖ್ಯಮಂತ್ರಿ ಅಂದಿನ ಸಭೆಯಲ್ಲಿ ಸೂಚಿಸಿದ್ದರು.

ಈ ಸೂಚನೆಯಂತೆ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಾಜೇಂದರ್ ಕುಮಾರ್ ಕಟಾರಿಯಾ ಅವರು ಇದೇ ಬುಧವಾರ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದಿದ್ದಾರೆ. ಕಚೇರಿಯಲ್ಲಿ ಸಿಬ್ಬಂದಿಯ ಕಾರ್ಯ ಕ್ಷಮತೆ ಹೆಚ್ಚಿಸಲು ಮತ್ತು ಶಿಸ್ತು ಪಾಲನೆ ಅನುಷ್ಠಾನಕ್ಕೆ ತರಲು ಶಿಸ್ತುಕ್ರಮ ತೆಗೆದು ಕೊಳ್ಳಿ ಎಂದೂ ಸೂಚನೆ ನೀಡಿದ್ದಾರೆ.

ಮಂಗಳೂರು, ಕೆನರಾ ಅರಣ್ಯ ವೃತ್ತದಿಂದ ಕೇಂದ್ರಕ್ಕೆ ಪರಿಷ್ಕೃತ ಪ್ರಸ್ತಾವ ಸಲ್ಲಿಕೆ

'ಡಾಲ್ಫಿನ್ ಸಂರಕ್ಷಣೆ' ಯತ್ನಕ್ಕೆ ಮರುಜೀವ

• ಸಂಧ್ಯಾ ಹೆಗಡೆ

ಮಂಗಳೂರು: ಮಂಗಳೂರು ಅರಣ್ಯ ವೃತ್ತ ಹಾಗೂ ಕೆನರಾ (ಉತ್ತರ ಕನ್ನಡ) ಅರಣ್ಯ ವೃತ್ತ ವ್ಯಾಪ್ತಿಯ ಕಡಲ ತೀರಗಳ ನಿರ್ದಿಷ್ಟ ಭಾಗವನ್ನು ಡಾಲ್ಫಿನ್‌ಗಳ ಸಂರಕ್ಷಿತ ಪ್ರದೇಶವನ್ನಾಗಿ ಗುರುತಿಸುವ ಪ್ರಯತ್ನ ಮತ್ತೆ ಮರುಜೀವ ಪಡೆದಿದೆ.

ಈ ಸಂಬಂಧ ಮಂಗಳೂರು ಹಾಗೂ ಕೆನರಾ ಅರಣ್ಯ ವೃತ್ತಗಳಿಂದ ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯಕ್ಕೆ ₹11.69 ಕೋಟಿ ವೆಚ್ಚದ ಪರಿಷ್ಕೃತ ಪ್ರಸ್ತಾವ ಸಲ್ಲಿಕೆಯಾಗಿದೆ.

ಮಂಗಳೂರು ವೃತ್ತ ವ್ಯಾಪ್ತಿಯ ಕುಂದಾಪುರ ಕೋಡಿ ಬೀಚ್ ಭಾಗದಲ್ಲಿ ಡಾಲ್ಫಿನ್‌ಗಳು ಕಾಣಿಸಿಕೊಳ್ಳುತ್ತವೆ. ಅದೇ ರೀತಿ ಉತ್ತರ ಕನ್ನಡ ಜಿಲ್ಲೆಯ ಕಾರವಾರ ಸುತ್ತಮುತ್ತಲಿನ ಕಡಲ ತೀರದಲ್ಲೂ ಡಾಲ್ಫಿನ್‌ಗಳು ಇವೆ. ದಕ್ಷಿಣ ಕನ್ನಡದಿಂದ ಉತ್ತರ ಕನ್ನಡದವರೆಗೆ ಒಟ್ಟು 325 ಕಿ.ಮೀ ಸಮುದ್ರ ತೀರ ಇದ್ದು, ಅದರಲ್ಲಿ 165 ಕಿ.ಮೀ ಮಂಗಳೂರು ವೃತ್ತಕ್ಕೆ ಒಳಪಟ್ಟಿದೆ.

ಯಾಕೆ ಸಂರಕ್ಷಿತ ಪ್ರದೇಶ?: ಇಲ್ಲಿನ ಕಡಲಿನಲ್ಲಿರುವ ಡಾಲ್ಫಿನ್‌ಗಳ ಬಗ್ಗೆ ಹೆಚ್ಚು ಅಧ್ಯಯನ ನಡೆದಿಲ್ಲ. ಸಂರಕ್ಷಿತ ಪ್ರದೇಶ ಘೋಷಣೆಯಾದರೆ, ಡಾಲ್ಫಿನ್ ಸಂರಕ್ಷಣೆ ಜೊತೆಗೆ ಅವುಗಳ ಚಲನವಲನ, ಸಮೀಕ್ಷೆ, ವಿಶೇಷ ಅಧ್ಯಯನ ಸಾಧ್ಯವಾಗುತ್ತದೆ. ಡಾಲ್ಫಿನ್ ಬಗ್ಗೆ ಜಾಗೃತಿ ಕಾರ್ಯಕ್ರಮ ನಡೆಸುವ ಮೂಲಕ ಅವುಗಳ ಮಹತ್ವ ತಿಳಿಸಲಾಗುತ್ತದೆ. ಮೀನುಗಾರರು ಮೀನುಗಾರಿಕೆಗೆ ತೆರಳಿದಾಗ ಡಾಲ್ಫಿನ್‌ಗಳು ಕಂಡುಬಂದಲ್ಲಿ ಅವುಗಳ ರಕ್ಷಣೆಗೆ ಹೆಚ್ಚು ಎಚ್ಚರ ವಹಿಸುವಂತೆ ಅರಿವು ಮೂಡಿಸಲಾಗುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ, ಕಡಲ ತೀರಗಳು ಶುಚಿತ್ವ ಹೊಂದಲು ಸಾಧ್ಯವಾಗುತ್ತದೆ ಎನ್ನುತ್ತಾರೆ ಅರಣ್ಯ ಇಲಾಖೆ ಅಧಿಕಾರಿಗಳು.

ಸಂರಕ್ಷಿತ ಪ್ರದೇಶ ಎಂದು ಘೋಷಿಸಿದಾಗ ಮೂಲ ಸೌಕರ್ಯಗಳ ಅಭಿವೃದ್ಧಿಗೆ ಅನುದಾನ ಲಭ್ಯವಾಗು-ತ್ತದೆ. ಡಾಲ್ಫಿನ್ ಸಂರಕ್ಷಣೆಗೆ ಸಿಬ್ಬಂದಿ ನೇಮಕ, ಗಾಯಗೊಂಡು ಕಡಲತೀರಕ್ಕೆ ಬಂದರೆ ಅವುಗಳಿಗೆ ಚಿಕಿತ್ಸೆ ನೀಡುವ ವ್ಯವಸ್ಥೆ ಇಂತಹ ಅನೇಕ ಸೌಲಭ್ಯಗಳು ದೊರೆಯುತ್ತವೆ. ಕಡಲಾಮೆ (ಆಲಿವ್ ರಿಡ್ಲೆ) ಸಂರಕ್ಷಣೆ ನಿಟ್ಟಿನಲ್ಲಿ ನಡೆದ ಪ್ರಯತ್ನ ಈಗಾಗಲೇ ಯಶಸ್ವಿಯಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಕಡಲ ತೀರದಲ್ಲಿ 1985ರ ನಂತರ ಮೊದಲ ಬಾರಿಗೆ ಕಳೆದ ವರ್ಷ 12 ಕಡೆಗಳಲ್ಲಿ ಕಡಲಾಮೆಗಳು ಮೊಟ್ಟೆ ಇಟ್ಟಿದ್ದವು. ಮೊಟ್ಟೆಗಳನ್ನು ರಕ್ಷಿಸಿ, 1,000ಕ್ಕೂ ಹೆಚ್ಚು ಮರಿಗಳನ್ನು ಕಡಲಿಗೆ ಬಿಡಲಾಗಿದೆ. ಡಾಲ್ಫಿನ್ ಸಂರಕ್ಷಿತ ಪ್ರದೇಶದ ಪರಿಷ್ಕೃತ ಪ್ರಸ್ತಾವ ಸಲ್ಲಿಕೆಗೆ ಇದು ಮುಖ್ಯ ಪ್ರೇರಣೆ ಎನ್ನುತ್ತಾರೆ ಮಂಗಳೂರು ವೃತ್ತ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ವಿ. ಕರಿಕಾಳನ್.

ಸವಾಲು ಏನು?: ಡಾಲ್ಫಿನ್ ಸಂರಕ್ಷಿತ ಪ್ರದೇಶ ಘೋಷಣೆಗೆ ಕಡಲ ಕಿನಾರೆಯ ಸ್ವಚ್ಛತೆ ಅತಿ ಮುಖ್ಯ. ಕಡಲ ಕಿನಾರೆಯ ಆಕರ್ಷಣೆ ಹೆಚ್ಚುತ್ತಿದ್ದು, ಪ್ರವಾಸಿಗರ ಸಂಖ್ಯೆಯೂ ವೃದ್ಧಿಸುತ್ತಿದೆ. ಹೀಗಾಗಿ, ಕಡಲ ಕಿನಾರೆ ಸ್ವಚ್ಛವಾಗಿಟ್ಟುಕೊಳ್ಳುವುದು ಇಲಾಖೆಗೆ ದೊಡ್ಡ ಸವಾಲಾಗಲಿದೆ. ಮಂಗಳೂರಿನಲ್ಲಿ ಕಡಲ ತಡಿಯಲ್ಲಿ ಬೃಹತ್ ಕೈಗಾರಿಕೆಗಳು ಇದ್ದು, ಸಮುದ್ರದ ನೀರನ್ನು ಮಾಲಿನ್ಯರಹಿತವಾಗಿ ಉಳಿಸಿಕೊಳ್ಳುವುದು ಕೂಡ ಸವಾಲಿನ ಸಂಗತಿ ಎಂದು ಅಧಿಕಾರಿಯೊಬ್ಬರು ಅಭಿಪ್ರಾಯಪಟ್ಟರು.

ರಾಜ್ಯದ ಮುಖ್ಯ ವನ್ಯಜೀವಿ ವಾರ್ಡನ್ ಮೂಲಕ ಪ್ರಸ್ತಾವ ಸಲ್ಲಿಸಲಾಗಿದ್ದು, ಈ ಸಂಬಂಧ ಈಗಾಗಲೇ ಎರಡು ವರ್ಚುವಲ್ ಸಭೆಗಳು ನಡೆದಿವೆ

ವಿ. ಕರಿಕಾಳನ್
ಸಿಸಿಎಫ್ ಮಂಗಳೂರು ವೃತ್ತ

ಪ್ರಧಾನಿ ಘೋಷಿಸಿದ್ದ ಯೋಜನೆ

2020ರ ಆಗಸ್ಟ್ 15ರಂದು ಸ್ವಾತಂತ್ರ್ಯೋತ್ಸವ ಭಾಷಣದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು 'ಪ್ರಾಜೆಕ್ಟ್ ಡಾಲ್ಫಿನ್' ಯೋಜನೆ ಘೋಷಿಸಿದ್ದರು. ಇದರ ಭಾಗವಾಗಿ, ಅರಣ್ಯ ಇಲಾಖೆಯ ಮಂಗಳೂರು ವೃತ್ತ ಮತ್ತು ಕೆನರಾ ವೃತ್ತಗಳ ಮೂಲಕ ಡಾಲ್ಫಿನ್ ಸಂರಕ್ಷಣೆ ಯೋಜನೆಯ ಪ್ರಸ್ತಾವ ಸಲ್ಲಿಕೆಯಾಗಿತ್ತು. ಕಳೆದ ವರ್ಷ ಕಡಲಾಮೆ ಸಂರಕ್ಷಣೆ ಮತ್ತು ಡಾಲ್ಫಿನ್ ಸಂರಕ್ಷಣೆ ಇವೆರಡೂ ಪ್ರಸ್ತಾವ ಸಲ್ಲಿಕೆಯಾಗಿದ್ದವು. ಅವುಗಳಲ್ಲಿ ಕಡಲಾಮೆ ಸಂರಕ್ಷಣೆ ಪ್ರಸ್ತಾವಕ್ಕೆ ಮಾತ್ರ ಅನುದಾನ ದೊರೆತಿತ್ತು ಎಂದು ಅರಣ್ಯ ಇಲಾಖೆಯ ಮೂಲಗಳು ತಿಳಿಸಿವೆ.

ಮಹಾರಾಷ್ಟ್ರದ ಸಾಂಗ್ಲಿಯಲ್ಲಿ ಭಾನುವಾರ ಮಹಿಳೆಯೊಬ್ಬರು ಮಗುವಿಗೆ ಸೀರೆಯ ಸೆರಗನ್ನು ಹೊದಿಸಿ ಮಳೆಯಿಂದ ರಕ್ಷಿಸಿಕೊಂಡು ಕರೆದೊಯ್ದರು (ಎಡ ಚಿತ್ರ) ಠಾಣೆಯಲ್ಲಿ ಮನೆಗಳು ಜಲಾವೃತವಾಗಿದ್ದು, ಬಾಲಕನೊಬ್ಬ ನೀರಿನಲ್ಲೇ ಕೊಡೆ ಹಿಡಿದು ಹೆಜ್ಜೆ ಹಾಕಿದ —ಪಿಟಿಐ ಚಿತ್ರಗಳು

ಕಥಾಡ್‌ನಲ್ಲಿ ಅತಿ ಹೆಚ್ಚು ಹಾನಿ • 1.50 ಲಕ್ಷ ಜನರಿಗೆ ತೊಂದರೆ

ಅಸ್ಸಾಂ: ಪ್ರವಾಹ ಪರಿಸ್ಥಿತಿ ಸುಧಾರಣೆ

ಗುವಾಹಟಿ (ಪಿಟಿಐ): ಅಸ್ಸಾಂನಲ್ಲಿ ಪ್ರವಾಹ ಪರಿಸ್ಥಿತಿಯು ಭಾನುವಾರ ಸುಧಾರಿಸಿದ್ದು, ರಾಜ್ಯದಾದ್ಯಂತ ನೀರಿನ ಮಟ್ಟವು ವೇಗವಾಗಿ ಇಳಿಯುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಗುವಾಹಟಿಯಲ್ಲಿರುವ ಪ್ರಾದೇಶಿಕ ಹವಾಮಾನ ಕೇಂದ್ರವು (ಆರ್‌ಎಂಸಿ) ಬರಾಕ್ ಕಣಿವೆ ಮತ್ತು ಮಧ್ಯ ಅಸ್ಸಾಂನ ಕೆಲವು ಜಿಲ್ಲೆಗಳಲ್ಲಿ ಮಳೆಯ ಮುನ್ಸೂಚನೆಯನ್ನು ಹೊರತುಪಡಿಸಿ ಯಾವುದೇ ಎಚ್ಚರಿಕೆಯನ್ನು ನೀಡಿಲ್ಲ.

ಶನಿವಾರ ರಾತ್ರಿ ಅಸ್ಸಾಂ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ (ಎಎಸ್‌ಡಿಎಂಎ) ವರದಿಯು ಧೇಮಾಜಿ ಜಿಲ್ಲೆಯ ಗೋಗಮುಖ್ ರೆವೆನ್ಯೂ ವೃತ್ತದಲ್ಲಿ ಒಬ್ಬರು ಮೃತಪಟ್ಟಿರುವುದಾಗಿ ತಿಳಿಸಿದೆ.

ಇದರೊಂದಿಗೆ ಈ ಬಾರಿಯ ಪ್ರವಾಹ, ಭೂಕುಸಿತ, ಬಿರುಗಾಳಿ ಮತ್ತು ಸಿಡಿಲಿಗೆ ಬಲಿಯಾದವರ ಒಟ್ಟು ಸಂಖ್ಯೆ 107ಕ್ಕೆ ಏರಿಕೆಯಾಗಿದೆ.

ಬಾರ್‌ಪೇಟಾ, ಕಥಾಡ್, ದರಾಂಗ್, ಚಿರಾಂಗ್, ಧೇಮಾಜಿ, ಧುಬ್ರಿ, ದಿಬ್ರುಗಢ್ ಮೊದಲಾದ ಜಿಲ್ಲೆಗಳಲ್ಲಿ ಪ್ರವಾಹದಿಂದಾಗಿ 8.40 ಲಕ್ಷಕ್ಕೂ ಹೆಚ್ಚು ಜನರು ತೊಂದರೆಗೀಡಾಗಿದ್ದಾರೆ ಎಂದು ವರದಿ ತಿಳಿಸಿದೆ.

ಕಥಾಡ್ ಜಿಲ್ಲೆಯಲ್ಲಿ ಅತಿ ಹೆಚ್ಚು ಹಾನಿಯಾಗಿದ್ದು, ಸುಮಾರು 1.5 ಲಕ್ಷ ಜನರು ಸಂಕಷ್ಟದಲ್ಲಿದ್ದಾರೆ. ಧುಬ್ರಿಯಲ್ಲಿ ಸುಮಾರು 1.27 ಲಕ್ಷ ಜನರು ಮತ್ತು ನಾಗಾವ್‌ನಲ್ಲಿ 88,500ಕ್ಕೂ ಹೆಚ್ಚು ಜನರು ಪ್ರವಾಹದಿಂದಾಗಿ ತೊಂದರೆಗೆ ಒಳಗಾಗಿದ್ದಾರೆ ಎಂದು ಅದು ಹೇಳಿದೆ.

ಆಡಳಿತವು 13 ಜಿಲ್ಲೆಗಳಲ್ಲಿ 221 ಪರಿಹಾರ ಶಿಬಿರಗಳು ಮತ್ತು ಪರಿಹಾರ ವಿತರಣಾ ಕೇಂದ್ರಗಳನ್ನು ಸ್ಥಾಪಿಸಿದ್ದು, ಪ್ರಸ್ತುತ 72,046 ನಿರಾಶ್ರಿತರನ್ನು ನೋಡಿಕೊಳ್ಳುತ್ತಿದೆ. ವ್ಯಾಪಕವಾದ ಪ್ರವಾಹದ ಕಾರಣದಿಂದಾಗಿ, ರಾಜ್ಯದಾದ್ಯಂತ 5.03 ಲಕ್ಷ ಸಾಕುಪ್ರಾಣಿಗಳು ಮತ್ತು ಕೋಳಿಗಳಿಗೆ ಸಮಸ್ಯೆಯಾಗಿದೆ.

ಪ್ರಸ್ತುತ 1,705 ಗ್ರಾಮಗಳು ಜಲಾವೃತವಾಗಿದ್ದು, ಅಸ್ಸಾಂನಾದ್ಯಂತ 39,898 ಹೆಕ್ಟೇರ್ ಬೆಳೆ ಹಾನಿಯಾಗಿದೆ ಎಂದು ಎಎಸ್‌ಡಿಎಂಎ ತಿಳಿಸಿದೆ.

ಅಪಾಯದ ಮಟ್ಟ ತಲುಪಿದ ನದಿಗಳು: ಪ್ರಸ್ತುತ, ನಿಮತಿಘಾಟ್, ತೇಜ್‌ಪುರ ಮತ್ತು ಧುಬ್ರಿಯಲ್ಲಿ ಬ್ರಹ್ಮಪುತ್ರ ನದಿಯು ಅಪಾಯದ ಮಟ್ಟವನ್ನು ಮೀರಿ ತುಂಬಿ ಹರಿಯುತ್ತಿದೆ. ಇದರ ಉಪನದಿಗಳಾದ ಚೆನಿಮರಿಯಲ್ಲಿನ ಬುರ್ಹಿದಿಹಿಂಗ್ ಮತ್ತು ನಂಗ್ಲಮುರಘಾಟ್‌ನ ದಿಪಾಂಗ್ ಅಪಾಯದ ಮಟ್ಟ ಮೀರಿ ಹರಿಯುತ್ತಿವೆ.

'ಮುಂಬೈನಲ್ಲಿ ಮಳೆ ಕಡಿಮೆಯಾಗುವ ಸಾಧ್ಯತೆ'

ಮುಂಬೈ (ಪಿಟಿಐ): ಕಳೆದ 24 ಗಂಟೆಗಳಲ್ಲಿ ಮುಂಬೈ ನಗರ ಮತ್ತು ಉಪನಗರಗಳಲ್ಲಿ ಹೆಚ್ಚು ಮಳೆಯಾಗಿದ್ದು, ಭಾನುವಾರ ಮಳೆಯ ಪ್ರಮಾಣ ಕಡಿಮೆಯಾಗುವ ಸಾಧ್ಯತೆಯಿದೆ ಎಂದು ಐಎಂಡಿ ತಿಳಿಸಿದೆ.

ಭಾರತೀಯ ಹವಾಮಾನ ಇಲಾಖೆಯು ಮಹಾರಾಷ್ಟ್ರದ ಕೊಲ್ಹಾಪುರ, ಸತಾರಾ, ಸಿಂಧುದುರ್ಗ ಮತ್ತು ರತ್ನಗಿರಿ ಜಿಲ್ಲೆಗಳಿಗೆ 'ರೆಡ್' ಅಲರ್ಟ್ ಘೋಷಿಸಿದ್ದು, ಭಾನುವಾರ ಅತಿ ಹೆಚ್ಚು ಮಳೆಯಾಗುವ ಮುನ್ಸೂಚನೆ ನೀಡಿದೆ.

ಕಳೆದ 24 ಗಂಟೆಗಳಲ್ಲಿ, ದಕ್ಷಿಣ ಮುಂಬೈನ ಕೊಲಾಬಾ ವೀಕ್ಷಣಾಲಯವು 9.2 ಸೆಂ.ಮೀ ಮಳೆ ದಾಖಲಿಸಿದರೆ, ಸಾಂತಾಕ್ರೂಜ್ ವೀಕ್ಷಣಾಲಯ 14.2 ಸೆಂ.ಮೀ ಮಳೆಯನ್ನು ದಾಖಲಿಸಿದೆ ಎಂದು ಐಎಂಡಿ ತಿಳಿಸಿದೆ.

ಕಳೆದ 24 ಗಂಟೆಗಳಲ್ಲಿ ಮುಂಬೈ ಮತ್ತು ಮಹಾರಾಷ್ಟ್ರದ ಇತರ ಕರಾವಳಿ ಪ್ರದೇಶಗಳಿಗೆ ಹೋಲಿಸಿದರೆ ಮರಾಠವಾಡ ಮತ್ತು ವಿದರ್ಭದ ಕೃಷಿ ಪ್ರದೇಶಗಳಲ್ಲಿ ಕಡಿಮೆ ಮಳೆಯಾಗಿದೆ.

ರಾಜಸ್ಥಾನ: ಹಲವು ಜಿಲ್ಲೆಗಳಲ್ಲಿ ಭಾರಿ ಮಳೆ

ಜೈಪುರ (ಪಿಟಿಐ): ರಾಜಸ್ಥಾನದ ಜೈಪುರ, ಝಾಲಾವರ್ ಮತ್ತು ಭರತ್‌ಪುರ ಜಿಲ್ಲೆಗಳಲ್ಲಿ ಕಳೆದ 24 ಗಂಟೆಗಳಲ್ಲಿ ಭಾರಿ ಮಳೆಯಾಗಿದೆ ಎಂದು ಹವಾಮಾನ ಇಲಾಖೆ ಭಾನುವಾರ ತಿಳಿಸಿದೆ.

ಝಾಲಾವರ್ ಜಿಲ್ಲೆಯ ಗಂಗಾಧರ್‌ದಲ್ಲಿ 8.7 ಸೆಂ.ಮೀ. ಮಳೆ ದಾಖಲಾಗಿದ್ದು, ಜೈಪುರದ ಮೌಜ್ಮಾಬಾದ್ 8.6 ಸೆಂ.ಮೀ, ಭರತ್‌ಪುರದ ಡೀಗ 6.6 ಸೆಂ.ಮೀ, ಜೋಧಪುರದ ಒಸಿಯಾನ್‌ನಲ್ಲಿ 3.6 ಸೆಂ.ಮೀ. ಮಳೆಯಾಗಿದೆ.

ಜೈಸಲ್ಮೇರ್ ಮತ್ತು ಬಾರ್ಮೇಡ್‌ನಲ್ಲಿ ಶನಿವಾರ ಗರಿಷ್ಠ ತಾಪಮಾನ 39.4 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ ಎಂದು ಐಎಂಡಿ ತಿಳಿಸಿದೆ.

ದೆಹಲಿ: ಕೆಲವೆಡೆ ಮಳೆ, ಅಧಿಕ ತಾಪಮಾನ

ನವದೆಹಲಿ (ಪಿಟಿಐ): ಹಲವು ದಿನಗಳಿಂದ ಭಾರಿ ಮಳೆಯಾಗುತ್ತಿದ್ದ ದೆಹಲಿಯಲ್ಲಿ ಭಾನುವಾರ ಕೆಲವು ಭಾಗಗಳಲ್ಲಿ ಮಾತ್ರ ಮಳೆಯಾಗುವ ಮೂಲಕಪರಿಸ್ಥಿತಿ ಸುಧಾರಿಸುತ್ತಿದೆ.

ಭಾನುವಾರ, ಗರಿಷ್ಠ ತಾಪಮಾನವು 37.1 ಡಿಗ್ರಿ ಸೆಲ್ಸಿಯಸ್ ದಾಖಲಾಗಿದ್ದು, ಈ ವರ್ಷದಲ್ಲಿ ದಾಖಲಾದ ಸರಾಸರಿ ತಾಪಮಾನಕ್ಕಿಂತ ಎರಡು ಡಿಗ್ರಿ ಸೆಲ್ಸಿಯಸ್ ಅಧಿಕವಾಗಿದೆ ಎಂದು ಐಎಂಡಿ ತಿಳಿಸಿದೆ.

ಸಾಮಾನ್ಯವಾಗಿ ಮೋಡ ಕವಿದ ವಾತಾವರಣವಿದ್ದು ಸಂಜೆ ವೇಳೆಗೆ ಲಘು ಮಳೆಯಾಗುವ ಸಾಧ್ಯತೆ ಇದೆ ಎಂದು ಮುನ್ಸೂಚನೆ ನೀಡಿದೆ.

ಭೀಮಾ ತಟದಲ್ಲಿ 'ಭಕ್ತಿ'ಯ ಹೊಳೆ

ಒಂದನೇ ಪುಟದಿಂದ...

ಕೈಯಲ್ಲಿ ತಂಬೂರಿ, ತಾಳ, ಹೆಗಲಿಗೆ ಡೋಲು ಕಟ್ಟಿಕೊಂಡು ಹಾಡುತ್ತ, ಕುಣಿಯುತ್ತ ಪಾದಯಾತ್ರೆ ಮಾಡುತ್ತಿದ್ದಾರೆ. ಮೀರಜ್–ಸೋಲಾಪುರ ಹೆದ್ದಾರಿಯಲ್ಲಿ ಸಂತರು ಸಾಲು ಸಾಲಾಗಿ ಪಾದಯಾತ್ರೆ ಮೂಲಕ ಹೋಗುತ್ತಿರುವ ದೃಶ್ಯಗಳು ಕಣ್ಣಿಗೆ ಬೀಳುತ್ತಿವೆ.

ಪಾದಯಾತ್ರೆ ಮಾಡುವುದೆಂದರೆ ಸುಮ್ಮನೇ ನಡೆದುಕೊಂಡು ಹೋಗುವುದಲ್ಲ. ಅಲ್ಲಿ ಭಕ್ತಿ, ಶ್ರದ್ಧೆಯ ದರ್ಶನವಾಗುತ್ತಿದೆ. ಮಕ್ಕಳು, ಮಹಿಳೆಯರು, ಯುವಕ–ಯುವತಿಯರು ಸೇರಿದಂತೆ ಎಲ್ಲ ವಯೋಮಾನದವರು ಮತ್ತು ಎಲ್ಲ ಸಮುದಾಯದವರು ಕಾಲ್ನಡಿಗೆ ಮೂಲಕ ವಿಠ್ಠಲನ ದರ್ಶನಕ್ಕೆ ಹೋಗುತ್ತಿದ್ದಾರೆ. ಮಾರ್ಗ ಮಧ್ಯೆ ಆಯಾ ಊರಿನ ಭಕ್ತರು ಮಾಡಿದ ಪ್ರಸಾದ ಸ್ವೀಕರಿಸಿ ಕೆಲವು ಸ್ಥಳಗಳಲ್ಲಿ ವಾಸ್ತವ್ಯ ಹೂಡುತ್ತಾರೆ. ಮತ್ತೆ ನಸುಕಿನಲ್ಲಿ ಎದ್ದು ಹೊರಟರೆ ಸಂಜೆಯವರೆಗೂ ಹೆಜ್ಜೆ ಮೇಲೆ ಹೆಜ್ಜೆಗಳು ಸಾಗುತ್ತಿವೆ. ಭಜನೆ, ಕೀರ್ತನೆ, ಪಗಡೆ ಆಟ, ಕುಣಿತ, ಹಾಡು, ಸಂಗೀತ ಎಲ್ಲವೂ ಯಾತ್ರಿಕರಿಗೆ ದೇಹಕ್ಕೆ ದಣಿವಾಗದಂತೆ ನಡೆಯುವುದಕ್ಕೆ ಸ್ಫೂರ್ತಿ ತುಂಬುತ್ತಿವೆ.

ಪಾದರಕ್ಷೆ ಧರಿಸಿ ಯಾತ್ರೆಯಲ್ಲಿ ಪಾಲ್ಗೊಳ್ಳುವವರು ಕಡಿಮೆ. ಬರಿಗಾಲಲ್ಲಿ ನಡೆಯುವವರು, ಮರಗಾಲು ಕಟ್ಟಿಕೊಂಡವರು ಇದ್ದಾರೆ. ಸಂತರ ಮುಂದೆ ಅಲಂಕೃತ ವಾಹನಗಳು ಮತ್ತು ಅದರ ಹಿಂದೆ ಸಿಂಗರಿಸಿದ ಎತ್ತಿನ ಜೋಡಿಗಳೂ ಸಾಗುತ್ತಿವೆ. ಸುಡು ಬಿಸಿಲಲ್ಲೂ ಉತ್ಸಾಹದಿಂದ ಹೆಜ್ಜೆಹಾಕುವ ಸಂತರಿಗೆ ಕೆಲವು ಗಣ್ಯರು ಕುಡಿಯುವ ನೀರಿನ ವ್ಯವಸ್ಥೆ ಮಾಡಿದ್ದಾರೆ. ವಾರಕರಿಗಳು (ಸಂತರು) ಮುಂದೆ ಹೋಗುತ್ತಿದ್ದರೆ, ಅವರ ಹಿಂದೆ ಕುಡಿಯುವ ನೀರಿನ ಟ್ಯಾಂಕರ್‌ಗಳು ಸಾಗುತ್ತಿವೆ.

ಗೌರವ್ ಕಾಂಗ್ರೆಸ್ ಉಪನಾಯಕ

ನವದೆಹಲಿ (ಪಿಟಿಐ): ಲೋಕಸಭೆಯಲ್ಲಿ ಕಾಂಗ್ರೆಸ್ ಉಪ ನಾಯಕರನ್ನಾಗಿ ಸಂಸದ ಗೌರವ್ ಗೊಗೊಯ್ ಅವರನ್ನು ಪಕ್ಷ ಅಂತಿಮಗೊಳಿಸಿದೆ. ಈ ಕುರಿತು ಪಕ್ಷದ ನಿರ್ಧಾರವನ್ನು ಸ್ಪೀಕರ್ ಓಂ ಬಿರ್ಲಾ ಅವರಿಗೆ ಪತ್ರ ಮೂಲಕ ರವಾನಿಸಿದೆ.

'ಎಕ್ಸ್'ನಲ್ಲಿ ಈ ಮಾಹಿತಿ ನೀಡಿರುವ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, 'ಲೋಕಸಭೆಯಲ್ಲಿ ಕಾಂಗ್ರೆಸ್‌ಗೆ ಉಪನಾಯಕ, ಮುಖ್ಯ ಸಚೇತಕ ಮತ್ತು ಇಬ್ಬರು ಸಚೇತಕರನ್ನು ನೇಮಿಸುವ ಕುರಿತು ಸಂಸದೀಯ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ, ಸ್ಪೀಕರ್‌ಗೆ ಪತ್ರ ಬರೆದಿದ್ದಾರೆ' ಎಂದು ತಿಳಿಸಿದ್ದಾರೆ.

'ಅಡ್ಡ ಮತದಾನ ದ್ರೋಹಿಗಳಿಗೆ ಶಿಕ್ಷೆ'

ಮುಂಬೈ (ಪಿಟಿಐ): ವಿಧಾನ ಪರಿಷತ್ತಿನ 11 ಸ್ಥಾನಗಳಿಗೆ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಅಡ್ಡ ಮತದಾನ ಮಾಡಿದ ಪಕ್ಷದ 'ದ್ರೋಹಿ'ಗಳನ್ನು ಪತ್ತೆ ಮಾಡಿ, ಶಿಕ್ಷೆ ನೀಡಲಾಗುವುದು ಎಂದು ಮಹಾರಾಷ್ಟ್ರ ಕಾಂಗ್ರೆಸ್ ಅಧ್ಯಕ್ಷ ನಾನಾ ಪಟೋಲೆ ಹೇಳಿದರು.

ನಾನಾ ಪಟೋಲೆ

ಈ ದ್ರೋಹಿಗಳಿಂದಲೇ ಎರಡು ವರ್ಷಗಳ ಹಿಂದೆ ಕಾಂಗ್ರೆಸ್ ನಾಯಕ ಚಂದ್ರಕಾಂತ್ ಹಂಡೋರೆ ಅವರು ವಿಧಾನ ಪರಿಷತ್ ಚುನಾವಣೆಯಲ್ಲಿ ಪರಾಭವಗೊಂಡಿದ್ದರು ಎಂದರು.

'ವಿಶ್ವಾಸಘಾತಕರನ್ನು ಪತ್ತೆ ಮಾಡಿ ಶಿಕ್ಷೆ ನೀಡಲಾಗುವುದು. ಮುಂದೆ ಯಾರೂ ಇಂಥ ಧೈರ್ಯ ತೋರಬಾರದು' ಎಂದರು. 11 ಸ್ಥಾನಗಳಿಗೆ ನಡೆದ ವಿಧಾನಪರಿಷತ್ ಚುನಾವಣೆ ಯಲ್ಲಿ ಒಂಬತ್ತು ಸ್ಥಾನಗಳಲ್ಲಿ ಬಿಜೆಪಿ, ಶಿವಸೇನಾ (ಶಿಂದೆ ಬಣ), ಎನ್‌ಸಿಪಿ (ಅಜಿತ್ ಪವಾರ್ ಬಣ) ಗೆದ್ದಿದೆ. ಇದರಿಂದ ವಿರೋಧ ಪಕ್ಷಗಳ ಒಕ್ಕೂಟ 'ಮಹಾ ವಿಕಾಸ ಆಘಾಡಿ'ಗೆ ಹಿನ್ನಡೆಯಾಗಿದೆ.

ಬಿಹಾರ: ದೊಡ್ಡ ಪಕ್ಷವಾದ ಬಿಜೆಪಿ

ಪ್ರಜಾವಾಣಿ ವಾರ್ತೆ

ಪಟ್ನಾ: ಇತ್ತೀಚೆಗೆ ನಡೆದ ಉಪಚುನಾವಣೆ ಪರಿಣಾಮವಾಗಿ ಬಿಹಾರದಲ್ಲಿ ಬಿಜೆಪಿಯು ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ.

ರೂಪೌಲಿ ಕ್ಷೇತ್ರದಲ್ಲಿ ಆರ್‌ಜೆಡಿ ಅಭ್ಯರ್ಥಿ ಭೀಮಾ ಭಾರತಿ ಪರಾಭವಗೊಂಡ ಕಾರಣ ಹಾಗೂ ಜೆಡಿಯು ಅಭ್ಯರ್ಥಿ ವಿರುದ್ಧ ಪಕ್ಷೇತರ ಅಭ್ಯರ್ಥಿ ಶಂಕರ್ ಸಿಂಗ್ ಜಯಭೇರಿ ಬಾರಿಸಿದ ಪರಿಣಾಮವಾಗಿ ಬಿಜೆಪಿ ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ.

ಸದ್ಯ, ಬಿಹಾರ ವಿಧಾನಸಭೆಯ ಒಟ್ಟು 243 ಸ್ಥಾನಗಳ ಪೈಕಿ ಬಿಜೆಪಿಯು 78, ಆರ್‌ಜೆಡಿ 77 ಸದಸ್ಯ ಬಲ ಹೊಂದಿವೆ.

ರಾಜ್ಯದಲ್ಲಿ ಲೋಕಸಭೆ ಮತ್ತು ವಿಧಾನಸಭೆ ಚುನಾವಣೆಗಳಲ್ಲಿ ಹೆಚ್ಚು ಸ್ಥಾನಗಳನ್ನು ಗೆದ್ದರೂ ಸ್ವಾತಂತ್ರ್ಯ ನಂತರದಿಂದ ಈವರೆಗೂ ಪಕ್ಷದ ಅಭ್ಯರ್ಥಿಯೊಬ್ಬರನ್ನು ಮುಖ್ಯಮಂತ್ರಿಯಾಗಿ ನೇಮಕ ಮಾಡಲು ಬಿಜೆಪಿಗೆ ಸಾಧ್ಯವಾಗಿಲ್ಲ. ಸದ್ಯ, ಜೆಡಿಯು ನೆರವಿನಿಂದ ಬಿಜೆಪಿ ನೇತೃತ್ವದ ಎನ್‌ಡಿಎ ಇಲ್ಲಿ ಆಡಳಿತ ನಡೆಸುತ್ತಿದೆ. ಜೆಡಿಯುಗಿಂತ ಹೆಚ್ಚು ಸ್ಥಾನಗಳಲ್ಲಿ ಗೆದ್ದಿದ್ದರೂ ನಿತೀಶ್ ಕುಮಾರ್ ಮುಖ್ಯಮಂತ್ರಿಯಾಗಿದ್ದಾರೆ.

ಮೋದಿ ನೇತೃತ್ವದ ಕೇಂದ್ರ ಸರ್ಕಾರಕ್ಕೆ ನಿತೀಶ್ ಕುಮಾರ್ ಬೆಂಬಲ ಅಗತ್ಯವಾಗಿರುವ ಕಾರಣ, 2025ರ ವಿಧಾನಸಭೆ ಚುನಾವಣೆಯನ್ನು ನಿತೀಶ್ ನಾಯಕತ್ವದಲ್ಲಿ ಎದುರಿಸುವುದಾಗಿ ಬಿಜೆಪಿ ಈಗಾಗಲೇ ಘೋಷಿಸಿದೆ.

'ಎಕ್ಸ್': 10 ಕೋಟಿ ದಾಟಿದ ಹಿಂಬಾಲಕರು

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರನ್ನು ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಅನುಸರಿಸುವ ಫಾಲೋವರ್ಸ್ ಸಂಖ್ಯೆ 10 ಕೋಟಿಯ ಮೈಲುಗಲ್ಲು ದಾಟಿದೆ. ಕಳೆದ ಮೂರು ವರ್ಷಗಳಲ್ಲಿ 3 ಕೋಟಿ ಫಾಲೋವರ್ಸ್ ಸಂಖ್ಯೆ ಸೇರ್ಪಡೆಯಾಗಿದ್ದು, ಇದು ಅತ್ಯಂತ ಪ್ರಭಾವಶಾಲಿ ಬೆಳವಣಿಗೆ ಎನಿಸಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಮತ್ತು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಕ್ರಮವಾಗಿ 2.75 ಕೋಟಿ ಹಾಗೂ 2.64 ಕೋಟಿ ಫಾಲೋವರ್ಸ್ ಹೊಂದಿದ್ದಾರೆ. ಇವರಿಗೆ ಹೋಲಿಸಿದರೆ ಮೋದಿ ಫಾಲೋವರ್ಸ್ ಸಂಖ್ಯೆ ಹಲವು ಪಟ್ಟು ಹೆಚ್ಚಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಮೋದಿ ತಮ್ಮ 'ಎಕ್ಸ್' ಖಾತೆಯನ್ನು ಫಾಲೋ ಮಾಡುವ ಯಾರನ್ನೂ ನಿರ್ಬಂಧಿಸಿಲ್ಲ ಎಂದು ಅಧಿಕಾರಿಗಳು ಹೇಳಿದ್ದಾರೆ.

ಹೆಚ್ಚಿನ ಫಾಲೋವರ್ಸ್ ಹೊಂದಿರುವ ಬೇರೆ ದೇಶಗಳ ಸರ್ಕಾರಗಳ ಮುಖ್ಯಸ್ಥರಲ್ಲಿ ಅಮೆರಿಕ ಅಧ್ಯಕ್ಷ ಜೋ ಬೈಡನ್ (3.18 ಕೋಟಿ) ಮತ್ತು ಟರ್ಕಿಯ ರೆಸೆಪ್ ತಯ್ಯಿಪ್ ಎರ್ಡೊಗನ್ (2.15 ಕೋಟಿ) ಸೇರಿದ್ದಾರೆ.

ವಿರಾಟ್ ಕೊಹ್ಲಿ (6.41 ಕೋಟಿ), ಬ್ರೆಜಿಲ್ ಫುಟ್ಬಾಲ್ ಆಟಗಾರ ನೇಮರ್ ಜೂನಿಯರ್ (6.36 ಕೋಟಿ) ಮತ್ತು ಅಮೆರಿಕದ ಬಾಸ್ಕೆಟ್‌ಬಾಲ್ ಆಟಗಾರ ಲೆಬ್ರಾನ್ ಜೇಮ್ಸ್ (5.29 ಕೋಟಿ) ಅವರಂತಹ ಸಕ್ರಿಯ ಜಾಗತಿಕ ಅಥ್ಲೀಟ್‌ಗಳಿಗೆ ಹೋಲಿಸಿದರೆ ಮೋದಿ ಹೆಚ್ಚಿನ ಫಾಲೋವರ್ಸ್ ಹೊಂದಿದ್ದಾರೆ.

ಕಾರ್ಯಕಾರಿಣಿಯಲ್ಲಿ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಬೇಸರ

ಅತಿ ಆತ್ಮವಿಶ್ವಾಸದಿಂದ ಬಿಜೆಪಿಗೆ ಹಿನ್ನಡೆ

ಲಖನೌ (ಪಿಟಿಐ): 'ಅತಿ ಆತ್ಮವಿಶ್ವಾಸ-ದಿಂದ, ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ನಿರೀಕ್ಷೆಗೆ ತಕ್ಕಂತೆ ಗೆಲುವು ಪಡೆಯಲು ಸಾಧ್ಯವಾಗಿಲ್ಲ' ಎಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅಭಿಪ್ರಾಯಪಟ್ಟಿದ್ದಾರೆ.

ಲೋಕಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ ಪಕ್ಷಕ್ಕೆ ಹಿನ್ನಡೆಯಾದ ಬಳಿಕ ಭಾನುವಾರ ಇಲ್ಲಿ ನಡೆದ ರಾಜ್ಯ ಘಟಕದ ಮೊದಲ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಅವರು ಮಾತನಾಡಿದರು.

'ಹಿಂದಿನ ಚುನಾವಣೆಯಲ್ಲಿ ಪಡೆದ ಮತಪ್ರಮಾಣವನ್ನು ಈ ಬಾರಿಯೂ ಬಿಜೆಪಿ ಉಳಿಸಿಕೊಂಡಿದೆ. ಚುನಾವಣೆಯಲ್ಲಿ ಮತಗಳ ಪಲ್ಲಟ ಕಂಡುಬಂದಿದ್ದು, ಮುಂದಿನ ದಿನಗಳಲ್ಲಿ ಪ್ರತಿಪಕ್ಷಗಳು ಸೋಲು ಕಾಣಲಿವೆ. ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವದಲ್ಲಿ 2014, 2019ರ ಲೋಕಸಭಾ ಚುನಾವಣೆ, 2017, 2022ರ ವಿಧಾನಸಭಾ ಚುನಾವಣೆಯಲ್ಲಿ ಅಭೂತಪೂರ್ವ ಯಶಸ್ಸು ಕಂಡಿದ್ದೆವು. ಅತಿ ಆತ್ಮವಿಶ್ವಾಸದಿಂದ ನಿರೀಕ್ಷೆಗೆ ತಕ್ಕಂತೆ ಸೀಟು ಗೆಲ್ಲಲು ಸಾಧ್ಯವಾಗಲಿಲ್ಲ' ಎಂದರು.

ಯೋಗಿ ಆದಿತ್ಯನಾಥ

ಇತ್ತೀಚೆಗೆ ನಡೆದ ಲೋಕಸಭಾ ಚುನಾವಣೆಯಲ್ಲಿ ರಾಜ್ಯದ 80 ಲೋಕಸಭಾ ಕ್ಷೇತ್ರಗಳಲ್ಲಿ ಬಿಜೆಪಿ 33 ಸೀಟುಗಳಲ್ಲಿ ಗೆಲುವು ಪಡೆದಿತ್ತು. ಕಾಂಗ್ರೆಸ್ 6, ಸಮಾಜವಾದಿ ಪಕ್ಷವು 37 ಕ್ಷೇತ್ರದಲ್ಲಿ ಗೆಲುವು ಪಡೆದಿತ್ತು.

ಕಾಂಗ್ರೆಸ್ 'ಭಸ್ಮಾಸುರ': ಎಸ್‌ಪಿಗೆ ಎಚ್ಚರಿಕೆ

ಕಾಂಗ್ರೆಸ್ ಜತೆಗಿನ ಮೈತ್ರಿ ಮುಂದುವರಿಸಿದರೆ ಸಮಾಜವಾದಿ ಪಕ್ಷವು ಶೀಘ್ರದಲ್ಲೇ ನಿರ್ನಾಮ ಆಗಲಿದೆ ಎಂದು ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್‌ಗೆ ಬಿಜೆಪಿಯು ಎಚ್ಚರಿಕೆ ನೀಡಿದೆ.

ಭಾನುವಾರ ಇಲ್ಲಿ ಆರಂಭವಾದ ಪಕ್ಷದ ರಾಜ್ಯ ಕಾರ್ಯಕಾರಿಣಿಯಲ್ಲಿ ಮಾತನಾಡಿದ ಉತ್ತರ ಪ್ರದೇಶ ಬಿಜೆಪಿ ಘಟಕದ ಅಧ್ಯಕ್ಷ ಭೂಪೇಂದ್ರ ಚೌಧರಿ, 'ಕಾಂಗ್ರೆಸ್ ಭಸ್ಮಾಸುರನಂತೆ ಇದ್ದು, ಶೀಘ್ರದಲ್ಲೇ ಅಖಿಲೇಶ್ ಅವರ ಪಕ್ಷಕ್ಕೆ (ಎಸ್‌ಪಿ) ಅಂತ್ಯ ಕಾಣಿಸಲಿದೆ' ಎಂದು ಹೇಳಿದರು.

'ಕಾಂಗ್ರೆಸ್, ಉತ್ತರ ಪ್ರದೇಶದಲ್ಲಿ ಎಸ್‌ಪಿಯ ಮುಸ್ಲಿಂ ಓಟ್ ಬ್ಯಾಂಕ್ ಮೇಲೆ ಕಣ್ಣಿಟ್ಟಿದೆ. ಕಾಂಗ್ರೆಸ್‌ನವರು ಚುನಾವಣೆಯನ್ನು ಗೆಲ್ಲಲು ಯಾವಾಗಲೂ ಸಣ್ಣ ಪಕ್ಷಗಳನ್ನು ಬಳಸಿಕೊಳ್ಳುತ್ತಾರೆ. ಈ ಬಗ್ಗೆ ಎಚ್ಚರಿಕೆ ಇರಲಿ' ಎಂದು ಚೌಧರಿ ಹೇಳಿದರು.

'ಈಚೆಗೆ ನಡೆದ ಲೋಕಸಭಾ ಚುನಾವಣೆಯಲ್ಲಿ 13 ರಾಜ್ಯಗಳಲ್ಲಿ ಕಾಂಗ್ರೆಸ್‌ಗೆ ಒಂದೇ ಒಂದು ಸ್ಥಾನ ಸಿಗದಿದ್ದರೂ ಚುನಾವಣೆಯಲ್ಲಿ ಗೆದ್ದಂತೆ ವರ್ತಿಸುತ್ತಿದೆ' ಎಂದು ಲೇವಡಿ ಮಾಡಿದರು.

ಹಳೇ ಕ್ಲಬ್ ಕ್ಲಾಸ್ ಬಸ್‌ಗಳಿಗೂ ಹೊಸ ರೂಪ ನೀಡಲು ಮುಂದಾಗಿರುವ ಕೆಎಸ್‌ಆರ್‌ಟಿಸಿ

ಸಾವಿರ ದಾಟಿದ ನವೀಕೃತ ಬಸ್

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಕೆಎಸ್‌ಆರ್‌ಟಿಸಿಯ ಹಳೇ ಸಾರಿಗೆ ಬಸ್‌ಗಳನ್ನು ನವೀಕರಿಸಿ ಮತ್ತೆ ಬಳಸುವ ಯೋಜನೆ ವೇಗ ಪಡೆದುಕೊಂಡಿದೆ. ನವೀಕೃತ ಬಸ್‌ಗಳ ಸಂಖ್ಯೆ ಸಾವಿರದ ಗಡಿ ದಾಟಿದೆ. ಐರಾವತ, ಐರಾವತ ಕ್ಲಬ್ ಕಾಸ್ ಬಸ್‌ಗಳನ್ನೂ ನವೀಕರಿಸಲು ಕೆಎಸ್‌ಆರ್‌ಟಿಸಿ ಮುಂದಾಗಿದೆ.

ಹೊಸ ಬಸ್‌ಗಳ ಖರೀದಿಯ ಹೊರೆಯನ್ನು ಕಡಿಮೆ ಮಾಡಲು ಒಂದೂವರೆ ವರ್ಷಗಳ ಹಿಂದೆ ನವೀಕರಣ ಯೋಜನೆಯನ್ನು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬು ಕುಮಾರ್ ಆರಂಭಿಸಿದ್ದರು. 15 ವರ್ಷ ಪೂರೈಸದ, ಎಂಜಿನ್ ಹಾಳಾಗದ ಬಸ್‌ಗಳಿಗೆ ಹೊಸ ರೂಪ ನೀಡುವ ಕಾರ್ಯಕ್ಕೆ ಚಾಲನೆ ನೀಡಿದ್ದರು. ಅಲ್ಲಿಯವರೆಗೆ ಬಸ್ ರಿಪೇರಿಗಷ್ಟೇ ಸೀಮಿತವಾಗಿದ್ದ ಕೆಎಸ್‌ಆರ್‌ಟಿಸಿ ಕಾರ್ಯಾಗಾರಗಳಲ್ಲಿ ಹೊಸ ಚಟುವಟಿಕೆ ಶುರುವಾಯಿತು. ಇಲ್ಲಿವರೆಗೆ 1,027 ಬಸ್‌ಗಳನ್ನು ನವೀಕರಿಸಲಾಗಿದೆ.

10 ಲಕ್ಷ ಕಿ.ಮೀ. ಸಂಚಾರ ಮಾಡಿದ ಬಸ್‌ಗಳನ್ನು ನಿಷ್ಕ್ರಿಯಗೊಳಿಸಲಾಗುತ್ತಿತ್ತು. ಈ ಬಸ್‌ಗಳು ಹೊಸ ಯೋಜನೆಯಿಂದಾಗಿ ನವೀಕರಣಗೊಂಡು ಮತ್ತೆ 3 ಲಕ್ಷ ಕಿ.ಮೀ. ಸಂಚರಿಸಲಿವೆ. ಒಂದು ಸಾರಿಗೆ ಬಸ್ ಖರೀದಿಗೆ ಕನಿಷ್ಠ ₹40 ಲಕ್ಷ ಬೇಕಾಗುತ್ತದೆ. ಒಂದು ಬಸ್ ನವೀಕರಿಸಲು ₹3 ಲಕ್ಷದಿಂದ ₹4 ಲಕ್ಷ ಸಾಕಾಗುತ್ತದೆ. ಒಂದು ಹೊಸ ಬಸ್ ಖರೀದಿ ಮಾಡುವ ವೆಚ್ಚದಲ್ಲಿ 10 ಬಸ್‌ಗಳನ್ನು ನವೀಕರಿಸಲು ಸಾಧ್ಯವಾಗುತ್ತದೆ ಎಂದು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

‘ಬಸ್‌ಗಳ ತುಕ್ಕು ಹಿಡಿದ ಮತ್ತು ಹಾನಿಗೊಳಗಾದ ಎಲ್ಲ ಭಾಗಗಳನ್ನು ಹೊರ ತೆಗೆಯುತ್ತೇವೆ. ಪೂರ್ತಿ ಬಸ್ ಬಿಚ್ಚಿ ಶುರುವಿಂದ ರಚನೆ ಕಾರ್ಯ ಮಾಡುತ್ತೇವೆ. ಪ್ಯಾನೆಲಿಂಗ್ ಮುಗಿದ ಮೇಲೆ ಬಸ್‌ನ ಹೊರಭಾಗಕ್ಕೆ ಕಬ್ಬಿಣದ ಹೊಸ ಶೀಟ್ ಅಳವಡಿಸಲಾಗುತ್ತದೆ. ಕಿಟಕಿ, ಅದರ ಗ್ಲಾಸ್, ಸೀಟ್ ಕುಶನ್ ಸಹಿತ ಎಲ್ಲವನ್ನೂ ಬದಲಾಯಿಸುತ್ತೇವೆ’ ಎಂದು ಕೆಎಸ್‌ಆರ್‌ಟಿಸಿ ಕಾರ್ಯಾಗಾರದ ಮೆಕ್ಯಾನಿಕಲ್ ಎಂಜಿನಿಯರ್‌ಗಳು ಮಾಹಿತಿ ನೀಡಿದರು.

‘ಚಾಸಿ ಮತ್ತು ಎಂಜಿನ್ ಮಾತ್ರ ಅದೇ ಇರುತ್ತದೆ. ಎಂಜಿನ್ ಸ್ವಲ್ಪ ಹದಗೆಟ್ಟಿದ್ದರೆ ಸರಿಪಡಿಸುವ ತಜ್ಞ ಮೆಕ್ಯಾನಿಕ್‌ಗಳು ನಮ್ಮಲ್ಲಿದ್ದಾರೆ. ಪೂರ್ತಿ ಎಂಜಿನ್ ಹಾಳಾಗಿದ್ದರೆ ಅವುಗಳನ್ನು ನವೀಕರಣಕ್ಕೆ ಬಳಸುವುದಿಲ್ಲ. ಹೊಸ ಬಸ್‌ಗಳಂತೆ ರೂಪಿಸುವುದರ ಜೊತೆಗೆ ಇಂಧನ ಬಳಕೆ, ಗುಣಮಟ್ಟ ಕೂಡ ಅದೇ ರೀತಿ ಇರುವಂತೆ ಮಾಡುತ್ತೇವೆ’ ಎಂದರು.

353 ಕೆಂಗೇರಿಯಲ್ಲಿರುವ ಪ್ರಾದೇಶಿಕ ಕಾರ್ಯಾಗಾರದಲ್ಲಿ ನವೀಕೃತ ಬಸ್‌ಗಳು

386 ಹಾಸನದಲ್ಲಿರುವ ಪ್ರಾದೇಶಿಕ ಕಾರ್ಯಾಗಾರದಲ್ಲಿ ನವೀಕೃತ ಬಸ್‌ಗಳು

288 ವಿಭಾಗಗಳಲ್ಲಿರುವ ಕಾರ್ಯಾಗಾರಗಳಲ್ಲಿ ನವೀಕೃತ ಬಸ್‌ಗಳ ಸಂಖ್ಯೆ

ಕಾರ್ಯಾಗಾರದಲ್ಲಿ ಎಂಜಿನಿಯರ್‌ಗಳು ಬಸ್ ನವೀಕರಣದಲ್ಲಿ ತೊಡಗಿರುವುದು

‘ಇಲ್ಲಿಯವರೆಗೆ ಸಾಮಾನ್ಯ ಸಾರಿಗೆ ಬಸ್‌ಗಳನ್ನಷ್ಟೇ ನವೀಕರಿಸಲಾಗುತ್ತಿತ್ತು. ಈ ಬಾರಿ ಐರಾವತ ಬಸ್ ಮತ್ತು ಐರಾವತ ಕ್ಲಬ್ ಕ್ಲಾಸ್ ಬಸ್‌ಗಳ ನವೀಕರಣ ಕಾರ್ಯಕ್ಕೆ ಇಳಿದಿದ್ದೇವೆ. ಸದ್ಯ ಈ ರೀತಿಯ ನಾಲ್ಕು ಬಸ್‌ಗಳ ನವೀಕರಣ ನಡೆಯುತ್ತಿದೆ. ಇದು ಯಶಸ್ವಿಯಾದ ಮೇಲೆ ಇತರ ಪ್ರೀಮಿಯಂ ಬಸ್‌ಗಳನ್ನು ನವೀಕರಿಸುವ ಪ್ರಯತ್ನ ಮಾಡಲಾಗುವುದು’ ಎಂದು ಕೆಎಸ್‌ಆರ್‌ಟಿಸಿ ಮೆಕ್ಯಾನಿಕಲ್ ಎಂಜಿನಿಯರ್ ಮಾಹಿತಿ ನೀಡಿದ್ದಾರೆ.

‘ಕಾನೂನು ಪ್ರಕಾರವೇ ನವೀಕರಣ’

‘ಕಾನೂನು ಪ್ರಕಾರ ಒಂದು ವಾಹನ 15 ವರ್ಷ ಸಂಚಾರ ನಡೆಸಬಹುದಾದರೂ 10–11 ವರ್ಷಕ್ಕೆ ಬಸ್‌ಗಳು ನಿಲುಗಡೆಗೊಳ್ಳುತ್ತಿದ್ದವು. ಖಾಸಗಿ ವಾಹನಗಳನ್ನು 20 ಲಕ್ಷ ಕಿಲೋಮೀಟರ್ ಓಡಿಸುತ್ತಾರೆ. ನಮ್ಮ ಬಸ್‌ಗಳನ್ನು 10 ಲಕ್ಷ ಕಿ.ಮೀ.ಗೆ ನಿಲುಗಡೆಗೊಳಿಸಲಾಗುತ್ತಿತ್ತು. ನವೀಕರಣದಿಂದಾಗಿ ಬಸ್‌ಗಳು ಒಟ್ಟು 15 ವರ್ಷ ಸಂಚರಿಸುವಂತಾಗಿದೆ. ಇದರಿಂದ ನಿಗಮಕ್ಕೆ ಖರ್ಚು ಕಡಿಮೆಯಾಗಿದೆ. ಜೊತೆಗೆ ಬಸ್‌ಗಳ ಕೊರತೆಯೂ ಕಡಿಮೆಯಾಗುತ್ತಿದೆ’ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ಕೆಎಸ್‌ಆರ್‌ಟಿಸಿಯ ಎರಡು ಪ್ರಾದೇಶಿಕ ಕಾರ್ಯಾಗಾರಗಳಲ್ಲಿ ಮಾತ್ರ ಬಸ್ ಪರಿವರ್ತನೆ ನಡೆಯುತ್ತಿತ್ತು. ಈಗ ಎಲ್ಲ 15 ವಿಭಾಗಗಳ ಕಾರ್ಯಾಗಾರಗಳಲ್ಲಿಯೂ ಬಸ್‌ಗಳ ನವೀಕರಣ ಮಾಡಲಾಗುತ್ತಿದೆ. ಸಾಮಾನ್ಯ ಬಸ್‌ಗಳಿಗೆ ಸೀಮಿತಗೊಳಿಸದೇ ಎಲ್ಲ ಬಸ್‌ಗಳನ್ನು ಇದೇ ಮಾದರಿಯಲ್ಲಿ ನವೀಕರಿಸಲಾಗುವುದು ಎಂದು ಹೇಳಿದರು.

ಪಾರ್ಕಿಂಗ್‌ಗೆ ರಸ್ತೆ ಜಾಗ ನಾಗರಿಕರ ತೀವ್ರ ವಿರೋಧ

ಕನಕಪುರ ರಸ್ತೆ ಸಮೀಪದ ನಿವಾಸಿಗಳಿಂದ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನಕಪುರ ರಸ್ತೆಯು ಮೂರು ಪಥಗಳನ್ನು ಹೊಂದಿದ್ದು, ಅದರಲ್ಲಿ ಒಂದು ಪಥ ಬಂದ್ ಮಾಡಿ ಖಾಸಗಿ ವಾಣಿಜ್ಯ ಸಂಸ್ಥೆಗಳಿಗೆ ವಾಹನಗಳ ನಿಲುಗಡೆಗೆ ಜಾಗ ನೀಡಲಾಗುತ್ತಿದೆ ಎಂದು ಆರೋಪಿಸಿ ಸ್ಥಳೀಯ ನಿವಾಸಿಗಳು ‘ಕನಕಪುರ ರೋಡ್ ಅಪಾರ್ಟ್‌ಮೆಂಟ್ಸ್ ಮೂವ್‌ಮೆಂಟ್ ಆಫ್ ಚೇಂಜ್’ (ಕರಮೋಕ್) ಹೆಸರಿನಲ್ಲಿ ಭಾನುವಾರ ಪ್ರತಿಭಟನೆ ನಡೆಸಿದರು.

ಕನಕಪುರ ರಸ್ತೆಯನ್ನು ‘ಹೈ ಡೆನ್ಸಿಟಿ ಕಾರಿಡಾರ್’ ಯೋಜನೆಯಡಿ ಅಭಿವೃದ್ಧಿಪಡಿಸಲಾಗುತ್ತಿದೆ. ಉದ್ದೇಶಪೂರ್ವಕವಾಗಿಯೇ ಬಿಬಿಎಂಪಿ ಒಂದು ಪಥ ಕಡಿಮೆ ಮಾಡುತ್ತಿದೆ. ಈ ರಸ್ತೆಯ ಇಕ್ಕೆಲಗಳಲ್ಲಿ ದೊಡ್ಡ ವಾಣಿಜ್ಯ ಸಂಸ್ಥೆಗಳಿದ್ದು, ಅವುಗಳಿಗೆ ವಾಹನ ನಿಲುಗಡೆಗೆ ಅನುಕೂಲ ಮಾಡಿಕೊಡಲು ಈ ಕ್ರಮ ಕೈಗೊಂಡಿದೆ ಎಂದು ಪ್ರತಿಭಟನಕಾರರು ಆರೋಪಿಸಿದರು.

ಬಿಬಿಎಂಪಿಯ ಟ್ರಾಫಿಕ್ ಎಂಜಿನಿಯರಿಂಗ್ ಸೆಲ್‌ಗೆ ಮತ್ತು ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥರಿಗೆ ಈ ಬಗ್ಗೆ ಹಲವು ಬಾರಿ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ. ಅಗತ್ಯ ಇರುವಷ್ಟು ವಾಹನಗಳ ನಿಲುಗಡೆ ಪ್ರದೇಶ ಹೊಂದಿರದ ಕಾರ್ ಶೋರೂಂಗಳ ಸಹಿತ ವಾಣಿಜ್ಯ ಚಟುವಟಿಕೆಯಲ್ಲಿ ತೊಡಗಿಕೊಂಡಿರುವವರನ್ನು ಮೆಚ್ಚಿಸಲು ಹೊರಟಿದ್ದಾರೆ ಎಂದು ದೂರಿದರು.

ಈ ರಸ್ತೆಯಲ್ಲಿ ಶೂನ್ಯ ನಿಲುಗಡೆ ಇರಬೇಕು. ವಾಹನ ನಿಲುಗಡೆಗೆ ಅವಕಾಶ ನೀಡಬಾರದು ಎಂದು ರಾಜ್ಯ ಸರ್ಕಾರದ ಆದೇಶವಿದ್ದರೂ ಅಧಿಕಾರಿಗಳು ನಿಯಮ ಪಾಲಿಸುತ್ತಿಲ್ಲ. ವಾಣಿಜ್ಯ ಸಂಸ್ಥೆಗಳು ಅವರ ಗ್ರಾಹಕರ ವಾಹನಗಳ ನಿಲುಗಡೆಗೆ ಕಟ್ಟಡದ ನೆಲ ಮಹಡಿಯಲ್ಲಿ ಅಥವಾ ಬೇರೆ ಕಡೆ ವ್ಯವಸ್ಥೆ ಮಾಡಿಕೊಳ್ಳಬೇಕು. ಬಿಬಿಎಂಪಿ ಉಚಿತವಾಗಿ ವಾಹನ ನಿಲುಗಡೆ ಸೌಲಭ್ಯ ನೀಡಬಾರದು ಎಂದು ನಿಯಮವಿದ್ದರೂ ಪಾಲನೆಯಾಗುತ್ತಿಲ್ಲ. ಮೊದಲೇ ವಾಹನದಟ್ಟಣೆ ಹೆಚ್ಚಿರುವ ಈ ರಸ್ತೆಯನ್ನು ಇನ್ನಷ್ಟು ಕಿರಿದು ಮಾಡುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಕನಕಪುರ ರಸ್ತೆಯಲ್ಲಿ ವಾಹನ ನಿಲುಗಡೆಗೆ ಅವಕಾಶ ಕಲ್ಪಿಸಬಾರದು. ವಾಹನ ಸಂಚಾರಕ್ಕೆ ಏಕರೂಪದ ಮೂರು ಪಥಗಳು ಇರಬೇಕು. ಕಾಲುದಾರಿಗಳಿಗೆ ಅವಕಾಶ ನೀಡಬೇಕು. ಪಾದಚಾರಿ ಮಾರ್ಗ ಒತ್ತುವರಿಯಾಗದಂತೆ ತಡೆಯಬೇಕು ಎಂದರು.

ಕೇಸರಿ ಪ್ರಸಾದ್, ಅಬ್ದುಲ್ ಅಲೀಮ್ ಸಹಿತ ಸ್ಥಳೀಯರು ‘ಕರಮೋಕ್’ ಬ್ಯಾನರ್ ಅಡಿಯಲ್ಲಿ ಪ್ರತಿಭಟನೆ ನಡೆಸಿದರು.

ಕನಕಪುರ ರಸ್ತೆಯ ಒಂದು ಪಥವನ್ನು ಖಾಸಗಿ ವಾಣಿಜ್ಯ ಸಂಸ್ಥೆಗಳಿಗೆ ವಾಹನ ನಿಲುಗಡೆಗಾಗಿ ಮೀಸಲಿಡಲಾಗುತ್ತಿದೆ ಎಂದು ಆರೋಪಿಸಿ ಸ್ಥಳೀಯರು ‘ಕರಮೋಕ್’ ಬ್ಯಾನರ್ ಅಡಿಯಲ್ಲಿ ಭಾನುವಾರ ಪ್ರತಿಭಟನೆ ನಡೆಸಿದರು

‘ಸಂವಿಧಾನದ ತಂಟೆಗೆ ಬಂದರೆ ಪ್ರಾಣ ತೆಗೆಯುತ್ತೇವೆ’

ಪ್ರಜಾವಾಣಿ ವಾರ್ತೆ

ಶ್ರೀನಿವಾಸಪುರ (ಕೋಲಾರ): ‘ಸಂವಿಧಾನವನ್ನು ಯಾರು ಬದಲಾವಣೆ ಮಾಡಲು ಹೋಗುತ್ತಾರೋ ಅಂಥವರ ಪ್ರಾಣ ತೆಗೆಯುತ್ತೇವೆ. ಯಾರಾದರೂ ಬದಲಾಯಿಸಲು ಯತ್ನಿಸಿದರೆ ಅಂಥವರನ್ನು ದೇಶದಿಂದಲೇ ಹೊರ ಹಾಕಲು ಹೋರಾಡುತ್ತೇವೆ’ ಎಂದು ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಖಾತೆ ರಾಜ್ಯ ಸಚಿವ, ಆರ್‌ಪಿಐ ರಾಷ್ಟ್ರೀಯ ಅಧ್ಯಕ್ಷ ರಾಮದಾಸ್ ಅಠವಳೆ ಎಚ್ಚರಿಕೆ ನೀಡಿದರು.

ತಾಲ್ಲೂಕಿನ ಮಲ್ಲಗಾನಹಳ್ಳಿ ಗ್ರಾಮದಲ್ಲಿ ಭಾನುವಾರ ಸಮತಾ ಸೈನಿಕ ದಳ ಆಯೋಜಿಸಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರತಿಮೆ ಅನಾವರಣ ಮತ್ತು ಪರಿವರ್ತನಾ ಸಮಾವೇಶಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

‘ಸಂವಿಧಾನ ಬದಲಾಯಿಸುವ ಬಗ್ಗೆ ಮಾತನಾಡಿದವರು ಮೂಲೆಗುಂಪಾಗಿದ್ದಾರೆ. ನಾವು ಭಾರತ ಮಾತೆಗೆ ಗೌರವ ನೀಡಿದರೆ, ಅಂಬೇಡ್ಕರ್ ಅವರಿಗೆ ಗೌರವ ನೀಡಿದ ಹಾಗೆ. ಅಂಬೇಡ್ಕರ್ ಬಗ್ಗೆ ಪ್ರಧಾನಿ ಮೋದಿ ಅಪಾರ ಗೌರವ ಹೊಂದಿದ್ದಾರೆ’ ಎಂದರು.

ನಾರಾಯಣ ಎಜುಕೇಷನಲ್ ಇನ್‌ಸ್ಟಿಟ್ಯೂಷನ್ಸ್ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಸಂಸ್ಥೆಯ ಯುವ ಸಾಧಕರನ್ನು ಗೌರವಿಸಲಾಯಿತು

ನಾರಾಯಣ ಶಿಕ್ಷಣ ಸಂಸ್ಥೆ : ಯುವ ಸಾಧಕರೊಂದಿಗೆ ಸಂಭ್ರಮಾಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾರಾಯಣ ಎಜುಕೇಷನಲ್ ಇನ್‌ಸ್ಟಿಟ್ಯೂಷನ್ಸ್ ವೈಟ್‌ಫೀಲ್ಡ್‌ನಲ್ಲಿರುವ ಎಂಐಎಲ್‌ಆರ್ ಸಮ್ಮೇಳನ ಸಭಾಂಗಣದಲ್ಲಿ ಹಮ್ಮಿಕೊಂಡ ‘ಸಕ್ಸಸ್ ಒಡಿಸ್ಸಿ’ ಕಾರ್ಯಕ್ರಮದಲ್ಲಿ ಯುವ ಸಾಧಕರು ಸಂಭ್ರಮಿಸಿದರು.

ಈ ಕಾರ್ಯಕ್ರಮದಲ್ಲಿ ಬೆಂಗಳೂರಿನ ವಿವಿಧೆಡೆ ಇರುವ ನಾರಾಯಣ ಸಮೂಹದ ಶಾಲೆಗಳ ಸುಮಾರು ಸಾವಿರ ವಿದ್ಯಾರ್ಥಿಗಳು ಹಾಗೂ ಪೋಷಕರು ಪಾಲ್ಗೊಂಡಿದ್ದರು. ಕಾರ್ಯಕ್ರಮದಲ್ಲಿ ಚರ್ಚಾಗೋಷ್ಠಿಗಳೂ ನಡೆದವು. ಅಮೆರಿಕದ ಸ್ಪೆಲಿಂಗ್ ಬಿ ಸ್ಪರ್ಧೆಯ ಅಂತಿಮ ಸುತ್ತಿನ ಸ್ಪರ್ಧಿ ಮಾಸ್ಟರ್ ಆಕಾಶ್ ವುಕೋಟಿ ಜತೆಗೆ ಜೆಇಇ, ನೀಟ್, ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ಹಾಗೂ ಬೋರ್ಡ್ ಪರೀಕ್ಷೆಗಳಲ್ಲಿ ಉತ್ತಮ ಸಾಧನೆ ಮಾಡಿದ ಸಂಸ್ಥೆಯ 17 ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ನಾರಾಯಣ ಎಜುಕೇಷನಲ್ ಇನ್‌ಸ್ಟಿಟ್ಯೂಷನ್ಸ್ ಅಧ್ಯಕ್ಷ ಪುನೀತ್ ಕೊತ್ತಪ್ಪ ಅವರು, ಸಂಸ್ಥೆಯ ಬದ್ಧತೆ ಹಾಗೂ ಪ್ರತಿಭೆಗಳಿಗೆ ವೇದಿಕೆ ಕಲ್ಪಿಸುವ ಬಗ್ಗೆ ತಿಳಿಸಿದರು. ‘ಕಿರಿಯ ವಯಸ್ಸಿನಲ್ಲಿಯೇ ಯಶಸ್ಸು ಸಾಧಿಸಿದ’ ಬಗ್ಗೆ ಸಂಸ್ಥೆಯ ಯುವ ಸಾಧಕರು ಮನದಾಳದ ಮಾತುಗಳನ್ನು ಹಂಚಿಕೊಂಡರು.

ನೀಟ್ ಪರೀಕ್ಷೆಯಲ್ಲಿ 720 ಅಂಕದೊಂದಿಗೆ ಪ್ರಥಮ ರ‍್ಯಾಂಕ್ ಪಡೆದಿದ್ದ ಸ್ಯಾಮ್ ಜೋಸೆಫ್, ಸಿಇಟಿಯಲ್ಲಿ ನಾಲ್ಕನೇ ರ‍್ಯಾಂಕ್ ಪಡೆದ ಸನಾ ತಬಸ್ಸುಮ್ ಸೇರಿ ಸಂಸ್ಥೆಯ ಹಲವು ಸಾಧಕರು ಮಾತನಾಡಿ, ‘ಕಠಿಣ ಪರಿಶ್ರಮ ಹಾಗೂ ಪ್ರಯತ್ನದಿಂದ ಯಶಸ್ಸು ಸಾಧ್ಯ. ರಾತ್ರೊ ರಾತ್ರಿ ಯಶಸ್ಸು ಸಾಧಿಸಲು ಸಾಧ್ಯವಿಲ್ಲ’ ಎಂದು ಅಭಿಪ್ರಾಯಪಟ್ಟರು.

ಪಾದಚಾರಿ ಮಾರ್ಗದಲ್ಲಿದ್ದ ನಾಮಫಲಕಗಳ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಾದಚಾರಿ ಮಾರ್ಗಗಳಲ್ಲಿ ಅಳವಡಿಸಿದ್ದ ನಾಮಫಲಕಗಳನ್ನು ಜಪ್ತಿ ಮಾಡಿರುವ ಪೂರ್ವ ಸಂಚಾರ ವಿಭಾಗದ ಪೊಲೀಸರು 26 ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಪೂರ್ವ ವಿಭಾಗದ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ದೊಮ್ಮಲೂರು ರಸ್ತೆ, ಹಲಸೂರು ಮುಖ್ಯರಸ್ತೆ, ಇಂದಿರಾನಗರ 100 ಅಡಿ ರಸ್ತೆ, ಹಳೇ ಮದ್ರಾಸ್ ರಸ್ತೆ, ಎಂ.ಎಂ.ರಸ್ತೆ, ಆಯಿಲ್ ಮಿಲ್ ರಸ್ತೆ, ಸೆಂಟ್ ಜಾನ್ಸ್ ರಸ್ತೆ, ಗೋವಿಂದಪುರ ಮುಖ್ಯರಸ್ತೆ, ರಾಮಮೂರ್ತಿ ನಗರ ಮುಖ್ಯರಸ್ತೆ, ಪಣತ್ತೂರು ಮುಖ್ಯರಸ್ತೆ, ಚನ್ನಸಂದ್ರ ಮುಖ್ಯರಸ್ತೆ, ಕಾಡುಗೋಡಿ ಮುಖ್ಯರಸ್ತೆ, ಮತ್ತು ಐಟಿಪಿಎಲ್ ಮುಖ್ಯ ರಸ್ತೆಗಳಲ್ಲಿರುವ ಅಂಗಡಿ ಮಾಲೀಕರು ಪಾದಚಾರಿ ಮಾರ್ಗದಲ್ಲಿ ತಮ್ಮ ಅಂಗಡಿಯ ನಾಮಫಲಕಗಳನ್ನು ಹಾಕಿಕೊಂಡಿದ್ದರು.

ಇದರಿಂದಾಗಿ ಪಾದಚಾರಿಗಳ ಸುಗಮ ಸಂಚಾರಕ್ಕೆ ತೊಂದರೆ ಆಗಿತ್ತು. ಕಾರ್ಯಾಚರಣೆ ಕೈಗೊಂಡು ನಾಮಫಲಕಗಳನ್ನು ತೆರವುಗೊಳಿಸಿ, ಪಾದಚಾರಿಗಳ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಾಗಿದೆ.

‘ಹಲವು ಬಾರಿ ಸೂಚನೆ ನೀಡಿದ್ದರೂ ನಿಯಮ ಉಲ್ಲಂಘಿಸಿದ ಅಂಗಡಿ ಮಾಲೀಕರ ವಿರುದ್ಧ ಕರ್ನಾಟಕ ಪೊಲೀಸ್ ಕಾಯ್ದೆ ಅಡಿ ಪ್ರಕರಣಗಳನ್ನು ದಾಖಲು ಮಾಡಲಾಗಿದೆ. ಪಾದಚಾರಿ ಮಾರ್ಗದಲ್ಲಿ ಅಂಗಡಿ ಇಟ್ಟುಕೊಂಡು ತೊಂದರೆ ಉಂಟು ಮಾಡುವವರ ವಿರುದ್ಧ ಮುಂದಿನ ದಿನಗಳಲ್ಲಿ ಬಿಎನ್‌ಎಸ್‌ಎಸ್ ಕಲಂ 126 ಅಡಿ ಕಾನೂನು ಕ್ರಮ ಕೈಗೊಳ್ಳಲಾಗುವುದು’ ಎಂದು ಪೂರ್ವ ಸಂಚಾರ ವಿಭಾಗದ ಡಿಸಿಪಿ ಕುಲದೀಪ್ ಕುಮಾರ್ ಆರ್.ಜೈನ್ ತಿಳಿಸಿದ್ದಾರೆ.

90 ಗ್ರಾಂ. ಚಿನ್ನಾಭರಣ ಕಳವು

ಬೆಂಗಳೂರು: ಸ್ನೇಹಿತೆಯ ಮನೆಯಿಂದ ಯುವಕನೊಬ್ಬ ಚಿನ್ನಾಭರಣ ಕಳವು ಮಾಡಿರುವ ಬಗ್ಗೆ ಪೀಣ್ಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನೆಲಗದರನಹಳ್ಳಿಯಲ್ಲಿ ವಾಸವಿದ್ದ ಬಿಹಾರ ಮೂಲದ ಸೋನುಕುಮಾರ್ ಕೃತ್ಯವೆಸಗಿ ಪರಾರಿಯಾಗಿದ್ದಾನೆ.

‘ಸ್ನೇಹಿತ ಸೋನುಕುಮಾರ್ ನನ್ನ ಮನೆಯಿಂದ 90 ಗ್ರಾಂ ತೂಕದ ಚಿನ್ನಾಭರಣ ಕಳವು ಮಾಡಿಕೊಂಡು ಹೋಗಿದ್ದಾನೆ. ಆತನನ್ನು ಹುಡುಕಿ, ಆಭರಣ ವಾಪಸ್ ಕೊಡಿಸಬೇಕು’ ಎಂದು ಯುವತಿ ಪೊಲೀಸರಿಗೆ ದೂರು ನೀಡಿದ್ದಾರೆ.

ಕೆನ್ಯಾ ಪ್ರಜೆಯಿಂದ ₹ 30 ಕೋಟಿ ಮೌಲ್ಯದ ಕೊಕೇನ್ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೋಹಾದಿಂದ ದೇವನಹಳ್ಳಿಯ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಶುಕ್ರವಾರ ಬಂದಿಳಿದ ಕೆನ್ಯಾ ದೇಶದ ಯುವಕನೊಬ್ಬನನ್ನು ಬಂಧಿಸಿರುವ ಕಂದಾಯ ಗುಪ್ತಚರ ನಿರ್ದೇಶನಾಲಯದ (ಡಿಆರ್‌ಐ) ಬೆಂಗಳೂರು ವಲಯ ಘಟಕದ ಅಧಿಕಾರಿಗಳು, ₹30 ಕೋಟಿ ಮೌಲ್ಯದ 3 ಕೆ.ಜಿ. ಕೊಕೇನ್ ಮಾದಕವಸ್ತು ವಶಪಡಿಸಿಕೊಂಡಿದ್ದಾರೆ.

ಕೆನ್ಯಾ ದೇಶದ ಪ್ರಜೆಯಾಗಿರುವ 24 ವರ್ಷದ ಯುವಕ ಲಗೇಜು ಚೀಲದಲ್ಲಿ ಕೊಕೇನ್ ಕಳ್ಳಸಾಗಣೆ ಮಾಡುತ್ತಿರುವ ಮಾಹಿತಿ ಡಿಆರ್‌ಐ ಅಧಿಕಾರಿಗಳಿಗೆ ಲಭಿಸಿತ್ತು. ತೀವ್ರ ನಿಗಾ ಇರಿಸಿದ್ದ ತನಿಖಾ ಸಂಸ್ಥೆಯ ಅಧಿಕಾರಿಗಳು, ದೋಹಾದಿಂದ ಬೆಂಗಳೂರಿಗೆ ಬಂದ ಇಂಡಿಗೋ ಏರ್‌ಲೈನ್ಸ್ ವಿಮಾನ ನಿಲ್ದಾಣದಲ್ಲಿದ್ದ ಯುವಕನನ್ನು ಬಂಧಿಸಿದ್ದಾರೆ ಎಂದು ತನಿಖಾ ಸಂಸ್ಥೆಯ ಮೂಲಗಳು ತಿಳಿಸಿವೆ.

ಆರೋಪಿಯು ಲಗೇಜು ಚೀಲದ ಅಡಿಭಾಗದಲ್ಲಿ ಮಾದಕವಸ್ತುವನ್ನು ಬಚ್ಚಿಟ್ಟಿದ್ದ. ಬ್ಯಾಗ್ ಅನ್ನು ತೀವ್ರ ತಪಾಸಣೆ ನಡೆಸಿದಾಗ ಬಿಳಿಬಣ್ಣದ ಪುಡಿಯ ಪೊಟ್ಟಣಗಳು ಪತ್ತೆಯಾದವು. ಅವುಗಳನ್ನು ಪ್ರಯೋಗಾಲಯದ ಕಿಟ್ ಬಳಸಿ ಪರೀಕ್ಷಿಸಿದಾಗ ಪೊಟ್ಟಣದಲ್ಲಿದ್ದ ಪುಡಿ ಕೊಕೇನ್ ಎಂಬುದು ದೃಢಪಟ್ಟಿದೆ ಎಂದು ಡಿಆರ್‌ಐ ಮೂಲಗಳು ಹೇಳಿವೆ.

ಮಾದಕವಸ್ತು ನಿಯಂತ್ರಣ ಕಾಯ್ದೆ-1985ರ ಅಡಿಯಲ್ಲಿ ಆರೋಪಿಯನ್ನು ಬಂಧಿಸಲಾಗಿದೆ.

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ವಾಟ್ಸ್ ಆ್ಯಪ್ ಮಾಡಿ 9606038256

‘ನಿರುಪಯುಕ್ತ ವಿದ್ಯುತ್ ಬಾಕ್ಸ್ ತೆರವುಗೊಳಿಸಿ’

ಲಾಲ್‌ಬಾಗ್ ಪಶ್ಚಿಮ ಗೇಟ್ ಬಳಿ ಇರುವ ಟ್ರಾಫಿಕ್ ಸಿಗ್ನಲ್ ಹತ್ತಿರದ ಪಾದಚಾರಿ ಮಾರ್ಗದಲ್ಲಿರುವ ನಿರುಪಯುಕ್ತ ವಿದ್ಯುತ್ ಬಾಕ್ಸ್ ಬಹಳ ದಿನಗಳಿಂದ ಹಾಗೆಯೇ ಉಳಿದುಕೊಂಡಿದೆ. ಈ ಪಾದಚಾರಿ ಮಾರ್ಗದಲ್ಲಿ ವಿದ್ಯಾರ್ಥಿಗಳು ಸೇರಿದಂತೆ ಸಾರ್ವಜನಿಕರು ನಿತ್ಯವೂ ಓಡಾಡುತ್ತಾರೆ. ವಿದ್ಯುತ್ ಬಾಕ್ಸ್ ವಾಲಿಕೊಂಡಿದ್ದು, ಪಾದಚಾರಿ ಮಾರ್ಗದಲ್ಲಿಯೇ ಬೀಳುವ ಆತಂಕವಿದೆ. ಇದು ಸಾರ್ವಜನಿಕರ ಓಡಾಟಕ್ಕೆ ಅನನುಕೂಲವಾಗಿದೆ. ಆದ್ದರಿಂದ, ಸಂಬಂಧಪಟ್ಟ ಅಧಿಕಾರಿಗಳು ಈ ಬಾಕ್ಸ್ ಅನ್ನು ತೆರವುಗೊಳಿಸಿ ಸಾರ್ವಜನಿಕರಿಗೆ ಆಗುತ್ತಿರುವ ಸಮಸ್ಯೆಗೆ ಪರಿಹಾರ ನೀಡಬೇಕು.

ಎನ್. ಕೃಷ್ಣಪ್ಪ, ಕುರುಬರಹಳ್ಳಿ

ಪಾದಚಾರಿ ಮಾರ್ಗದಲ್ಲಿರುವ ನಿರುಪಯುಕ್ತ ವಿದ್ಯುತ್ ಬಾಕ್ಸ್

‘ಹೆಬ್ಬಾಳ: ರಸ್ತೆ ದುರಸ್ತಿಗೊಳಿಸಿ’

ಹೆಬ್ಬಾಳದ ಸುಮಂಗಲಿ ಸೇವಾಶ್ರಮದ ಮುಖ್ಯ ರಸ್ತೆಯಲ್ಲಿ ಗುಂಡಿಗಳು ಬಿದ್ದಿದ್ದು, ರಸ್ತೆಯಲ್ಲಾ ಹಾಳಾಗಿದೆ. ಆರು ತಿಂಗಳ ಹಿಂದೆಯೇ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು ಈ ರಸ್ತೆಯನ್ನು ಅಗೆಯಲಾಗಿತ್ತು. ಆದರೆ, ಯಾವುದೇ ರೀತಿಯ ಕೆಲಸ ಮಾಡದೆ ಹಾಗೆಯೇ ಬಿಡಲಾಗಿದೆ. ಪ್ರತಿನಿತ್ಯ ಈ ರಸ್ತೆಯಲ್ಲಿ ಸಾವಿರಾರು ವಾಹನಗಳು ಸಂಚರಿಸುತ್ತಿವೆ. ಆದರೆ, ರಸ್ತೆಯಲ್ಲಿ ಗುಂಡಿಗಳು ಬಿದ್ದಿರುವ ಕಾರಣ ಸಂಚಾರ ದಟ್ಟಣೆ ಹೆಚ್ಚಾಗಿದೆ. ಬಿಬಿಎಂಪಿ ಕೂಡಲೇ ಇಲ್ಲಿನ ರಸ್ತೆಗೆ ಡಾಂಬರೀಕರಣ ಮಾಡಬೇಕು.

ಜಿ.ಎಸ್. ಮಂಜುನಾಥ್, ಹೆಬ್ಬಾಳ

ಹೆಬ್ಬಾಳದ ಮುಖ್ಯರಸ್ತೆಯನ್ನು ಅಗೆದಿರುವುದು

‘ಪ್ರಜಾವಾಣಿ’ ವರದಿ ಪರಿಣಾಮ

ರಾಜಾಜಿನಗರದ ಪಾದಚಾರಿ ಮಾರ್ಗದಲ್ಲಿ ಹಾಕಿದ್ದ ಟೊಂಗೆಗಳನ್ನು ತೆರವುಗೊಳಿಸಿರುವುದು.

ರಾಜಾಜಿನಗರ ಆರನೇ ಬ್ಲಾಕ್‌ನ ಶ್ರೀಸಾಗರ್ ಹೋಟೆಲ್ ಹತ್ತಿರದ ಪಾದಚಾರಿ ಮಾರ್ಗದಲ್ಲಿ ಹಾಕಿದ್ದ ಮರದ ಟೊಂಗೆಗಳನ್ನು ತೆರವುಗೊಳಿಸಲಾಗಿದೆ.

‘ಪ್ರಜಾವಾಣಿ’ಯ ಕುಂದು ಕೊರತೆ ವಿಭಾಗದಲ್ಲಿ ಜುಲೈ 8ರಂದು ‘ಪಾದಚಾರಿ ಮಾರ್ಗ: ಮರದ ಟೊಂಗೆಗಳನ್ನು ತೆರವುಗೊಳಿಸಿ’ ಎಂಬ ಶೀರ್ಷಿಕೆ ಅಡಿ ವರದಿ ಪ್ರಕಟವಾಗಿತ್ತು. ಇದರಿಂದ, ಎಚ್ಚೆತ್ತ ಬಿಬಿಎಂಪಿ ಅಧಿಕಾರಿಗಳು ಮರದ ಟೊಂಗೆಗಳನ್ನು ತೆರವುಗೊಳಿಸುವ ಮೂಲಕ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಿದ್ದಾರೆ.

‘ಕಸದ ರಾಶಿ ತೆರವುಗೊಳಿಸಿ’

ಅರಕೆರೆ ಗೇಟಿನಿಂದ ಮೈಕೊ ಬಡಾವಣೆಗೆ ಸಂಪರ್ಕ ಕಲ್ಪಿಸುವ ಮುಖ್ಯ ರಸ್ತೆಯ ಓಂಕಾರ್ ಬಡಾವಣೆಯ ನಾಲ್ಕನೇ ಅಡ್ಡ ರಸ್ತೆಯ ಪಾದಚಾರಿ ಮಾರ್ಗ ಕಸದ ರಾಶಿಯಿಂದ ಕೂಡಿದೆ. ಇದರಿಂದ, ಸಾರ್ವಜನಿಕರು ಮುಖ್ಯ ರಸ್ತೆಯಲ್ಲಿ ಹೋಗಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ವಿದ್ಯಾರ್ಥಿಗಳು, ಮಹಿಳೆಯರು, ವೃದ್ಧರು ಜೀವ ಭಯದಿಂದಲೇ ಮುಖ್ಯ ರಸ್ತೆಯಲ್ಲಿ ಹಾದು ಹೋಗಬೇಕಾಗಿದೆ. ಬಿಬಿಎಂಪಿ ಸಿಬ್ಬಂದಿ ಕೂಡಲೇ ಇಲ್ಲಿನ ಕಸದ ರಾಶಿ ತೆರವುಗೊಳಿಸಬೇಕು.

ಬಿ.ಎಂ.ನಾರಾಯಣಸ್ವಾಮಿ, ಅರಕೆರೆ ಮೈಕೊ ಬಡಾವಣೆ



ಪಾದಚಾರಿ ಮಾರ್ಗದಲ್ಲಿ ಹಾಕಿರುವ ಕಸ

‘ವೇಗವಾಗಿ ತೆರಳುವ ಕಸದ ವಾಹನ’

ಆರ್.ಆರ್.ನಗರ ವಿಧಾನಸಭೆ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಸಪ್ತಗಿರಿ ಲೇಔಟ್‌ನಲ್ಲಿ ಹಸಿ ಕಸದ ವಿಲೇವಾರಿ ಸಮಸ್ಯೆಯಾಗಿ ಮಾರ್ಪಟ್ಟಿದೆ. ಈ ಲೇಔಟ್‌ನಲ್ಲಿನ ರಸ್ತೆಗಳು ಇಳಿಜಾರಿನಿಂದ ಕೂಡಿರುವುದರಿಂದ ಕಸದ ವಾಹನ ವೇಗವಾಗಿ ಸಂಚರಿಸುತ್ತವೆ. ಬೆಳಿಗ್ಗೆ ಏಳು ಗಂಟೆ ಹಾಗೂ ಅದಕ್ಕಿಂತ ಮೊದಲೇ ಬರುವ ಹಸಿ ಕಸದ ವಾಹನ, ಮನೆಗಳ ಬಳಿ ನಿಲ್ಲುತ್ತಿಲ್ಲ. ಮಹಿಳೆಯರು ಹಾಗೂ ವೃದ್ಧರು ಕಸ ಹಿಡಿದು ಮನೆಯಿಂದ ಹೊರಬರುವಷ್ಟರಲ್ಲಿಯೇ ವಾಹನ ತೆರಳುತ್ತಿದೆ. ಇದರಿಂದ ವಾಹನದ ಹಿಂದೆ ಓಡಬೇಕಾದ ಸ್ಥಿತಿ ನಿರ್ಮಾಣವಾಗಿದೆ. ವಾಹನವನ್ನು ನಿಲ್ಲಿಸದ ಕಾರಣ ಕೆಲವೊಮ್ಮೆ ಕಸದೊಂದಿಗೆ ವಾಪಸ್ ಬರಬೇಕಾಗಿದೆ. ವಾಹನ ಚಾಲಕ ಹಣಕ್ಕೂ ಬೇಡಿಕೆ ಇಡುತ್ತಿದ್ದಾರೆ.

ಶ್ರೀನಿಧಿ, ಸಪ್ತಗಿರಿ ಲೇಔಟ್

‘ನಂದಿನಿ ಬಡಾವಣೆಗೆ ಬಸ್‌ಗಳ ಸಂಖ್ಯೆ ಹೆಚ್ಚಿಸಿ’

ನಂದಿನಿ ಬಡಾವಣೆಗೆ ಬರುವ ಬಸ್‌ಗಳ ಸಂಖ್ಯೆ ಬಹಳಷ್ಟು ಕಡಿಮೆ ಇದ್ದು, 30 ಅಥವಾ 40 ನಿಮಿಷಗಳ ಅಂತರದಲ್ಲಿ ಬಸ್‌ಗಳ ಸಂಚಾರವಿದೆ. ಇದರಿಂದ, ಇಲ್ಲಿನ ಪ್ರಯಾಣಿಕರಿಗೆ ಹೆಚ್ಚು ತೊಂದರೆ ಆಗುತ್ತಿದೆ. ಈ ಭಾಗದಲ್ಲಿ ಬಿಎಂಟಿಸಿಯ ಮಿನಿ ಬಸ್‌ಗಳೇ ಹೆಚ್ಚಿನ ಸಂಖ್ಯೆಯಲ್ಲಿ ಸಂಚರಿಸುತ್ತವೆ. ಪ್ರಯಾಣಿಕರ ಸಂಖ್ಯೆ ಹೆಚ್ಚಿದ್ದು, ಬಸ್‌ನಿಂದ ಇಳಿಯಲು ಹಾಗೂ ಹತ್ತಲು ಸಮಸ್ಯೆ ಆಗುತ್ತಿದೆ. ಟಿಕೆಟ್ ಪಡೆಯಲು ಹರಸಾಹಸ ಪಡಬೇಕಾದ ಪರಿಸ್ಥಿತಿ ಇದೆ. ಆದ್ದರಿಂದ, ಮಹಾಲಕ್ಷ್ಮಿ ಬಡಾವಣೆ ಮೂಲಕ ಸಂಚರಿಸುವ ಕೆಲ ಬಸ್‌ಗಳ ಮಾರ್ಗಗಳನ್ನು ಬದಲಾಯಿಸಿ ನಂದಿನಿ ಬಡಾವಣೆಯ ಮೂಲಕ ಸಂಚಾರಕ್ಕೆ ವ್ಯವಸ್ಥೆ ಮಾಡಿದರೆ ಎರಡೂ ಬಡಾವಣೆಗಳ ನಿವಾಸಿಗಳ ಸಂಚಾರ ಸಮಸ್ಯೆಗಳಿಗೆ ಪರಿಹಾರ ಸಿಗಲಿದೆ.

ರವಿ ಭಟ್, ನಂದಿನಿ ಬಡಾವಣೆ

ಅಪರಾಧ ಸುದ್ದಿಗಳು

ಬಾಲಕಿ ಹತ್ಯೆ ಪ್ರಿಯಕರನ ಜೊತೆ ತಾಯಿ ನಾಪತ್ತೆ

ಬೆಂಗಳೂರು: ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲ್ವೆ ನಿಲ್ದಾಣದ ಪಾರ್ಕಿಂಗ್ ಪ್ರದೇಶದಲ್ಲಿ ಜುಲೈ 3ರಂದು ಶವವಾಗಿ ಪತ್ತೆಯಾಗಿದ್ದ ಐದು ವರ್ಷದ ಮರಿಯಮ್‌ಗೆ ಬಲವಾದ ಆಯುಧದಿಂದ ಹೊಡೆದು ಹತ್ಯೆ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬಾಲಕಿಯ ತಾಯಿ ಹೀನಾ, ಪತಿ ಶಿವು ಅವರನ್ನು ತೊರೆದು ಪ್ರಿಯಕರ ರಾಜು ಜೊತೆ ವಾಸವಿದ್ದರು. ಭಿಕ್ಷಾಟನೆ ಮಾಡಿಕೊಂಡಿದ್ದ ಹೀನಾ, ರಾಜು ಜೊತೆಯಲ್ಲಿಯೇ ಮರಿಯಮ್ ಸಹ ಇದ್ದಳು ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಆದರೆ, ಶವ ಪತ್ತೆಯಾದ ದಿನದಿಂದಲೂ ಹೀನಾ, ರಾಜು ಅವರ ಪತ್ತೆಯಿಲ್ಲ. ಇಬ್ಬರೂ ಸೇರಿ ಹತ್ಯೆಗೈದಿರುವ ಶಂಕೆ ಇದೆ. ಆರೋಪಿಗಳ ಪತ್ತೆಗೆ ಹುಡುಕಾಟ ನಡೆಸುತ್ತಿದ್ದಾರೆ. ಈ ಇಬ್ಬರ ಬಗ್ಗೆ ಮಾಹಿತಿ ನೀಡಿದವರಿಗೆ ಬಹುಮಾನ ನೀಡಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

ಸೂಲಿಬೆಲೆ ಬಳಿ ಸಂಭವಿಸಿದ ಅಪಘಾತದಲ್ಲಿ ಜಖಂಗೊಂಡಿರುವ ಕಾರು

ಕಾರಿನ ಹಿಂಬದಿಗೆ ಲಾರಿ ಡಿಕ್ಕಿ ಇಬ್ಬರು ವಿದ್ಯಾರ್ಥಿಗಳು ಸಾವು

ಪ್ರಜಾವಾಣಿ ವಾರ್ತೆ

ಸೂಲಿಬೆಲೆ: ಇಲ್ಲಿಗೆ ಸಮೀಪದ ಅತ್ತಿಬೆಲೆ ಬಳಿ ಭಾನುವಾರ ಬೆಳಿಗ್ಗೆ ನಡೆದ ಅಪಘಾತದಲ್ಲಿ ಬೆಂಗಳೂರಿನ ಇಬ್ಬರು ವಿದ್ಯಾರ್ಥಿಗಳು ಮೃತಪಟ್ಟಿದ್ದಾರೆ.

ಬೆಂಗಳೂರಿನ ಹೆಬ್ಬಾಳ ಕೆಂಪಾಪುರ ನಿವಾಸಿ ಸಿದ್ಧಾರ್ಥ(15) ಮತ್ತು ಹರ್ಷವರ್ಧನ್(18) ಮೃತ ವಿದ್ಯಾರ್ಥಿಗಳು.

ಸಿದ್ಧಾರ್ಥ 9ನೇ ತರಗತಿ ಮತ್ತು ಹರ್ಷವರ್ಧನ್ ದ್ವಿತೀಯ ಪಿಯು ವಿದ್ಯಾರ್ಥಿ. ನಾಲ್ವರು ಸ್ನೇಹಿತರು ಕಾರಿನಲ್ಲಿ ದೇವನಹಳ್ಳಿ ಮಾರ್ಗವಾಗಿ ಚೆನ್ನೈ ಎಕ್ಸ್‌ಪ್ರೆಸ್ ಹೆದ್ದಾರಿಯಲ್ಲಿ ಹೊಸಕೋಟೆಗೆ ಬಂದು ಬೆಳಗಿನ ಜಾವ ಮೂರು ಗಂಟೆ ಸುಮಾರಿಗೆ ದೇವನಹಳ್ಳಿಯತ್ತ ಹೊರಟಿದ್ದರು.

ಅತ್ತಿಬೆಲೆ ಸಮೀಪ ಇವರಿದ್ದ ಕಾರಿಗೆ ಹಿಂಬದಿಯಿಂದ ಬಂದ ಲಾರಿ ರಭಸವಾಗಿ ಡಿಕ್ಕಿ ಹೊಡೆದಿದೆ. ಹಿಂದಿನ ಸೀಟಿನಲ್ಲಿ ಕುಳಿತಿದ್ದ ಸಿದ್ಧಾರ್ಥ ಮತ್ತು ಹರ್ಷವರ್ಧನ್ ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ಸೂಲಿಬೆಲೆ ಪೊಲೀಸ್ ಠಾಣೆಯಲ್ಲಿ ಪ್ರಕರಣವನ್ನು ದಾಖಲು ಮಾಡಲಾಗಿದೆ.

ಸ್ಥಳಕ್ಕೆ ಎಸ್.ಪಿ ಸಿ.ಕೆ.ಬಾಬಾ, ಡಿವೈಎಸ್‌ಪಿ ಶಂಕರೇಗೌಡ ಅಣ್ಣಾಸಾಹೇಬ್ ಪಾಟೀಲ, ಸಿಪಿಐ ಮಂಜುನಾಥ್ ಭೇಟಿ ನೀಡಿದ್ದರು.

ಖಾಸಗಿ ವಿಡಿಯೊ: ಹಣಕ್ಕಾಗಿ ಮಹಿಳೆಗೆ ಬ್ಲ್ಯಾಕ್‌ಮೇಲ್

ಬೆಂಗಳೂರು: ಖಾಸಗಿ ಕ್ಷಣದ ವಿಡಿಯೊ ಚಿತ್ರೀಕರಿಸಿಕೊಂಡು ಹಣಕ್ಕಾಗಿ ಬ್ಲ್ಯಾಕ್ ಮೇಲ್ ಮಾಡುತ್ತಿರುವ ಆರೋಪಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಮಹಿಳೆಯೊಬ್ಬರು ಬ್ಯಾಡರಹಳ್ಳಿ ಪೊಲೀಸರಿಗೆ ದೂರು ನೀಡಿದ್ದಾರೆ.

‘ಸದ್ಯ ಬೇಬಿ ಕೇರ್‌ನಲ್ಲಿ ಕೆಲಸ ಮಾಡಿಕೊಂಡಿದ್ದೇನೆ. ಆರು ತಿಂಗಳ ಹಿಂದೆ ಸ್ಪಾ ಒಂದರಲ್ಲಿ ಕೆಲಸ ಮಾಡುವಾಗ ಸಂತೋಷ್ ಎಂಬಾತ ಪರಿಚಯವಾಗಿ, ಪರಸ್ಪರ ಪ್ರೀತಿಸತೊಡಗಿದೆವು. ನಾನು ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿರುವುದನ್ನು ತಿಳಿದು, ವಿಚ್ಛೇದನದ ಬಳಿಕ ಮದುವೆಯಾಗುವುದಾಗಿ ಲೈಂಗಿಕ ದೌರ್ಜನ್ಯವೆಸಗಿದ್ದಾನೆ’ ಎಂದು ಮಹಿಳೆ ದೂರಿನಲ್ಲಿ ಆರೋಪಿಸಿದ್ದಾರೆ.



‘ಆತನ ವರ್ತನೆಯಿಂದ ಬೇಸತ್ತು ಅಂತರ ಕಾಯ್ದುಕೊಂಡಿದ್ದೇನೆ. ಎರಡು ತಿಂಗಳ ಹಿಂದೆ ಮನೆಗೆ ಬಂದು ನನ್ನ ಮೇಲೆ ಹಲ್ಲೆ ನಡೆಸಿದ್ದಾನೆ. ನನಗೆ ಗೊತ್ತಿಲ್ಲದಂತೆ ನಮ್ಮಿಬ್ಬರ ಖಾಸಗಿ ಕ್ಷಣದ ವಿಡಿಯೊಗಳನ್ನು ಚಿತ್ರೀಕರಿಸಿಕೊಂಡಿದ್ದು, ಅದನ್ನು ತೋರಿಸಿ ತಾನು ಹೇಳಿದಂತೆ ಕೇಳಬೇಕು.

ಇಲ್ಲವಾದರೆ ಸಾಮಾಜಿಕ ಜಾಲತಾಣದಲ್ಲಿ ಹರಿಯಬಿಡುವುದಾಗಿ ಬೆದರಿಕೆ ಹಾಕುತ್ತಿದ್ದ. ನಿತ್ಯ ಮನೆಗೆ ಬಂದು ದೈಹಿಕ ಹಲ್ಲೆ ನಡೆಸಿ, ಲೈಂಗಿಕವಾಗಿ ಬಳಸಿಕೊಂಡಿದ್ದಾನೆ’ ಎಂದು ಮಹಿಳೆ ದೂರಿನಲ್ಲಿ ತಿಳಿಸಿದ್ದಾರೆ.

‘ತಿಂಗಳ ಹಿಂದೆ ಎ.ಕೆ.ನ್ಯೂಸ್ ಚಾನೆಲ್‌ನ ಆತ್ಮಾನಂದ ಮತ್ತು ಇತರೆ ಹತ್ತು ಮಂದಿ ಕಾರಿನಲ್ಲಿ ಬಂದು ₹ 8 ಲಕ್ಷ ನೀಡಬೇಕು. ಇಲ್ಲವಾದರೆ ಖಾಸಗಿ ವಿಡಿಯೊ ಬಿಡುಗಡೆ ಮಾಡಲಾಗುವುದು ಎಂದು ಬೆದರಿಕೆ ಹಾಕಿದ್ದಾರೆ. ಆದ್ದರಿಂದ ಸಂತೋಷ್, ಆತ್ಮಾನಂದ ಹಾಗೂ ಇತರರ ವಿರುದ್ಧ ಕ್ರಮಕೈಗೊಳ್ಳಬೇಕು’ ಎಂದು ಅವರು ಮನವಿ ಮಾಡಿದ್ದಾರೆ.

ಶಿಕ್ಷಣ

ಆನರ್ಸ್ ಬ್ಯಾಚುಲರ್ ಏನು.. ಎತ್ತ..?

ರಾಜ್ಯದಲ್ಲಿ NEP ಬದಲು SEP

ರಾಜ್ಯದಲ್ಲಿ ಜಾರಿಗೊಳಿಸಿದ್ದ ರಾಷ್ಟ್ರೀಯ ಶಿಕ್ಷಣ ನೀತಿ (NEP)-2020 ಅನ್ನು ಹಿಂಪಡೆದು, ಪರಿಷ್ಕೃತ ರಾಜ್ಯ ಶಿಕ್ಷಣ ನೀತಿ (SEP) ಜಾರಿಗೊಳಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ. ಇದರಿಂದಾಗಿ ರಾಜ್ಯದ ಎಲ್ಲ ಪದವಿ ಕಾಲೇಜುಗಳಲ್ಲಿ NEP ಅನ್ವಯ ನಾಲ್ಕು ವರ್ಷದ ಪದವಿ ಕೋರ್ಸ್ ಕೂಡ ರದ್ದಾಗಿದ್ದು, ಈ ಮೊದಲು ಇದ್ದಂತೆಯೇ SEP ಅನ್ವಯ ಮೂರು ವರ್ಷದ ಸಾಮಾನ್ಯ ಪದವಿ ಕೋರ್ಸ್‌ಗಳೇ ಅಸ್ತಿತ್ವದಲ್ಲಿ ಇರಲಿವೆ.

ಚನ್ನಬಸಪ್ಪ ರೊಟ್ಟಿ

ಪಿಯುಸಿ ಅಥವಾ ಹೈಯರ್ ಸೆಕೆಂಡರಿ ಉತ್ತೀರ್ಣರಾದ ನಂತರ, ವಿಜ್ಞಾನ ವಿಭಾಗದ ವಿದ್ಯಾರ್ಥಿಗಳು ಸಾಮಾನ್ಯವಾಗಿ ಎಂಜಿನಿಯರಿಂಗ್ ಹಾಗೂ ಮೆಡಿಕಲ್‌ನತ್ತ ಒಲವು ತೋರುವುದು ಸಹಜ. ಒಂದು ವೇಳೆ ಎಂಜಿನಿಯರಿಂಗ್ ಅಥವಾ ಮೆಡಿಕಲ್‌ನಲ್ಲಿ ತಮ್ಮ ಆಸಕ್ತಿಗೆ ಅನುಗುಣವಾದ ಕೋರ್ಸ್ ಸಿಗದಿದ್ದರೆ ಅಥವಾ ಇವೆರಡನ್ನೂ ಬಿಟ್ಟು ಬೇರೆ ಏನನ್ನಾದರೂ ಮಾಡಬೇಕು ಎಂಬ ಒಲವು ನಿಮ್ಮದಾಗಿದ್ದರೆ, ಅದೇ ರೀತಿ ವಾಣಿಜ್ಯ ಮತ್ತು ಕಲಾ ವಿಭಾಗದ ವಿದ್ಯಾರ್ಥಿಗಳು ಕೂಡ ಸಾಮಾನ್ಯ ಬ್ಯಾಚುಲರ್ ಪದವಿಯ ಬದಲು ಬೇರಾವುದಾದರೂ ವಿಶೇಷ ಕೋರ್ಸ್ ಸೇರಬೇಕು ಎಂಬ ಮಹತ್ವಾಕಾಂಕ್ಷೆ ಹೊಂದಿದ್ದರೆ ಅಂಥವರಿಗೆ ಹೇಳಿ ಮಾಡಿಸಿದ ಕೋರ್ಸ್ 'ಆನರ್ಸ್ ಪದವಿ'.

'ಆನರ್ಸ್ ಪದವಿ' ಸಾಮಾನ್ಯವಾಗಿ ನಾಲ್ಕು ವರ್ಷದ್ದಾಗಿರುತ್ತದೆ. ನೀವು ನಿಮ್ಮ ಆಸಕ್ತಿಯ ವಿಷಯದಲ್ಲಿ 'ಆನರ್ಸ್ ಪದವಿ' ಕೋರ್ಸ್ ಆಯ್ದುಕೊಂಡರೆ ನೀವು ಆ ವಿಷಯದಲ್ಲಿ ಹೆಚ್ಚಿನ ಪ್ರಾವೀಣ್ಯ ಸಾಧಿಸಲು ಸಾಧ್ಯವಾಗುತ್ತದೆ. ಮೂರು ವರ್ಷಗಳಲ್ಲಿ ಕೋರ್ಸ್‌ಗೆ ಸಂಬಂಧಿಸಿದ ಎಲ್ಲ ವಿಷಯಗಳನ್ನು ಓದಿದ ನಂತರ ನಾಲ್ಕನೇ ವರ್ಷದಲ್ಲಿ ನಿಮ್ಮ ಆಸಕ್ತಿಯ ವಿಷಯವೊಂದನ್ನೇ ವಿವರವಾಗಿ ಅಭ್ಯಸಿಸಲು ನಿಮಗೆ ಅವಕಾಶ ದೊರೆಯುತ್ತದೆ. ನೀವು ಯಾವುದಾದರೊಂದು ನಿರ್ದಿಷ್ಟ ವಿಷಯದ ಮೇಲೆ 4 ವರ್ಷ ಆನರ್ಸ್ ಪದವಿ ಹೊಂದಿದವರಾಗಿದ್ದರೆ ನಿಮಗೆ ಆ ನಿರ್ದಿಷ್ಟ ವಿಷಯದಲ್ಲಿ ಸ್ನಾತಕೋತ್ತರ ಪದವಿ ಒಂದೇ ವರ್ಷದ್ದಾಗಿರುತ್ತದೆ.

ಆದರೆ, ಸಾಮಾನ್ಯ ಬ್ಯಾಚುಲರ್ ಪದವಿ ಮೂರು ವರ್ಷಕ್ಕೆ ಮಾತ್ರ ಸೀಮಿತವಾಗಿದ್ದು, ನಿಮ್ಮ ಆಸಕ್ತಿಗೂ ಮಿಗಿಲಾಗಿ ಎಲ್ಲ ವಿಷಯಗಳನ್ನೂ ನೀವು ಸಮಾನ ಆದ್ಯತೆಯ ಮೇರೆಗೆ ಅಭ್ಯಸಿಸುವುದು ಅಗತ್ಯವಾಗಿರುತ್ತದೆ. ನಂತರ ಯಾವುದೇ ಸ್ನಾತಕೋತ್ತರ ಪದವಿ ಪಡೆಯಬೇಕೆಂದರೂ ನೀವು 2 ವರ್ಷ ಅಧ್ಯಯನ ಮಾಡುವುದು ಅಗತ್ಯವಾಗಿರುತ್ತದೆ. ವಿಜ್ಞಾನ, ವಾಣಿಜ್ಯ ಹಾಗೂ ಕಲಾ ಈ ಮೂರು ವಿಭಾಗಗಳ ವಿದ್ಯಾರ್ಥಿಗಳಿಗೂ ಆನರ್ಸ್ ಪದವಿ ಪಡೆಯಲು ಈಗ ಸಾಕಷ್ಟು ಅವಕಾಶಗಳಿವೆ.

ವಿಜ್ಞಾನ ವಿಭಾಗದ ಆನರ್ಸ್ ಕೋರ್ಸ್‌ಗಳು: ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತ, ಫಾರೆನ್ಸಿಕ್ ಸೈನ್ಸ್, ಕೃಷಿ, ತೋಟಗಾರಿಕೆ, ಭೂಗೋಳ, ಜಿಯೋ ಇನ್ಫರ್ಮ್ಯಾಟಿಕ್ಸ್, ವಿಷುಯಲ್ ಕಮ್ಯುನಿಕೇಷನ್, ಫಾರೆಸ್ಟ್ರಿ, ಮೀನುಗಾರಿಕೆ, ತೋಟಗಾರಿಕೆ ಎಂಜಿನಿಯರಿಂಗ್, ಆಹಾರ ತಂತ್ರಜ್ಞಾನ, ಡೇಟಾ ಸೈನ್ಸ್ ಮತ್ತು ಆರ್ಟಿಫಿಶಿಯಲ್ ಇಂಟೆಲಿಜೆನ್ಸ್, ಬಯೋಕೆಮಿಸ್ಟ್ರಿ, ಜೆನೆಟಿಕ್ಸ್, ಬಯೋಟೆಕ್ನಾಲಜಿ, ಲೈಫ್ ಸೈನ್ಸ್, ಫಿಸಿಯೋಥೆರಪಿ, ಅಪ್ಲೈಡ್ ಸೈನ್ಸಸ್, ಕಂಪ್ಯೂಟರ್ ಸೈನ್ಸ್, ಸೈಬರ್ ಭದ್ರತೆ, ಬಿ.ಎಸ್ಸಿ.-ಇಡಿ ವಿಷಯಗಳಲ್ಲಿ ಬಿ.ಎಸ್ಸಿ. ಆನರ್ಸ್ ಕೋರ್ಸ್‌ಗಳು ರಾಜ್ಯದ ಹಲವು ಕಾಲೇಜು ಹಾಗೂ ವಿಶ್ವವಿದ್ಯಾಲಯಗಳಲ್ಲಿ ಲಭ್ಯ ಇವೆ. ಇದಲ್ಲದೇ ವಿಜ್ಞಾನ ವಿದ್ಯಾರ್ಥಿಗಳು ಬಿ.ಟೆಕ್. ವಿಭಾಗದಲ್ಲೂ ಕಂಪ್ಯೂಟರ್ ವಿಜ್ಞಾನ ಮತ್ತು ಎಂಜಿನಿಯರಿಂಗ್, ಕೃತಕ ಬುದ್ಧಿಮತ್ತೆ ಮತ್ತು ಡೇಟಾ ಸೈನ್ಸ್, ಸೈಬರ್ ಭದ್ರತೆ, ಬಿ.ಫಾರಂ. ವಿಷಯಗಳಲ್ಲೂ ಆನರ್ಸ್ ಪದವಿ ಪಡೆಯಲು ಅವಕಾಶವಿದೆ.

ವಾಣಿಜ್ಯ ವಿಭಾಗದ (B.Com / BBA) ಆನರ್ಸ್ ಕೋರ್ಸ್‌ಗಳು: ಮಾನವ ಸಂಪನ್ಮೂಲ (HR), ಮಾರ್ಕೆಟಿಂಗ್, ಹಣಕಾಸು, ಅಂತರರಾಷ್ಟ್ರೀಯ ವ್ಯಾಪಾರ, ಪ್ರಯಾಣ ಮತ್ತು ಪ್ರವಾಸೋದ್ಯಮ, ಉದ್ಯಮಶೀಲತೆ, ಬಿಸಿನೆಸ್ ಇಂಟೆಲಿಜೆನ್ಸ್ ಮತ್ತು ಅನಾಲಿಟಿಕ್ಸ್, ಅಂತರರಾಷ್ಟ್ರೀಯ ಲೆಕ್ಕಪತ್ರ ನಿರ್ವಹಣೆ ಮತ್ತು ಹಣಕಾಸು, ಲಾಜಿಸ್ಟಿಕ್ಸ್ ಮತ್ತು ಸಪ್ಲೈ ಚೈನ್ ಮ್ಯಾನೇಜ್‌ಮೆಂಟ್, ಬಿ.ಕಾಂ.-ಎಲ್.ಎಲ್.ಬಿ., ಆನರ್ಸ್ ಕೋರ್ಸ್‌ಗಳು ಲಭ್ಯ ಇವೆ.

ಕಲಾ ವಿಭಾಗದ (BA) ಆನರ್ಸ್ ಕೋರ್ಸ್‌ಗಳು: ಇಂಗ್ಲಿಷ್, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಮನೋವಿಜ್ಞಾನ, ಪಾಕಶಾಲೆಗಳು, ಬ್ಯಾಚುಲರ್ ಆಫ್ ಆರ್ಕಿಟೆಕ್ಚರ್ (B.Arch), ಬ್ಯಾಚುಲರ್ ಆಫ್ ಫೈನ್ ಆರ್ಟ್ಸ್ (BFA), ಬ್ಯಾಚುಲರ್ ಆಫ್ ಡಿಸೈನ್ (B.Des.) (ಫ್ಯಾಶನ್ ಡಿಸೈನ್), ಬ್ಯಾಚುಲರ್ ಆಫ್ ಡಿಸೈನ್ (ಜವಳಿ ವಿನ್ಯಾಸ ಮತ್ತು ಉದ್ಯಮಶೀಲತೆ), ಬ್ಯಾಚುಲರ್ ಆಫ್ ಡಿಸೈನ್ (B.Des.) (ಇಂಟೀರಿಯರ್ ಡಿಸೈನ್), ಬ್ಯಾಚುಲರ್ ಆಫ್ ಡಿಸೈನ್ (ಗೇಮ್ ಡಿಸೈನ್ ಮತ್ತು ಅನಿಮೇಷನ್) , ಬಿಎ (ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ), ಹೋಟೆಲ್ ಮ್ಯಾನೇಜ್‌ಮೆಂಟ್ ಮತ್ತು ಅಡುಗೆ ತಂತ್ರಜ್ಞಾನ (B.HMCT.), ಬಿ.ಎ.-ಎಲ್.ಎಲ್.ಬಿ., ಬಿಎ-ಇಡಿ, ಬಿಎ-ಇಎಲ್‌ಇಡಿ, ಆನರ್ಸ್ ಕೋರ್ಸ್‌ಗಳು ಕಲಾ ವಿಭಾಗದಲ್ಲಿ ಲಭ್ಯ ಇವೆ.

ಮಿಶ್ರ ಅಧ್ಯಯನದ ಆನರ್ಸ್ ಕೋರ್ಸ್‌ಗಳು: ವಿಜ್ಞಾನ, ವಾಣಿಜ್ಯ ಹಾಗೂ ಕಲಾ ವಿಭಾಗದ ವಿದ್ಯಾರ್ಥಿಗಳು ಮಿಶ್ರ ಅಧ್ಯಯನದ ಆನರ್ಸ್ ಕೋರ್ಸ್‌ಗಳನ್ನು ಅಧ್ಯಯನ ಮಾಡಲು ಕೂಡ ಆಯ್ದ ಕೆಲ ಕಾಲೇಜುಗಳಲ್ಲಿ ಅವಕಾಶವಿದೆ. ಉದಾಹರಣೆಗೆ ಕಲಾ ವಿಭಾಗದ ವಿದ್ಯಾರ್ಥಿ ತಮ್ಮ ಪದವಿಯ 4ನೇ ವರ್ಷದಲ್ಲಿ ಭೌತಶಾಸ್ತ್ರ, ಗಣಿತ, ರಸಾಯನ ಶಾಸ್ತ್ರ ಹೀಗೆ ಯಾವುದಾದರೊಂದು ವಿಜ್ಞಾನ ವಿಷಯವನ್ನು ಓದಬಹುದು. ಅದೇ ರೀತಿ ಬಿ.ಎಸ್ಸಿ. ಓದುವ ವಿದ್ಯಾರ್ಥಿಗಳು ತಮ್ಮ ಪದವಿಯ 4ನೇ ವರ್ಷದಲ್ಲಿ ಇತಿಹಾಸ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ ಹೀಗೆ ಯಾವುದಾದರೊಂದು ಕಲಾ ವಿಷಯವನ್ನು ಓದಬಹುದು. ಈ ಮಾದರಿಯ ಕೋರ್ಸ್ ಅನ್ನು ಬಳ್ಳಾರಿಯ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದಲ್ಲಿ ಪರಿಚಯಿಸಲಾಗಿದೆ.

ವಿವಿಧೆಡೆ ಆನರ್ಸ್ ಕೋರ್ಸ್‌ಗಳು ಲಭ್ಯ

ಅಮೃತ ಸ್ಕೂಲ್ ಆಫ್ ಆರ್ಟ್ಸ್ ಅಂಡ್ ಸೈನ್ಸಸ್- ಮೈಸೂರು, ಅಮೃತ ವಿಶ್ವ ವಿದ್ಯಾಪೀಠ- ಮೈಸೂರು, ಜೈನ್ ವಿಶ್ವವಿದ್ಯಾಲಯ- ಬೆಂಗಳೂರು, ಹಿಂದೂಸ್ತಾನ್ ಏವಿಯೇಷನ್ ಅಕಾಡೆಮಿ- ಮಾರತ್ತಹಳ್ಳಿ (ಬೆಂಗಳೂರು), ಮಣಿಪಾಲ ಸ್ಕೂಲ್ ಆಫ್ ಲೈಫ್ ಸೈನ್ಸಸ್, ಎಂ.ಎಸ್.ರಾಮಯ್ಯ ವಿಶ್ವವಿದ್ಯಾಲಯ, ಕ್ರೈಸ್ಟ್ ವಿಶ್ವವಿದ್ಯಾಲಯ, ಸಿಂಬಾಯಸಿಸ್ ವಿಶ್ವವಿದ್ಯಾಲಯ, ಅಶೋಕ ವಿಶ್ವವಿದ್ಯಾಲಯ, ಅಜೀಂ ಪ್ರೇಮಜಿ ವಿಶ್ವವಿದ್ಯಾಲಯ, ಚಾಣಕ್ಯ ವಿಶ್ವವಿದ್ಯಾಲಯ, ನಿಟ್ಟೆ ವಿಶ್ವವಿದ್ಯಾನಿಲಯ- ಮಂಗಳೂರು, ಸಹ್ಯಾದ್ರಿ ವಿಜ್ಞಾನ ಕಾಲೇಜು- ಶಿವಮೊಗ್ಗ, SJEC ಮಂಗಳೂರು, SJCC ಬೆಂಗಳೂರು, ಯೆನೆಪೋಯ ಇನ್‌ಸ್ಟಿಟ್ಯೂಟ್ ಆಫ್ ಆರ್ಟ್ಸ್, ಸೈನ್ಸ್, ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್- ಮಂಗಳೂರು, ತುಂಗಲ್ ಸ್ಕೂಲ್ ಆಫ್ ಬೇಸಿಕ್ ಅಂಡ್ ಅಪ್ಲೈಡ್ ಸೈನ್ಸಸ್- ಜಮಖಂಡಿ, ಯುನೈಟೆಡ್ ಇಂಟರ್‌ನ್ಯಾಷನಲ್ ಪದವಿ ಕಾಲೇಜು- ಬೆಂಗಳೂರು, ಸೇರಿದಂತೆ ಹಲವು ಖಾಸಗಿ ಕಾಲೇಜು, ವಿವಿ, ಸ್ವಾಯತ್ತ ವಿವಿಗಳಲ್ಲಿ, ಕೆಎಸ್‌ಒಯು, ಇಗ್ನೋ, ಆರ್.ಐ.ಇ. ಹಾಗೂ ರಾಜ್ಯದ ಎಲ್ಲ ಸರ್ಕಾರಿ ಕೃಷಿ, ತೋಟಗಾರಿಕೆ, ಅರಣ್ಯ, ರೇಷ್ಮೆ, ಮೀನುಗಾರಿಕೆ ಕಾಲೇಜುಗಳಲ್ಲಿ ಅವುಗಳ ಸ್ವರೂಪಕ್ಕೆ ಅನುಗುಣವಾಗಿ ವಿಜ್ಞಾನ, ಬಿಟೆಕ್, ವಾಣಿಜ್ಯ ಹಾಗೂ ಕಲಾ ವಿಭಾಗಗಳಲ್ಲಿ ಆನರ್ಸ್ ಹಾಗೂ ಆನರ್ಸ್-ಇಂಟಿಗ್ರೇಟೆಡ್ ಕೋರ್ಸ್‌ಗಳು ಲಭ್ಯ ಇವೆ. ಹೆಚ್ಚಿನ ಮಾಹಿತಿಗಾಗಿ ಆಯಾ ಕಾಲೇಜು ಹಾಗೂ ವಿಶ್ವವಿದ್ಯಾಲಯಗಳ ವೆಬ್‌ಸೈಟ್‌ಗಳನ್ನು ಸಂಪರ್ಕಿಸಬಹುದು.



ಸಿ.ಎ ತಯಾರಿ ಹೇಗಿರಬೇಕು?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ಪ್ರದೀಪ್ ಕುಮಾರ್ ವಿ.

- **ಸಿ.ಎ ಮಾಡಬೇಕಾದರೆ ತಯಾರಿ ಹೇಗಿರಬೇಕು?**

ಹೆಸರು, ಊರು ತಿಳಿಸಿಲ್ಲ.

ಸಿ.ಎ ಮಾಡಲು ಎರಡು ಆಯ್ಕೆಗಳಿರುತ್ತವೆ. ಪಿಯುಸಿ ಮುಗಿಸಿದ ವಿದ್ಯಾರ್ಥಿಗಳು ಫೌಂಡೇಷನ್ ಕೋರ್ಸ್‌ಗೆ ಸೇರಿ, ಶೇ 50 ಅಂಕಗಳನ್ನು ಪಡೆದರೆ, ಇಂಟರ್‌ಮೀಡಿಯಟ್ ಕೋರ್ಸಿಗೆ ಅರ್ಹತೆ ಸಿಗುತ್ತದೆ. ಬಿಕಾಂ ಪದವೀಧರರು ಫೌಂಡೇಷನ್ ಕೋರ್ಸ್ ಮಾಡುವ ಅಗತ್ಯವಿಲ್ಲ. ಬಿಕಾಂ ಪದವಿಯಲ್ಲಿ ಕನಿಷ್ಠ ಶೇ 55 ಅಂಕಗಳನ್ನು ಗಳಿಸಿ ನೇರವಾಗಿ ಸಿ.ಎ ಇಂಟರ್‌ಮೀಡಿಯಟ್ ಕೋರ್ಸ್ ಮಾಡಬಹುದು. ಇನ್ನಿತರ ಪದವೀಧರರು ಕನಿಷ್ಠ ಶೇಕಡ 60 ಪಡೆದಿರಬೇಕು.

ಜೊತೆಗೆ, 3 ವರ್ಷದ ಆರ್ಟಿಕಲ್ಡ್ ತರಬೇತಿ ಪಡೆಯಲು, ಚಾರ್ಟರ್ಡ್ ಅಕೌಂಟೆಂಟ್ ಸಂಸ್ಥೆಗಳನ್ನು ಸೇರಬೇಕು. ಇಂಟರ್‌ಮೀಡಿಯಟ್ ನಂತರ ಫೈನಲ್‌ಗೆ ನೋಂದಾಯಿಸಿ, ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕು. ಫೈನಲ್ ಪರೀಕ್ಷೆಗೆ ಮುಂಚೆ ನಾಲ್ಕು ವಾರಗಳ ಐಟಿ ಮತ್ತು ಸಾಫ್ಟ್ ಸ್ಕಿಲ್ ಕೋರ್ಸ್ ಮಾಡಿರಬೇಕು. ಇಂಟರ್‌ಮೀಡಿಯಟ್ ಮತ್ತು ಫೈನಲ್ ಪರೀಕ್ಷೆಗಳಲ್ಲಿರುವ ಎರಡು ಗ್ರೂಪ್‌ಗಳನ್ನು ಪ್ರತ್ಯೇಕವಾಗಿ ಬರೆಯುವ ಅವಕಾಶವಿರುತ್ತದೆ. ನಿಮ್ಮ ಸಾಮರ್ಥ್ಯ ಮತ್ತು ದೌರ್ಬಲ್ಯಗಳನ್ನು ಗಮನಿಸಿ, ಪರೀಕ್ಷೆಯ ಕಾರ್ಯತಂತ್ರವನ್ನು ರೂಪಿಸಬೇಕು. ಪರಿಶ್ರಮ, ಬದ್ಧತೆ, ಆತ್ಮ ವಿಶ್ವಾಸ ಮತ್ತು ಸಮಯದ ನಿರ್ವಹಣೆಯಿಂದ ಸಿ.ಎ ಕೋರ್ಸ್ ಮಾಡಬಹುದು; ಕೋಚಿಂಗ್ ಕಡ್ಡಾಯವಲ್ಲ. ಮೇಲಾಗಿ, ಚಾರ್ಟರ್ಡ್ ಅಕೌಂಟೆಂಟ್ ಇನ್‌ಸ್ಟಿಟ್ಯೂಟ್ ವತಿಯಿಂದ ನೀಡುವ ಕೋಚಿಂಗ್ ಮತ್ತು ಮಾರ್ಗದರ್ಶನದ ಸೌಲಭ್ಯವನ್ನು ನೀವು ಉಪಯೋಗಿಸಬಹುದು. ಹೆಚ್ಚಿನ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/watch?v=RyNVWuRVjbA

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್‌ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.inಕ್ಕೆ ಕಳಿಸಬಹುದು.

ವಿದ್ಯಾರ್ಥಿ ವೇತನ ಕೈಪಿಡಿ

ಎಂಬಿಎ ಸ್ಕಾಲರ್‌ಶಿಪ್

ವಿದ್ಯಾರ್ಥಿಗಳನ್ನು ಆರ್ಥಿಕವಾಗಿ ಬೆಂಬಲಿಸಲು ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ನೀಡುತ್ತಿರುವ ವಿದ್ಯಾರ್ಥಿ ವೇತನ.
ಆರ್ಥಿಕ ಅಡಚಣೆಗಳಿಂದಾಗಿ ಉನ್ನತ ಅಧ್ಯಯನವನ್ನು ಮುಂದುವರಿಸಲು ಸಾಧ್ಯವಾಗದಂತಹ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಬಿಸಿನೆಸ್ ಮ್ಯಾನೇಜ್‌ಮೆಂಟ್‌ನಲ್ಲಿ ಸ್ನಾತಕೋತ್ತರ ಅಧ್ಯಯನವು ಲಭ್ಯವಾಗುವಂತೆ ಮಾಡುವುದು ಇದರ ಉದ್ದೇಶವಾಗಿದೆ.

- **ಅರ್ಹತೆ:** ಆಯ್ದ ಶಿಕ್ಷಣ ಸಂಸ್ಥೆಗಳಲ್ಲಿ 2024ರ ತರಗತಿಗಾಗಿ 2-ವರ್ಷದ ಪೂರ್ಣಕಾಲಿಕ ಎಂಬಿಎ ಕೋರ್ಸ್‌ಗೆ ಮೊದಲ ವರ್ಷದಲ್ಲಿ ದಾಖಲಾಗಿರುವಂಥ ಭಾರತೀಯ ವಿದ್ಯಾರ್ಥಿಗಳು ಈ ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸಬಹುದು. ಅರ್ಜಿದಾರರ ಒಟ್ಟು ವಾರ್ಷಿಕ ಕುಟುಂಬದ ಆದಾಯವು ₹ 6 ಲಕ್ಷಕ್ಕಿಂತ ಕಡಿಮೆ ಅಥವಾ ಸಮನಾಗಿರಬೇಕು. ಅರ್ಜಿದಾರರು ತಮ್ಮ ಆಧಾರ್ ಸಂಖ್ಯೆಗೆ ಸಂಪರ್ಕಗೊಳಿಸಲಾದ ಮಾನ್ಯವಾದ ಮೊಬೈಲ್ ಸಂಖ್ಯೆಯನ್ನು ಹೊಂದಿರಬೇಕು.
  ಆರ್ಥಿಕ ಸಹಾಯ: 2 ವರ್ಷಗಳ ಎಂಬಿಎ ಅಧ್ಯಯನಕ್ಕಾಗಿ ₹ 2 ಲಕ್ಷ (₹ 1 ಲಕ್ಷ/ವರ್ಷ)
- **ಅರ್ಜಿ ಸಲ್ಲಿಸಲು ಕೊನೆ ದಿನ:** 31-07-2024
- **ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.
- **ಹೆಚ್ಚಿನ ಮಾಹಿತಿಗೆ:** Short Url: www.b4s.in/praja/IFBMS5

ಮುಸ್ಕಾನ್ ಸ್ಕಾಲರ್‌ಶಿಪ್

ವಾಣಿಜ್ಯ ಚಾಲಕರು (ಎಲ್‌ಎಂವಿ/ಎಚ್‌ಎಂವಿ), ಮೆಕ್ಯಾನಿಕ್ಸ್ ಮತ್ತು ಆರ್ಥಿಕವಾಗಿ ಹಿಂದುಳಿದ ವ್ಯಕ್ತಿಗಳ ಮಕ್ಕಳಿಗೆ ಹಣಕಾಸಿನ ನೆರವು ಮತ್ತು ಮಾರ್ಗದರ್ಶನ ಬೆಂಬಲವನ್ನು ನೀಡಲು ವಾಲ್ವೊಲೀನ್ ಕಮ್ಮಿನ್ಸ್‌ನಿಂದ ಸಿಎಸ್‌ಆರ್ ಉಪಕ್ರಮವಾಗಿದೆ.

- **ಅರ್ಹತೆ:** ದಕ್ಷಿಣ, ಪೂರ್ವ ಮತ್ತು ಈಶಾನ್ಯ ರಾಜ್ಯಗಳ (ಅಸ್ಸಾಂ, ಮಣಿಪುರ, ನಾಗಾಲ್ಯಾಂಡ್, ಮಿಜೋರಾಂ, ತ್ರಿಪುರಾ, ಅರುಣಾಚಲ ಪ್ರದೇಶ, ಸಿಕ್ಕಿಂ, ಒಡಿಶಾ, ಬಿಹಾರ, ಪುದುಚೇರಿ, ಛತ್ತೀಸ್‌ಗಢ, ಕೇರಳ, ತೆಲಂಗಾಣ, ಆಂಧ್ರಪ್ರದೇಶ, ಜಾರ್ಖಂಡ್, ಕರ್ನಾಟಕ, ಮೇಘಾಲಯ, ತಮಿಳುನಾಡು ಮತ್ತು ಪಶ್ಚಿಮ ಬಂಗಾಳ) ವಿದ್ಯಾರ್ಥಿಗಳಾಗಿರಬೇಕು.
  9 ರಿಂದ 12ನೇ ತರಗತಿಗಳಲ್ಲಿ ಓದುತ್ತಿರುವಂತಹ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರು. ವಾಣಿಜ್ಯ ಚಾಲಕರು (ಎಲ್‌ಎಂವಿ/ಎಚ್‌ಎಂವಿ), ಮೆಕ್ಯಾನಿಕ್ಸ್ ಮತ್ತು ಆರ್ಥಿಕವಾಗಿ ದುರ್ಬಲ ವಿಭಾಗಕ್ಕೆ ಸೇರಿದ (ಇಡಬ್ಲ್ಯೂಎಸ್) ವರ್ಗದ ಮಕ್ಕಳಿಗೆ ವಿಶೇಷ ಆದ್ಯತೆ.
  ಹಿಂದಿನ ತರಗತಿಯಲ್ಲಿ ₹ 60 ಅಥವಾ ಅದಕ್ಕಿಂತ ಹೆಚ್ಚಿನ ಅಂಕಗಳನ್ನು ಪಡೆದಿರಬೇಕು. ಎಲ್ಲಾ ಮೂಲಗಳಿಂದ ಕುಟುಂಬದ ಒಟ್ಟು ಆದಾಯವು ವಾರ್ಷಿಕ ₹ 8 ಲಕ್ಷವನ್ನು ಮೀರಬಾರದು.
- **ಆರ್ಥಿಕ ಸಹಾಯ:** ₹ 12,000ದ ವರೆಗಿನ ವಿದ್ಯಾರ್ಥಿವೇತನ
- **ಅರ್ಜಿ ಸಲ್ಲಿಸುವ ವಿಧಾನ:** 03-09-2024
- **ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.
- **ಹೆಚ್ಚಿನ ಮಾಹಿತಿಗೆ:** Short Url: www.b4s.in/praja/MKSP1

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ-ಸಮಾಜವಿಜ್ಞಾನ

ಅಧ್ಯಾಯ-2 ಬ್ರಿಟಿಷ್ ಆಳ್ವಿಕೆಯ ವಿಸ್ತರಣೆ

ಬಹು ಆಯ್ಕೆ ಪ್ರಶ್ನೆಗಳು

5) ಸಹಾಯಕ ಸೈನ್ಯ ಪದ್ಧತಿಗೆ ಒಪ್ಪಂದಕ್ಕೆ ಸಹಿ ಮಾಡಿದ ಮೊದಲ ರಾಜ್ಯ ಯಾವುದು?
ಎ) ಹೈದರಾಬಾದ್ ಸಂಸ್ಥಾನ. ಬಿ) ಮೈಸೂರು
ಸಿ) ಝಾನ್ಸಿ ಡಿ) ಔಧ್
ಉತ್ತರ:- ಎ

6) ಕೆಳಗಿನ ಯಾರು 'ದತ್ತು ಮಕ್ಕಳಿಗೆ ಹಕ್ಕಿಲ್ಲ' ಎಂಬ ನೀತಿಯನ್ನು ಭಾರತದಲ್ಲಿ ಆರಂಭಿಸಿದನು?
ಎ) ವೆಲ್ಲೆಸ್ಲಿ ಬಿ) ಲಾರ್ಡ್ ಮಿಂಟೊ
ಸಿ) ಡಾಲ್‌ಹೌಸಿ ಡಿ) ಮೇಲಿನ ಯಾರೂ ಅಲ್ಲ
ಉತ್ತರ:- ಸಿ

7) ಮರಾಠರಲ್ಲಿ ಅಪ್ಪಾಸಾಹೇಬ ಮತ್ತು .... ಹೋಳ್ಕರ್ ಕೂಡ ಬ್ರಿಟಿಷರ ವಿರುದ್ಧ ದಂಗೆ ಎದ್ದು ಸೋತರು.
ಎ) ಮಲ್ಹಾರರಾವ್ ಬಿ) ಮೂಲರಾಜ
ಸಿ) ಚಟ್ಟಾರ್ ಸಿಂಗ್ ಅಟ್ಟಾರಿವಾಲ
ಡಿ) ಮೇಲಿನ ಯಾರೂ ಅಲ್ಲ
ಉತ್ತರ:- ಎ

8) ಪೇಶ್ವೆಯು ಯಾವ ಒಪ್ಪಂದಕ್ಕೆ ಸಹಿ ಹಾಕುವ ಮೂಲಕ ಸಹಾಯಕ ಸೈನ್ಯ ಪದ್ಧತಿಯನ್ನು ಒಪ್ಪಿದನು.
ಎ) ಬೆಸ್ಸಿನ್ ಒಪ್ಪಂದ ಬಿ) ಲಾಹೋರ್ ಒಪ್ಪಂದ
ಸಿ) ಚಂಢಿಗರ್ ಒಪ್ಪಂದ ಡಿ) ಮುಂಬೈ ಒಪ್ಪಂದ
ಉತ್ತರ:- ಎ

9) ಪೇಶ್ವೆಯ ಸ್ಥಾನಕ್ಕೆ ಅವನ ತಮ್ಮ ನಾರಾಯಣರಾಯನು ಬಂದನು ಆದರೆ ಅವನನ್ನು ಕೊಲೆ ಮಾಡಲಾಯಿತು. ಹಾಗದರೆ ಯಾರು ಕೊಲೆ ಮಾಡಿದರು?
ಎ) ರಘುನಾಥರಾವ್ ಬಿ) ಮಲ್ಹಾರ್ ರಾವ್
ಸಿ) 2ನೇ ಮಾಧವ್ ರಾವ್ ಡಿ) ಪ್ರತಾಪ್ ಸಿಂಹ
ಉತ್ತರ:- ಎ

10) ರಣಜಿತ್ ಸಿಂಗನು ಎಲ್ಲಿ ಫಿರಂಗಿಗಳನ್ನು ತಯಾರಿಸಲು ಎರಕ ಹೊಯ್ಯುವ ಕಾರ್ಖಾನೆಯನ್ನು ತೆರೆದನು?
ಎ) ಲಾಹೋರ್ ಬಿ) ಚಂಡಿಗಢ
ಸಿ) ಕರಾಚಿ ಡಿ) ದೆಹಲಿ
ಉತ್ತರ:- ಎ

ಹಿಂದಿನ ಪ್ರಶ್ನೆ ಪತ್ರಿಕೆಯಿಂದ

1) ಮೊದಲನೇ ಆಂಗ್ಲೋ ಮರಾಠ ಯುದ್ಧವನ್ನು ಕೊನೆಗೊಳಿಸಿದ ಒಪ್ಪಂದ ಯಾವುದು?
ಎ) ಬಸ್ಸೈನ್ ಒಪ್ಪಂದ ಬಿ) ಸಾಲ್ಬಾಯಿ ಒಪ್ಪಂದ
ಸಿ) ಅಲಹಾಬಾದ್ ಒಪ್ಪಂದ ಡಿ) ಲಾಹೋರ್ ಒಪ್ಪಂದ
ಉತ್ತರ:- ಬಿ **(2021 ಮಾರ್ಚ್ ವಾರ್ಷಿಕ ಪರೀಕ್ಷೆ 1 ಅಂಕದ ಪ್ರಶ್ನೆ)**

2) ಭಾರತೀಯ ರಾಜ್ಯಗಳನ್ನು ನಿಯಂತ್ರಿಸಲು ಬ್ರಿಟಿಷರಿಗೆ ಸಹಾಯಕ ಸೈನ್ಯ ಪದ್ಧತಿಯು ಹೇಗೆ ನೆರವಾಯಿತು?
(2020 ಮಾರ್ಚ್ ವಾರ್ಷಿಕ ಪರೀಕ್ಷೆ 2 ಅಂಕದ ಪ್ರಶ್ನೆ)
ಉತ್ತರ:- ಸಹಾಯಕ ಸೈನ್ಯ ಪದ್ಧತಿಯ ಪ್ರಕಾರ
1. ಭಾರತೀಯ ರಾಜನು ಬ್ರಿಟಿಷ್ ಸೈನಿಕ ತುಕಡಿಯನ್ನು ತನ್ನ ರಾಜ್ಯದಲ್ಲಿ ಇರಿಸಿಕೊಳ್ಳಬೇಕು.
2. ಸೇನೆಯ ವೇತನ ಮತ್ತು ನಿರ್ವಹಣೆಯ ವೆಚ್ಚವನ್ನು ಸಂಬಂಧಪಟ್ಟ ರಾಜ್ಯವೇ ಭರಿಸಬೇಕು. ಇಲ್ಲವೆ ನಿರ್ದಿಷ್ಟ ಕಂದಾಯ ಪ್ರದೇಶವನ್ನು ಬಿಟ್ಟುಕೊಡಬೇಕು.
3. ರಾಜನ ಆಸ್ಥಾನದಲ್ಲಿ ಬ್ರಿಟಿಷ್ ರೆಸಿಡೆಂಟನನ್ನು ನೇಮಿಸಿಕೊಳ್ಳಬೇಕು.
4. ಬ್ರಿಟಿಷರ ಅನುಮತಿ ಇಲ್ಲದೆ ಆಸ್ಥಾನದಲ್ಲಿ ಯಾವುದೇ ಯುರೋಪಿಯನ್ನರನ್ನು ನೇಮಿಸಿಕೊಳ್ಳುವಂತಿಲ್ಲ
5. ಭಾರತದ ಯಾವುದೇ ರಾಜ್ಯಗಳೊಂದಿಗೆ ಯುದ್ಧ ಅಥವಾ ಸಂಧಾನ ಮಾಡಿಕೊಳ್ಳಬೇಕಾದರೆ ಗವರ್ನರ್ ಜನರಲ್‌ನ ಸಮ್ಮತಿ ಬೇಕು.

ಈ ಮೊದಲಾದ ಷರತ್ತನ್ನು ಬ್ರಿಟಿಷರು ಭಾರತೀಯ ರಾಜರ ಮೇಲೆ ಹಾಕುವ ಮೂಲಕ ಭಾರತೀಯ ಸಂಸ್ಥಾನಗಳನ್ನು ತನ್ನ ನಿಯಂತ್ರಣದಲ್ಲಿಟ್ಟುಕೊಂಡರು

3) ವೆಲೆಸ್ಲಿಯು ಸಹಾಯಕ ಸೈನ್ಯಪದ್ಧತಿಯನ್ನು ಯಾಕೆ ಜಾರಿಗೆ ತಂದನು?
(2023 ಮಾರ್ಚ್ ವಾರ್ಷಿಕ ಪರೀಕ್ಷೆ 1 ಅಂಕದ ಪ್ರಶ್ನೆ)
ಉತ್ತರ:- ಭಾರತೀಯ ರಾಜ್ಯಗಳನ್ನು ನಿಯಂತ್ರಣಕ್ಕೆ ತೆಗೆದುಕೊಳ್ಳಲು ಸಹಾಯಕ ಸೈನ್ಯಪದ್ಧತಿಯನ್ನು ಜಾರಿಗೆ ತಂದನು.

ಭೂಗೋಳಶಾಸ್ತ್ರ

ಭಾರತ: ಭೌಗೋಳಿಕ ಸ್ಥಾನ ಹಾಗೂ ಪ್ರಾಕೃತಿಕ ಲಕ್ಷಣಗಳು

ಪೀಠಿಕೆ:- ಭಾರತವು ಏಷ್ಯಾಖಂಡದ ದಕ್ಷಿಣ ಭಾಗದಲ್ಲಿರುವ ಪರ್ಯಾಯ ದ್ವೀಪವಾಗಿದೆ. ಇದನ್ನು 'ಇಂಡಿಯಾ' ಹಾಗೂ ಹಿಂದೂಸ್ಥಾನ ಎಂದು ಕರೆಯುತ್ತಾರೆ. ಇಂಡಿಯಾ ಎಂಬ ಹೆಸರು 'ಸಿಂಧೂ' ನದಿಯಿಂದ ಬಳಕೆಗೆ ಬಂದಿದೆ. 'ಭಾರತ' ವೆಂಬ ಹೆಸರು ಭರತ ಎಂಬ ಪುರಾತನ ಚಕ್ರವರ್ತಿ ಹೆಸರಿನಿಂದ ಬಂದಿದೆ. ಭಾರತವು ಸಂಪೂರ್ಣವಾಗಿ ಉತ್ತರಾರ್ಧಗೋಳದಲ್ಲಿದೆ. ಭಾರತವು ಉತ್ತರದಲ್ಲಿ ಅಗಲವಾಗಿದ್ದು ದಕ್ಷಿಣದ ಕಡೆಗೆ ಕಿರಿದಾಗಿ ತ್ರಿಕೋನಾಕೃತಿಯಲ್ಲಿ ಹಿಂದೂ ಮಹಾಸಾಗರದಲ್ಲಿ ಚಾಚಿಕೊಂಡಿದೆ

ಪ್ರಶ್ನೋತ್ತರ:-

1) ಭಾರತದ ವಿಸ್ತೀರ್ಣ ಎಷ್ಟಿದೆ?
ಉತ್ತರ:- ಭಾರತವು 32,87,263 (ಅಂದರೆ 32.87 ಲಕ್ಷ) ಚದರ ಕಿ.ಮಿಗಳಷ್ಟು ವಿಸ್ತಾರವಾಗಿದೆ.

2) ಭೂ ಕ್ಷೇತ್ರದ ದೃಷ್ಟಿಯಿಂದ ಇದು ಪ್ರಪಂಚದ ಎಷ್ಟನೇ ದೊಡ್ಡ ರಾಷ್ಟ್ರವಾಗಿದೆ?
ಉತ್ತರ:- ಏಳನೇ ದೊಡ್ಡ ರಾಷ್ಟ್ರವಾಗಿದೆ

3) ಭಾರತವು ಪ್ರಪಂಚದ ಒಟ್ಟು ವಿಸ್ತೀರ್ಣದಲ್ಲಿ ಶೇಕಡ ಎಷ್ಟು ಭಾಗವನ್ನು ಹೊಂದಿದೆ?
ಉತ್ತರ:- ಶೇ. 2.4

4) ಭಾರತದಲ್ಲಿ ಎಷ್ಟು ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶವಿದೆ?
ಉತ್ತರ: ಭಾರತದಲ್ಲಿ 28 ರಾಜ್ಯಗಳು ಹಾಗೂ 8 ಕೇಂದ್ರಾಡಳಿತಪ್ರದೇಶಗಳು ಇವೆ. ರಾಷ್ಟ್ರೀಯ ರಾಜಧಾನಿ ಪ್ರದೇಶವಾಗಿ ದೆಹಲಿ ಇದೆ

5) ಭಾರತದಲ್ಲಿ 2011ರ ಜನಗಣತಿಯ ಪ್ರಕಾರ ಎಷ್ಟು ಜನರಿದ್ದಾರೆ?
ಉತ್ತರ:- ಭಾರತವು 2011ರ ಜನಗಣತಿಯ ಪ್ರಕಾರ 121 ಕೋಟಿ ಜನಸಂಖ್ಯೆಯನ್ನು ಒಳಗೊಂಡಿದೆ. ಇದು ಪ್ರಪಂಚದ ಒಟ್ಟು ಜನಸಂಖ್ಯೆಯ ಶೇ 17.5 ರಷ್ಟಿದೆ.

7) ಭಾರತವು ಯಾವ ಯಾವ ಅಕ್ಷಾಂಶ ಮತ್ತು ರೇಖಾಂಶಗಳ ನಡುವೆ ಹರಡಿಕೊಂಡಿದೆ?
ಉತ್ತರ:- ಭಾರತದ ಪ್ರಧಾನ ಭೂಭಾಗವು 8^0. 4' ದಿಂದ 37^0. 6' ಉತ್ತರ ಅಕ್ಷಾಂಶ ಹಾಗೂ 68^0. 7' ರಿಂದ 97^0 25' ಪೂರ್ವ ರೇಖಾಂಶಗಳ ನಡುವೆ ವಿಸ್ತರಿಸಿದೆ.

8) ಭಾರತದ ದಕ್ಷಿಣದ ತುತ್ತತುದಿ ಯಾವುದು?
ಉತ್ತರ:- ನಿಕೋಬಾರ್ ದ್ವೀಪದಲ್ಲಿರುವ 'ಇಂದಿರಾ ಪಾಯಿಂಟ್'

9) ಭಾರತದ ಉತ್ತರದ ತುತ್ತತುದಿ ಯಾವುದು?
ಉತ್ತರ:- ಜಮ್ಮು ಮತ್ತು ಕಾಶ್ಮೀರದ ಇಂದಿರಾಕೋಲ್ ಭಾರತದ ಅತ್ಯಂತ ಉತ್ತರ ತುದಿಯಾಗಿದೆ.

10) ಭಾರತದ ಆದರ್ಶ ಕಾಲಮಾನವನ್ನು ಎಲ್ಲಿಂದ ತೆಗೆದುಕೊಳ್ಳಲಾಗುತ್ತದೆ?
ಉತ್ತರ:- 82.5^0 ಪೂರ್ವ ರೇಖಾಂಶ (ಪ್ರಯಾಗ / ಅಲಹಾಬಾದ್)ವು ದೇಶದ ಮಧ್ಯದಲ್ಲಿ ಹಾಯ್ದು ಹೋಗಿದೆ. ಇದು ಭಾರತೀಯ ಆದರ್ಶಕಾಲಮಾನವನ್ನು (IST) ತಿಳಿಸುವ ರೇಖಾಂಶವಾಗಿದೆ.

11) ಭಾರತದ ಸ್ಥಾನದ ಕುರಿತು ಬರೆಯಿರಿ
ಉತ್ತರ:- ಭಾರತವು ಭೌಗೋಳಿಕವಾಗಿ ಉತ್ತರ ಗೋಳಾರ್ಧ ಹಾಗೂ ಪೂರ್ವ ಗೋಳಾರ್ಧದ ಮಧ್ಯದಲ್ಲಿ ನೆಲೆಸಿದೆ. ಇದು ಆಗ್ನೇಯ ಏಷ್ಯಾದ ಒಂದು ಪ್ರಮುಖ ಪರ್ಯಾಯ ದ್ವೀಪ. ಭಾರತದ ಪ್ರಧಾನ ಭೂಭಾಗವು 8^0. 4' ದಿಂದ $37^0$6' ಉತ್ತರ ಅಕ್ಷಾಂಶ ಹಾಗೂ 68^0. 7' ರಿಂದ 97^0. 25' ಪೂರ್ವ ರೇಖಾಂಶಗಳ ನಡುವೆ ವಿಸ್ತರಿಸಿದೆ. ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು ಇನ್ನೂ ದಕ್ಷಿಣಕ್ಕೆ ವಿಸ್ತರಿಸಿವೆ. ನಿಕೋಬಾರ್ ದ್ವೀಪದ 6^0. 45' ದಕ್ಷಿಣ ಅಕ್ಷಾಂಶದಲ್ಲಿರುವ 'ಇಂದಿರಾ ಪಾಯಿಂಟ್' ಭಾರತದ ಅತ್ಯಂತ ದಕ್ಷಿಣ ತುದಿಯಾಗಿದೆ. ಇದಕ್ಕೆ ಪ್ರತಿಯಾಗಿ ಜಮ್ಮು ಮತ್ತು ಕಾಶ್ಮೀರದ ಇಂದಿರಾಕೋಲ್ ಭಾರತದ ಅತ್ಯಂತ ಉತ್ತರ ತುದಿಯಾಗಿದೆ. ಭಾರತದ ಮಧ್ಯಭಾಗದಲ್ಲಿ ಕರ್ಕಾಟಕ ಸಂಕ್ರಾಂತಿ ವೃತ್ತ (23.5^0 ಉ)ವು ಹಾಯ್ದು ಹೋಗಿದೆ ಮತ್ತು 82.5^0 ಪೂರ್ವ ರೇಖಾಂಶ (ಪ್ರಯಾಗ / ಅಲಹಾಬಾದ್)ವು ದೇಶದ ಮಧ್ಯದಲ್ಲಿ ಹಾಯ್ದು ಹೋಗಿದೆ. ಇದು ಭಾರತದ ಮಧ್ಯ ರೇಖಾಂಶವಾಗಿದ್ದು ಭಾರತೀಯ ಆದರ್ಶಕಾಲಮಾನವು (IST) ಈ ರೇಖಾಂಶವನ್ನಾಧರಿಸಿದೆ.

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

II PUC MATHS

Inverse trigonometric functions

10. Show that $\operatorname{cosec}^{-1}x=\sin^{-1}\frac{1}{x}$

Soln :– Proof : take $\theta=\operatorname{cosec}^{-1}x$, then $\operatorname{cosec}\theta = x$

$\therefore \sin\theta=\frac{1}{x}\quad\left(\because \sin\theta=\frac{1}{\operatorname{cosec}\theta}\right)$

$\Rightarrow \theta=\sin^{-1}\frac{1}{x};$

Equating the two values of θ,

we get, $\operatorname{cosec}^{-1}x=\sin^{-1}\frac{1}{x}$

11. Show that $\sec^{-1}x=\cos^{-1}\frac{1}{x}$

Soln :– Proof : take $\theta=\sec^{-1}x$, then $\sec\theta = x$

$\therefore \cos\theta=\frac{1}{x}\quad\left(\because \cos\theta=\frac{1}{\sec\theta}\right)$

$\therefore \theta=\cos^{-1}\frac{1}{x};$

Equating the two values of θ,

we get, $\sec^{-1}x=\cos^{-1}\frac{1}{x}$

12. Show that $\cot^{-1}x=\tan^{-1}\frac{1}{x}$

Soln :– Proof : take $\theta=\cot^{-1}x$, then $\cot\theta = x$

$\therefore \tan\theta=\frac{1}{x}\quad\left(\because \tan\theta=\frac{1}{\cot\theta}\right)$

$\therefore \theta=\tan^{-1}\frac{1}{x};$

Equating the two values of θ,

we get, $\cot^{-1}x=\tan^{-1}\frac{1}{x}$ Contd/–

Basics *(.......Contd)*

13. What is the value of $\sin^{-1}\left(-\frac{\sqrt{3}}{2}\right)$?

Soln :– $\sin^{-1}\left(-\frac{\sqrt{3}}{2}\right)=\sin^{-1}\left(\frac{\sqrt{3}}{2}\right)$

$=-\frac{\pi}{3}$

$\left(\because \sin^{-1}(-x)=-\sin^{-1}x\right)$

14. What is the value of $\operatorname{cosec}^{-1}(-1)$?

Soln :– $\operatorname{cosec}^{-1}(-1)=-\operatorname{cosec}^{-1}(1)$

$\left(\because \operatorname{cosec}^{-1}(-1)=-\operatorname{cosec}^{-1}1\right)$

$\Rightarrow -\frac{\pi}{2}\quad\left(\because \operatorname{cosec}\frac{\pi}{2}=1\right)$

15. Find the value of $\cos^{-1}(\cos 350^0)$?

Soln :– Consider $\cos 350^0$

$\cos 350^0=\cos(360^0-10^0)$

$=\cos 10^0$

$\therefore \cos^{-1}(\cos 350^0)=\cos^{-1}(\cos 10^0)$

$\Rightarrow \cos^{-1}(\cos 350^0)=10^0$

$(\because 0\le 10^0\le 180^0)$

16. Find the value of $\cos^{-1}(\sin 675^0)$?

Soln :– Consider $\sin(675^0)$

$\sin(675^0)=\sin(360^0+315^0)$

$=\sin(315^0)=\sin(360^0-45^0)$

$=-\sin 45^0=-\frac{1}{\sqrt{2}}$

$\left(\because \sin(360^0-\theta)=-\sin\theta\right)$

17. Find the value of $\sin^{-1}\left(\sin(-600^0)\right)$?

Soln :– Consider $\sin(-600^0)$

$\sin(-600^0)=-\sin 600^0$

$=-\sin(360^0+240^0)=-\sin 240^0$

$=\sin(180^0+60^0)=\sin 60^0=\frac{\sqrt{3}}{2}$

$\sin^{-1}\left[\sin(-600^0)\right]=\sin^{-1}\frac{\sqrt{3}}{2}=60^0$

18. Find the value of $\tan^{-1}(\tan 820^0)$?

Soln:- Consider, $\tan 820^0$

$\tan 820^0=\tan\{2\times 360^0+100^0\}$

$=\tan 100^0=\tan(180^0-80^0)$

$=-\tan 80^0=\tan(-80^0)$

$\therefore \tan^{-1}(\tan 820^0)=\tan^{-1}(\tan(-80^0))$

$=-80^0$

19. Show that $\tan^{-1}x+\cot^{-1}x=\frac{\pi}{2}$; for $-\infty < x < \infty$

Soln :– Proof : Let, $\tan^{-1}x=\theta$;

when, $-\frac{\pi}{2}<\theta<\frac{\pi}{2}$ & $-\infty<x<\infty$

$\therefore \tan\theta = x \Rightarrow \cot\left(\frac{\pi}{2}-\theta\right)=x$

$\left(\because \cot\left(\frac{\pi}{2}-\theta\right)=\tan\theta\right)$

$\Rightarrow \frac{\pi}{2}-\theta=\cot^{-1}x\quad\left(\because 0\le\left(\frac{\pi}{2}-\theta\right)\le\pi\right)$

$\Rightarrow \frac{\pi}{2}-\tan^{-1}x=\cot^{-1}x\quad(\because \tan^{-1}x=\theta)$

$\Rightarrow \frac{\pi}{2}=\tan^{-1}x+\cot^{-1}x$; Hence proved.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎರಡು ವಾರಗಳಿಂದ ಉತ್ತಮ ಮಳೆಯಾಗುತ್ತಿದ್ದು, ಮಂಗಳೂರು ಸಮೀಪದ ಅಡ್ಯಾರ್‌ನ ಜಲಪಾತವೊಂದರಲ್ಲಿ ಪ್ರವಾಸಿಗರು ನೀರಾಟದಲ್ಲಿ ನಿರತರಾಗಿದ್ದರು – ಪ್ರಜಾವಾಣಿ ಚಿತ್ರ / ಫಕ್ರುದ್ದೀನ್ ಎಚ್ (ಎಡಚಿತ್ರ) ಶಿವಮೊಗ್ಗ ಜಿಲ್ಲೆಯ ಕಾರ್ಗಲ್ ಸಮೀಪದ ವಿಶ್ವವಿಖ್ಯಾತ ಜೋಗ ಜಲಪಾತ ಮುಂಗಾರು ಮಳೆಗೆ ಮೈದುಂಬಿಕೊಂಡಿರುವುದು /ಚಿತ್ರ: ವಿ. ಸಂತೋಷ್ ಕುಮಾರ್ ಕಾರ್ಗಲ್

ತುಂಬಿದ ನದಿಗಳು, ಮರಳಿದ ಜಲವೈಭವ

ಕೊಡಗಿನಲ್ಲಿ ಶಾಲಾ, ಕಾಲೇಜುಗಳಿಗೆ ರಜೆ • ಮಾಸ್ತಿಕಟ್ಟೆಯಲ್ಲಿ 26.65 ಸೆಂ.ಮೀ ಮಳೆ ದಾಖಲು

ಪ್ರಜಾವಾಣಿ ವಾರ್ತೆ

ಮಂಗಳೂರು/ಮಡಿಕೇರಿ : ಕರಾವಳಿ, ಮಲೆನಾಡು ಪ್ರದೇಶ ಸೇರಿದಂತೆ ರಾಜ್ಯದ ವಿವಿಧೆಡೆ ಭಾನುವಾರವೂ ಮಳೆ ಮುಂದುವರಿದಿದೆ. ಕೆಲವೆಡೆ ಮಳೆ ಬಿರುಸಾಗಿದ್ದು ನದಿಗಳು ತುಂಬಿ ಹರಿದಿವೆ. ಜಲಪಾತಗಳು ಮೈದುಂಬಿಕೊಂಡಿವೆ. ಉತ್ತರಕನ್ನಡದಲ್ಲಿ ಮನೆಗಳು ಜಲಾವೃತವಾಗಿವೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭಾನುವಾರವೂ ಉತ್ತಮ ಮಳೆಯಾಗಿದೆ. ಬೆಳಿಗ್ಗೆಯಿಂದಲೇ ಮೋಡ ಕವಿದ ವಾತಾವರಣವಿತ್ತು. ಸಂಜೆವರೆಗೂ ಬಿಟ್ಟು ಬಿಟ್ಟು ಧಾರಾಕಾರ ಮಳೆ ಸುರಿಯಿತು. ಕೊಡಗು ಜಿಲ್ಲೆಯಲ್ಲಿ ಭಾರಿ ಗಾಳಿ–ಮಳೆ ಮುಂದುವರಿಯಿತು. ಸೋಮವಾರ ಶಾಲಾ– ಕಾಲೇಜುಗಳಿಗೆ ರಜೆ ಘೋಷಿಸಲಾಗಿದೆ.

ಹಾರಂಗಿ ಜಲಾಶಯಕ್ಕೆ ಬೆಳಿಗ್ಗೆ 8ರಿಂದ 11 ಗಂಟೆಯವರೆಗೆ ಭಾರಿ ಪ್ರಮಾಣದ ನೀರು ಹರಿದು ಬಂದಿತು. ಬೆಳಿಗ್ಗೆ 8ಕ್ಕೆ 4,691 ಕ್ಯುಸೆಕ್ ಇದ್ದ ಒಳಹರಿವು 11ರ ವೇಳೆಗೆ 7,720 ಕ್ಯುಸೆಕ್‌ಗೆ ಏರಿಕೆ ಆಗುತ್ತಿದ್ದಂತೆ ಕಾವೇರಿ ಮತ್ತು ಹಾರಂಗಿ ನದಿ ದಂಡೆಯ ನಿವಾಸಿಗಳಿಗೆ ಪ್ರವಾಹದ ಮುನ್ನಚ್ಚರಿಕೆ ನೀಡಲಾಗಿದ್ದು, 5ಸಾವಿರ ಕ್ಯುಸೆಕ್ ನೀರನ್ನು ನದಿಗೆ ಹರಿಸಲಾಯಿತು. ಕಾವೇರಿ ನದಿ ಸೇರಿದಂತೆ ಜಿಲ್ಲೆಯ ಎಲ್ಲ ನದಿಗಳಲ್ಲೂ ನೀರಿನ ಪ್ರಮಾಣ ಏರಿಕೆಯಾಗಿದ್ದು, ನದಿ ದಂಡೆಯ ನಿವಾಸಿಗಳಲ್ಲಿ ಆತಂಕ ಮೂಡಿದೆ. ದಕ್ಷಿಣ ಕನ್ನಡ ಜಿಲ್ಲೆಯ ಪ್ರಮುಖ ನದಿಗಳಾದ ನೇತ್ರಾವತಿ, ಕುಮಾರಧಾರಾ, ಫಲ್ಗುಣಿ, ಶಾಂಭವಿ ಹಾಗೂ ನಂದಿನಿ ತುಂಬಿ ಹರಿಯುತ್ತಿದೆ.

ರಾಜ್ಯದ ಕರಾವಳಿಯಲ್ಲಿ ಇನ್ನೂ ಐದು ದಿನ ಗುಡುಗು ಸಹಿತ ಭಾರಿ ಗಾಳಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಉಡುಪಿ ಜಿಲ್ಲೆಯಲ್ಲೂ ಭಾನುವಾರ ದಿನವಿಡೀ ಮಳೆ ಸುರಿದಿದೆ.

(ಶಿವಮೊಗ್ಗ/ತೀರ್ಥಹಳ್ಳಿ ವರದಿ): ಆಗುಂಬೆ ಘಾಟಿಯ 4 ಮತ್ತು 5ನೇ ತಿರುವಿನಲ್ಲಿ ಮಧ್ಯರಾತ್ರಿ ಸಣ್ಣ ಪ್ರಮಾಣದ ಗುಡ್ಡ ಕುಸಿತ ಸಂಭವಿಸಿದೆ. ನಡುರಾತ್ರಿ ಆಗುಂಬೆ ಮತ್ತು ಹೆಬ್ರಿ ಪೊಲೀಸರು ವಾಹನಗಳಿಗೆ ಬದಲಿ ಮಾರ್ಗಗಳನ್ನು ಸೂಚಿಸಿ ಸವಾರರಿಗೆ ಸಹಕರಿಸಿದ್ದಾರೆ. ಬೆಳಿಗ್ಗೆ ಒಂದು ಬಸ್ ಈ ಮಾರ್ಗದಲ್ಲಿ ಹೋಗಿದ್ದು, ತಕ್ಕಮಟ್ಟಿಗಿನ ವಾಹನ ಸಂಚಾರ ಆರಂಭವಾಗಿದೆ. ಮತ್ತೆ ಮಳೆ ಸುರಿದರೆ ಮತ್ತಷ್ಟು ಗುಡ್ಡ ಜರುಗುವ ಆತಂಕ ಎದುರಾಗಿದೆ.

ಶಿವಮೊಗ್ಗ ಜಿಲ್ಲೆಯಲ್ಲಿ ಶರಾವತಿ, ವರದಾ, ಕುಮದ್ವತಿ, ತುಂಗಾ, ಭದ್ರಾ ನದಿಗಳು ಮೈದುಂಬಿವೆ. ಭಾನುವಾರ ಬೆಳಿಗ್ಗೆ 8 ಗಂಟೆಗೆ ಕೊನೆಗೊಂಡಂತೆ ಹೊಸನಗರ ತಾಲ್ಲೂಕಿನ ಮಾಸ್ತಿಕಟ್ಟೆಯಲ್ಲಿ ಅತಿಹೆಚ್ಚು 26.65 ಸೆಂ.ಮೀ ಮಳೆ ದಾಖಲಾಗಿದೆ. ಹುಲಿಕಲ್‌ನಲ್ಲಿ 26.49 ಸೆಂ.ಮೀ ಮಳೆ ಸುರಿದಿದೆ.

ಕಾರವಾರ ತಾಲ್ಲೂಕಿನ ಇಡೂರು ಗ್ರಾಮದಲ್ಲಿ ಮನೆಯ ಸುತ್ತ ಮಳೆ ನೀರು ನಿಂತಿದ್ದರಿಂದ ವ್ಯಕ್ತಿಯೊಬ್ಬರು ದೋಣಿಯಲ್ಲಿ ಸಾಗಿ ಕೊಡದಲ್ಲಿ ಕುಡಿಯುವ ನೀರು ತಂದರು

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	104.90	5,237	2,258
ಹಾರಂಗಿ	2,859	2854.65	6,820	5,000
ಕಬಿನಿ	2,284.00	2,282.80	12,910	20,500
ಹೇಮಾವತಿ	2,922	2,902.75	10,055	250
ಲಿಂಗನಮಕ್ಕಿ	1,819	1,775.70	36,197	490.65
ಸೂಪಾ (ಮೀ)	564	534.80	19,358	1,572.16
ಮಾಣಿ	595	577.50	5,124	0
ತುಂಗಭದ್ರಾ	1,633	1,606.81	12,194	203
ಮಲಪ್ರಭಾ	2,079.5	2,054.75	3,296	194
ಘಟಪ್ರಭಾ	2175	2,137.05	7,835	124
ಭದ್ರಾ	186	139.03	14,570	161
ಆಲಮಟ್ಟಿ (ಮೀ)	519.6	517.46	23,678	3,980
ನಾರಾಯಣಪುರ (ಮೀ)	492.25	489.32	3,413.82	91.71

* ನೆಲಮಟ್ಟದಿಂದ



ಮಡಿಕೇರಿ– ಮಂಗಳೂರು ರಸ್ತೆಯಲ್ಲಿರುವ ಅಬ್ಬಕೊಲ್ಲಿ ಜಲಪಾತದ ಸೊಬಗು ಭಾನುವಾರ ಕಂಡುಬಂದಿದ್ದು ಹೀಗೆ... ಪ್ರಜಾವಾಣಿ ಚಿತ್ರ: ರಂಗಸ್ವಾಮಿ

ಗಗನಚುಕ್ಕಿ ಜಲಪಾತಕ್ಕೆ ಜೀವಕಳೆ

ಮಳವಳ್ಳಿ(ಮಂಡ್ಯ): ಕಳೆದ ಒಂದೂವರೆ ವರ್ಷದಿಂದ ನೀರಿಲ್ಲದೆ ಭಣಗುಡುತ್ತಿದ್ದ ತಾಲ್ಲೂಕಿನ ಶಿವನಸಮುದ್ರ (ಬ್ಲಫ್) ಬಳಿಯ ಗಗನಚುಕ್ಕಿ ಜಲಪಾತಕ್ಕೆ ಜೀವಕಳೆ ಬಂದಿದೆ. ಭಾನುವಾರ ಪ್ರವಾಸಿಗರ ದಂಡು ಬಂದಿತ್ತು.

ಕೇರಳದ ವಯನಾಡು ಪ್ರದೇಶದಲ್ಲಿ ಉತ್ತಮ ಮಳೆ ಬೀಳುತ್ತಿರುವುರಿಂದಾಗಿ, ಮೈಸೂರು ಜಿಲ್ಲೆಯ ಎಚ್.ಡಿ.ಕೋಟೆ ತಾಲ್ಲೂಕಿನ ಬೀಚನಹಳ್ಳಿಯಲ್ಲಿರುವ ಕಬಿನಿ ಜಲಾಶಯ ಭರ್ತಿಯಾಗಿದ್ದು, ನದಿಗೆ ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿಸಲಾಗುತ್ತಿದೆ. ಇದರಿಂದಾಗಿ ಜಲಪಾತ ಆಕರ್ಷಣೆ ಪಡೆದುಕೊಂಡಿದೆ. ಎತ್ತರದಿಂದ ಧುಮ್ಮಿಕ್ಕುವ ಗಗನಚುಕ್ಕಿ ಜಲಪಾತ ಹಾಗೂ ಕಲ್ಲು ಬಂಡೆಗಳ ನಡುವೆ ಭೋರ್ಗರೆಯುವ ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನ ಭರಚುಕ್ಕಿ ಜಲಪಾತಗಳು ಪ್ರವಾಸಿಗರನ್ನು ಆಕರ್ಷಿಸುತ್ತಿವೆ.

ಕಲಬುರಗಿ ವರದಿ: ಕಲ್ಯಾಣ ಕರ್ನಾಟಕದ ಕಲಬುರಗಿ, ಬೀದರ್, ಯಾದಗಿರಿ ಜಿಲ್ಲೆಗಳಲ್ಲಿ ಭಾನುವಾರವೂ ಮಳೆ ಮುಂದುವರೆದಿದೆ. ಬೀದರ್ ನಗರ ಹಾಗೂ ಸುತ್ತಮುತ್ತಲಿನ ಭಾಗಗಳಲ್ಲಿ ಒಂದು ಗಂಟೆಗೂ ಹೆಚ್ಚು ಕಾಲ ಬಿರುಸಿನ ಮಳೆಯಾಗಿದೆ. ಕಲಬುರಗಿ ಜಿಲ್ಲೆಯ ಚಿತ್ತಾಪುರ, ಕಾಳಗಿ, ಶಹಾಬಾದ್‌ನಲ್ಲಿ ಕೆಲ ಹೊತ್ತು ಮಳೆಯಾಗಿದೆ.

ಹುಬ್ಬಳ್ಳಿ ವರದಿ: ನಗರ ಸೇರಿದಂತೆ ಗ್ರಾಮೀಣ ಭಾಗದಲ್ಲಿ ಭಾನುವಾರ ಇಡೀ ದಿನ ಬಿರುಸಿನ ಮಳೆ ಸುರಿಯಿತು. ಉತ್ತರ ಕನ್ನಡ ಜಿಲ್ಲೆಯ ಬಹುತೇಕ ಕಡೆ ಮಳೆ ಸುರಿದಿದ್ದರಿಂದ ಮನೆ ಕುಸಿತ, ಜಲಾವೃತ ಸಮಸ್ಯೆಗಳು ಉಂಟಾದವು. ಕೆಲವೆಡೆ ಶನಿವಾರ ತಡರಾತ್ರಿಯಿಂದಲೂ ನಿರಂತರವಾಗಿ ಮಳೆ ಸುರಿದ ಪರಿಣಾಮ ಗಂಗಾವಳಿ, ಅಘನಾಶಿನಿ, ಗುಂಡಬಾಳ ಸೇರಿದಂತೆ ಹಲವು ನದಿಗಳಲ್ಲಿ ನೀರಿನ ಮಟ್ಟ ಏರಿಕೆ ಕಂಡಿತು. ಕಾರವಾರ ತಾಲ್ಲೂಕಿನ ಇಡೂರು ಗ್ರಾಮದಲ್ಲಿನ 20ಕ್ಕೂ ಹೆಚ್ಚು ಮನೆಗಳ ಸುತ್ತ ನೀರು ನಿಂತಿದ್ದರಿಂದ ಜನರು ಹೊರಕ್ಕೆ ತೆರಳಲು ಪರದಾಡಿದರು.

ಬದಲಿ ನಿವೇಶನ: 'ಜಾಲ' ಸಕ್ರಿಯ

• ಎಂ. ಮಹೇಶ

ಮುಡಾ ಹಗರಣ

ಮೈಸೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದಲ್ಲಿ ಶೇ 50:50ರ ಅನುಪಾತದಲ್ಲಿ ಪರಿಹಾರವಾಗಿ ನಿವೇಶನ ನೀಡುವಲ್ಲಿ ಹಗರಣ ನಡೆದಿರುವುದು ಒಂದೆಡೆಯಾದರೆ, ನಿಯಮ ದುರ್ಬಳಕೆ ಮಾಡಿಕೊಂಡು 'ಕಾನೂನಾತ್ಮಕವಾಗಿಯೇ ಭ್ರಷ್ಟಾಚಾರ' ನಡೆಸಿ ದುಡ್ಡು ಮಾಡಿಕೊಳ್ಳುವ ಜಾಲ ಹಿಂದಿನಿಂದಲೂ ವ್ಯವಸ್ಥಿತವಾಗಿ ಕಾರ್ಯನಿರ್ವಹಿಸುತ್ತಿದೆ.

ಅದುವೇ 'ಬದಲಿ ನಿವೇಶನ' ಕೊಡಿಸುವ ದಂಧೆ. ಇದರಿಂದ ಸಿಗುವ 'ಲಾಭ'ದಲ್ಲಿ ಆ ಕಾಲದಲ್ಲಿನ ಅಧ್ಯಕ್ಷರು, ಆಯುಕ್ತರು ಸೇರಿದಂತೆ ಸಂಬಂಧಿಸಿದ ಅಧಿಕಾರಿಗಳು ಹಾಗೂ ಮಧ್ಯವರ್ತಿಗಳು 'ಪಾಲು' ಪಡೆಯುತ್ತಾರೆ. ಹಂಚಿಕೆಯಾದ ನಿವೇಶನಕ್ಕೆ ಬದಲಿಯಾಗಿ 'ಅಭಿವೃದ್ಧಿ ಹೊಂದಿದ ಹಾಗೂ ಒಳ್ಳೆಯ ಮೌಲ್ಯವುಳ್ಳ ಸ್ಥಳದಲ್ಲಿ ನಿವೇಶನ ಸಿಕ್ಕ ಸಂತಸ' ಹಾಗೂ ನಿವೇಶನದ ಮೌಲ್ಯವು ಹಲವು ಪಟ್ಟು ಹೆಚ್ಚಾದ ಲಾಭವು ಪಡೆದುಕೊಂಡವರಿಗೆ ಆಗುತ್ತದೆ. ಅದನ್ನು ಮಾಡಿಸಿಕೊಟ್ಟವರು ಭರಪೂರ ಕಮಿಷನ್ ಗಳಿಸಿ ಸಂಭ್ರಮಿಸುತ್ತಾರೆ.

ಆ ಥರದ್ದು ಇದ್ದರೆ ತನ್ನಿ!: ಇದಕ್ಕಾಗಿಯೇ, 'ಬದಲಿ ನಿವೇಶನದ ಕೇಸ್ ಇದ್ದರೆ ತನ್ನಿ, ಮಾಡಿಸೋಣ' ಎನ್ನುವುದು ಮಧ್ಯವರ್ತಿಗಳ ವಲಯದಲ್ಲಿ ಹೆಚ್ಚಾಗಿ ಕೇಳಿಬರುವ ಮಾತಾಗಿದೆ ಎನ್ನುವುದು ಪ್ರಾಧಿಕಾರದ ಒಳವ್ಯವಹಾರವನ್ನು ಬಲ್ಲವರ ಅನುಭವದ ಮಾತಾಗಿದೆ. ಇದರಿಂದ ಸರ್ಕಾರಕ್ಕೆ ನಷ್ಟವೇ ಹೊರತು ಪ್ರಯೋಜನವೇನಿಲ್ಲ. ಬದಲಿ ನಿವೇಶನ ಮಂಜೂರು ಮಾಡಿಕೊಡಲು ಇರುವ ನಿಯಮವನ್ನು ಹೇಗೆ ಬಳಸಿ ಕೊಳ್ಳಬೇಕು ಎನ್ನುವುದನ್ನು ಮಧ್ಯವರ್ತಿಗಳು, ಅಧಿಕಾರಿಗಳ ಜಾಲ 'ಕರಗತ' ಮಾಡಿಕೊಂಡಿದೆ!

ಹಗರಣದ ತನಿಖೆಯನ್ನು ಸಿಬಿಐಗೆ ಕೊಡ ಬೇಕು ಅಥವಾ ಹಾಲಿ ನ್ಯಾಯಾಧೀಶರ ಸಮಿತಿಯ ಮೂಲಕ ತನಿಖೆ ನಡೆಸಬೇಕು

ಟಿ.ಎಸ್. ಶ್ರೀವತ್ಸ, ಶಾಸಕ

ಮಂಜೂರಾತಿಗೆ ಪ್ರಭಾವಿಗಳ ಬಳಕೆ: ಪ್ರಭಾವಿಗಳು 'ಬೆಲೆ ಬಾಳುವ' ನಿವೇಶನ ಪಡೆದುಕೊಳ್ಳುವಲ್ಲಿ ಇರುವ ಮತ್ತೊಂದು ಮಾರ್ಗ ಇದಾಗಿದೆ. ಮಧ್ಯವರ್ತಿಗಳ ಜಾಲದೊಂದಿಗೆ ಅಧಿಕಾರಿಗಳು ಕೂಡ ಕೈಜೋಡಿಸುವುದರಿಂದ ಇಂತಹ ಪ್ರಕರಣಗಳು ನಡೆಯುತ್ತಿವೆ. ಪ್ರಭಾವಿಗಳಾದ ಮಧ್ಯವರ್ತಿಗಳು ಮುಡಾ ಸದಸ್ಯರ ಮೂಲಕ ಸಭೆಗಳಲ್ಲಿ ಮಂಜೂರಾತಿ ಮಾಡಿಸಿಕೊಂಡು ಬಿಡುತ್ತಾರೆ ಎನ್ನುತ್ತಾರೆ ರಿಯಲ್ ಎಸ್ಟೇಟ್ ಉದ್ಯಮದ 'ಒಳನೋಟ'ವನ್ನು ಬಲ್ಲವರು.

ದೇವನೂರು, ಕೆಸರೆ, ಈರನಗೆರೆ ಮೊದಲಾದ ಕಡೆಗಳಲ್ಲಿ ನಿವೇಶನ ಸಿಕ್ಕಿರುವವರಿಗೆ ಅಭಿವೃದ್ಧಿ ಹೊಂದಿರುವ ಕಡೆಗಳಲ್ಲಿ ಅಂದರೆ ವಿಜಯನಗರದ ವಿವಿಧ ಹಂತಗಳು, ಜೆ.ಪಿ. ನಗರ ಹೀಗೆ... ಬೇರೆ ಬಡಾವಣೆಗಳಲ್ಲಿ ಬದಲಿ ನಿವೇಶನ ಕೊಡಿಸುವ ಕೆಲಸವನ್ನು ಈ ಜಾಲ ಮಾಡುತ್ತಿದೆ ಎಂದು ತಿಳಿಸಿದರು.

'ಕೊರತೆಯೂ ಕಾರಣ'

'ಮುಡಾ ಬಡಾವಣೆಗಳಲ್ಲಿ ಮೂಲಸೌಲಭ್ಯ ಕೊರತೆ ಇರುವುದು ಕೂಡ ಬದಲಿ ನಿವೇಶನ ದಂಧೆಗೆ ಸಹಕಾರಿಯಾಗಿದೆ ಎನ್ನುವುದು ಮುಡಾ ಕಾರ್ಯವೈಖರಿ ಬಲ್ಲವರ ಮಾತಾಗಿದೆ.

'ನಮಗೆ ನಿವೇಶನ ಹಂಚಿಕೆಯಾದಲ್ಲಿ ಮೂಲಸೌಲಭ್ಯಗಳೇ ಇಲ್ಲ. ಹೀಗಾಗಿ ಬದಲಿ ನಿವೇಶನ ಮಂಜೂರು ಮಾಡಿಕೊಡಬೇಕು' ಎಂದು ಅರ್ಜಿ ಹಾಕಿಸಿ, ಹೆಚ್ಚಿನ ಬೆಲೆ ಸಿಗುವ ನಿವೇಶನ ಕೊಡಿಸುವುದು ಪ್ರಕ್ರಿಯೆಯ ಸಾರ. ಇದರಿಂದ ಮಧ್ಯವರ್ತಿಗೆ, ಕೆಲಸ ಮಾಡಿಕೊಟ್ಟ ಎಲ್ಲರಿಗೂ 'ಲಾಭ' ಆಗುತ್ತದೆ!' ಎಂದು ಆರ್‌ಟಿಐ ಕಾರ್ಯಕರ್ತರೊಬ್ಬರು ತಿಳಿಸಿದರು.

'ಸಮಾನಾಂತರ ಬಡಾವಣೆಯಲ್ಲಿ ಬದಲಿ ನಿವೇಶನ ಕೊಡಲು ಅವಕಾಶವಿದೆ. ಆದರೆ, ಇದನ್ನೇ ಬಂಡವಾಳ ಮಾಡಿಕೊಂಡು ಇತರ ಬಡಾವಣೆಗಳಲ್ಲೂ ನೀಡಿರುವ ಉದಾಹರಣೆಗಳಿವೆ. ಸಮಗ್ರ ತನಿಖೆಯಿಂದ ಇದೆಲ್ಲವನ್ನೂ ಹೊರತರಬಹುದಾಗಿದೆ. ತನಿಖಾ ಸಮಿತಿಯು ಇತ್ತ ಗಮನಹರಿಸಿದರೆ, ಮತ್ತಷ್ಟು ಅಕ್ರಮಗಳು ಬಯಲಿಗೆ ಬರುತ್ತವೆ' ಎನ್ನುತ್ತಾರೆ ಅವರು.

ವಕ್ಫ್ ಮಂಡಳಿ ಹಣ ವರ್ಗಾವಣೆ ಎರಡನೇ ಬಾರಿ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ವಕ್ಫ್ ಮಂಡಳಿ ಖಾತೆಯಿಂದ ₹4 ಕೋಟಿಯನ್ನು ಅಕ್ರಮವಾಗಿ ವರ್ಗಾವಣೆ ಮಾಡಿರುವ ಬಗ್ಗೆ ಮಂಡಳಿಯ ಮುಖ್ಯ ಲೆಕ್ಕಾಧಿಕಾರಿ ಎರಡನೇ ಬಾರಿಗೆ ದೂರು ದಾಖಲಿಸಿದ್ದಾರೆ. ಹೈಗ್ರೌಂಡ್ಸ್ ಠಾಣೆಯಲ್ಲಿ ಜುಲೈ 6ರಂದು ಎಫ್‌ಐಆರ್ ದಾಖಲಾಗಿದೆ.

ವಕ್ಫ್ ಮಂಡಳಿಯು ಸಂಸ್ಥೆಯ ಮಾಜಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (ಸಿಇಒ) ಝುಲ್ಫಿಕಾರುಲ್ ವಿರುದ್ಧ ಹಣದ ಅಕ್ರಮ ವರ್ಗಾವಣೆ ಕುರಿತು 2017ರಲ್ಲಿ ಪೊಲೀಸರಿಗೆ ದೂರು ನೀಡಲಾಗಿತ್ತು. ಆಗ ಪ್ರಕರಣವನ್ನು ಸಿಐಡಿಗೆ ವರ್ಗಾಯಿಸಲಾಗಿತ್ತು. ಸಿಐಡಿ ತನಿಖೆ ನಡೆಸಿ ಕೆಲವು ಆರೋಪಿಗಳನ್ನು ಸಹ ಬಂಧಿಸಿತ್ತು. ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿಯನ್ನೂ ಸಲ್ಲಿಸಲಾಗಿತ್ತು. ಆದರೆ, ಝುಲ್ಫಿಕಾರುಲ್ ಅವರನ್ನು ಬಂಧಿಸಿರಲಿಲ್ಲ.

ಜುಲೈ 6ರಂದು ವಕ್ಫ್ ಮಂಡಳಿಯ ಮುಖ್ಯ ಲೆಕ್ಕಾಧಿಕಾರಿ ಮೀರ್ ಅಹಮದ್ ಅಬ್ಬಾಸ್ ಅವರು ಹೊಸದಾಗಿ ಹೈಗ್ರೌಂಡ್ಸ್ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

'ಪ್ರಕರಣ ಸಂಬಂಧ ಅಂದಿನ ಸಿಐಡಿ ತಂಡ ಹಣ ವಶಪಡಿಸಿಕೊಂಡು ಕೆಲವರನ್ನು ಬಂಧಿಸಿದೆ. ದೋಷಾರೋಪ ಪಟ್ಟಿಯನ್ನೂ ಸಲ್ಲಿಸಿದೆ. ಹಾಗಾಗಿ ಝುಲ್ಫಿಕಾರುಲ್ ಅವರನ್ನು ಬಂಧಿಸಲು ಆಗುವುದಿಲ್ಲ. ಸಿಐಡಿಯಿಂದ ವರದಿ ತರಿಸಿಕೊಂಡ ಬಳಿಕ, ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ಪೊಲೀಸ್ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ದೂರಿನ ಸಾರಾಂಶ: 2016ರಲ್ಲಿ ಸಿಇಒ ಆಗಿದ್ದ ಝುಲ್ಫಿಕಾರುಲ್ ಅವಧಿಯಲ್ಲಿ ಮಂಡಳಿಯ ಅಧೀನದ ಕಲಬುರಗಿಯ ದರ್ಗಾಕ್ಕೆ ಸೇರಿದ ಆಸ್ತಿಯನ್ನು ಸರ್ಕಾರ ಸ್ವಾಧೀನ ಪಡೆದಿತ್ತು. ₹2.29 ಕೋಟಿ ಪರಿಹಾರವನ್ನು ಪಾವತಿಸಿತ್ತು. ಮುಜರಾಯಿ ಇಲಾಖೆ ಸಹ ₹1.79 ಕೋಟಿ ಪರಿಹಾರ ನೀಡಿತ್ತು.

ಪರಿಹಾರದ ₹4 ಕೋಟಿಯನ್ನು ಮಂಡಳಿಯು ಬೆನ್ಸನ್ ಟೌನ್‌ನ ಇಂಡಿಯನ್ ಬ್ಯಾಂಕ್ ಶಾಖೆಯ ಖಾತೆಗೆ ಜಮಾ ಮಾಡಿತ್ತು. ಆದರೆ, ಝುಲ್ಫಿಕಾರುಲ್ ಅವರು ವಿಜಯಾ ಬ್ಯಾಂಕ್‌ನ ಚಿಂತಾಮಣಿ ಶಾಖೆಯಲ್ಲಿ ಖಾತೆ ತೆರೆದು ಮಂಡಳಿಯ ಗಮನಕ್ಕೆ ತಾರದೆ ಅಕ್ರಮವಾಗಿ ₹4 ಕೋಟಿಯನ್ನು ವರ್ಗಾಯಿಸಿದ್ದರು. ನಿಶ್ಚಿತ ಠೇವಣಿಯ ಬಡ್ಡಿ ಸೇರಿ ಮಂಡಳಿಗೆ ₹8,03 ಕೋಟಿ ನಷ್ಟ ಉಂಟುಮಾಡಿದ್ದಾರೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

2022ರ ಮಾರ್ಚ್ 31ರ ವಕ್ಫ್ ಮಂಡಳಿ ಸಭೆ ನಿರ್ಣಯದಂತೆ ಝುಲ್ಫಿಕಾರುಲ್ ಅವರಿಗೆ ಕಾರಣ ಕೇಳಿ ನೋಟಿಸ್ ನೀಡಲಾಗಿತ್ತು. ಉತ್ತರ ತೃಪ್ತಿಕರವಾಗಿರಲಿಲ್ಲ. ಇದನ್ನು ಇಲಾಖೆಯ ಗಮನಕ್ಕೆ ತರಲಾಗಿದೆ. ಕಾರ್ಯದರ್ಶಿಯವರ ಸೂಚನೆಯಂತೆ ದೂರು ನೀಡಲಾಗಿದೆ.

ಭ್ರೂಣ ಹತ್ಯೆ ಪ್ರಕರಣ: ಮತ್ತೊಬ್ಬ ಆರೋಪಿ ಬಂಧನ

ಉಮೇಶ್

ಪಾಂಡವಪುರ (ಮಂಡ್ಯ ಜಿಲ್ಲೆ): ಪಟ್ಟಣದ ತಾಲ್ಲೂಕು ಆರೋಗ್ಯಾಧಿಕಾರಿ ಕಚೇರಿ ಹಿಂಭಾಗದ ವಸತಿ ಗೃಹದಲ್ಲಿ ಈಚೆಗೆ ನಡೆದಿದ್ದ ಹೆಣ್ಣು ಭ್ರೂಣ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಮತ್ತೊಬ್ಬ ಆರೋಪಿಯನ್ನು ಬಂಧಿಸಿದ್ದಾರೆ.

ತಾಲ್ಲೂಕಿನ ಹಿರೇಮರಳಿ ಗ್ರಾಮದ ಸಿಂಗೇಗೌಡ ಅವರ ಪುತ್ರ ಉಮೇಶ್ ಬಂಧಿತ. ಆತನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಪ್ರಕರಣದ ಪ್ರಮುಖ ಆರೋಪಿ ಅಭಿಲಾಷ್ ಎಂಬಾತನ ಸೋದರ ಮಾವನಾಗಿರುವ ಈತ ಭ್ರೂಣ ಹತ್ಯೆ ಮಾಡಿಸಲು ಸಿದ್ಧವಿರುವವರನ್ನು ಗುರುತಿಸುತ್ತಿದ್ದ. ಅಂತಹ ಮಹಿಳೆಯರನ್ನು ಶ್ರುತಿ ಮತ್ತು ಆಶಾ (ಭ್ರೂಣ ಹತ್ಯೆ ಪ್ರಕರಣದಲ್ಲಿ ಈಗಾಗಲೇ ಜೈಲು ಸೇರಿರುವ ಆರೋಪಿಗಳು) ಅವರಿಗೆ ಪರಿಚಯಿಸುತ್ತಿದ್ದ ಎಂದು ಪೊಲೀಸರು ತಿಳಿಸಿದರು. ಇತ್ತೀಚೆಗೆ ದೇವೇಗೌಡನಕೊಪ್ಪಲು ಗ್ರಾಮದ ಮಹಿಳೆಯೊಬ್ಬರಿಗೆ ಮನೆಯ ಕೊಠಡಿಯಲ್ಲಿ ಭ್ರೂಣ ಹತ್ಯೆ ನಡೆಸಲು ಅವಕಾಶ ಮಾಡಿಕೊಟ್ಟಿದ್ದ ಎಂದು ತಿಳಿದುಬಂದಿದೆ. ಪಿಎಸ್‌ಐ ಆರ್. ಬಿ.ಉಮೇಶ್ ತಂಡವು ಆರೋಪಿಯನ್ನು ಆತನ ಮನೆಯಲ್ಲಿಯೇ ಬಂಧಿಸಿದೆ.

ತಮಿಳುನಾಡಿಗೆ ನೀರು: ಮೇಲ್ಮನವಿಗೆ ನಿರ್ಧಾರ

ಒಂದನೇ ಪುಟದಿಂದ...

'ಸರ್ವಪಕ್ಷ ಸಭೆಯಲ್ಲಿ ಬಿಜೆಪಿ, ಜೆಡಿಎಸ್, ರೈತ ಸಂಘದವರು, ಕಾನೂನು ತಂಡದ ಮುಖ್ಯಸ್ಥರಾದ ಮೋಹನ್ ಕಾತರಕಿ ಸೇರಿದಂತೆ ಹಲವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ನಿತ್ಯ ಒಂದು ಟಿಎಂಸಿ ಅಡಿ ನೀರು ಬಿಡಲು ಸಾಧ್ಯವಿಲ್ಲ. ಮೇಲ್ಮನವಿ ಸಲ್ಲಿಸಬೇಕು' ಎಂದು ಸರ್ವಪಕ್ಷಗಳ ಸದಸ್ಯರ ಅಭಿಪ್ರಾಯವಾಗಿತ್ತು' ಎಂದರು.

'ಕಾವೇರಿ ತೀರದಲ್ಲಿರುವ ನಮ್ಮ ನಾಲ್ಕು ಜಲಾಶಯಗಳ ಪೈಕಿ ಕಬಿನಿ ಶೇ 96, ಹಾರಂಗಿ ಶೇ 76, ಹೇಮಾವತಿ ಶೇ 56, ಕೆಆರ್‌ಎಸ್ ಶೇ 54ರಷ್ಟು ನೀರು ಭರ್ತಿಯಾಗಿದೆ. ಅಂದರೆ, ಒಟ್ಟು ಶೇ 63ರಷ್ಟು ಮಾತ್ರ ಭರ್ತಿ ಆಗಿದೆ. ಕಬಿನಿ ಜಲಾಶಯ ಭರ್ತಿಯಾಗಿದ್ದು, ಜುಲೈ 12 ರಂದು 20 ಸಾವಿರ, 13ರಂದು 19 ಸಾವಿರ, ಭಾನುವಾರ (ಜುಲೈ14) 13 ಸಾವಿರ ಕ್ಯುಸೆಕ್ ನೀರಿನ ಒಳಹರಿವು ಇತ್ತು. ಜಲಾಶಯದ ಸುರಕ್ಷತೆಗಾಗಿ ಶೇಖರಿಸಿಡಲು ಸಾಧ್ಯವಾಗದ ನೀರು ಹರಿದುಹೋಗಿದೆ' ಎಂದೂ ಹೇಳಿದರು.

ಜಲ ಸಂಪನ್ಮೂಲ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ವಿರೋಧ ಪಕ್ಷದ ನಾಯಕ ಆರ್. ಅಶೋಕ, ಜೆಡಿಎಸ್ ಶಾಸಕ ಜಿ.ಟಿ. ದೇವೇಗೌಡ, ಮಾಜಿ ಮುಖ್ಯಮಂತ್ರಿ ಸದಾನಂದ ಗೌಡ, ಸಚಿವ ಸಂಪುಟದ ಸದಸ್ಯರು, ಕಾವೇರಿ ಜಲಾನಯನ ಪ್ರದೇಶದ ಸಂಸದರು, ಶಾಸಕರು, ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್, ಮುಖ್ಯಮಂತ್ರಿಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಕೆ. ಅತೀಕ್, ಜಲ ಸಂಪನ್ಮೂಲ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತಾ, ಸುಪ್ರೀಂ ಕೋರ್ಟ್ ಹಿರಿಯ ವಕೀಲ ಮೋಹನ್ ಕಾತರಕಿ, ಅಡ್ವೊಕೇಟ್ ಜನರಲ್ ಕೆ. ಶಶಿಕಿರಣ್ ಶೆಟ್ಟಿ, ನೀರಾವರಿ ಹಾಗೂ ಕಾನೂನು ತಜ್ಞರು ಮತ್ತು ಹಿರಿಯ ಅಧಿಕಾರಿಗಳು ಸಭೆಯಲ್ಲಿದ್ದರು.

ಗೈರು: ಕೇಂದ್ರ ಸಚಿವರಾದ ಎಚ್. ಡಿ. ಕುಮಾರಸ್ವಾಮಿ, ವಿ.ಸೋಮಣ್ಣ, ಶೋಭಾ ಕರಂದ್ಲಾಜೆ ಗೈರಾದರು.

ಮುಖ್ಯಾಂಶಗಳು

- ನಿತ್ಯ 1 ಟಿಎಂಸಿ ನೀರು ಹರಿಸಲು ಅಸಾಧ್ಯ: ಸಭೆ ತೀರ್ಮಾನ
- 'ನಾಲ್ಕೂ ಜಲಾಶಯ ಶೇ 63ರಷ್ಟು ಮಾತ್ರ ಭರ್ತಿ'
- 'ಹೆಚ್ಚು ಮಳೆ ಬಿದ್ದರೆ ಮಾತ್ರ ಹೆಚ್ಚು ನೀರು ಹರಿಸಲು ಸಾಧ್ಯ'

125 ವರ್ಷದ ಸಮಸ್ಯೆ 24 ಗಂಟೆಯಲ್ಲಿ ಬಗೆಹರಿಸಲು ಸಾಧ್ಯವಿಲ್ಲ: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಪಾಂಡವಪುರ (ಮಂಡ್ಯ ಜಿಲ್ಲೆ): 'ಕಾವೇರಿ ಸಮಸ್ಯೆಯನ್ನು 125 ವರ್ಷಗಳಿಂದಲೂ ಎದುರಿಸುತ್ತಿದ್ದೇವೆ. ಈಗ ದಿಢೀರನೆ ಸಮಸ್ಯೆ ಬಗೆಹರಿಸಲು ಸಾಧ್ಯವಿಲ್ಲ. ಅದಕ್ಕೆ ಕಾಲಾವಕಾಶ ಬೇಕಾಗುತ್ತದೆ. ಪರಿಹರಿಸಲು ಪ್ರಯತ್ನ ಮಾಡುತ್ತೇನೆ' ಎಂದು ಕೇಂದ್ರ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಸಚಿವ ಎಚ್. ಡಿ. ಕುಮಾರಸ್ವಾಮಿ ಹೇಳಿದರು.

ಪಟ್ಟಣದಲ್ಲಿ ಜೆಡಿಎಸ್ ಮತ್ತು ಬಿಜೆಪಿಯಿಂದ ಭಾನುವಾರ ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಅವರು ಮಾತನಾಡಿದರು.

'ಈಚೆಗೆ ನಾನು ಮಂಡ್ಯದಲ್ಲಿ ನಡೆಸಿದ ಜನಸ್ಪಂದನ ಕಾರ್ಯಕ್ರಮಕ್ಕೆ ಅಧಿಕಾರಿಗಳು ಹೋಗದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಆದೇಶಿಸಿದ್ದರು. ರಾಜ್ಯದ ಅಭಿವೃದ್ಧಿ ದೃಷ್ಟಿಯಿಂದ ರಾಜ್ಯ ಸರ್ಕಾರವು ನನ್ನನ್ನು ಬಳಸಿಕೊಳ್ಳುತ್ತಿಲ್ಲ. ಆದ್ದರಿಂದ ಅವರು ಭಾನುವಾರ ಕರೆದಿದ್ದ ಸರ್ವಪಕ್ಷ ಸಭೆಗೆ ನಾನು ಹೋಗಲಿಲ್ಲ' ಎಂದು ತಿಳಿಸಿದರು.

'ಪಕ್ಕದ ರಾಜ್ಯದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು, ಬೃಹತ್ ಕೈಗಾರಿಕೆ ಸ್ಥಾಪಿಸಿ ಅಭಿವೃದ್ಧಿಪಡಿಸಿ ಎಂದು ಆಹ್ವಾನ ನೀಡುತ್ತಾರೆ. ಆದರೆ, ನಮ್ಮಲ್ಲಿ ಬಳಸಿಕೊಳ್ಳುತ್ತಿಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

'ಸ್ವಾತಂತ್ರ್ಯ ನಂತರದಲ್ಲಿ ಕಾವೇರಿ ವಿಷಯದಲ್ಲಿ ನ್ಯಾಯಕ್ಕಾಗಿ ಹೋರಾಟ ನಡೆಸಿದವರೆಂದರೆ ಎಚ್.ಡಿ. ದೇವೇಗೌಡರು ಮಾತ್ರ. ಅದನ್ನು ಅರಿಯದೆ ಕೆಲವರು ಲಘುವಾಗಿ ಮಾತನಾಡುತ್ತಾರೆ. ಕಾವೇರಿ ಎಂದು ಎಂದರು.

ಎಸ್‌ಸಿಎಸ್‌ಪಿ, ಟಿಎಸ್‌ಪಿ ಕಾಯ್ದೆ ಉಲ್ಲಂಘಿಸಿಲ್ಲ: ಸಚಿವ ಮಹದೇವಪ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎಸ್‌ಸಿಎಸ್‌ಪಿ, ಟಿಎಸ್‌ಪಿ ಕಾಯ್ದೆ ನಿಯಮಗಳಡಿಯೇ ಪರಿಶಿಷ್ಟರ ಬದುಕಿಗೆ 'ಗ್ಯಾರಂಟಿ' ಸೌಲಭ್ಯಗಳನ್ನು ನೀಡಲಾಗಿದೆಯೇ ಹೊರತು, ಎಲ್ಲೂ ಕಾಯ್ದೆಯನ್ನು ಸರ್ಕಾರ ಉಲ್ಲಂಘಿಸಿಲ್ಲ' ಎಂದು ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ ಹೇಳಿದ್ದಾರೆ.

'ಪ್ರಜಾವಾಣಿ'ಯ ಭಾನುವಾರದ (ಜುಲೈ 14) ಸಂಚಿಕೆಯಲ್ಲಿ ಪ್ರಕಟವಾದ 'ಪರಿಶಿಷ್ಟರ ನಿಧಿಗೆ ಕನ್ನ!' ವರದಿಗೆ ಪ್ರತಿಕ್ರಿಯಿಸಿರುವ ಅವರು, 'ಕೆಳಸಮುದಾಯಗಳ ಹಣವನ್ನು ಸಿ.ಎಂ ಅವರಾಗಲಿ, ನಾನಾಗಲೀ ಸ್ವಂತಕ್ಕೆ ಬಳಸಿಕೊಂಡಿಲ್ಲ. ಸ್ವಾರ್ಥ, ದುರುದ್ದೇಶದಿಂದ ಬಳಸಿಕೊಂಡಾಗ ಮಾತ್ರವೇ 'ಕನ್ನ' ಎನಿಸಿಕೊಳ್ಳುವುದೇ ವಿನಾ, ಪರಿಶಿಷ್ಟ ಸಮುದಾಯದ ಬದುಕಿಗೆ ಹಂಚಿಕೆ ಮಾಡಿದಾಗ ಅದು ಸಹಾಯ ಎನಿಸಿಕೊಳ್ಳುತ್ತದೆ' ಎಂದಿದ್ದಾರೆ.

'ದಲಿತ ಸಮುದಾಯದ ಜನರಿಗೆ ನಮ್ಮಿಂದ ಯಾವ ಕಾರಣಕ್ಕೂ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಅನ್ಯಾಯ ಆಗಿಲ್ಲ. ಆಗುವುದೂ ಇಲ್ಲ' ಎಂದಿದ್ದಾರೆ.

ದಲಿತ ದ್ರೋಹಿ ಕ್ರಮ: ಬಿಜೆಪಿ

ಬೆಂಗಳೂರು: 'ಕಾಂಗ್ರೆಸ್ ಸರ್ಕಾರ ಪರಿಶಿಷ್ಟರ ಕಲ್ಯಾಣಕ್ಕೆ ಮೀಸಲಾದ ನಿಧಿಯಲ್ಲಿ ₹25,396 ಕೋಟಿಯನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸಿರುವುದು ದಲಿತ ದ್ರೋಹಿ ಕ್ರಮ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದ್ದಾರೆ.

'ಪರಿಶಿಷ್ಟರ 'ನಿಧಿ'ಗೆ ಕಾಂಗ್ರೆಸ್ ಕನ್ನ' ವರದಿಯನ್ನು 'X'ನಲ್ಲಿ ಪೋಸ್ಟ್ ಮಾಡಿರುವ ಅವರು, 'ಈ ಮೂಲಕ ಪರಿಶಿಷ್ಟರ ಕಲ್ಯಾಣ ಕಾರ್ಯಕ್ರಮಗಳಿಗೆ 'ಇತಿಶ್ರೀ' ಹಾಡಲು ಹೊರಟಿದೆ. ಈ ಕ್ರಮವನ್ನು ಬಿಜೆಪಿ ಸಹಿಸುವ ಮಾತೇ ಇಲ್ಲ. ದಲಿತ ಪರ ದನಿ ಎತ್ತಿ ಸದನದ ಒಳಗೆ ಹೊರಗೆ ಹೋರಾಡುವ ಸಂಕಲ್ಪ ತೊಟ್ಟಿದ್ದೇವೆ' ಎಂದೂ ಹೇಳಿದ್ದಾರೆ.

ವಿಧಾನಮಂಡಲ ಕದನಕ್ಕೆ ಕಣ ಸಜ್ಜು

ಒಂದನೇ ಪುಟದಿಂದ...

ಈ ಪ್ರಕರಣ ಆರಂಭದ ದಿನದಿಂದಲೇ ವಿಧಾನಮಂಡಲದಲ್ಲಿ ಸದ್ದು ಮಾಡುವ ಸಾಧ್ಯತೆ ಇದೆ. ಹಗರಣದ ಹಣ ಲೋಕಸಭಾ ಚುನಾವಣೆಗೆ ಬಳಕೆಯಾಗಿದೆ ಎಂಬ ಆರೋಪವನ್ನೇ ಮುಂದಿಟ್ಟುಕೊಂಡು ಆಡಳಿತ ಪಕ್ಷವನ್ನು ಮುಜುಗರಕ್ಕೆ ಸಿಲುಕಿಸಲು ಬಿಜೆಪಿ, ಜೆಡಿಎಸ್ ವಿಧಾನಮಂಡಲದೊಳಗೆ ಹೋರಾಟಕ್ಕೆ ಸಜ್ಜಾಗಿವೆ.

ಹಗರಣದ ಕಾರಣಕ್ಕಾಗಿ ಸಚಿವ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದ ಶಾಸಕ ಬಿ.ನಾಗೇಂದ್ರ ಅವರನ್ನು ಜಾರಿ ನಿರ್ದೇಶನಾಲಯ (ಇ.ಡಿ) ಶುಕ್ರವಾರ ವಶ್ಕೆಬಂಧಿಸಿದೆ. ನಿಗಮದ ಅಧ್ಯಕ್ಷರೂ ಆಗಿರುವ ಕಾಂಗ್ರೆಸ್ ಶಾಸಕ ಬಸನಗೌಡ ದದ್ದಲ್ ತಲೆಮರೆಸಿಕೊಂಡಿದ್ದಾರೆ. ಅಧಿವೇಶನದ ಸನಿಹದಲ್ಲೇ ನಡೆದಿರುವ ಈ ಬೆಳವಣಿಗೆಗಳ ಕುರಿತು ನಿಲುವಳಿ ಸೂಚನೆ ಮಂಡನೆಗೆ ವಿರೋಧ ಪಕ್ಷಗಳು ಅವಕಾಶ ಕೋರುವ ಸಾಧ್ಯತೆ ಇದೆ.

ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣದ ವಿಷಯದಲ್ಲಿ ಬಿಜೆಪಿ, ಜೆಡಿಎಸ್ ಅಧಿಕಾರದಲ್ಲಿದ್ದಾಗ ನಡೆದಿದ್ದ ಇಂತಹ ಪ್ರಕರಣಗಳನ್ನು ಪ್ರಸ್ತಾಪಿಸಿ ತಿರುಗೇಟು ನೀಡಲು ಸರ್ಕಾರ ಸಿದ್ಧತೆ ನಡೆಸಿದೆ. ಇದಕ್ಕಾಗಿ ಕೆಲವು ನಿಗಮ, ಮಂಡಳಿಗಳಲ್ಲಿ ಹಾಗೂ ಇಲಾಖೆಗಳಲ್ಲಿ ನಡೆದಿದ್ದ ಇಂತಹದ್ದೇ ಹಗರಣಗಳ ದಾಖಲೆ ಸಂಗ್ರಹಕ್ಕೆ ಸೂಚನೆ ನೀಡಿದೆ.

ಸಿ.ಎಂ ವಿರುದ್ಧವೇ ದಾಳ: ಸಿದ್ದರಾಮಯ್ಯ ಅವರ ಕುಟುಂಬದ ವಿರುದ್ಧದ ಭೂ ಹಗರಣದ ಆರೋಪವು ವಿರೋಧ ಪಕ್ಷಗಳ ಕೈಯನ್ನು ಬಲಪಡಿಸಿದಂತಿದೆ. ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಅವರಿಗೆ ಮುಡಾದಲ್ಲಿ ಪರಿಹಾರ ರೂಪದಲ್ಲಿ 14 ನಿವೇಶನಗಳನ್ನು ಹಂಚಿಕೆ ಮಾಡಿರುವುದರಲ್ಲಿ ಅಕ್ರಮ ನಡೆದಿದೆ ಎಂಬ ಆರೋಪವನ್ನು ಪ್ರಬಲವಾದ ದಾಳವಾಗಿ ವಿರೋಧ ಪಕ್ಷಗಳು ಬಳಸಿಕೊಳ್ಳುವುದರಲ್ಲಿ ಅನುಮಾನವಿಲ್ಲ. ಸಿದ್ದರಾಮಯ್ಯ ಈ ಬಾರಿ ನೇರವಾಗಿ ಭೂಹಗರಣದ ಆರೋಪಕ್ಕೆ ಸಿಲುಕಿದ್ದಾರೆ. ಅಧಿಸೂಚನೆಯಿಂದ ಕೈಬಿಟ್ಟ ಜಮೀನನ್ನು ಮುಖ್ಯಮಂತ್ರಿ ಕುಟುಂಬದವರೇ ಖರೀದಿಸಿ, ಪುನಃ ಮುಡಾಕ್ಕೆ ನೀಡಿ ಪರಿಹಾರ ಪಡೆದ ನೇರ ಆರೋಪ ಇರುವುದರಿಂದ ಸರ್ಕಾರ ಈ ವಿಚಾರದಲ್ಲಿ ಇಕ್ಕಟ್ಟಿಗೆ ಸಿಲುಕುವ ಸಾಧ್ಯತೆಗಳಿವೆ. ವಿರೋಧ ಪಕ್ಷಗಳ ವಾಗ್ಬಾಣವನ್ನು ತುಂಡರಿಸಲು ಮುಡಾದಲ್ಲಿ ನಡೆದ ಇತರೆ ಅಕ್ರಮಗಳನ್ನು ಗುರಾಣಿಯಾಗಿ ಬಳಸಲು ಸರ್ಕಾರ ಸಿದ್ಧತೆ ನಡೆಸಿದೆ. 'ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡರ ಕುಟುಂಬಕ್ಕೆ ಮುಡಾದಲ್ಲಿ 48 ನಿವೇಶನ ಹಂಚಿಕೆಯಾಗಿದೆ' ಎಂಬ ಕೆಪಿಸಿಸಿ ಮಾಧ್ಯಮ ವಿಭಾಗದ ಮುಖ್ಯಸ್ಥ ರಮೇಶ್ ಬಾಬು ಅವರ ಹೇಳಿಕೆ ಈ ಕಾರ್ಯತಂತ್ರದ ಭಾಗವಾಗಿ ಇದ್ದಂತಿದೆ.

ವಿರೋಧ ಪಕ್ಷಗಳಲ್ಲಿ ಒಗ್ಗಟ್ಟು

ಒಂದನೇ ಪುಟದಿಂದ...

ಅಶೋಕ ನೇತೃತ್ವದಲ್ಲೇ ಜಂಟಿ ಹೋರಾಟ ನಡೆಯಲಿದೆ ಎಂದು ಎಚ್. ಡಿ.ಕುಮಾರಸ್ವಾಮಿ ಹೇಳಿದ್ದಾರೆ. ಬಸವರಾಜ ಬೊಮ್ಮಾಯಿ, ಎಚ್.ಡಿ. ಕುಮಾರಸ್ವಾಮಿ, ಕೋಟ ಶ್ರೀನಿವಾಸಪೂಜಾರಿ ಸಂಸದರಾಗಿರುವುದರಿಂದ ವಿರೋಧ ಪಕ್ಷಗಳಿಗೆ ಸಂಸದೀಯ ಪಟುಗಳ ಕೊರತೆಯೂ ಕಾಡಲಿದೆ. ವಿಧಾನ-ಪರಿಷತ್‌ನಲ್ಲಿ ವಿರೋಧ ಪಕ್ಷದ ನಾಯಕನ ಹುದ್ದೆ ಖಾಲಿ ಉಳಿದಿದ್ದು, ಈ ಬಗ್ಗೆ ಬಿಜೆಪಿ ವರಿಷ್ಠರು ಇನ್ನೂ ಆಯ್ಕೆ ಅಂತಿಮಗೊಳಿಸಿಲ್ಲ. ವಿರೋಧ ಪಕ್ಷದ ನಾಯಕ ಮತ್ತು ಉಪ ನಾಯಕನಿಲ್ಲದೇ ಕಲಾಪ ನಡೆಯುವ ಸಾಧ್ಯತೆ ಇದೆ.

ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿರುತ್ತದೆ)

ರವರಕಛೇರಿ, ಅಧೀಕ್ಷಅಭಿಯಂತರರು(ವಿ), ಕಾರ್ಯ ಮತ್ತು ಪಾಲನೆ ವೃತ್ತ, ಗು.ವಿ.ಸ.ಕಂ.ನಿ., ಕೊಪ್ಪಳ–583231

ದೂರವಾಣಿ ಸಂಖ್ಯೆ: (08539) 200033/23 Email: seemrbgescom@gmail.com

ನೊಂದಣಿ ಕಛೇರಿ, ಗುವಿಸಕಂನಿ, ಮುಖ್ಯರಸ್ತೆ, ಕಲಬುರಗಿ 585102

CIN: U4010KA2002SGC030436 Website:gescom.in

ಸಂಖ್ಯೆ: ಅಇಂ(ವಿ)/ಕಾನಿಅ(ವಿ)/ಸಕಾನಿಅ(ತಾ)–2/ಕೊ/ಕ–68/2024–25/1685 ದಿನಾಂಕ:12.07.2024

ಟೆಂಡರ್ ಪ್ರಕಟಣೆ

(ಇ–ಪ್ರೋಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಮಾತ್ರ)

1. 33/11ಕೆ.ವಿ ಉಪ–ಕೇಂದ್ರಗಳು : ಅಧೀಕ್ಷಕ ಅಭಿಯಂತರರು (ವಿ), ಕಾ ಮತ್ತು ಪಾ ವೃತ್ತ, ಜೆಸ್ಕಾಂ, ಕೊಪ್ಪಳ, ನಿರ್ಮಾಣ ಮತ್ತು ನಿರ್ವಹಣೆ ಕೊಪ್ಪಳ ವಿಭಾಗದ ವ್ಯಾಪ್ತಿಯಲ್ಲಿ ಅಸ್ತಿತ್ವದಲ್ಲಿರುವ 33/11ಕೆ.ವಿ. ವಿದ್ಯುತ್ ವಿತರಣಾ ಕೇಂದ್ರಗಳಿಗೆ ಪಾಳೆ ಮತ್ತು ನಿರ್ವಹಣೆಯ ಸಣ್ಣ ಪುಟ್ಟ ಕೆಲಸಗಳಿಗಾಗಿ ಒಂದು ವರ್ಷಕ್ಕೆ ಇ–ಪ್ರೋಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ ಸಂ	ವಿಭಾಗ	ನಿ&ನಿ ವಿಭಾಗ	ತಾಲ್ಲೂಕ	33/11ಕೆ.ವಿ. ವಿದ್ಯುತ್ ವಿತರಣಾ ಕೇಂದ್ರಗಳ ಹೆಸರು	ಶಿಫ್ಟ್ ಆಪರೇಟರ್ಸ್ ಪ್ರತಿ ವಿತರಣಾ ಕೇಂದ್ರಕ್ಕೆ (ಸಂಖ್ಯೆಗಳಲ್ಲಿ)	ಶಿಫ್ಟ್ ಹೇಲ್ಪರ್ಸ್ ಪ್ರತಿ ವಿತರಣಾ ಕೇಂದ್ರಕ್ಕೆ (ಸಂಖ್ಯೆಗಳಲ್ಲಿ)	ಟೆಂಡರ್ ಮೊತ್ತ ಪ್ರತಿ ವಿದ್ಯುತ್ ವಿರತಣ ಕೇಂದ್ರಕ್ಕೆ (ಲಕ್ಷಗಳಲ್ಲಿ)	ಒಂದು ವಿದ್ಯುತ್ ವಿತರಣ ಕೇಂದ್ರಕ್ಕೆ ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ)
1	ಕೊಪ್ಪಳ	ಕೊಪ್ಪಳ	ಯಲಬುರ್ಗಾ	ಬಂಡಿ	4	4	21.97	50000.00
2	ಗಂಗಾವತಿ	ಕೊಪ್ಪಳ	ಕುಷ್ಟಗಿ	ಚಳಿಗೇರಾ	4	4	21.97	50000.00
3	ಕೊಪ್ಪಳ	ಕೊಪ್ಪಳ	ಯಲಬುರ್ಗಾ	ಹೆಚ್ ವಿ ಕುಂಟ	1	4	13.20	33100.00
4	ಕೊಪ್ಪಳ	ಕೊಪ್ಪಳ	ಕೊಪ್ಪಳ	ಕಂಪಸಾಗರ	4	4	21.97	50000.00
5	ಕೊಪ್ಪಳ	ಕೊಪ್ಪಳ	ಕೊಪ್ಪಳ	ಕುಕನಪಲ್ಲಿ	3	4	19.05	47625.00
6	ಗಂಗಾವತಿ	ಕೊಪ್ಪಳ	ಕುಷ್ಟಗಿ	ದೋಟಿಹಾಳ	4	4	21.97	50000.00
7	ಕೊಪ್ಪಳ	ಕೊಪ್ಪಳ	ಕೊಪ್ಪಳ	ಹಿರೇಬೊಮ್ಮನಾಳ	4	4	21.97	50000.00
8	ಕೊಪ್ಪಳ	ಕೊಪ್ಪಳ	ಯಲಬುರ್ಗಾ	ಹಿರೇಮ್ಯಾಗೇರಿ	2	4	16.13	40320.00
9	ಕೊಪ್ಪಳ	ಕೊಪ್ಪಳ	ಕೊಪ್ಪಳ	ಅಳವಂಡಿ	3	4	19.05	47625.00
10	ಕೊಪ್ಪಳ	ಕೊಪ್ಪಳ	ಕುಷ್ಟಗಿ	ತಾವರಗೇರಾ	2	4	16.13	40320.00
11	ಗಂಗಾವತಿ	ಕೊಪ್ಪಳ	ಗಂಗಾವತಿ	ಲಿಂಗದಳ್ಳಿ	4	4	21.97	50000.00
12	ಕೊಪ್ಪಳ	ಕೊಪ್ಪಳ	ಕೊಪ್ಪಳ	ಕಿನ್ನಾಳ	0	4	10.28	25710.00
13	ಕೊಪ್ಪಳ	ಕೊಪ್ಪಳ	ಕನಕಗಿರಿ	ಮುಸ್ಲಾಪುರ	4	4	21.97	50000.00
14	ಗಂಗಾವತಿ	ಕೊಪ್ಪಳ	ಕುಷ್ಟಗಿ	ಬಂಡ್ರಗಲ್	4	4	21.97	50000.00

2.ಗೃಹ ರಕ್ಷಕರು.

ಕ್ರ ಸಂ	ವಿಭಾಗ	ಕೆಲಸದ ವಿವರ	ಗೃಹ ರಕ್ಷಕರ ಒಟ್ಟು ಸಂಖ್ಯೆ	ಟೆಂಡರ್ ಮೊತ್ತ ಪ್ರತಿ ವಿದ್ಯುತ್ ವಿರತಣ ಕೇಂದ್ರಕ್ಕೆ (ಲಕ್ಷಗಳಲ್ಲಿ)	ಒಂದು ವಿದ್ಯುತ್ ವಿತರಣ ಕೇಂದ್ರಕ್ಕೆ ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ)
1	ಕೊಪ್ಪಳ	ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿಯ ಕೊಪ್ಪಳ ವೃತ್ತ ಕಛೇರಿಗೆ ಒಳಪಡುವ ಕೊಪ್ಪಳ ವಿಭಾಗ ಕಛೇರಿ, ಕೊಪ್ಪಳ/ಮುನಿರಾಬಾದ್/ ಯಲಬುರ್ಗಾ ಉಪ–ವಿಭಾಗ ಹಾಗೂ ಕುಕನೂರು ಶಾಖಾ ಕಛೇರಿಗಳಿಗೆ ಬೇಕಾಗಿರುವ ಗೃಹ ರಕ್ಷಕರು ಪ್ರತಿ ದಿನದ ಕಛೇರಿ ಕೆಲಸಕ್ಕಾಗಿ ಹೊರಗಿನ ಅರ್ಹ ಏಜೆನ್ಸಿಗಳಿಂದ ಸೇವೆಯನ್ನು ಪಡೆಯಲು ಈ ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಕರೆಯಲಾಗಿದೆ	15	39.08	78,160.00
2	ಗಂಗಾವತಿ	ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿಯ ಕೊಪ್ಪಳ ವೃತ್ತ ಕಛೇರಿಗೆ ಒಳಪಡುವ ಗಂಗಾವತಿ ವಿಭಾಗ ಕಛೇರಿ, ಗಂಗಾವತಿ/ ಕಾರಟಗಿ/ಕುಷ್ಟಗಿ ಉಪ–ವಿಭಾಗ ಹಾಗೂ ಹನುಮಸಾಗರ ಶಾಖಾ ಕಛೇರಿಗಳಿಗೆ ಬೇಕಾಗಿರುವ ಗೃಹ ರಕ್ಷಕರು ಪ್ರತಿ ದಿನದ ಕಛೇರಿ ಕೆಲಸಕ್ಕಾಗಿ ಹೊರಗಿನ ಅರ್ಹ ಏಜೆನ್ಸಿಗಳಿಂದ ಸೇವೆಯನ್ನು ಪಡೆಯಲು ಈ ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಕರೆಯಲಾಗಿದೆ	18	47.53	95,100.00

ಹೆಚ್ಚಿನ ವಿವರಗಳಿಗಾಗಿ https://kppp.karnataka.gov.in ಅಂತರ್ಜಾಲದಲ್ಲಿ ದಿನಾಂಕ:15.07.2024 ರಂದು ಅಥವಾ ನಂತರ ದಿನಗಳಲ್ಲಿ ಟೆಂಡರ್ ವಿವರ ಪಡೆಯಬಹುದು. ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ:01.08.2024 ಸಮಯ: 05:00PM.

ಹೆಚ್ಚಿನ ಮಾಹಿತಿಗಾಗಿ ಅಧೀಕ್ಷಕ ಅಭಿಯಂತರರು(ವಿ)., ಕಾರ್ಯ ಮತ್ತು ಪಾಲನೆ ವೃತ್ತ ಕಚೇರಿ, ಜೆಸ್ಕಾಂ ಕೊಪ್ಪಳ ರವರ ಕಛೇರಿ ದೂರವಾಣಿ ಸಂಖ್ಯೆ: 08539–200023/08539–200033 ಅಥವಾ 9483043701 ಕ್ಕೆ ದೂರವಾಣಿ ಮುಖಾಂತರ ಕಛೇರಿ ಅವಧಿಯಲ್ಲಿ ಸಂಪರ್ಕಿಸಿ ಮಾಹಿತಿ ಪಡೆಯಬಹುದು. ಈ ಪ್ರೊಕ್ಯೂರ್‌ಮೆಂಟ್ ಸಹಾಯಕ್ಕಾಗಿ ದೂರವಾಣಿ ಸಂಖ್ಯೆ: 080–22371090/080–22340948.

ಸಹಿ/– ಅಧೀಕ್ಷಕ ಅಭಿಯಂತರರು, (ವಿ)
ಕಾ &ಪಾ ವೃತ್ತ, ಜೆಸ್ಕಾಂ, ಕೊಪ್ಪಳ

ವಾ.ಸಾ.ಇ/ಕೊಪ್ಪಳ/166/ದೇಶಪಾಂಡೆಪಬ್ಲಿಸಿಟಿ/2024–25

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

❦ ಸುಭಾಷಿತ ❦

ಓದಿ ಮರುಳಾಗಬಾರದು; ಓದದೆಯೂ ಮರುಳಾಗಬಾರದು. ಓದಿ ಹುರುಳಾಗಬೇಕು.

–ವಿ.ಕೃ. ಗೋಕಾಕ

ಬಿಪಿಎಲ್ ಪಡಿತರ ಚೀಟಿ: ಅಕ್ರಮ ನಿಯಂತ್ರಣಕ್ಕೆ ಬಿಗಿ ಕ್ರಮ ಅಗತ್ಯ

ರಾಜ್ಯದಲ್ಲಿ 1.47 ಕೋಟಿ ಕುಟುಂಬಗಳು ಆದ್ಯತಾ ವಲಯದ (ಬಡತನ ರೇಖೆಗಿಂತ ಕೆಳಗಿರುವ-ಬಿಪಿಎಲ್) ಕುಟುಂಬಗಳ ಪಡಿತರ ಚೀಟಿ ಹೊಂದಿದ್ದು, 4.67 ಕೋಟಿ ಜನ ಈ ವ್ಯಾಪ್ತಿಯಲ್ಲಿದ್ದಾರೆ. ರಾಜ್ಯದ ಶೇಕಡ 80ರಷ್ಟು ಜನ ಬಿಪಿಎಲ್ ಪಡಿತರ ಚೀಟಿ ಹೊಂದಿದ್ದಾರೆ. ಆದರೆ, ನೀತಿ ಆಯೋಗದ ಇತ್ತೀಚಿನ ವರದಿ ಪ್ರಕಾರ, ರಾಜ್ಯದಲ್ಲಿ ಬಡತನದ ಪ್ರಮಾಣ ಅತ್ಯಂತ ವೇಗವಾಗಿ ತಗ್ಗುತ್ತಿದೆ. ಸದ್ಯ ರಾಜ್ಯದಲ್ಲಿ ಶೇ 5.67ರಷ್ಟು ಜನ ಮಾತ್ರ ಬಡವರಾಗಿದ್ದಾರೆ. ನೀತಿ ಆಯೋಗದ ಅಂದಾಜಿಗೆ ವಿರುದ್ಧವಾಗಿ ರಾಜ್ಯದಲ್ಲಿ ಬಿಪಿಎಲ್ ಪಡಿತರ ಚೀಟಿ ಹೊಂದುತ್ತಿರುವ ಕುಟುಂಬಗಳ ಸಂಖ್ಯೆ ಏರುಗತಿಯಲ್ಲಿದೆ. ಈಗಲೂ ಬಿಪಿಎಲ್ ಪಡಿತರ ಚೀಟಿ ಕೋರಿ ಸಲ್ಲಿಕೆಯಾಗಿರುವ ಮೂರು ಲಕ್ಷಕ್ಕೂ ಹೆಚ್ಚು ಅರ್ಜಿಗಳು ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆಯಲ್ಲಿ ವಿಲೇವಾರಿಗೆ ಬಾಕಿ ಇವೆ. ರಾಜ್ಯದಲ್ಲಿ ಬಡವರ ಸಂಖ್ಯೆಯಲ್ಲಿ ಗಣನೀಯ ಪ್ರಮಾಣದಲ್ಲಿ ಇಳಿಕೆಯಾಗಿದೆ ಎಂಬ ವರದಿಗಳು ಬಂದಿರುವಾಗಲೇ ಬಿಪಿಎಲ್ ಪಡಿತರ ಚೀಟಿಗಳ ಸಂಖ್ಯೆಯಲ್ಲಿ ಅಗಾಧವಾದ ಏರಿಕೆಯಾಗುತ್ತಿರುವ ವೈರುಧ್ಯದ ಹಿಂದೆ ಗಂಭೀರವಾದ ಸಮಸ್ಯೆಗಳಿರುವುದು ಗೋಚರಿಸುತ್ತಿದೆ. ಬಹುತೇಕ ಫಲಾನುಭವಿಗಳು ಸರ್ಕಾರಿ ಯೋಜನೆಗಳ ಅನುಕೂಲ ಪಡೆಯುವ ಉದ್ದೇಶದಿಂದ ತಮ್ಮ ಆದಾಯದ ನೈಜ ಮಾಹಿತಿಯನ್ನು ಮುಚ್ಚಿಟ್ಟು, ಬಿಪಿಎಲ್ ಪಡಿತರ ಚೀಟಿಗಳನ್ನು ಪಡೆದಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹಿರಿಯ ಅಧಿಕಾರಿಗಳ ಸಭೆಯಲ್ಲಿ ಹೇಳಿದ್ದಾರೆ. ಬಡವರಿಗೆ ಆರ್ಥಿಕವಾಗಿ ಶಕ್ತಿ ತುಂಬುವ ಮತ್ತು ಆರ್ಥಿಕ ಪ್ರಗತಿಯಲ್ಲಿ ಅವರನ್ನೂ ಒಳಗೊಳ್ಳುವ ಉದ್ದೇಶದಿಂದ ಬಿಪಿಎಲ್ ಪಡಿತರ ಚೀಟಿಗಳನ್ನು ವಿತರಿಸಲಾಗುತ್ತಿದೆ. ಆಹಾರ ಧಾನ್ಯಗಳು, ಆರೋಗ್ಯ, ಶಿಕ್ಷಣ, ವಸತಿ ಮತ್ತು ಉದ್ಯೋಗದಂತಹ ಕನಿಷ್ಠ ಅಗತ್ಯಗಳನ್ನು ಬಡವರಿಗೆ ಒದಗಿಸಲು ಫಲಾನುಭವಿಗಳ ಆಯ್ಕೆಯಲ್ಲಿ ಬಿಪಿಎಲ್ ಪಡಿತರ ಚೀಟಿಯನ್ನೇ ಮಾನದಂಡವಾಗಿ ಪರಿಗಣಿಸಲಾಗುತ್ತಿದೆ. ರಾಜ್ಯ ಸರ್ಕಾರದ ಐದು ಗ್ಯಾರಂಟಿ ಯೋಜನೆಗಳ ಪೈಕಿ ಅನ್ನಭಾಗ್ಯ ಮತ್ತು ಗೃಹಲಕ್ಷ್ಮಿ ಯೋಜನೆಗಳ ಅನುಷ್ಠಾನಕ್ಕೆ ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ ಬಳಿ ಇರುವ ಪಡಿತರ ಚೀಟಿದಾರರ ಮಾಹಿತಿಯ ದತ್ತಾಂಶವನ್ನೇ ಬಳಸಲಾಗುತ್ತಿದೆ.

ಅನರ್ಹರು ಪಡೆದಿರುವ ಬಿಪಿಎಲ್ ಪಡಿತರ ಚೀಟಿ ರದ್ದುಗೊಳಿಸುವ ಪ್ರಯತ್ನ ಹಲವು ಬಾರಿ ನಡೆದಿದ್ದರೂ ಪೂರ್ತಿ ಯಶಸ್ಸು ಸಿಕ್ಕಿಲ್ಲ

ವಾರ್ಷಿಕ ಆದಾಯ, ಭೂ ಒಡೆತನ ಸೇರಿದಂತೆ ಕೆಲವು ಮಾನದಂಡಗಳ ಆಧಾರದಲ್ಲಿ ಕಂದಾಯ ಇಲಾಖೆಯು ನೀಡುವ ಆದಾಯ ಪ್ರಮಾಣಪತ್ರ ಆಧರಿಸಿ ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆಯು ಪಡಿತರ ಚೀಟಿಗಳನ್ನು ವಿತರಿಸುತ್ತದೆ. ಈ ಪ್ರಕ್ರಿಯೆಯಲ್ಲಿ ಕಂದಾಯ ಇಲಾಖೆಯ ಹೊಣೆಗಾರಿಕೆಯೇ ಹೆಚ್ಚು. ರಾಜಕೀಯ ಹಸ್ತಕ್ಷೇಪ, ಭ್ರಷ್ಟಾಚಾರ, ನಕಲಿ ದಾಖಲೆಗಳ ಸೃಷ್ಟಿಯೂ ಸೇರಿದಂತೆ ಹಲವು ಕಾರಣಗಳು ರಾಜ್ಯದಲ್ಲಿ ಅನರ್ಹರು ಬಿಪಿಎಲ್ ಪಡಿತರ ಚೀಟಿಗಳನ್ನು ಪಡೆಯುತ್ತಿರುವುದು ಹೆಚ್ಚಲು ಕಾರಣ ಎಂಬುದು ನಿರ್ವಿವಾದ. ಇದಕ್ಕೆ ರಾಜ್ಯದಲ್ಲಿ ಆಡಳಿತದ ಚುಕ್ಕಾಣಿ ಹಿಡಿದಿದ್ದ ಎಲ್ಲ ರಾಜಕೀಯ ಪಕ್ಷಗಳೂ ಕಾರಣ. ಅನರ್ಹ ಕುಟುಂಬಗಳು ಪಡೆದಿರುವ ಬಿಪಿಎಲ್ ಪಡಿತರ ಚೀಟಿಗಳನ್ನು ರದ್ದುಗೊಳಿಸುವ ಪ್ರಯತ್ನ ಹಲವು ಬಾರಿ ನಡೆದಿದೆ. ಆದರೆ, ಅದರಲ್ಲಿ ಸರ್ಕಾರವು ಯಶಸ್ಸು ಸಾಧಿಸಿದ ಉದಾಹರಣೆ ಕಡಿಮೆ. 2023ರಲ್ಲಿ 4.6 ಲಕ್ಷ ಬಿಪಿಎಲ್ ಪಡಿತರ ಚೀಟಿಗಳನ್ನು ರದ್ದುಗೊಳಿಸಿದ್ದು, ₹ 13.5 ಕೋಟಿ ದಂಡ ವಸೂಲಿ ಮಾಡಲಾಗಿತ್ತು. ಅಕ್ರಮವಾಗಿ ಬಿಪಿಎಲ್ ಪಡಿತರ ಚೀಟಿ ಪಡೆದವರಲ್ಲಿ ಬಹುತೇಕ ಮಂದಿ ಸರ್ಕಾರಿ ನೌಕರರೇ ಆಗಿದ್ದರು. ಐಷಾರಾಮಿ ಕಾರುಗಳನ್ನು ಹೊಂದಿದ್ದು, ಹೆಚ್ಚು ವರಮಾನ ಇರುವ ಕಾರಣಕ್ಕಾಗಿ ಆದಾಯ ತೆರಿಗೆ ಪಾವತಿಸುತ್ತಿರುವ ಸಾವಿರಾರು ಮಂದಿಯೂ ಅಕ್ರಮವಾಗಿ ಬಿಪಿಎಲ್ ಪಡಿತರ ಚೀಟಿಗಳನ್ನು ಪಡೆದಿರುವುದು ಪತ್ತೆಯಾಗಿತ್ತು. ಅನರ್ಹ ಕುಟುಂಬಗಳು ಪಡೆದಿರುವ ಬಿಪಿಎಲ್ ಪಡಿತರ ಚೀಟಿಗಳನ್ನು ರದ್ದುಗೊಳಿಸುವ ಪ್ರಕ್ರಿಯೆ ಇನ್ನೂ ಅಪೂರ್ಣ ಸ್ಥಿತಿಯಲ್ಲೇ ಉಳಿದಿದೆ.

ಹಲವು ಯೋಜನೆಗಳ ಲಾಭವನ್ನು ಹೆಚ್ಚಾಗಿ ಅನರ್ಹ ಫಲಾನುಭವಿಗಳೇ ಕಬಳಿಸುತ್ತಿದ್ದಾರೆ. ಪರಿಣಾಮವಾಗಿ ನೈಜ ಫಲಾನುಭವಿಗಳಾಗಬೇಕಿದ್ದವರು, ಬಡವರು, ಸಮಾಜದ ಕೆಳಸ್ತರದಲ್ಲಿರುವವರು ಮೂಲೆಗುಂಪಾಗುತ್ತಿದ್ದು, ಹೆಚ್ಚಿನ ಸೌಲಭ್ಯಗಳು ಅವರನ್ನು ತಲುಪುತ್ತಿಲ್ಲ. ಅನರ್ಹರು ಪಡೆದಿರುವ ಬಿಪಿಎಲ್ ಪಡಿತರ ಚೀಟಿಗಳನ್ನು ಎರಡು ವಾರಗಳೊಳಗೆ ಹಿಂತಿರುಗಿಸಬೇಕು ಅಥವಾ ದಂಡ ಪಾವತಿಸಬೇಕು ಎಂಬ ಎಚ್ಚರಿಕೆಯನ್ನು ನೀಡುವಂತೆ ಸುಪ್ರೀಂ ಕೋರ್ಟ್ 2010ರಲ್ಲಿ ರಾಜ್ಯ ಸರ್ಕಾರಗಳಿಗೆ ನಿರ್ದೇಶನ ನೀಡಿತ್ತು. ಆ ನಿರ್ದೇಶನವು ಕಾಗದದ ಮೇಲೆಯೇ ಉಳಿದಿದೆ. ಅನರ್ಹ ಕುಟುಂಬಗಳು ಬಿಪಿಎಲ್ ಪಡಿತರ ಚೀಟಿ ಪಡೆದು ಸರ್ಕಾರದ ವಿವಿಧ ಯೋಜನೆಗಳ ಸೌಲಭ್ಯಗಳನ್ನು ಕಬಳಿಸುತ್ತಿರುವುದು ರಾಜ್ಯ ಸರ್ಕಾರದ ಆರ್ಥಿಕ ವ್ಯವಸ್ಥೆಗೆ ದೊಡ್ಡ ಸವಾಲು ಕೂಡ ಆಗಿದೆ. ಗ್ಯಾರಂಟಿ ಯೋಜನೆಗಳ ಆರ್ಥಿಕ ಹೊರೆ ಹೆಚ್ಚುವುದಕ್ಕೂ ಅನರ್ಹ ಬಿಪಿಎಲ್ ಪಡಿತರ ಚೀಟಿಗಳ ಪಾಲು ದೊಡ್ಡದಿದೆ. ಅನರ್ಹ ಪಡಿತರ ಚೀಟಿಗಳನ್ನು ಪತ್ತೆಹಚ್ಚಿ, ರದ್ದುಗೊಳಿಸುವ ಪ್ರಕ್ರಿಯೆ ನಿರಂತರವಾಗಿ ನಡೆಯುತ್ತಿರಬೇಕು. ಅಕ್ರಮವಾಗಿ ಬಿಪಿಎಲ್ ಪಡಿತರ ಚೀಟಿ ಪಡೆಯುವವರು ಮತ್ತು ಅವುಗಳನ್ನು ವಿತರಿಸುವ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮಕ್ಕೆ ಅವಕಾಶ ಕಲ್ಪಿಸುವ ಕಾನೂನು ರೂಪಿಸದಿದ್ದರೆ ಈ ಸಮಸ್ಯೆಯನ್ನು ಶಾಶ್ವತವಾಗಿ ಕೊನೆಗೊಳಿಸಲು ಸಾಧ್ಯವಿಲ್ಲ. ಕಾನೂನು ರೂಪಿಸುವ ದಿಸೆಯಲ್ಲಿ ಸರ್ಕಾರ ದೃಢವಾದ ಹೆಜ್ಜೆ ಇರಿಸಬೇಕಿದೆ.

ವಿಶ್ವವಿದ್ಯಾಲಯಗಳು ಅಹಂಗಳ ಆಟದ ಮೈದಾನಗಳಾದಾಗ ಸೃಷ್ಟಿಶೀಲತೆ ಬತ್ತುತ್ತದೆ

ಜ್ಞಾನವೆಂಬ ದೀಪದ ಕೆಳಗಿನ ಕತ್ತಲೆ

ವಿಶ್ಲೇಷಣೆ

ಗೀತಾ ವಸಂತ

ಶಿಕ್ಷಣವು ಏಕಕಾಲಕ್ಕೆ ನಮ್ಮನ್ನು ದೇಶಕಾಲ ಬದ್ಧ ನಾಗರಿಕರನ್ನಾಗಿಯೂ ವ್ಯಕ್ತಿತ್ವದ ಅನಂತ ಸಾಧ್ಯತೆಗಳನ್ನು ಸಾಕ್ಷಾತ್ಕರಿಸಿಕೊಳ್ಳಬಲ್ಲ ವಿಶ್ವಮಾನವರನ್ನಾಗಿಯೂ ವಿಕಾಸಗೊಳಿಸಬೇಕಾದ ಸಾಧನ ಹಾಗೂ ಸಾಧ್ಯತೆ. ಜ್ಞಾನವೆಂಬುದು ಕನ್ನಡಿಯೊಳಗಿನ ಗಂಟಲ್ಲ, ಅದು ಒಳಗಿಳಿದು ನಮ್ಮನ್ನು ಕಿಂಚಿತ್ತಾದರೂ ಪರಿವರ್ತಿಸದಿದ್ದರೆ ಆ ಜಡ ಜ್ಞಾನಕ್ಕೆ ಅರ್ಥವೂ ಇಲ್ಲ. ಹಾಗೆ ಪರಿವರ್ತಿಸುವ ಪ್ರಕ್ರಿಯೆಯು ಶಿಕ್ಷಕರನ್ನೂ ವಿದ್ಯಾರ್ಥಿಗಳನ್ನೂ ಒಳಗೊಳ್ಳುತ್ತದೆ.

ಜ್ಞಾನದ ಅಧಿಕೃತತೆಗೆ ಧಕ್ಕೆಯಾಗದಂತೆ ಪಠ್ಯವನ್ನು ಸೃಜನಶೀಲಗೊಳಿಸುವುದು ಹಾಗೂ ಮಾನವೀಯಗೊಳಿಸುವುದು ಅಧ್ಯಾಪಕರ ಸತ್ವವನ್ನು ಅವಲಂಬಿಸಿದೆ. ಹಾಗೆಯೇ ಕಲಿಕೆಯನ್ನು ಒಂದು ಧ್ಯಾನದಂತೆ ತೀವ್ರವಾಗಿ ಪರಿಭಾವಿಸುವುದು ವಿದ್ಯಾರ್ಥಿಗಳ ಅರಿವಿನ ಹಂಬಲವನ್ನೂ ಬೇಡುತ್ತದೆ. ಹೀಗೆ ಶಿಕ್ಷಣವು ಜ್ಞಾನ ನಿರ್ಮಾಣ ಹಾಗೂ ಜ್ಞಾನಾರ್ಜನೆ ಈ ಎರಡೂ ಮಗ್ಗುಲುಗಳಲ್ಲಿ ವಿಕಾಸವಾಗುತ್ತಾ, ಎರಡೂ ತುದಿಗಳು ಸೇರಿ ಒಂದು ಪೂರ್ಣವೃತ್ತವಾಗಿ ವಿಕಾಸವಾಗುತ್ತದೆ. ವಿಶ್ವವಿದ್ಯಾಲಯಗಳಲ್ಲಿ ಭಾಷೆ, ಸಾಹಿತ್ಯ ಹಾಗೂ ಮಾನವಿಕ ವಿಭಾಗಗಳು ವ್ಯಕ್ತಿ ಹಾಗೂ ಸಮಾಜದ ನಡುವಿನ ಸಂಕೀರ್ಣ ಸಂಬಂಧಗಳ ವಿನ್ಯಾಸವನ್ನು ಎಳೆಎಳೆಯಾಗಿ ಬಿಡಿಸುತ್ತಾ ಸಾಮಾಜಿಕ ಸ್ವಾಸ್ಥ್ಯವನ್ನೂ ವೈಯಕ್ತಿಕ ಹಾಗೂ ಸಾಮಾಜಿಕ ನೈತಿಕತೆಯ ತುರ್ತನ್ನೂ ಎತ್ತಿ ಹಿಡಿಯುತ್ತವೆ. ಇವನ್ನು ಸಾಧಿಸಲು ಮೊದಲು ಅಧ್ಯಾಪಕರು ಸಿದ್ಧಗೊಂಡಿದ್ದಾರೆಯೇ ಎಂಬ ಪ್ರಶ್ನೆ ಹೆಜ್ಜೆ ಹೆಜ್ಜೆಗೂ ಕಾಡದಿದ್ದರೆ ನಮ್ಮ ಶಿಕ್ಷಣ ವ್ಯವಸ್ಥೆಯು ಕಾಗದದ ಹೂವಾಗಿಯೇ ಉಳಿದುಬಿಡುತ್ತದೆ.

ವಿಶ್ವವಿದ್ಯಾಲಯವೊಂದರ ಅಧ್ಯಾಪಕಿಯಾಗಿ ಸೇರಿದ ಹೊಸದರಲ್ಲಿ ಅಂದಿನ ಪಾಠ ಮುಗಿದ ಮೇಲೆ ವಿದ್ಯಾರ್ಥಿಯೊಬ್ಬ ‘ಮೇಡಂ, ನೀವು ಮುಗ್ಧರಿದ್ದೀರಿ. ನೀವು ಮಾತಾಡುತ್ತಿರುವುದು ಆದರ್ಶವನ್ನು. ಆದರೆ ಅವೆಲ್ಲ ಸತ್ತು ಯಾವ ಕಾಲವಾಯಿತು? ಸಾಮಾಜಿಕ ಬದುಕು ನೀವಂದುಕೊಂಡಂತೆ ಇಲ್ಲ. ಈಗ ನಮ್ಮ ಮುಂದಿರುವ ಬದುಕಿನ ವೈರುಧ್ಯಗಳ ಬಗ್ಗೆ ನಾವು ಮಾತನಾಡಬೇಕಲ್ಲವೇ?’ ಎಂದ. ಅವನು ಪ್ರಶ್ನೆ ಕೇಳುತ್ತಿದ್ದಾನಾ? ನನಗೆ ಪಾಠ ಮಾಡುತ್ತಿದ್ದಾನಾ ಎಂದು ಅರೆಕ್ಷಣ ಗೊಂದಲಗೊಂಡೆ. ಆದರೆ ಅವನ ಈ ವರ್ತನೆ ನನಗಿಷ್ಟವಾಯಿತು. ತನಗನಿಸಿದ್ದನ್ನು ನಿರ್ಭಿಡೆಯಾಗಿ ಹೇಳಲೇಬೇಕೆಂಬ ತುಡಿತ ತುಂಬಿದ ಅವನ ಕಣ್ಣುಗಳು ಮುಂದೆ ತುಂಬ ದಿನ ಕಾಡಿದವು. ನಮ್ಮ ಅರಿವು ಹಾಗೂ ಇರುವಿನ ನಡುವಿನ ಬಿರುಕು ಇಂದಿನದಲ್ಲ. ಅದಕ್ಕೆ ದೀರ್ಘ ಚರಿತ್ರೆಯೇ ಇದೆ. ನೈತಿಕತೆ ಎಂದರೇನು ಎಂಬುದರ ವ್ಯಾಖ್ಯೆಗಳು ನಮಗೆ ಗೊತ್ತಿವೆ; ಆದರೆ ಅವು ನಮ್ಮ ಪ್ರಜ್ಞೆಯೊಳಗಿಲ್ಲ ಎಂಬುದೇ ನಮ್ಮ ಬಹುದೊಡ್ಡ ಬಿಕ್ಕಟ್ಟು.

ಈ ಪ್ರಶ್ನೆಗಳೆಲ್ಲ ಕೃತಕ ಬುದ್ಧಿಮತ್ತೆಯ ಚಾಟ್ ಜಿಪಿಟಿಗಳ ಕಾಲಕ್ಕೆ ತುಂಬ ಪುರಾತನ ಪ್ರಶ್ನೆಗಳಂತೆ ಭಾಸವಾಗಬಹುದು. ಆದರೆ ನಾವಿನ್ನೂ ರಕ್ತಮಾಂಸಗಳುಳ್ಳ, ಭಾವನೆಗಳ ಮಿಡಿತವುಳ್ಳ ಅದೇ ಪುರಾತನ ಮನುಷ್ಯರೇ. ಆದ್ಯತೆಗಳು ಬದಲಾದರೂ ಆದಿಮ ಪ್ರವೃತ್ತಿಗಳು ಬದಲಾಗಿಲ್ಲ. ವಿದ್ಯಾರ್ಥಿಗಳೆಂಬ ಹೀರುಕಾಗದಗಳನ್ನು ನಾವೆಷ್ಟು ಶುಷ್ಕಗೊಳಿಸುತ್ತಿದ್ದೇವೆಂದರೆ ಅದಕ್ಕಿಂತ ದೊಡ್ಡ ಕ್ರೌರ್ಯ ಇನ್ನೊಂದಿಲ್ಲ. ಅಪರಾಧಿ ಭಾವವೇ ಇಲ್ಲದ ದೊಡ್ಡ ಗಂಟಲಿನ ಧೂರ್ತ ವ್ಯಕ್ತಿತ್ವಗಳ ವಿಜೃಂಭಣೆಯ ಕಾಲವಿದು. ಸಮಾಜದ ಮೌಲ್ಯಗಳು ಕುಸಿದಿವೆಯೆಂದಾದಲ್ಲಿ ನಮ್ಮಂಥ ಅಧ್ಯಾಪಕರ ಪಾತ್ರವೂ ಅದರಲ್ಲಿ ಇಲ್ಲದಿಲ್ಲ.

ನೈತಿಕ ಶಿಕ್ಷಣವೆಂದರೆ ಮೌಲ್ಯಗಳನ್ನು ಕುರಿತು ಭಾಷಣ ಮಾಡುವುದಲ್ಲ, ನಾವೇ ಅನ್ವಯಿಸಿಕೊಳ್ಳದ ನಿಯಮಗಳನ್ನು ಹಿರಿತನದ ಅಧಿಕಾರದಿಂದ ಹೇರುವುದೂ ಅಲ್ಲ. ಎಳೆಯರ ಪ್ರಾಕೃತಿಕ ಶಕ್ತಿಯು ಸರಿಯಾಗಿ ಹರಿಯುವಂತೆ ಆಗಲು ಮಾರ್ಗಗಳನ್ನು ತೋರುವುದು, ಭಾವನಾತ್ಮಕ ಬಿಕ್ಕಟ್ಟುಗಳನ್ನು ಬಿಡಿಸಿಕೊಳ್ಳುವ ವ್ಯವಧಾನವನ್ನು ಕಲಿಸುವುದು. ಬೌದ್ಧಿಕವಾಗಿ ಸಬಲಗೊಳಿಸುವುದು. ಬದುಕಿನ ಬಗೆಗೆ ಸಂವೇದನಾಶೀಲರಾಗಿಸುವುದು. ಹಾಗಾದರೆ ನಮ್ಮ ನಡುವಿನ ಸೂಕ್ಷ್ಮಜ್ಞ ವಿದ್ಯಾರ್ಥಿಗಳನ್ನು ನಾವು ಹೇಗೆ ನಡೆಸಿಕೊಳ್ಳುತ್ತಿದ್ದೇವೆ? ಅವರಲ್ಲಿ ಎಂಥ ಅರಿವನ್ನು ವಿಸ್ತರಿಸುತ್ತಿದ್ದೇವೆ? ಯಾವುದು ಮಾದರಿ ನಡೆ ಹಾಗೂ ಯಾವುದು ಅಲ್ಲ ಎಂದು ಹೇಳುವ ನೈತಿಕ ಸತ್ವ ನಮ್ಮಲ್ಲಿದೆಯೇ? ಇಂತಹ ಆತ್ಮವಿಮರ್ಶೆ ಮಾಡಿಕೊಳ್ಳಲು ಅಧ್ಯಾಪಕರಿಗಿದು ಸಕಾಲ.

ಗಾಂಧಿ, ಲೋಹಿಯಾ, ಅಂಬೇಡ್ಕರ್, ಬಸವ, ಬುದ್ಧರನ್ನೆಲ್ಲ ಅವರ ತಾತ್ವಿಕತೆಯ ಸಮೂಲ ತುಡಿತಗಳೊಂದಿಗೆ ಹೀರಿಕೊಳ್ಳಬೇಕೆಂಬ ಕನಸಿಗರು ವಿದ್ಯಾರ್ಥಿಗಳಲ್ಲಿ ಇನ್ನೂ ಇದ್ದಾರೆ. ಆದರೆ ಅವರನ್ನು ಈ ವಿದ್ವತ್ ವಲಯ ಎಂದು ಕರೆಸಿಕೊಂಡಿರುವ ವಲಯವು ಹೇಗೆ ನಡೆಸಿಕೊಳ್ಳುತ್ತಿದೆ? ಐನ್‌ಸ್ಟೀನ್ ಹೇಳಿದ್ದು ಎನ್ನಲಾದ ಮಾತೊಂದು ನೆನಪಾಗುತ್ತದೆ: ‘ವಿದ್ಯಾರ್ಥಿ ಎನ್ನುವುದು ನೀವು ತುಂಬಿಸಲು ಇರುವ ಪಾತ್ರೆಯಲ್ಲ; ಬದಲಾಗಿ ನೀವು ಬೆಳಗಿಸುವ ಸಲುವಾಗಿ ಇರುವ ದೀಪ’. ಆದರೆ ನಾವು ಅವರನ್ನು ಕಸದ ತೊಟ್ಟಿಯಾಗಿಸುತ್ತಿರುವುದೇ ಹೆಚ್ಚು.

ಹುಸಿ ಜಾತಿಪ್ರಜ್ಞೆ, ವೈಯಕ್ತಿಕ ಅಸೂಯೆ, ಇನ್ನೊಬ್ಬರ ತೇಜೋವಧೆ ಮಾಡಲು ಹಪಹಪಿಸುವ ಧೂರ್ತತೆ, ನಮ್ಮ ಸಕಲ ಸೋಗಲಾಡಿತನಗಳನ್ನು ಅಲ್ಲಿ ಸುರಿಯುತ್ತಿದ್ದೇವೆ. ಇದು, ನಿರಂತರವಾಗಿ ಭೂಮಿಗೆ ರಾಸಾಯನಿಕ ವಿಷ ಸುರಿಯುತ್ತಿರುವುದಕ್ಕಿಂತಲೂ ಮಿಗಿಲಾದ ಅಪಾಯಕಾರಿ ನಡೆ. ‘ಬೆಳೆಭೂಮಿಯಲ್ಲೊಂದು ಪ್ರಳಯದ ಕಸಹುಟ್ಟಿ ತಿಳಿಯಲೀಯದು ಎಚ್ಚರಲೀಯದು’ ಎಂಬ ಬಸವಣ್ಣನ ನೋವು ನಮಗೆ ಸೋಕದಿದ್ದರೆ ಇಡೀ ತಲೆಮಾರನ್ನು ವಿನಾಶದೆಡೆ ತಳ್ಳುವ ಪ್ರಳಯಕಾರಿಗಳು ನಾವೇ ಆಗುತ್ತೇವೆ. ಇಂಥ ಕಿಂಚಿತ್ ಎಚ್ಚರವಿಲ್ಲದೇ ನಮ್ಮ ಸಂಬಳ, ಬಡ್ತಿ, ಅಧಿಕಾರಗಳ ಸಲುವಾಗಿ ಹಪಹಪಿಸುತ್ತ ಸಮಾಜದ ಕಣ್ಣಲ್ಲಿ ಕುಗ್ಗಿರುವ ಅಧ್ಯಾಪಕರು ಇನ್ನಾದರೂ ಎಚ್ಚೆತ್ತುಕೊಳ್ಳಬೇಕು. ಯಾಕೆಂದರೆ ಪ್ರಳಯ ನಮ್ಮನ್ನೂ ಬಿಡುವುದಿಲ್ಲ!

ಗುರುವಿನ ಸ್ಥಾನದಲ್ಲಿರುವ ನಾವು ನಮ್ಮ ನೈತಿಕ ಹಾಗೂ ಆಧ್ಯಾತ್ಮಿಕ ವಿಕಾಸಕ್ಕೆ ಬಾಗಿಲು ಹಾಕಿಕೊಂಡು ಬಿಟ್ಟಿದ್ದೇವೆ. ಮುಗ್ಧತೆಯನ್ನು ಕೊಂದು ಬರಿಯ ಬುದ್ಧಿವಂತರನ್ನು ಸೃಷ್ಟಿಸಲು ಪಣತೊಟ್ಟಿದ್ದೇವೆ. ಬುದ್ಧ, ಬಸವ, ಅಂಬೇಡ್ಕರ್ ಎಲ್ಲರನ್ನೂ ನಮ್ಮ ಛದ್ಮವೇಷಗಳಿಗೆ ಬಳಸಿಕೊಳ್ಳುತ್ತಿದ್ದೇವೆ. ಅವರನ್ನು ತಮ್ಮ ಪಗಡೆಯಾಟದ ಕಾಯಿಗಳಂತೆ ಬಳಸಿಕೊಂಡು ಆಟವಾಡುವ ಕೆಲವು ಪ್ರಾಧ್ಯಾಪಕರ ಬುದ್ಧಿವಂತಿಕೆಯೇ ಅನೇಕ ವಿದ್ಯಾರ್ಥಿಗಳಿಗೆ ಮಾದರಿಯಾಗುತ್ತಿರುವುದು ಈ ಕಾಲದ ಚೋದ್ಯ.

ವಿಶ್ವವಿದ್ಯಾಲಯಗಳು ನಮ್ಮ ಅಹಮ್ಮುಗಳ ಆಟದ ಮೈದಾನಗಳಾದಾಗ ಅಲ್ಲಿ ಸೃಷ್ಟಿಶೀಲತೆ ಸತ್ತುಹೋಗುತ್ತದೆ. ಜ್ಞಾನಸೃಷ್ಟಿಯ ಅಣಕ ನಡೆಯುತ್ತದೆ. ಕಟ್ ಆ್ಯಂಡ್ ಪೇಸ್ಟ್ ಸರಕುಗಳು ಸಂಶೋಧನೆಯ ಹೆಸರಿನಲ್ಲಿ ಸದ್ದುಮಾಡುತ್ತವೆ. ಅದರ ಬಗೆಗೆ ಒಂದು ಸಣ್ಣ ಪಾಪಪ್ರಜ್ಞೆ ಕೂಡ ಬಾಧಿಸದಷ್ಟು ದಪ್ಪಚರ್ಮ ರೂಪುಗೊಳ್ಳುತ್ತದೆ. ನಮ್ಮೊಳಗಿನ ಸೂಕ್ಷ್ಮತೆಯೇ ಸತ್ತುಹೋಗಿರುವಾಗ ನಾವು ಏನನ್ನು ತಾನೇ ಬೆಳೆಸುತ್ತೇವೆ? ನಮ್ಮ ನಡೆನುಡಿಗಳು ಒಂದಾಗಿರುವುದನ್ನು ವಿದ್ಯಾರ್ಥಿಗಳು ನಿರೀಕ್ಷಿಸುತ್ತಾರಲ್ಲವೇ? ಒಬ್ಬ ಸಂವೇದನಾಶೀಲ ವಿದ್ಯಾರ್ಥಿಯನ್ನು ಹತ್ತಿರ ಕರೆದು ಮಮತೆಯಿಂದ ಮಾತಾಡಿಸಿದರೆ ಆತನ ಅತಂತ್ರ ಭಾವ ಎಷ್ಟು ಆಳವಾದುದೆಂಬುದು ಗೊತ್ತಾಗುತ್ತದೆ. ತಮ್ಮ ವಿದ್ವತ್ತಿನಿಂದ ಪ್ರಭಾವಿಸಲಾಗದ ಅಧ್ಯಾಪಕರು ಅಧಿಕಾರದಿಂದ ಭಯ ಹುಟ್ಟಿಸುತ್ತಾ, ಅಂಕಗಳಿಗಾಗಿ ವಿದ್ಯಾರ್ಥಿಗಳನ್ನು ಗುಲಾಮರಂತೆ ಬಳಸಿಕೊಳ್ಳುವಾಗ ಅವರ ಆತ್ಮಶ್ರೀ ಕುಸಿದುಹೋಗುತ್ತದೆ.

ನಿರಂಕುಶಮತಿಯನ್ನು ಬೆಳೆಸಬೇಕಾದ ತರಗತಿ ಕೊಠಡಿಗಳು ಗ್ಯಾಸ್ ಚೇಂಬರುಗಳಾಗುತ್ತವೆ. ಅರಿವಿನ ಹಂಬಲವನ್ನು ಹೊತ್ತುಬಂದ ಜೀವಂತಿಕೆಯುಳ್ಳ ವಿದ್ಯಾರ್ಥಿಗಳಲ್ಲಿ ತಮ್ಮ ಸತ್ವದ ಬಗ್ಗೆ ತಮಗೇ ಸಂಶಯ ಬರಲಾರಂಭಿಸುತ್ತದೆ. ಯಶಸ್ಸಿನ ಮಾನದಂಡಗಳೊಂದಿಗೆ ಸೆಣಸುತ್ತ ‘ಪ್ರಾಮಾಣಿಕತೆಯ ಫಲವೆಂಬ’ ಕನ್ನಡಿಯೊಳಗಿನ ಗಂಟು ಮನಸ್ಸಿನಿಂದ ದೂರವಾಗತೊಡಗುತ್ತದೆ. ಇದರ ನಡುವೆ ತಮಗೇನೂ ಕಲಿಕೆಯಾಗುತ್ತಿಲ್ಲ ಎಂಬ ತಳಮಳ ಹೆಚ್ಚಾಗುತ್ತದೆ. ಭವಿಷ್ಯದ ಬಗೆಗಿನ ಚಿಂತೆ ಎಳೆಯರನ್ನು ಹಿಂಡಿಹಾಕುತ್ತಿರುತ್ತದೆ. ಇಂದು ಮನುಷ್ಯ ಬದುಕಿನ ಸಂಕೀರ್ಣತೆ ಹೆಚ್ಚಿದೆ. ಮಕ್ಕಳಿಗೆ ತಮ್ಮನ್ನು ಶೈಕ್ಷಣಿಕವಾಗಿ, ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಸಾಬೀತುಪಡಿಸಿಕೊಳ್ಳುವ ಉದ್ವಿಗ್ನತೆ ಅತ್ಯಂತ ಹೆಚ್ಚಿದೆ. ಇಂಥ ಕ್ಷಣಗಳಲ್ಲಿ ನಾವು ಅಧ್ಯಾಪಕರು ಸಂವೇದನಾಶೀಲರಾಗದಿದ್ದರೆ ‘ತಾಯ ಮೊಲೆಹಾಲು ನಂಜಾಗಿ ಕೊಲುವೊಡೆ ಇನ್ನಾರಿಗೆ ಹೇಳಲಿ’ ಎಂಬ ಅಳಲು ಮಾತ್ರ ಉಳಿಯುತ್ತದೆ.



ಲೇಖಕಿ: ಸಹಪ್ರಾಧ್ಯಾಪಕಿ, ಡಿ.ವಿ.ಜಿ. ಕನ್ನಡ ಅಧ್ಯಯನ ಕೇಂದ್ರ, ತುಮಕೂರು ವಿಶ್ವವಿದ್ಯಾಲಯ, ತುಮಕೂರು

ಚುರುಮುರಿ

ಅನಂತಕಲ್ಯಾಣವಿದು!

• ಸುಮಂಗಲಾ

ಬೆಕ್ಕಣ್ಣ ಬಿಟ್ಟೂಬಿಡದಂತೆ ಯೂಟ್ಯೂಬಿನಲ್ಲಿ ಅದೇನೋ ವಿಡಿಯೊ ನೋಡುತ್ತಿತ್ತು. ಊಟಕ್ಕೆ ಉಪ್ಪಿನಕಾಯಿ ನೆಕ್ಕಿಕೊಳ್ಳುವಂತೆ ಮತ್ತೆ ಆಗೀಗ ಸುದ್ದಿಯನ್ನು, ಸುದ್ದಿಯೊಳಗಣ ಫೋಟೊಗಳನ್ನು ನೋಡುತ್ತಿತ್ತು.

‘ಅನಂತಕಲ್ಯಾಣವಿದು… ಧರೆಗಿಳಿದ ಸ್ವರ್ಗವಿದು’ ಎಂದು ‘ವಿವಾಹ ಭೋಜನ’ವಿದು ಧಾಟಿಯಲ್ಲಿ ಹಾಡಿತು.

‘ಬಾಲಿವುಡ್ಡಿನಿಂದ ಹಾಲಿವುಡ್ಡಿನವರೆಗೆ ನೂರಾರು ಸಿನಿಮಾ ತಾರೆಯರು ಬಂದಿದ್ದರು ಅಂದ್ರೆ ಸ್ವರ್ಗ ಅಲ್ಲ, ತಾರಾಗಣವೇ ಇಳಿದೈತಿ ಬಿಡು’ ಎಂದೆ.

‘ಮೂರು ದಿನದ ಮದುವಿ ಅಂದ್ರೆ ಎಷ್ಟರ ತಯಾರಿ ಮಾಡಿರಬೌದು!’ ಬೆಕ್ಕಣ್ಣ ಉದ್ಗರಿಸಿತು.

‘ಮೂರು ದಿನ ಅಲ್ಲಲೇ… ಏಳು ತಿಂಗಳ ಮದುವಿ ಕಾರ್ಯಕ್ರಮ! ಹೋದ ಡಿಸೆಂಬರಿನಾಗೆ ನಿಶ್ಚಿತಾರ್ಥ, ಜನವರಿನಾಗೆ ನಿಶ್ಚಿತಾರ್ಥದ ಪಾರ್ಟಿ, ಮಾರ್ಚಿವಳಗೆ ಜಾಮ್‌ನಗರದಾಗೆ ಪ್ರಿವೆಡ್ಡಿಂಗ್ ಕಾರ್ಯಕ್ರಮ, ಜುಲೈ 8ಕ್ಕೆ ಅರಿಸಿನ ಹಚ್ಚೂ ಕಾರ್ಯಕ್ರಮ, ಮೊನ್ನೆ ಶುಕ್ರವಾರದಿಂದ ಭಾನುವಾರದವರೆಗೆ ಮೂರು ದಿನದ ಮದುವೆ ಕಾರ್ಯಕ್ರಮ…’ ಎಂದು ಹೇಳಿದೆ.

‘ಅಲ್ಲಲೇ… ಅಂವಾ ಅಗದಿ ಭಯಂಕರ ಶ್ರೀಮಂತನಿದ್ದಾನಂತ ಇಡೀ ಜಗತ್ತಿಗೆ ಗೊತ್ತೈತಿ… ಈ ಅಂದಾದುಂದಿ ಮದುವೆ ಮೂಲಕ ಮತ್ತೆ ಢಣಾಢಂಗೂರ ಮಾಡಬೇಕೇನು?’ ಎಂದೆ.

‘ಗೊತ್ತೈತಿಲ್ಲೋ… ನಮ್ ದೇಶದಾಗೆ ಬಡವರು, ಮಧ್ಯಮವರ್ಗದವರು, ತಮ್ಮ ಆಸ್ತಿಯ ಐದರಿಂದ ಹದಿನೈದು ಪರ್ಸೆಂಟ್ ರೊಕ್ಕ ಮಕ್ಕಳ ಮದುವಿಗೆ ಖರ್ಚು ಮಾಡತಾರಂತೆ. ಅಂಬಾನಿ ಐದು ಸಾವಿರ ಕೋಟಿ ಖರ್ಚು ಮಾಡ್ಯಾನೆ ಅಂದ್ರೂ ಅವನ ಒಟ್ಟು ಆಸ್ತಿವಳಗೆ ಬರೇ ಅರ್ಧ ಪರ್ಸೆಂಟ್ ಖರ್ಚು ಮಾಡಿದಂತೆ! ಅದ್ರಿಂದ ಎಷ್ಟ್ ಮಂದಿಗೆ ಕೆಲಸ ಸಿಗತೈತಿ… ಈ ನೆವದಾಗಾರೂ ರೊಕ್ಕ ಖರ್ಚುಮಾಡಲೇಳು’ ಎಂದಿತು ಬೆಕ್ಕಣ್ಣ.

‘ಅಷ್ಟ್ ರೊಕ್ಕದಾಗೆ ಬಡವರಿಗೆ ಎಷ್ಟೆಲ್ಲ ಕಲ್ಯಾಣ ಕಾರ್ಯಕ್ರಮ ಮಾಡಬೌದಿತ್ತು’

‘ಅದನ್ನೂ ಮಾಡ್ಯಾರೆ! ಅನಂತಕಲ್ಯಾಣಕ್ಕಿಂತ ಮುಂಚೆ ಪಾಲ್ಘರ್‌ನಲ್ಲಿ ಬಡಕುಟುಂಬಗಳ 50 ಜೋಡಿಗೆ ಸಾಮೂಹಿಕ ವಿವಾಹ ಅಂದರೆ ಕಲ್ಯಾಣ ಕಾರ್ಯಕ್ರಮ ಮಾಡ್ಯಾರೆ’ ಬೆಕ್ಕಣ್ಣ ಮುಸಿಮುಸಿ ನಕ್ಕಿತು.

ದಿನದ ಟ್ವೀಟ್

ಬಂದೂಕು, ನಿರ್ಬಂಧ

ರಾಜಕೀಯ ಹಿಂಸಾಚಾರ ಎಂಬುದು ಪ್ರಜಾತಂತ್ರ ವ್ಯವಸ್ಥೆಗಳಲ್ಲಿನ ಕೊಳಕು ವಾಸ್ತವ. ಯಾವ ದೇಶವೂ ಇದಕ್ಕೆ ಹೊರತಲ್ಲ. ಭಾರತದಲ್ಲಿ ಅಮೆರಿಕದಲ್ಲಿ ಇರುವಷ್ಟು ಗುಂಡಿನ ದಾಳಿಗಳು ಇಲ್ಲದಿರುವುದಕ್ಕೆ, ನಾವು ಹೆಚ್ಚು ಉತ್ತಮರು ಎಂಬುದಕ್ಕಿಂತಲೂ ಬಂದೂಕಿನ ಬಳಕೆಯ ಮೇಲೆ ನಿರ್ಬಂಧ ಬಿಗಿಯಾಗಿರುವುದು ಕಾರಣ.

ಚೇತನ್ ಭಗತ್, ಲೇಖಕ

ಕಿಡಿನುಡಿ

ನಾನು ಲೋಕಸಭಾ ಚುನಾವಣೆಯಲ್ಲಿ ಸೋತರೆ, ಒಕ್ಕಲಿಗ ಸಮುದಾಯವನ್ನು ಸೆಳೆಯಬಹುದು ಎಂದು ಕನಕಪುರದ ಗೆಳೆಯರು ಹಾಕಿದ್ದ ಲೆಕ್ಕಾಚಾರ ತಪ್ಪಿದೆ.

ಎಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ, ಜೆಡಿಎಸ್ ಮುಖಂಡ

25 ವರ್ಷಗಳ ಹಿಂದೆ

ಗುರುವಾರ, 15-7-1999

• **ಕಾಂಗ್ರೆಸ್ – ಬಿಜೆಪಿಯಿಂದ ದೂರ ಉಳಿವ ಜನತಾದಳ**

ಬೆಂಗಳೂರು, ಜುಲೈ 14– ಜನತಾದಳವು ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳಿಂದ ಸಮಾನ ದೂರ ಉಳಿಸಿಕೊಂಡು ರಾಜ್ಯದಲ್ಲಿ ವಿಧಾನಸಭೆ ಹಾಗೂ ಲೋಕಸಭೆ ಚುನಾವಣೆ ಎದುರಿಸಲು ಇಂದು ಇಲ್ಲಿ ತೀರ್ಮಾನಿಸಿತು.

ರಾಜ್ಯದ ರಾಜಕೀಯದಲ್ಲಿ ಸಾಕಷ್ಟು ಬಿರುಗಾಳಿ ಎಬ್ಬಿಸಿ, ಒಗ್ಗಟ್ಟಿನ ವಿಷಯದಲ್ಲಿ ಅನಿಶ್ಚಿತತೆಯ ತೂಗುಯ್ಯಾಲೆಯಲ್ಲಿದ್ದ ಜನತಾದಳ ಇಂದು ಮಹತ್ವದ ಕಾರ್ಯಕಾರಿ ಸಭೆ ನಡೆಸಿತು.

‘ರಾಷ್ಟ್ರ ಮಟ್ಟದಲ್ಲಿ ತೃತೀಯ ಶಕ್ತಿಯನ್ನು ಬಲಗೊಳಿಸಲು ಪಕ್ಷ ಬದ್ಧವಾಗಿದೆ. ಇದರ ಜತೆಗೆ ಬಿಜೆಪಿ ಸಖ್ಯ ತೊರೆದಲ್ಲಿ ಮಾತ್ರ ಲೋಕಶಕ್ತಿ ನಾಯಕ ರಾಮಕೃಷ್ಣ ಹೆಗಡೆ ಅವರೊಂದಿಗೆ ಹೊಂದಾಣಿಕೆ ಸಾಧ್ಯ. ಯಾವುದೇ ಪಕ್ಷ ಅಥವಾ ಆ ಪಕ್ಷಗಳ ಮುಖಂಡರ ಜತೆಗೆ ಏನೇ ಮಾತನಾಡಿದರೂ ಅದು ಪಕ್ಷದ ನಿರ್ಣಯದ ಚೌಕಟ್ಟಿನಲ್ಲಿ ಮಾತ್ರ. ಇದಕ್ಕೆ ದಳದ ಮುಖಂಡರಲ್ಲಿ ಯಾರ ವಿರೋಧವೂ ಇಲ್ಲ’ ಎಂದು ಸ್ಪಷ್ಟಪಡಿಸಲಾಗಿದೆ.

• **‘ಪಾಕ್ ಸೈನಿಕ ಕಂಡರೆ ಕಾರ್ಯಾಚರಣೆ’**

ನವದೆಹಲಿ, ಜುಲೈ 14– ಕಾರ್ಗಿಲ್ ವಲಯದಲ್ಲಿ 16ರಂದು ಪಾಕಿಸ್ತಾನದ ಸೈನಿಕರು ಕಂಡುಬಂದರೆ ಅವರನ್ನು ಶತ್ರುವೆಂದು ಪರಿಗಣಿಸಿ ಭಾರತವು ತನ್ನ ಸೇನಾ ಕಾರ್ಯಾಚರಣೆಯನ್ನು ನಡೆಸಲಿದೆ ಎಂದು ಇಂದು ಪುನರುಚ್ಚರಿಸಿತು.

50 ವರ್ಷಗಳ ಹಿಂದೆ

ಸೋಮವಾರ, 15-7-1974

• **ಮತ್ತೆ ಗಿರಿ ಸ್ಪರ್ಧೆ ಇಲ್ಲ: ವಿರೋಧ ಪಕ್ಷಗಳ ಯತ್ನ ವಿಫಲ**

ನವದೆಹಲಿ, ಜುಲೈ 14– ಮತ್ತೆ ಸ್ಪರ್ಧಿಸುವಂತೆ ಗಿರಿ ಅವರನ್ನು ಭೇಟಿ ಮಾಡಿ ಅವರ ಮನ ಒಲಿಸಲು ಆರು ವಿರೋಧಿ ಪಕ್ಷಗಳ ಪ್ರತಿನಿಧಿಗಳು ಇಂದು ನಡೆಸಿದ ಪ್ರಯತ್ನ ಫಲಿಸಲಿಲ್ಲ.

ರಾಷ್ಟ್ರಪತಿ ಸ್ಥಾನಕ್ಕೆ ಎರಡನೇ ಬಾರಿ ಸ್ಪರ್ಧಿಸಬಾರದೆಂದು ಈಗಾಗಲೇ ಕೈಗೊಂಡ ನಿರ್ಧಾರವನ್ನು ನಿಯೋಗಕ್ಕೆ ತಿಳಿಸಿದ ಗಿರಿ ಅವರು ಅವರ ಮನವಿಯನ್ನು ತಿರಸ್ಕರಿಸಿದರು.

• **ಶ್ರೀಮಂತ ರೈತರ ಮೇಲೆ ಹೆಚ್ಚು ತೆರಿಗೆ ಕುರಿತು ಪರಿಶೀಲನೆ – ಅರಸು**

ಬೆಂಗಳೂರು, ಜುಲೈ 14– ಹಣವಂತ ರೈತರ ಮೇಲೆ ಹೆಚ್ಚಿನ ತೆರಿಗೆ ವಿಧಿಸುವ ಮಾರ್ಗ ಕುರಿತು ಪರಿಶೀಲನೆ ನಡೆಯಬೇಕಾಗಿದೆಯೆಂದು ಮುಖ್ಯಮಂತ್ರಿ ಶ್ರೀ ಅರಸು ಅವರು ಇಂದು ಇಲ್ಲಿ ವರದಿಗಾರರಿಗೆ ತಿಳಿಸಿದರು.

ಹಣದುಬ್ಬರವನ್ನು ಕಡಿಮೆ ಮಾಡಲು ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ ಸಲಹೆ ಮಾಡಿದ ನಾನಾ ಕ್ರಮಗಳನ್ನು ಕುರಿತು ಕೇಳಿದ ಪ್ರಶ್ನೆಯೊಂದಕ್ಕೆ ಮುಖ್ಯಮಂತ್ರಿಗಳು ಉತ್ತರವಿತ್ತು, ಹಣವಂತ ರೈತರಿಂದ ಹೆಚ್ಚು ಆದಾಯ ಪಡೆಯಲು ಯತ್ನಿಸಬೇಕೆಂಬ ಬಗ್ಗೆ ಎರಡು ಅಭಿಪ್ರಾಯವಿಲ್ಲವೆಂದು ಸ್ಪಷ್ಟಪಡಿಸಿ ‘ಯಾವ ಮಾರ್ಗದಲ್ಲಿ ಈ ಕೆಲಸ ಮಾಡಬೇಕಾಗಿದೆ ಎಂಬುದನ್ನು ಪರಿಶೀಲಿಸಬೇಕಾಗಿದೆ’ ಎಂದರು.

ಸಂಗತ

ಜಲಯೋಧರಾಗೋಣ ಬನ್ನಿ

ನೀರಿನ ಕೊರತೆ ಎದುರಾದಾಗ ನದಿ ತಿರುವಿನ, ಭಾರಿ ವೆಚ್ಚದ ಯೋಜನೆಗಳ ಬಗ್ಗೆ ಮಾತನಾಡುವ ಸರ್ಕಾರ ಮಳೆ ನೀರಿನ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ

• ಶ್ರೀಗುರು

ರಾಜ್ಯದ ಬಹುತೇಕ ಕಡೆ ಮುಂಗಾರು ಮಳೆ ಸುರಿಯುತ್ತಿದೆ. ಅದರ ಜೊತೆಗೆ ಮಳೆನೀರಿನ ಸಂಗ್ರಹದ ಪಾಠ-ಪ್ರಾತ್ಯಕ್ಷಿಕೆಗಳು ಜೋರಾಗಿ ನಡೆದಿವೆ. ಶಾಲೆ, ಮಠ, ಸರ್ಕಾರಿ ಕಚೇರಿಗಳು ಮಳೆನೀರು ಸಂಗ್ರಹದ ವಿಚಾರದಲ್ಲಿ ತಮ್ಮ ಯಶೋಗಾಥೆಗಳನ್ನು ಜನರಿಗೆ ತಲುಪಿಸುತ್ತಿವೆ. ಆದರೆ ಹವಾಮಾನ ಇಲಾಖೆಯ ಮಾಹಿತಿ ಪ್ರಕಾರ ಮಳೆನೀರು ಸಂಗ್ರಹದ ವಿಚಾರದಲ್ಲಿ ದೇಶದ ಸಾಧನೆ ದೊಡ್ಡದೇನೂ ಇಲ್ಲ. ಸರಾಸರಿ 1,200 ಮಿ.ಮೀ. ಮಳೆ ಬೀಳುವ ನಮ್ಮ ದೇಶದಲ್ಲಿ ಮಳೆನೀರು ಸಂಗ್ರಹ ಮಾಡುತ್ತಿರುವ ಪ್ರಮಾಣ ಒಟ್ಟು ಮಳೆಯ ಶೇಕಡ 8ರಷ್ಟು ಮಾತ್ರ.

ಬೆಂಗಳೂರಿನಲ್ಲಿ ವಾರ್ಷಿಕ ಸುರಿಯುವ ಮಳೆಯ ಪ್ರಮಾಣದ ಅರ್ಧದಷ್ಟನ್ನು ಸಂಗ್ರಹಿಟ್ಟುಕೊಂಡರೆ ವರ್ಷವಿಡೀ ಬೇಕಾಗುವಷ್ಟು ನೀರು ಪೂರೈಸಬಹುದು ಎಂಬ ಲೆಕ್ಕಾಚಾರ ಇದೆ. ಬೇಸಿಗೆ ಬಂದಾಕ್ಷಣ ನೀರಿನ ಕೊರತೆ ಎದುರಿಸುವ ಬೆಂಗಳೂರಿನಲ್ಲಿ ಮಳೆನೀರಿನ ಸಂಗ್ರಹದ ಅಗತ್ಯ ಹೆಚ್ಚಾಗಿರುವುದರಿಂದ ಈ ವಿಚಾರದಲ್ಲಿ ಕಾನೂನು ರೂಪಿಸಲಾಗಿದೆ. ಕಾನೂನು ಪಾಲಿಸದ ಮನೆಗಳಿಗೆ ದಂಡ ಹಾಕಲಾಗಿದ್ದು ಸಂಗ್ರಹಗೊಂಡಿರುವ ಮೊತ್ತ ಹಲವು ಕೋಟಿಗಳನ್ನು ದಾಟಿದೆ ಎಂದು ವರದಿಗಳು ಹೇಳುತ್ತವೆ.

ನಿಯಮಗಳ ಪ್ರಕಾರ, ಬೆಂಗಳೂರಿನಲ್ಲಿ 2,400 ಚದರ ಅಡಿ ಮತ್ತು ಅದಕ್ಕೂ ಹೆಚ್ಚಿನ ವಿಸ್ತೀರ್ಣವುಳ್ಳ ಪ್ರತಿ ಮನೆಗೆ ಮಳೆನೀರು ಸಂಗ್ರಹದ ವ್ಯವಸ್ಥೆ ಇರಲೇಬೇಕು. ಹೊಸದಾಗಿ ನಿರ್ಮಿಸಲಾಗುತ್ತಿರುವ ಸಾವಿರದ ಇನ್ನೂರು ಚದರ ಅಡಿ ವಿಸ್ತೀರ್ಣದ ಮನೆಗಳಲ್ಲೂ ಮಳೆನೀರು ಸಂಗ್ರಹದ ವ್ಯವಸ್ಥೆ ಇರಲೇಬೇಕೆಂಬ ಕಾನೂನು ಇದೆ. ಆದರೆ ಸರಿಯಾಗಿ ಪಾಲಿಸುವವರು ಇಲ್ಲ. ಬೆಂಗಳೂರು ನಗರದ 20 ಲಕ್ಷ ಮನೆಗಳು ಈ ಕಾನೂನಿನ ವ್ಯಾಪ್ತಿಗೆ ಬರುತ್ತವೆ. ಕಾನೂನು ಜಾರಿಯಾದಾಗಿನಿಂದ ಇಲ್ಲಿಯವರೆಗೆ ಕೇವಲ ಎರಡು ಲಕ್ಷ ಮನೆಗಳು ಮಳೆನೀರು ಸಂಗ್ರಹದ ವ್ಯವಸ್ಥೆ ಅಳವಡಿಸಿಕೊಂಡಿವೆ.

ನಗರಕ್ಕೆ ವರ್ಷಕ್ಕೆ 19 ಟಿಎಂಸಿ ಅಡಿ ಕಾವೇರಿ ನೀರು ದೊರಕುತ್ತಿದೆ. ಬೆಂಗಳೂರಿನಲ್ಲಿ ವಾರ್ಷಿಕ 750ರಿಂದ 800 ಮಿ.ಮೀ. ಮಳೆಯಾಗುತ್ತದೆ. ಮಳೆನೀರು ಸಂಗ್ರಹದ ವ್ಯವಸ್ಥೆಯನ್ನು ಸರಿಯಾಗಿ ಅಳವಡಿಸಿಕೊಂಡರೆ 15 ಟಿಎಂಸಿ ಅಡಿಯಷ್ಟು ನೀರನ್ನು ಸಂಗ್ರಹಿಸಿಟ್ಟುಕೊಳ್ಳುವ ಅವಕಾಶ ಇದೆ. ಆದರೆ ಅಂಥ ವ್ಯವಸ್ಥೆ ಸದ್ಯಕ್ಕೆ ಬೆಂಗಳೂರಿನಲ್ಲಿ ಇಲ್ಲ. ನೀರಿನ ಕೊರತೆ ಎದುರಾದಾಗಲೆಲ್ಲ ನದಿ ತಿರುವಿನ ಸಾವಿರಾರು ಕೋಟಿ ರೂಪಾಯಿ ವೆಚ್ಚದ ಯೋಜನೆಗಳು ಅಥವಾ ಅಣೆಕಟ್ಟು ನಿರ್ಮಿಸುವುದರ ಬಗ್ಗೆ ಮಾತನಾಡುವ ಸರ್ಕಾರ ಅನಾಯಾಸವಾಗಿ ದೊರಕುವ ಮಳೆ ನೀರಿನ ಬಗ್ಗೆ ಅಷ್ಟಾಗಿ ತಲೆಕೆಡಿಸಿಕೊಳ್ಳುವುದಿಲ್ಲ.

ನಗರದ ಜನರ ನೀರಿನ ಬವಣೆಯನ್ನು ಕಡಿಮೆ ಮಾಡಲು ನಿರಂತರವಾಗಿ ಪ್ರಯತ್ನಿಸುವ ಜಲಮಂಡಳಿ, ಮಳೆನೀರು ಸಂಗ್ರಹಕ್ಕೆ ಇಂಗು ಗುಂಡಿಗಳನ್ನು ಹೇಗೆ ನಿರ್ಮಾಣ ಮಾಡುವುದು ಎಂಬುದನ್ನು ನಿರ್ಮಿಸಿ ತೋರಿಸುತ್ತಿದೆ. ಬೆಂಗಳೂರಿನಾದ್ಯಂತ ಒಂದು ಸಾವಿರ ಇಂಗು ಗುಂಡಿಗಳನ್ನು ಈಗಾಗಲೇ ನಿರ್ಮಿಸಿರುವ ಬೆಂಗಳೂರು ಜಲಮಂಡಳಿಯು ಮುಂದಿನ ಎರಡು ತಿಂಗಳಲ್ಲಿ ಮತ್ತೊಂದು ಸಾವಿರ ಇಂಗು ಗುಂಡಿಗಳನ್ನು ನಿರ್ಮಿಸುವ ಕೆಲಸಕ್ಕೆ ಕೈಹಾಕಿದೆ.

ಮಳೆ ನೀರಿನ ಸಂಗ್ರಹವನ್ನು ಪರಿಣಾಮಕಾರಿಯಾಗಿ ಮಾಡಬೇಕಾದ ಅನಿವಾರ್ಯ ಎಲ್ಲ ದೊಡ್ಡ ನಗರಗಳಿಗೆ ಇದೆ. ಮಳೆನೀರಿನ ಸಂಗ್ರಹ ಮಾಡದ ಮನೆಗಳ ಮಾಲೀಕರಿಗೆ ಮೊದಲ ಮೂರು ತಿಂಗಳು ನೀರಿನ ಬಿಲ್ ಎಷ್ಟು ಇರುತ್ತದೋ ಅದರ ಶೇಕಡ 50ರಷ್ಟು ಮತ್ತು ನಂತರದ ಮೂರು ತಿಂಗಳಲ್ಲಿ ಶೇಕಡ 100ರಷ್ಟು ದಂಡ ವಿಧಿಸಲು ಅವಕಾಶವಿದೆ. ಇಷ್ಟಾದರೂ ಹೆದರದ ಜನ ತಮ್ಮ ನಿವಾಸಗಳಲ್ಲಿ ಮಳೆನೀರು ಸಂಗ್ರಹಕ್ಕೆ ವ್ಯವಸ್ಥೆಯನ್ನು ಮಾಡಿಕೊಂಡಿಲ್ಲ.

ಪರಿಸ್ಥಿತಿ ಹೀಗಿರುವಾಗ, ಮಳೆನೀರು ಸಂಗ್ರಹಕ್ಕೆ ವ್ಯವಸ್ಥೆ ಮಾಡಿಕೊಳ್ಳಿ ಎಂದು ಅಧಿಕಾರಿಗಳು ಮನೆ ಮಾಲೀಕರಿಗೆ ಹೇಳಿದರೆ ‘ನೀವು ಹಾಕುವ ದಂಡ ಕಟ್ಟಲು ನಾವು ರೆಡಿ ಸರ್. ನಿಮ್ಮ ಕಟ್ಟಡಗಳಲ್ಲೇ ಈ ವ್ಯವಸ್ಥೆ ಇಲ್ಲವಲ್ಲ? ನೀವು ದಂಡ ಕಟ್ಟುತ್ತೀರಾ’ ಎಂದು ಕಿಚಾಯಿಸುವಮಟ್ಟಿಗೆ ಪರಿಸ್ಥಿತಿ ಕೈಮೀರಿದೆ.



ನಮ್ಮಲ್ಲಿ ಮಳೆನೀರು ಸಂಗ್ರಹವನ್ನು ಸಮರ್ಥವಾಗಿ ಅನುಷ್ಠಾನಗೊಳಿಸಲು, ನಿರ್ವಹಿಸಲು ಪ್ರತ್ಯೇಕ ವಿಭಾಗ ಇಲ್ಲ. ಹಳೆಯ ಕಟ್ಟಡಗಳಲ್ಲಿ ವ್ಯವಸ್ಥೆ ಇಲ್ಲದಿದ್ದರೆ ದಂಡ ವಿಧಿಸಬೇಕೆಂಬ ನಿಯಮವಿದೆ. ಆದರೆ ಪ್ರತಿ ಮನೆಯನ್ನೂ ಪರಿಶೀಲಿಸಲು ಮಾನವ ಸಂಪನ್ಮೂಲವಿಲ್ಲ ಎಂಬುದು ಅಧಿಕಾರಿಗಳ ಮಾತು. ಸಾರ್ವಜನಿಕರಿಗೆ ಮಳೆನೀರು ಸಂಗ್ರಹದ ಕುರಿತು ತಿಳಿವಳಿಕೆ ಮೂಡಿಸಲು ಥೀಮ್ ಪಾರ್ಕ್‌ಗಳ ಅವಶ್ಯಕತೆ ಇದೆ. ಬೆಂಗಳೂರು ಜಲಮಂಡಳಿಯು ಜಯನಗರ 5ನೇ ಬ್ಲಾಕ್‌ನಲ್ಲಿ 2011ರಲ್ಲಿಯೇ ಸರ್ ಎಂ. ವಿಶ್ವೇಶ್ವರಯ್ಯ ಹೆಸರಿನ ಮಳೆನೀರಿನ ಸಂಗ್ರಹದ ಥೀಮ್ ಪಾರ್ಕ್ ನಿರ್ಮಿಸಿದೆ. ಮಳೆನೀರು ಸಂಗ್ರಹ ಘಟಕವು ಹೇಗೆ ಕೆಲಸ ಮಾಡುತ್ತದೆ ಎಂಬುದನ್ನು ಇಲ್ಲಿ ಪ್ರಾಯೋಗಿಕವಾಗಿ ನೋಡಬಹುದು.

ಬೆಂಗಳೂರಿನ ಜಲಮಂಡಳಿಯು ನಗರದ ಅಂತರ್ಜಲ ಹೆಚ್ಚಿಸಲು ಕಳೆದ ತಿಂಗಳೊಂದರಲ್ಲಿ ಮಳೆನೀರು ಸಂಗ್ರಹದ 986 ಇಂಗು ಗುಂಡಿಗಳನ್ನು ನಿರ್ಮಿಸಿದೆ. ಮಳೆನೀರಿನ ಸಂಗ್ರಹದ ಕೆಲಸಗಳು ಎಲ್ಲ ಕಡೆ ವ್ಯಾಪಕವಾಗಿ ನಡೆಯಬೇಕು. ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅಡಿ ಬರಡು ಗುಡ್ಡದ ಮೇಲೆ 40,000 ತೋಡುಗಳನ್ನು ತೋಡಿ ಮಳೆನೀರು ಸಂಗ್ರಹಿಸಿ, ಕೃಷಿ ಮಾಡಿ ಲಕ್ಷಾಧಿಪತಿಗಳಾದ ಮಹಾರಾಷ್ಟ್ರದ ಹಿವರೇ ಬಜಾರ್‌ನ ರೈತರು ಇಡೀ ದೇಶಕ್ಕೆ ಮಾದರಿಯಂತಿದ್ದಾರೆ.

ವಾಚಕರ ವಾಣಿ

ಎ.ಐ. ಬಳಸಿ ಧ್ವನಿ ಸೃಷ್ಟಿಸಿ

ತಮ್ಮ ಅನುಪಮ ದನಿಯ ಕನ್ನಡದಿಂದ, ಕನ್ನಡ ಜಗತ್ತಿನ ಹೃದಯದಲ್ಲಿ ಅಜರಾಮರರಾಗಿ ಉಳಿದ ನಿರೂಪಕಿ, ನಟಿ ಅಪರ್ಣಾ ಅವರನ್ನು ಶ್ವಾಸಕೋಶದ ಕ್ಯಾನ್ಸರ್ ಬಲಿಪಡೆದಿದೆ. ಅವರು ಇನ್ನು ಮುಂದೆ ನೆನಪು ಮಾತ್ರ. ಬೆಂಗಳೂರಿನ ‘ನಮ್ಮ ಮೆಟ್ರೊ’ ಪ್ರಯಾಣಿಕರ ಅನುಕೂಲಕ್ಕೆ ಅವರು ನೀಡಿದ ಧ್ವನಿಯು ಮಧುರವಾಗಿ, ಸ್ಪಷ್ಟವಾಗಿ, ಅಪ್ಯಾಯಮಾನವಾಗಿದೆ. ಮೆಟ್ರೊ ಸಂಚಾರದ ವೇಳೆ ಪ್ರಕಟಣೆಗಳನ್ನು ಅಪರ್ಣಾ ಅವರ ದನಿಯಲ್ಲಿ ಕೇಳುವುದೇ ಒಂದು ಸೊಗಸು.

ಮುಂದೆ ನಿರ್ಮಾಣವಾಗುವ ಹೊಸ ಮೆಟ್ರೊ ನಿಲ್ದಾಣಗಳಲ್ಲಿಯೂ ಮಾಹಿತಿ ಪ್ರಕಟಣೆಗೆ ಅಪರ್ಣಾ ಅವರ ಧ್ವನಿಯನ್ನು ಜನರೇಟಿವ್ ಎ.ಐ. ತಂತ್ರಜ್ಞಾನದ ನೆರವು ಪಡೆದು ಬಳಸಬಹುದು. ಅಪರ್ಣಾ ಅವರೇ ಖುದ್ದಾಗಿ ಧ್ವನಿ ನೀಡಿದಂತೆ ಹೊಸದಾಗಿ ಪ್ರಕಟಣೆಗಳನ್ನು ಸೃಷ್ಟಿಸಬಹುದು. ಅವರು ಇಲ್ಲಿಯವರೆಗೂ ಒದಗಿಸಿದ ಘೋಷಣೆಗಳ ಧ್ವನಿ ಮಾದರಿಗಳನ್ನು ಆಧರಿಸಿ, ಅವರದ್ದೇ ದನಿ ಮತ್ತು ಲಯದಲ್ಲಿ ಹೊಸ ಘೋಷಣೆಗಳನ್ನು ಸೃಷ್ಟಿಸಬಹುದು. ಬೆಂಗಳೂರು ಮೆಟ್ರೊ ರೈಲು ನಿಗಮವು ಈ ದಿಸೆಯಲ್ಲಿ ಮುಂದಡಿ ಇರಿಸಬೇಕಿದೆ.

ಗಣೇಶ್ ಕೆ. ದಾವಣಗೆರೆ, ಮೂಡುಬಿದಿರೆ

ಮತದಾರರ ಪ್ರಜ್ಞಾವಂತಿಕೆ ಮೆಚ್ಚಬೇಕು

ಏಳು ರಾಜ್ಯಗಳ 13 ವಿಧಾನಸಭಾ ಕ್ಷೇತ್ರಗಳಿಗೆ ಈಚೆಗೆ ನಡೆದ ಉಪಚುನಾವಣಾ ಫಲಿತಾಂಶ ಪ್ರಕಟವಾಗಿದೆ. ಹತ್ತು ಸ್ಥಾನಗಳಲ್ಲಿ ‘ಇಂಡಿಯಾ’ ಮೈತ್ರಿಕೂಟದ ಪಕ್ಷಗಳ ಅಭ್ಯರ್ಥಿಗಳು ಗೆಲುವು ಕಂಡಿದ್ದಾರೆ. ಮತದಾರರ ಅಚ್ಚರಿಯ ಪ್ರಜ್ಞಾವಂತಿಕೆಯನ್ನು ನಾವು ಮೆಚ್ಚಲೇಬೇಕು. ಹಿಮಾಚಲಪ್ರದೇಶ ಸೇರಿದಂತೆ ಕೆಲವು ರಾಜ್ಯಗಳಲ್ಲಿ ಬಿಜೆಪಿ ಈ ಹಿಂದೆ ಪಕ್ಷಾಂತರದ ಪಿಡುಗನ್ನು ಸೃಷ್ಟಿಸಿ, ಮತದಾರರ ಮತಾಧಿಕಾರವನ್ನೇ ಕಸಿದುಕೊಂಡಿತ್ತು. ಈಗ ಮತದಾರರು ಹಲವು ಪಕ್ಷಾಂತರಿಗಳನ್ನು ಸೋಲಿಸಿ, ಅನೈತಿಕ ರಾಜಕೀಯಕ್ಕೆ ತಕ್ಕ ಪಾಠ ಕಲಿಸಿದ್ದಾರೆ. ಮತದಾರರು ಹೀಗೆ ಪ್ರಜ್ಞಾವಂತಿಕೆ ಮೆರೆಯುತ್ತಿರುವುದು ನಿಜಕ್ಕೂ ಆಶಾದಾಯಕ ಬೆಳವಣಿಗೆ. ಏಕೆಂದರೆ ಈ ಬಗೆಯ ಪ್ರಜ್ಞಾವಂತಿಕೆಯು ಪ್ರಜಾಪ್ರಭುತ್ವದ ಮೌಲ್ಯಗಳನ್ನು ಗಾಳಿಗೆ ತೂರಿ ಮತ ತೀರ್ಪಿಗೆ ದ್ರೋಹ ಬಗೆವ ರಾಜಕೀಯ ಕುತಂತ್ರವನ್ನು ಕೊನೆಗೊಳಿಸುವ ಶಕ್ತಿ ಹೊಂದಿದೆ.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ

ಸಮಾಜಮುಖಿ ಕಾರ್ಯ: ಉಲ್ಲೇಖಾರ್ಹ ಹೆಸರು

ಸತೀಶ್ ಜಿ.ಕೆ.ತೀರ್ಥಹಳ್ಳಿ ಅವರು ‘ಒಳ್ಳೆಯತನಕ್ಕೆ ಜಾಗ ಖಾಲಿ ಇದೆ’ ಲೇಖನದಲ್ಲಿ (ಸಂಗತ, ಜುಲೈ 12) ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿರುವ ಕೆಲವರ ಹೆಸರು ಉಲ್ಲೇಖಿಸಿದ್ದಾರೆ. ಆ ಹೆಸರುಗಳ ಜೊತೆಗೆ, ಚಿಕ್ಕಮಗಳೂರು ಜಿಲ್ಲೆಯ ನರಸಿಂಹರಾಜಪುರದಲ್ಲಿ ವಾಸವಾಗಿರುವ ಜುಬೇದಾ ಎನ್ನುವ ಮಹಿಳೆಯೊಬ್ಬರ ಹೆಸರು ಉಲ್ಲೇಖಿಸುವುದು ಸೂಕ್ತವಾದದ್ದು. ಇವರು ಅಸಹಾಯಕರು, ಭಿಕ್ಷುಕರು, ಮಾನಸಿಕ ಅಸ್ವಸ್ಥರ ಪೋಷಣೆ, ಬಡ ಮಕ್ಕಳಿಗೆ ಉಚಿತ ಶಿಕ್ಷಣ, ಅನಾಥ ಶವಗಳ ಸಂಸ್ಕಾರ, ಭಿಕ್ಷಾಟನೆ ನಿರ್ಮೂಲನೆಗೆ ಹೋರಾಟ, ಕೋವಿಡ್ ಸಾಂಕ್ರಾಮಿಕದ ಸಂದರ್ಭದಲ್ಲಿ ಮೃತರಾದವರ ಅಂತ್ಯಸಂಸ್ಕಾರ, ಕೋವಿಡ್ ರೋಗಿಗಳ ಆರೈಕೆ ಮುಂತಾದ ಸಮಾಜ ಸೇವಾ ಕಾರ್ಯಗಳಲ್ಲಿ ತೊಡಗಿಕೊಂಡಿದ್ದಾರೆ. ನರಸಿಂಹರಾಜಪುರದ ಬಡಾವಣೆಯೊಂದರ ಗಣೇಶೋತ್ಸವ ಸಮಿತಿ ಹಾಗೂ ಇಲ್ಲಿನ ನಾಗರಕಟ್ಟೆಯ ಕಾರ್ತಿಕ ದೀಪೋತ್ಸವ ಸಮಿತಿಯ ಅಧ್ಯಕ್ಷರಾಗಿ ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ.

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮುತ್ತೂರು, ಕೊಪ್ಪ

ಕಾರ್ಯಸಾಧ್ಯ ಬೇಡಿಕೆ ಮಂಡಿಸಿ

ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ವ್ಯವಸ್ಥೆಗೆ ಕಾನೂನಿನ ಮೂಲಕ ಖಾತರಿ ನೀಡಬೇಕು ಎಂಬ ತನ್ನ ಬೇಡಿಕೆಯನ್ನು ಸಂಯುಕ್ತ ಕಿಸಾನ್ ಮೋರ್ಚಾ ಪುನರುಚ್ಚರಿಸಿದೆ. ಆದರೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಸಿದ್ಧಪಡಿಸಿದ ಇತ್ತೀಚಿನ ಸಂಶೋಧನಾ ವರದಿಯೊಂದು ಎಂಎಸ್‌ಪಿ ಬಗ್ಗೆ ವ್ಯಕ್ತಪಡಿಸಿರುವ ಅಭಿಪ್ರಾಯವನ್ನು ಅದು ಗಮನಿಸಿದಂತಿಲ್ಲ. ‘2014-15ರ ನಂತರದ ಅವಧಿಯಲ್ಲಿ ಎಂಎಸ್‌ಪಿ ಅಡಿ ಆಹಾರ ಧಾನ್ಯ ಖರೀದಿಸುವ ವೆಚ್ಚ ಹಲವು ಪಟ್ಟು ಹೆಚ್ಚಿದೆ (2022-23ರಲ್ಲಿ ಇದು ₹3.4 ಲಕ್ಷ ಕೋಟಿ). ಆದರೆ ಕೃಷಿ ಮತ್ತು ಸಂಬಂಧಿತ ಉತ್ಪಾದನೆಗಳ ಶೇ 6ರಷ್ಟು ಮಾತ್ರ ಈ ವ್ಯವಸ್ಥೆಯ ಅಡಿ ಖರೀದಿ ಆಗಿದೆ’ ಎಂದು ವರದಿಯು ಹೇಳಿದೆ.

ಕನಿಷ್ಠ ಬೆಂಬಲ ಬೆಲೆ ಇರುವುದು 22 ಬೆಳೆಗಳಿಗೆ ಮಾತ್ರ. ಇತರ ಬೆಳೆಗಳು ಉಪೇಕ್ಷೆಗೆ ಒಳಗಾಗಿವೆ. ಹಾಗಾದರೆ ಏನು ಮಾಡಬೇಕು? ಮಾರುಕಟ್ಟೆ ಬೆಲೆ ಕನಿಷ್ಠ ಬೆಂಬಲ ಬೆಲೆಗಿಂತ ಕಡಿಮೆ ಆದಾಗ ಮಾತ್ರ ಬೆಂಬಲ ಒದಗಿಸಬೇಕು. ಖಾಸಗಿಯವರು ಎಂಎಸ್‌ಪಿಗಿಂತ ಹೆಚ್ಚಿನ ಬೆಲೆಗೆ ಖರೀದಿಸಲೇಬೇಕಾದ ಪರಿಸ್ಥಿತಿ ನಿರ್ಮಿಸಬೇಕು. ಈ ಕ್ರಮಗಳ ಜತೆ ಬೆಳೆ ವೈವಿಧ್ಯವನ್ನು ಉತ್ತೇಜಿಸಬೇಕು.

ಕೇಂದ್ರ ಸರ್ಕಾರವು ಈ ಬಾರಿಯ ಬಜೆಟ್ ಸಿದ್ಧಪಡಿಸುವಾಗ ಈ ವರದಿಯಲ್ಲಿನ ಅಂಶಗಳನ್ನು ಪರಿಗಣಿಸುತ್ತದೆಯೋ ಇಲ್ಲವೋ ಗೊತ್ತಿಲ್ಲ. ಆದರೆ, ಕನಿಷ್ಠ ಬೆಂಬಲ ಬೆಲೆಗೆ ಕಾನೂನಿನ ಖಾತರಿ ನೀಡಲಂತೂ ಅದು ತಯಾರಿಲ್ಲ. ರೈತ ಸಂಘಟನೆಗಳು ಕಾರ್ಯಸಾಧ್ಯವಾದ ಹಾಗೂ ಬಹುಸಂಖ್ಯೆಯ ರೈತರಿಗೆ ಉಪಯುಕ್ತವಾಗುವ ಬೇಡಿಕೆಗಳನ್ನು ಮಂಡಿಸುವುದು ಒಳಿತು.

ಎಚ್.ಎಸ್. ಮಂಜುನಾಥ, ಗೌರಿಬಿದನೂರು

ತಕ್ಷಣದ ಪರಿಹಾರ ಬೇಕಿದೆ

ವಿದ್ಯಾರ್ಥಿಗಳಿಗೆ ನಿತ್ಯ 7 ಕಿ.ಮೀ. ‘ನಡಿಗೆ ಶಿಕ್ಷೆ’ (ಪ್ರ.ವಾ., ಜುಲೈ 13) ಓದಿ ಮನ ಕಲಕಿತು. ಕಲ್ಯಾಣ ಕರ್ನಾಟಕ ಭಾಗದ ಗ್ರಾಮೀಣ ಪ್ರದೇಶಗಳ ವಿದ್ಯಾರ್ಥಿಗಳು ಶಾಲೆ, ಕಾಲೇಜುಗಳಿಗೆ ಹೋಗಲು ಬಸ್ ವ್ಯವಸ್ಥೆಯನ್ನೇ ಅವಲಂಬಿಸಿದ್ದಾರೆ. ಸರಿಯಾದ ಸಮಯಕ್ಕೆ ಬಸ್ ಬಾರದೆ ಪರದಾಡುವುದು, ಬಸ್ಸಿಗಾಗಿ 2-3 ತಾಸು ಕಾಯುವುದು ಇಲ್ಲಿ ಸಾಮಾನ್ಯವಾಗಿದೆ. ಪರೀಕ್ಷಾ ಸಮಯದಲ್ಲಂತೂ ವಿದ್ಯಾರ್ಥಿಗಳ ಅಳಲು ಹೇಳತೀರದು. ಇದರಿಂದಾಗಿ ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿ ಪ್ರಮಾಣ ಸಹ ಕಡಿಮೆ ಆಗಿ ಗ್ರಾಮೀಣ ಪ್ರತಿಭೆಗಳು ವಿದ್ಯಾಭ್ಯಾಸದಿಂದ ವಂಚಿತವಾಗುತ್ತಿವೆ. ಈ ಸಮಸ್ಯೆಗೆ ತಕ್ಷಣ ಪರಿಹಾರದ ಅಗತ್ಯವಿದೆ.

ಗಾನಶ್ರುತಿ ಎಂ.ಕೆ., ಹುಲಸೂರು, ಬೀದರ್

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಅಮೆರಿಕ: ಆಟಿಕೆ ಆದ ಬಂದೂಕು

ಜಗತ್ತಿನ 'ದೊಡ್ಡಣ್ಣ' ಅಮೆರಿಕದಲ್ಲಿ ಬಂದೂಕಿನಿಂದ ಹಿಂಸಾಚಾರ ಹೊಸದೇನಲ್ಲ. ಬಂದೂಕಿನ ನಳಿಕೆಯಿಂದ ಚಿಮ್ಮುವ ಗುಂಡುಗಳಿಗೆ ಪ್ರತಿ ದಿನ 132 ಮಂದಿ ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಅಧ್ಯಕ್ಷೀಯ ಚುನಾವಣೆಯಲ್ಲಿ ರಿಪಬ್ಲಿಕನ್ ಪಕ್ಷದ ಅಭ್ಯರ್ಥಿ ಡೊನಾಲ್ಡ್ ಟ್ರಂಪ್ ಮೇಲೆ ನಡೆದ ಗುಂಡಿನ ದಾಳಿಯ ಕಾರಣಕ್ಕೆ, 'ಬಂದೂಕು ಚರ್ಚೆ' ಮತ್ತೆ ಮುನ್ನೆಲೆಗೆ ಬಂದಿದೆ.

ಪ್ರಜಾವಾಣಿ ವಾರ್ತೆ

ಅಮೆರಿಕದ ಪೆನ್ಸಿಲ್ವೇನಿಯಾದ ಬಟ್ಲರ್ ಎಂಬಲ್ಲಿ ನಡೆದ ಗುಂಡಿನ ದಾಳಿಯಲ್ಲಿ ಅಮೆರಿಕದ ಮಾಜಿ ಅಧ್ಯಕ್ಷ, ರಿಪಬ್ಲಿಕನ್ ಪಕ್ಷದ ಅಧ್ಯಕ್ಷೀಯ ಅಭ್ಯರ್ಥಿ ಡೊನಾಲ್ಡ್ ಟ್ರಂಪ್ ಕೂದಲೆಳೆ ಅಂತರದಲ್ಲಿ ಪಾರಾಗಿದ್ದಾರೆ. ಬಂದೂಕು ಹಿಂಸಾಚಾರಕ್ಕೆ ಕುಖ್ಯಾತಿ ಪಡೆದಿರುವ ಅಮೆರಿಕದಲ್ಲಿ ಬಂದೂಕುಗಳ ನಿಯಂತ್ರಣ ಪ್ರತಿ ಚುನಾವಣೆಯ ಸಂದರ್ಭದಲ್ಲೂ ಚರ್ಚೆಯಾಗುವ ವಿಷಯ. ಬೇಕಾಬಿಟ್ಟಿ ಬಂದೂಕು ಮಾರಾಟ, ಬಳಕೆಗೆ ಕಡಿವಾಣ ಹಾಕಬೇಕು ಎಂಬ ಕೂಗು ದಶಕಗಳಿಂದಲೂ ಕೇಳಿ ಬರುತ್ತಿದೆ. ಆದರೆ, ನಿಯಂತ್ರಣ ಸಾಧ್ಯವಿಲ್ಲ. ಹೀಗಾಗಿ ಬಂದೂಕು ಹಿಂಸಾಚಾರ, ಕೊಲೆ ಪ್ರಕರಣಗಳು ಅಮೆರಿಕದಾದ್ಯಂತ ವರದಿಯಾಗುತ್ತಲೇ ಇವೆ.

ಜಗತ್ತಿನ ದೊಡ್ಡ ಆರ್ಥಿಕ ಶಕ್ತಿಯಾಗಿರುವ ಅಮೆರಿಕದಲ್ಲಿ ಬಂದೂಕು ಹೊಂದುವುದು ಪ್ರತಿಷ್ಠೆಯ ಸಂಕೇತ. ಪ್ರತಿ 100 ಜನ ಅಮೆರಿಕನ್ನರ ಬಳಿ 120.5 ಬಂದೂಕುಗಳಿವೆ ಎಂದು ಹೇಳುತ್ತದೆ ಸ್ವಿಟ್ಜರ್ಲೆಂಡ್ ಮೂಲದ ಸ್ಮಾಲ್ ಆರ್ಮ್ಸ್ ಸರ್ವೆ (ಎಸ್ಎಎಸ್). ಬೇರೆ ಯಾವುದೇ ದೇಶದ ಜನರಲ್ಲಿ ಈ ಮಟ್ಟದ ಬಂದೂಕು ಮೋಹ ಇಲ್ಲ. 2023ರ ಜೂನ್‌ನಲ್ಲಿ ಪ್ಯೂ ರಿಸರ್ಚ್ ಸೆಂಟರ್, ಅಮೆರಿಕದಲ್ಲಿ ಬಂದೂಕು ಬಳಕೆಗೆ ಸಂಬಂಧಿಸಿದಂತೆ ಅಧ್ಯಯನವೊಂದನ್ನು ನಡೆಸಿದೆ. ಇದರ ಪ್ರಕಾರ, ಶೇ 32ರಷ್ಟು ಜನರು (ಮೂರರಲ್ಲಿ ಒಂದರಷ್ಟು) ಸ್ವಂತ ಬಂದೂಕು ಹೊಂದಿದ್ದಾರೆ. ಶೇ 46ರಷ್ಟು ವಯಸ್ಕ ಅಮೆರಿಕನ್ನರು ಬಂದೂಕು ಇರುವ ಮನೆಗಳಲ್ಲಿ ವಾಸವಿದ್ದಾರೆ.

ವೈಯಕ್ತಿಕ ರಕ್ಷಣೆಯ ಉದ್ದೇಶದಿಂದ ತಾವು ಬಂದೂಕು ಹೊಂದಿರುವುದಾಗಿ ಸಮೀಕ್ಷೆಯಲ್ಲಿ ಭಾಗವಹಿಸಿದವರಲ್ಲಿ ಶೇ 72ರಷ್ಟು ಮಂದಿ ಅಭಿಪ್ರಾಯ ಪಟ್ಟಿದ್ದಾರೆ. ಬೇಟೆ, ಕ್ರೀಡಾ ಶೂಟಿಂಗ್, ಬಂದೂಕು ಸಂಗ್ರಹ, ಉದ್ಯೋಗದ ನಿಮಿತ್ತ ಬಂದೂಕು ಖರೀದಿಸುವವರೂ ಇದ್ದಾರೆ.

ಅಪರಾಧ ಪ್ರಕರಣಗಳು ಹೆಚ್ಚು: ಬಂದೂಕು ಖರೀದಿ, ಬಳಕೆ ಹೆಚ್ಚಿರುವುದರಿಂದ ಅಮೆರಿಕದಲ್ಲಿ ಹಿಂಸಾಚಾರಗಳೂ ಹೆಚ್ಚು ನಡೆಯುತ್ತಿವೆ. ಗುಂಡಿನ ದಾಳಿಯಲ್ಲಿ (ಆತ್ಮಹತ್ಯೆಯೂ ಸೇರಿದಂತೆ) ಪ್ರತಿ ದಿನ 132 ಮಂದಿ ಪ್ರಾಣ ಕಳೆದುಕೊಳ್ಳುತ್ತಾರೆ ಎಂದು ಎಫ್‌ಬಿಐ ಹೇಳಿದೆ. ಅಮೆರಿಕದ ರೋಗ ನಿಯಂತ್ರಣ ಮತ್ತು ತಡೆ ಕೇಂದ್ರಗಳ (ಸಿಡಿಸಿ) ಪ್ರಕಾರ, 2021ರಲ್ಲಿ ಬಂದೂಕು ದಾಳಿಯಲ್ಲಾದ ಗಾಯಗಳಿಂದ 48,830 ಸಾವು ಸಂಭವಿಸಿವೆ. ಇವುಗಳಲ್ಲಿ 26,328 ಸಾವು ಆತ್ಮಹತ್ಯೆ ಆಗಿದ್ದರೆ, 20,958 ಪ್ರಕರಣಗಳು (ಶೇ 43) ಗುಂಡಿನ ದಾಳಿ ನಡೆಸಿದ ಹತ್ಯೆಗಳಾಗಿವೆ. 2022ರಲ್ಲೂ ಬಂದೂಕಿನ ದಾಳಿಯಲ್ಲಿ ಮೃತಪಟ್ಟವರ ಸಂಖ್ಯೆ 40 ಸಾವಿರ ದಾಟಿತ್ತು.

ನಿಯಂತ್ರಣಕ್ಕೆ ಹೆಚ್ಚಿದ ಕೂಗು: ಬಂದೂಕುಗಳಿಂದಾಗುತ್ತಿರುವ ಅನಾಹುತಗಳಿಂದ ಆತಂಕಗೊಂಡಿರುವ ಅಮೆರಿಕದ ನಾಗರಿಕರು ಬಂದೂಕಿನ ಬಳಕೆ ಮೇಲೆ ನಿಯಂತ್ರಣ ಹೇರಬೇಕು ಎಂದು ಆಗ್ರಹಿಸುತ್ತಿದ್ದಾರೆ.

'ದೇಶದಲ್ಲಿ ಬಂದೂಕು ಹಿಂಸಾಚಾರ ದೊಡ್ಡ ಸಮಸ್ಯೆ' ಎಂದು ಪ್ಯೂ ರಿಸರ್ಚ್ ಸೆಂಟರ್ ನಡೆಸಿದ ಸಮೀಕ್ಷೆಯಲ್ಲಿ ಪ್ರತಿ 10ರಲ್ಲಿ 6 ಮಂದಿ (ಶೇ 61) ಅಭಿಪ್ರಾಯಪಟ್ಟಿದ್ದಾರೆ. 'ಬಂದೂಕು ಮಾರಾಟ, ಬಳಕೆ ಮೇಲೆ ನಿರ್ಬಂಧ ಹೇರಬೇಕು' ಎಂದು ಪ್ರತಿ 10ರಲ್ಲಿ ಆರು ಜನರು ಪ್ರತಿಪಾದಿಸಿದ್ದಾರೆ.

ರಾಜಕೀಯ ಪಕ್ಷಗಳ ಪೈಕಿ ರಿಪಬ್ಲಿಕನ್ ಪಕ್ಷದ ಸದಸ್ಯರು, ಬೆಂಬಲಿಗರು ಬಂದೂಕು ಬಳಕೆ, ಮಾರಾಟದ ಪರವಾಗಿದ್ದರೆ, ಡೆಮಾಕ್ರಟಿಕ್ ಪಕ್ಷದವರು ವಿರುದ್ಧವಾಗಿದ್ದಾರೆ. ಆದರೆ, ಏಕಕಾಲಕ್ಕೆ ಹೆಚ್ಚು ಗುಂಡುಗಳನ್ನು ಹೊಡೆಯುವ ಸಾಮರ್ಥ್ಯವಿರುವ ಬಂದೂಕುಗಳು ಮತ್ತು ಅಸಾಲ್ಟ್ ರೈಫಲ್‌ಗಳ ಮಾರಾಟ ಬಳಕೆಗೆ ನಿಯಂತ್ರಣ ಹೇರಬೇಕು ಎಂಬ ಅಭಿಪ್ರಾಯವನ್ನು ಉಭಯ ಪಕ್ಷಗಳ ಸದಸ್ಯರೂ ಹೊಂದಿದ್ದಾರೆ. ಅಲ್ಲದೇ, ಬಂದೂಕು ಖರೀದಿಸುವವರ ಕನಿಷ್ಠ ವಯಸ್ಸಿನ ಮಿತಿಯನ್ನು 21 ವರ್ಷಕ್ಕೆ ಏರಿಸಬೇಕು ಎಂಬ ಅಭಿಪ್ರಾಯಕ್ಕೆ ಧ್ವನಿಗೂಡಿಸಿದ್ದಾರೆ.

ಆಧಾರ: ಪ್ಯೂ ರಿಸರ್ಚ್ ಸೆಂಟರ್ ವರದಿ, ಬಿಬಿಸಿ, ದಿ ನ್ಯೂಯಾರ್ಕ್ ಟೈಮ್ಸ್, ಸಿಡಿಸಿ, ಅಮೆರಿಕ ನ್ಯಾಯಾಂಗ ಇಲಾಖೆ ವೆಬ್‌ಸೈಟ್

ಅಮೆರಿಕದಲ್ಲಿ ಬಂದೂಕು ಹೊಂದಿರುವವರು

- 38% ಬಿಳಿಯರು
- 24% ಕಪ್ಪು ವರ್ಣೀಯರು
- 20% ಹಿಸ್ಪಾನಿಯನ್ ಸಮುದಾಯ
- 10% ಏಷ್ಯಾದವರು
- 47% ಗ್ರಾಮೀಣ ಭಾಗದವರು
- 30% ಅರೆ ನಗರ/ಪಟ್ಟಣ ಪ್ರದೇಶದವರು
- 20% ನಗರ ಪ್ರದೇಶದವರು

ಯಾವ ವಯೋಗುಂಪಿನಲ್ಲಿ ಎಷ್ಟು ಬಂದೂಕು ಇವೆ

ವಯೋಗುಂಪು	ಪ್ರಮಾಣ
18–29 ವರ್ಷ	21%
30–49 ವರ್ಷ	33%
50–64 ವರ್ಷ	37%
65 ವರ್ಷಕ್ಕಿಂತ ಹೆಚ್ಚು ವಯಸ್ಸಿನವರು	35%

- 120.5 ಅಮೆರಿಕದ ಪ್ರತಿ 100 ಜನರ ಬಳಿ ಇರುವ ಬಂದೂಕುಗಳು
- 45% ಮನೆಗಳಲ್ಲಿ ಬಂದೂಕು ಹೊಂದಿರುವ ಅಮೆರಿಕನ್ನರು
- 32% ಸ್ವಂತ ಬಂದೂಕು ಹೊಂದಿರುವ ಅಮೆರಿಕನ್ನರು
- 48,830 2021ರಲ್ಲಿ ಬಂದೂಕಿನ ಗುಂಡಿನಿಂದಾದ ಗಾಯಗಳಿಂದ ಮೃತಪಟ್ಟವರು
- 20,958 2021ರಲ್ಲಿ ಗುಂಡಿನ ದಾಳಿಯಲ್ಲಿ ಹತ್ಯೆಗೀಡಾದವರು

ಬಂದೂಕು ದಾಳಿಗೆ ಕಾರಣಗಳು

- ಜನರಲ್ಲಿ ಹೆಚ್ಚುತ್ತಿರುವ ಅಭದ್ರತೆ ಭಾವನೆ ಮತ್ತು ಭಯ
- ಒತ್ತಡದ ಜೀವನ ಶೈಲಿ, ಹತಾಶ ಮನೋಭಾವ
- ಶಾಲೆ, ಕಾಲೇಜು, ಉದ್ಯೋಗ, ಹಣಕಾಸು ಮತ್ತಿತರ ವಿಚಾರಗಳಲ್ಲಿ ಅಸಂತೃಪ್ತಿ
- ಕೌಟುಂಬಿಕ ಸಮಸ್ಯೆ, ಹದಗೆಟ್ಟ ವೈವಾಹಿಕ–ಪ್ರೇಮ ಸಂಬಂಧ, ಅನಾರೋಗ್ಯ
- ಪುರುಷ ಪ್ರಧಾನ ಮನಃಸ್ಥಿತಿಯ ಅತಿರೇಕ (ಸಾಮೂಹಿಕ ಹತ್ಯೆ ಮಾಡಿದವರಲ್ಲಿ ಶೇ 98ರಷ್ಟು ಮಂದಿ ಪುರುಷರು)

ಬಂದೂಕು ನಿಯಮಗಳು ಏನು ಹೇಳುತ್ತವೆ?

ಅಮೆರಿಕದಲ್ಲಿ ಜನರು ಬಂದೂಕು/ಪಿಸ್ತೂಲ್/ರೈಫಲ್‌ಗಳನ್ನು ಸುಲಭವಾಗಿ ಖರೀದಿಸಬಹುದು. ಸಂವಿಧಾನದಲ್ಲೇ ಅದಕ್ಕೆ ಮಾನ್ಯತೆ ಇದೆ. ಬಂದೂಕು ಮಾರಲು ಪರವಾನಗಿ ಹೊಂದಿರುವ ಮಳಿಗೆಗಳಿಗೆ ಹೋದರೆ ಗರಿಷ್ಠ ಎಂದರೆ ಒಂದೂವರೆ ಗಂಟೆಯಲ್ಲಿ ಹೊಸ ಪಿಸ್ತೂಲ್/ಬಂದೂಕು/ರೈಫಲ್ ಕೈಗೆ ಸಿಗುತ್ತದೆ. ವ್ಯಕ್ತಿಯು ಉತ್ತಮ ಚಾರಿತ್ರ್ಯ ಹೊಂದಿದ್ದರೆ (ಖರೀದಿದಾರನ ಹಿನ್ನೆಲೆ ಪರಿಶೀಲಿಸಲಾಗುತ್ತದೆ) ಭಾರತದಲ್ಲಿ ಆಟಿಕೆ ಖರೀದಿಸಿದಂತೆ ಅಮೆರಿಕದಲ್ಲಿ ಬಂದೂಕು ಖರೀದಿಸಬಹುದು.

ಅಮೆರಿಕನ್ ರೌಂಡ್ಸ್ ಎಂಬ ಕಂಪನಿಯು ಟೆಕ್ಸಾಸ್, ಅಲಬಾಮ, ಓಕ್ಲಹೋಮ ರಾಜ್ಯಗಳಲ್ಲಿ ದಿನಸಿ ಮಳಿಗೆಗಳಲ್ಲಿ ಬಂದೂಕು ಮಾರುವ ಯಂತ್ರಗಳನ್ನು (ವೆಂಡಿಂಗ್ ಮೆಶೀನ್) ಅಳವಡಿಸಿದೆ.

ಬಂದೂಕುಗಳಿಗೆ ಸಂಬಂಧಿಸಿದಂತೆ ಅಮೆರಿಕದಲ್ಲಿ ಹಲವು ಕಾನೂನುಗಳಿವೆ. 1968ರಲ್ಲಿ ಜಾರಿಗೆ ಬಂದ ಬಂದೂಕು ನಿಯಂತ್ರಣ ಕಾಯ್ದೆ (ಜಿಸಿಎ) ಪ್ರಮುಖವಾದುದು. ಅದರ ಪ್ರಕಾರ,

- ಅಧಿಕೃತ ಪರವಾನಗಿ ಹೊಂದಿದ ಮಳಿಗೆಗಳಲ್ಲಿ ಮಾತ್ರ ಗನ್ ಖರೀದಿ ಮಾಡಬೇಕು
- ಅಪರಾಧ ಪ್ರಕರಣಗಳಲ್ಲಿ ಶಿಕ್ಷೆಗೆ ಗುರಿಯಾದವರು, ಮಾದಕ ದ್ರವ್ಯ ವ್ಯಸನಿಗಳು, ಅಕ್ರಮ ಮಾದಕ ದ್ರವ್ಯಗಳ ಬಳಕೆದಾರರು ಖರೀದಿಸು-ವಂತಿಲ್ಲ
- ಮಾನಸಿಕ ಅಸ್ವಸ್ಥರಿಗೆ ಮಾರಾಟ ಮಾಡುವಂತಿಲ್ಲ
- ಸಶಸ್ತ್ರ ಪಡೆಗಳಿಂದ ವಜಾಗೊಂಡವರಿಗೆ ಮಾರುವಂತಿಲ್ಲ
- ಅಮೆರಿಕ ಪೌರತ್ವ ತೊರೆದವರು, ಅಕ್ರಮ ವಲಸಿಗರು ಖರೀದಿಸುವಂತಿಲ್ಲ
- ಕೌಟುಂಬಿಕ ದೌರ್ಜನ್ಯ ಪ್ರಕರಣ-ಗಳಲ್ಲಿ ಶಿಕ್ಷೆಗೆ ಗುರಿಯಾದವರಿಗೂ ಮಾರಾಟ ಮಾಡುವಂತಿಲ್ಲ
- 18 ವರ್ಷಕ್ಕಿಂತ ಕಡಿಮೆ ವಯಸ್ಸಿನವರು ಬಂದೂಕು ಹೊಂದುವಂತಿಲ್ಲ

1986ರಲ್ಲಿ ಜಾರಿಗೆ ಬಂದ ಬಂದೂಕು ಮಾಲೀಕರ ರಕ್ಷಣಾ ಕಾಯ್ದೆಯಲ್ಲಿ ಕೆಲವು ನಿಯಮಗಳನ್ನು ಸಡಿಲಗೊಳಿಸಿದ್ದರಿಂದ ಬಂದೂಕುಗಳ ದುರ್ಬಳಕೆಗೂ ದಾರಿ ಮಾಡಿಕೊಟ್ಟಿತು. ಈ ಕಾಯ್ದೆಯ ಅಡಿಯಲ್ಲಿ ಬಂದೂಕು ಮಾರಾಟ ಮೇಳ ಆಯೋಜನೆಗೆ ಅವಕಾಶ ನೀಡಲಾಗಿತ್ತು.

1980ರ ದಶಕದ ಆರಂಭದಲ್ಲಿ ಶಾಲೆಗಳಲ್ಲಿ ಗುಂಡಿನ ದಾಳಿ ಪ್ರಕರಣ ಹೆಚ್ಚಾದ ಬಳಿಕ ಬಂದೂಕು ಮುಕ್ತ ಶಾಲಾ ವಲಯಗಳ ಕಾಯ್ದೆ, 1994ರಲ್ಲಿ ಯುವಜನರ ಹ್ಯಾಂಡ್‌ಗನ್ ಸುರಕ್ಷತಾ ಕಾಯ್ದೆಯನ್ನು ಅಮೆರಿಕ ಜಾರಿಗೊಳಿಸಿತ್ತು. 18 ವರ್ಷದ ಒಳಗಿನ ಮಕ್ಕಳು ಹ್ಯಾಂಡ್‌ಗನ್ ಹೊಂದುವುದನ್ನು ಮತ್ತು 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ವಯಸ್ಕರು ಬಂದೂಕು ಕೊಡುವುದನ್ನು ಈ ಕಾನೂನು ನಿರ್ಬಂಧಿಸುತ್ತದೆ.

ಅಮೆರಿಕದಲ್ಲಿ ಜಾರಿಯಲ್ಲಿರುವ ಕಾನೂನಿನ ಆಧಾರದಲ್ಲಿ ವಿವಿಧ ರಾಜ್ಯಗಳು ಮತ್ತು ನಗರಗಳು ಪ್ರತ್ಯೇಕ ನಿಯಮ ರೂಪಿಸುವುದಕ್ಕೆ ಅವಕಾಶ ಇದೆ.

ಕಠಿಣ ಕಾನೂನಿಗೆ ಟ್ರಂಪ್ ವಿರೋಧ





ಅಮೆರಿಕದ ಅಧ್ಯಕ್ಷೀಯ ಚುನಾವಣೆಯಲ್ಲಿ ಸ್ಪರ್ಧಿಸಿರುವ ಡೊನಾಲ್ಡ್ ಟ್ರಂಪ್ ಮತ್ತು ಡೆಮಾಕ್ರಟಿಕ್ ಪಕ್ಷದ ಜೋ ಬೈಡನ್ ನಡುವೆ ಬಂದೂಕಿಗೆ ಸಂಬಂಧಿಸಿದ ಕಾನೂನಿನ ಬಗ್ಗೆಯೂ ಪರಸ್ಪರ ವಿರುದ್ಧ ಅಭಿಪ್ರಾಯಗಳಿವೆ.

ಬಂದೂಕು ಕೊಳ್ಳುವವರ ಹಿನ್ನೆಲೆ ಪರಿಶೀಲನೆ ಮತ್ತು ಇತರ ಬಿಗಿ ನಿಯಮಗಳನ್ನು ಜಾರಿಗೊಳಿಸುವ ಮೂಲಕ ಜೋ ಬೈಡನ್ ಬಂದೂಕು ಭದ್ರತಾ ಕಾನೂನು ಜಾರಿಗೆ ತಂದಿದ್ದರು. ಅವರು 'ಘೋಸ್ಟ್ ಗನ್' (ಬಿಡಿ ಭಾಗ ತಂದು ಜೋಡಿಸಿದ ಬಂದೂಕು) ಅನ್ನು ನಿಷೇಧ ಮಾಡಿದ್ದರು. ನಿರ್ದಿಷ್ಟ ಬಗೆಯ ಹಾಗೂ ಉನ್ನತ ಸಾಮರ್ಥ್ಯದ ಬಂದೂಕುಗಳ ಮೇಲೆ ನಿಷೇಧ ಹೇರುವಂತೆ ಅವರು ಅಮೆರಿಕ ಕಾಂಗ್ರೆಸ್ ಮೇಲೆ ನಿರಂತರ ಒತ್ತಡ ಹೇರಿದ್ದರು.

ಆದರೆ, ಟ್ರಂಪ್ ಅವರು ಬಂದೂಕುಗಳ ನಿಯಂತ್ರಣದ ವಿರುದ್ಧವಾಗಿದ್ದಾರೆ. ಅವರು ಅಧಿಕಾರದಲ್ಲಿದ್ದಾಗ ಬಂದೂಕು ಕಾನೂನನ್ನು ಸಡಿಲಗೊಳಿಸಿದ್ದರು. ಆದರೆ, ಅರೆ ಸ್ವಯಂಚಾಲಿತ ಬಂದೂಕುಗಳು ಅತ್ಯಂತ ವೇಗವಾಗಿ ಗುಂಡು ಹಾರಿಸಲು ನೆರವಾಗುತ್ತಿದ್ದ ಬಿಡಿ ಭಾಗಗಳ ಮೇಲೆ ನಿಷೇಧ ಹೇರಿದ್ದರು. ನ್ಯಾಷನಲ್ ರೈಫಲ್ ಅಸೋಸಿಯೇಷನ್ (ಎನ್‌ಆರ್‌ಎ) ಪ್ರತಿ-ಪಾದನೆಯನ್ನು ಒಪ್ಪಿಕೊಂಡಿದ್ದ ಅವರು, ತಾವು ಅಧಿಕಾರಕ್ಕೆ ಬಂದರೆ ಬೈಡನ್ ಜಾರಿಗೆ ತಂದಿರುವ ಬಂದೂಕು ಬಗೆಗಿನ ಎಲ್ಲ ಬಿಗಿ ನಿಯಮಗಳನ್ನು ಹಿಂಪಡೆಯುವುದಾಗಿ ಇತ್ತೀಚೆಗೆ ಘೋಷಿಸಿದ್ದಾರೆ.

ಎನ್‌ಆರ್‌ಎ ಲಾಬಿ

ನ್ಯಾಷನಲ್ ರೈಫಲ್ ಅಸೋಸಿಯೇಷನ್ (ಎನ್‌ಆರ್‌ಎ) ಎನ್ನುವುದು ಅಮೆರಿಕದಲ್ಲಿ ಬಂದೂಕು ಬಳಕೆಯನ್ನು ಉತ್ತೇಜಿಸುವ ಸಂಸ್ಥೆ. ಇದು 30 ಲಕ್ಷ ಸದಸ್ಯರನ್ನು ಹೊಂದಿದೆ. 1871ರಲ್ಲಿ ಆರಂಭವಾದ ಸಂಸ್ಥೆಯು, ಅಮೆರಿಕದ ಅತ್ಯಂತ ಬಲಿಷ್ಠ ರಾಜಕೀಯ ಸಂಘಟನೆಯಾಗಿ ಬೆಳೆದಿದೆ. ಬಂದೂಕುಗಳು ದೇಶಕ್ಕೆ ಹೆಚ್ಚು ಭದ್ರತೆ ನೀಡುತ್ತವೆ ಎಂದು ಪ್ರತಿಪಾದಿಸುವ ಎನ್‌ಆರ್‌ಎ, ಬಂದೂಕುಗಳ ಮೇಲೆ ನಿರ್ಬಂಧ ವಿಧಿಸುವ ಕಾನೂನು, ನಿಯಮಗಳನ್ನು ವಿರೋಧಿಸುತ್ತದೆ.

ಅಮೆರಿಕ ಸಂವಿಧಾನದ ಎರಡನೇ ತಿದ್ದುಪಡಿಯನ್ನು ಬಲವಾಗಿ ಸಮರ್ಥಿಸುವ ಎನ್‌ಆರ್‌ಎ, ತನ್ನ ನಿಲುವುಗಳನ್ನು ಬೆಂಬಲಿಸುವ ರಾಜಕಾರಣಿಗಳು ಹಾಗೂ ಅಧಿಕಾರಸ್ಥರಿಗೆ ನೇರವಾಗಿ ದೊಡ್ಡ ಮೊತ್ತದ ಧನಸಹಾಯ ಮಾಡುತ್ತದೆ. ಅಮೆರಿಕದ ಕೆಲವು ಶಾಲೆಗಳಲ್ಲಿ ಬಂದೂಕು ದಾಳಿಗಳು ನಡೆದು, ಹಲವು ಮಕ್ಕಳು ಬಲಿಯಾದಾಗ ಬಂದೂಕು ಬಳಕೆಗೆ ನಿರ್ಬಂಧ ಹೇರಬೇಕೆನ್ನುವ ಕೂಗು ಎದ್ದಿತ್ತು. ಆಗಲೂ ಅದನ್ನು ವಿರೋಧಿಸಿದ್ದ ಎನ್‌ಆರ್‌ಎ, ಬಂದೂಕು ನಿರ್ಬಂಧದ ಬದಲಿಗೆ ಶಾಲೆಗಳಲ್ಲಿ ಹೆಚ್ಚು ಭದ್ರತೆ ಕೈಗೊಳ್ಳುವಂತೆ ಸಲಹೆ ನೀಡಿತ್ತು.

ಸಿನಿ ಬಿಟ್ಸ್

'ಕಣಂಜಾರು' ಟೀಸರ್‌ಗೆ ಮೆಚ್ಚುಗೆ

ಬಹುತೇಕ ಹೊಸಬರಿಂದಲೇ ಕೂಡಿರುವ 'ಕಣಂಜಾರು' ಚಿತ್ರದ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಆರ್.ಬಾಲಚಂದ್ರ ಚಿತ್ರವನ್ನು ನಿರ್ದೇಶಿಸಿ, ನಾಯಕನಾಗಿಯೂ ಕಾಣಿಸಿಕೊಂಡಿದ್ದಾರೆ.

ಆರ್.ಪಿ. ಫಿಲಂಸ್ ಬ್ಯಾನರ್ ಅಡಿಯಲ್ಲಿ ನಿರ್ಮಾಣವಾಗುತ್ತಿರುವ ಈ ಚಿತ್ರ ಸಸ್ಪೆನ್ಸ್, ಥ್ರಿಲ್ಲರ್ ಕಥೆ ಹೊಂದಿದೆ. 'ಟೀಸರ್ ಈಗಾಗಲೇ ಹನ್ನೆರಡು ಲಕ್ಷಕ್ಕೂ ಹೆಚ್ಚು ವೀಕ್ಷಣೆಯಾಗಿದೆ. ಈ ಹಿಂದೆ ಬಿಡುಗಡೆಯಾಗಿದ್ದ ಟೈಟಲ್ ಮೋಷನ್ ಪೋಸ್ಟರ್ ಕೂಡ ಮೂರುವರೆ ಲಕ್ಷ ವೀಕ್ಷಣೆಯಾಗುವ ಮೂಲಕ ಎಲ್ಲರ ಮೆಚ್ಚುಗೆ ಗಳಿಸಿತ್ತು' ಎಂದು ಖುಷಿ ಹಂಚಿಕೊಂಡರು ನಿರ್ದೇಶಕರು.

ಈ ಚಿತ್ರದಲ್ಲಿ ನಾಯಕಿಯಾಗಿ 'ಕೃಷ್ಣ ಟಾಕೀಸ್' ಖ್ಯಾತಿಯ ನಟಿ ಅಪೂರ್ವ ನಟಿಸಿದ್ದಾರೆ. ಚಿತ್ರದಲ್ಲಿ ಮೂರು ಹಾಡುಗಳಿದ್ದು ಹರ್ಷವರ್ಧನ್‌ರಾಜ್ ಸಂಗೀತ ನೀಡಿದ್ದಾರೆ. ಶಶಾಂಕ್ ಶೇಷಗಿರಿ ಅವರ ಹಿನ್ನೆಲೆ ಸಂಗೀತ, ಮಂಜುನಾಥ ಹೆಗ್ಡೆ ಛಾಯಾ-ಚಿತ್ರಗ್ರಹಣವಿದ್ದು, ಮುಂದಿನ ತಿಂಗಳು ಚಿತ್ರವನ್ನು ರಿಲೀಸ್ ಮಾಡುವ ಆಲೋಚನೆಯ-ಲ್ಲಿದೆ ಚಿತ್ರತಂಡ. ಶರ್ಮಿತಾ ಗೌಡ, ಹಿರಿಯ ನಟ ರಾಮಕೃಷ್ಣ, ಪಿ.ಎಸ್. ಶ್ರೀಧರ್, ಮೇಘ ಸೇರಿದಂತೆ ಸಾಕಷ್ಟು ಕಲಾವಿದರು ಈ ಚಿತ್ರದಲ್ಲಿ ನಟಿಸಿದ್ದಾರೆ.

ಅಪೂರ್ವ

ಸೆಟ್ಟೇರಲು ಸಿದ್ಧವಾದ 'ಮ್ಯಾಡಿ'

ಚಿತ್ರರಂಗದಲ್ಲಿ ಹಲವು ವಿಭಾಗಗಳಲ್ಲಿ ದುಡಿದ ಒಂದಷ್ಟು ಮನಸ್ಸುಗಳು ಒಟ್ಟಾಗಿ ನಿರ್ಮಿಸುತ್ತಿರುವ 'ಮ್ಯಾಡಿ' ಚಿತ್ರ ಸೆಟ್ಟೇರಲು ಸಿದ್ಧವಾಗಿದೆ. ಇತ್ತೀಚೆಗಷ್ಟೇ ಚಿತ್ರದ ಪ್ರಚಾರಕ್ಕಾಗಿ ಸಿದ್ಧಪಡಿಸಿದ ಹಾಡೊಂದು ಬಿಡುಗಡೆಗೊಂಡಿದೆ.

ಮಹೇಶ್ಮತಿ ಬ್ಯಾನರ್ ಅಡಿಯಲ್ಲಿ ಸರಸ್ವತಿ.ಆರ್.ನಾಗೇಶ್ ನಿರ್ಮಿಸುತ್ತಿರುವ ಚಿತ್ರಕ್ಕೆ ನಾಗಭೂಷಣ್ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ಬಹಳಷ್ಟು ವರ್ಷಗಳಿಂದ ಸಹ ನಿರ್ದೇಶಕನಾಗಿ ಕೆಲಸ ಮಾಡಿರುವ ಧನುಷ್ ಕುಮಾರ್ ನಾಯಕ. ಮಾಜಿ ಸಚಿವರಾದ ಹೆಚ್.ಎಂ.ರೇವಣ್ಣ, ನಿರ್ಮಾಪಕ ಉಮಾಪತಿ ಶ್ರೀನಿವಾಸ್ ಗೌಡ ಸೇರಿದಂತೆ ಚಿತ್ರರಂಗದ ಹಲವು ಗಣ್ಯರು ಕಾರ್ಯಕ್ರಮದಲ್ಲಿ ಹಾಜರಿದ್ದು ತಂಡಕ್ಕೆ ಶುಭ ಕೋರಿದರು.'ನನಗೆ ಬಾಲ್ಯದಿಂದಲೂ ಸಿನಿಮಾ ಬಗ್ಗೆ ಆಸಕ್ತಿ. ಹ್ಯಾಟ್ರಿಕ್ ಹೀರೋ ಶಿವರಾಜ್‌ಕುಮಾರ್ ಅಭಿಮಾನಿ. ನಾನು ಹೀರೋ ಆಗಬೇಕೆಂಬ ನನ್ನ ಕನಸಿಗೆ ಮಾರ್ಗದರ್ಶನ ನೀಡಿದ್ದೆ ನನ್ನ ಗುರು 'ಭರ್ಜರಿ' ಚೇತನ್ ಕುಮಾರ್. ಡ್ಯಾನ್ಸ್, ಫೈಟ್, ನಟನೆ ಕಲಿತು ಈಗ ಜನರ ಮುಂದೆ ಬರುತ್ತಿದ್ದೇನೆ. ಇದರಲ್ಲಿ ನನ್ನ ಪಾತ್ರ ಕೂಡ ಒಂದು ರೀತಿ ಮ್ಯಾಡ್ ಆಗಿ ಇರುತ್ತದೆ. ಇದೊಂದು ವಿಭಿನ್ನ ಗ್ಯಾಂಗ್‌ಸ್ಟರ್ ಚಿತ್ರ' ಎಂದು ಮಾಹಿತಿ ನೀಡಿದರು ನಾಯಕ ಧನುಷ್. ಬೆಂಗಳೂರು, ಉತ್ತರ ಕರ್ನಾಟಕ , ಕೋಲಾರ ಸೇರಿದಂತೆ ಹಲವು ಭಾಗಗಳಲ್ಲಿ ಚಿತ್ರೀಕರಣ ಮಾಡಲು ತಂಡ ಸಿದ್ಧತೆ ಮಾಡಿಕೊಂಡಿದೆ. ಚಿತ್ರದಲ್ಲಿ ಐದು ಹಾಡುಗಳಿದ್ದು ಧರ್ಮ ವಿಶ್ವ ಸಂಗೀತ ನೀಡಲಿದ್ದಾರೆ. ಲವಿತ್ ಛಾಯಾಚಿತ್ರಗ್ರಹಣವಿದೆ.

ಧನುಷ್ ಕುಮಾರ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

✗ ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಮೇಲೆ ಶನಿವಾರ ಗುಂಡಿನ ದಾಳಿ ನಡೆದಿದ್ದು, ಘಟನೆಯಲ್ಲಿ ಟ್ರಂಪ್ ಅವರ ಕಿವಿಗೆ ಗಾಯವಾಗಿದೆ. ಅದರ ಬೆನ್ನಲ್ಲೇ ಸಾಮಾಜಿಕ ಜಾಲತಾಣದಲ್ಲಿ ಕೊಲೆ ಯತ್ನ ನಡೆಸಿದ್ದಾರೆ ಎನ್ನಲಾದ ಮಾರ್ಕ್ ವೈಲೆಟ್ಸ್ ಎನ್ನುವವರ ಚಿತ್ರ ಹರಿದಾಡುತ್ತಿದೆ. 'ಅವರು ಕೊಲೆಗೂ ಮುಂಚೆ ಯೂ ಟ್ಯೂಬ್‌ನಲ್ಲಿ ವಿಡಿಯೊ ಒಂದನ್ನು ಅಪ್‌ಲೋಡ್ ಮಾಡಿದ್ದಾರೆ, ಟ್ರಂಪ್‌ಗೆ ಗುಂಡು ಹಾರಿಸಿದ ನಂತರ ವೈಲೆಟ್ಸ್ ಅನ್ನು ಹತ್ಯೆ ಮಾಡಲಾಗಿದೆ' ಎಂದು ಕೆಲವರು ಉಲ್ಲೇಖಿಸುತ್ತಿದ್ದಾರೆ. ಕೆಲವು ಮಾಧ್ಯಮಗಳೂ ವೈಲೆಟ್ಸ್ ಚಿತ್ರ ಬಳಸಿ ಈ ಸುದ್ದಿ ವರದಿ ಮಾಡಿವೆ. ಆದರೆ, ಇದು ಸುಳ್ಳು ಸುದ್ದಿ.

✓ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಚಿತ್ರ ಮತ್ತು ಅವರ ಹೆಸರನ್ನು ಬಳಸಿ ಹುಡುಕಾಟ ನಡೆಸಿದಾಗ, ಅವರು ಇಟಲಿಯ ಫುಟ್‌ಬಾಲ್ ವೀಕ್ಷಕ ವಿವರಣೆಗಾರ, ಪತ್ರಕರ್ತ ಮಾರ್ಕೊ ವಿಯೋಲಿ ಎನ್ನುವುದು ತಿಳಿದುಬಂತು. ಟ್ರಂಪ್ ಹತ್ಯಾ ಯತ್ನಕ್ಕೂ ವಿಯೋಲಿಗೂ ಸಂಬಂಧ ಇಲ್ಲ. ಈ ಬಗ್ಗೆ ವಿಯೋಲಿ ತನ್ನ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ಸ್ಪಷ್ಟೀಕರಣ ನೀಡಿದ್ದಾರೆ. ತನ್ನನ್ನು ದ್ವೇಷಿಸುವವರ ಒಂದು ಗುಂಪು ಸುಳ್ಳು ಸುದ್ದಿ ಹಬ್ಬಲು ಕಾರಣವಾಗಿದ್ದು, ಅವರ ವಿರುದ್ಧ ಕ್ರಿಮಿನಲ್ ಪ್ರಕ್ರಿಯೆ ನಡೆಸುತ್ತೇನೆ ಎಂದು ಪ್ರಕಟಿಸಿದ್ದಾರೆ. ಈ ಬಗ್ಗೆ ಬೂಮ್ ಫ್ಯಾಕ್ಟ್ ಚೆಕ್ ಮಾಡಿದೆ.

ಗುಂಡಣ್ಣ

ನುಡಿ ಬೆಳಗು

ಸಾವನ್ನೂ ಸಕಾರಾತ್ಮಕವಾಗಿ ಸ್ವೀಕರಿಸಲು ಸಾಧ್ಯ

ಎಚ್.ಎಸ್.ನವೀನಕುಮಾರ್, ಹೊಸದುರ್ಗ

ಮಾನವನ ಬದುಕಿನಲ್ಲಿ ಹುಟ್ಟಿನಷ್ಟೇ ಸಹಜವಾದದ್ದು ಸಾವು. ಅದು ಯಾವಾಗ ಬರುವುದೆಂಬುದು ಯಾರಿಗೂ ತಿಳಿಯದ ರಹಸ್ಯ. ಸಾವೆಂಬುದು ಪ್ರತಿಯೊಬ್ಬರ ಬದುಕಿನ ಅನಿವಾರ್ಯವೆಂಬ ಸತ್ಯದ ಅರಿವಿದ್ದರೂ, ಇಷ್ಟೇ ದಿನಗಳಲ್ಲಿ ಮರಣ ಸಂಭವಿಸುತ್ತದೆ ಎಂಬುದು ಯಾರಿಗಾದರೂ ಮೊದಲೇ ತಿಳಿದರೆ ಅವರ ಪ್ರತಿಕ್ರಿಯೆ ಹೇಗಿರಲು ಸಾಧ್ಯ? ಇಂತಹ ಸಂದರ್ಭದಲ್ಲಿಯೂ ವ್ಯಕ್ತಿ ಧನಾತ್ಮಕವಾಗಿ ಯೋಚಿಸಲು ಸಾಧ್ಯವಿದೆಯೇ? ಇದೆ ಎಂದು ಜಗತ್ತಿಗೆ ತೋರಿಸಿದ ವ್ಯಕ್ತಿಯೇ ರಾಂಡಾಲ್ಫ್ ಫ್ರೆಡ್ರಿಕ್ ಪಾಶ್. 1960ರಲ್ಲಿ ಅಮೆರಿಕದ ಬಾಲ್ಟಿಮೋರ್‌ನಲ್ಲಿ ಜನಿಸಿದ ಪಾಶ್ ಕಂಪ್ಯೂಟರ್ ವಿಜ್ಞಾನಿ ಹಾಗೂ ಯಶಸ್ವಿ ಪ್ರಾಧ್ಯಾಪಕ. ಡಿಸ್ನಿಲ್ಯಾಂಡ್‌ನಲ್ಲಿ ವರ್ಚುಯಲ್ ಎಂಜಿನಿಯರ್ ಆಗಿ ಕೂಡ ಕೆಲಸ ಮಾಡಿದ್ದ ಪಾಶ್, ತನ್ನ ಚಿಕ್ಕ ವಯಸ್ಸಿನಲ್ಲಿಯೇ ಪರಿಶ್ರಮ ಹಾಗೂ ಬುದ್ಧಿವಂತಿಕೆಯಿಂದ ಸಿರಿವಂತರಾಗಿದ್ದರು. ಒಳ್ಳೆಯ ಕುಟುಂಬ, ಚಂದದ ಮನೆ ಮಡದಿ ಮಕ್ಕಳು... ಹೀಗೆ ಬದುಕಿನಲ್ಲಿ ನೆಮ್ಮದಿಯಾಗಿರಲು ಅಗತ್ಯವಿರುವ ಅಂಶಗಳೆಲ್ಲ ಪಾಶ್ ಬದುಕಿನಲ್ಲಿತ್ತು. ಆದರೆ 2008ರಲ್ಲಿ ಅಂದರೆ 48ನೇ ವಯಸ್ಸಿನಲ್ಲಿ ಅವರು ಟರ್ಮಿನಲ್ ಪ್ಯಾಂಕ್ರಿಯಾಟಿಕ್ ಕ್ಯಾನ್ಸರ್‌ಗೆ ಒಳಗಾಗುತ್ತಾರೆ. ವೈದ್ಯರು 'ನೀವಿನ್ನು ಮೂರು ತಿಂಗಳು ಬದುಕಿರುತ್ತೀರಿ' ಎಂಬ ಕಠೋರ ಸತ್ಯವನ್ನು ಇವರಿಗೆ ಹೇಳುತ್ತಾರೆ. ಇಂತಹ ಸಂದರ್ಭದಲ್ಲಿ ಎಂತಹ ಧನಾತ್ಮಕ ವ್ಯಕ್ತಿಯಾದರೂ ಎದೆಗುಂದುವುದು ಸಹಜ. ಆರಂಭಿಕ ಆಘಾತದಿಂದ ಹೊರಬಂದ ಪಾಶ್, ಸಾವನ್ನೂ ಹೇಗೆ ಧನಾತ್ಮಕವಾಗಿ ನೋಡಬಹುದು ಎಂಬುದನ್ನು ಜಗತ್ತಿಗೆ ತೋರಿಸಿ ಮಾದರಿಯಾಗುತ್ತಾರೆ. 'ನನ್ನ ಕಾಯಿಲೆಯನ್ನು ಗುರುತಿಸಿದ ವೈದ್ಯರೂ ಅತ್ಯಂತ ಧನಾತ್ಮಕ ವ್ಯಕ್ತಿ. ಅವರು, 'ಮೂರು ತಿಂಗಳಲ್ಲಿ ನೀನು ಸಾಯುತ್ತಿ ಎಂದು ಹೇಳಲಿಲ್ಲ; ಬದಲಿಗೆ ಮೂರು ತಿಂಗಳು ನೀನು ಬದುಕಿರುತ್ತಿ' ಎಂದರು. ಆಗ ನನಗೆ ಏನಾದರೂ ಮಾಡಲು ಇನ್ನೂ ಮೂರು ತಿಂಗಳು ಅವಕಾಶವಿದೆ ಎಂದೆನ್ನಿಸಿತು' ಎನ್ನುವ ಪಾಶ್, ಈ ಅವಧಿಯಲ್ಲಿ ತಾವು ಕಲಿತಿದ್ದ ಅಮೆರಿಕದ ಕಾರ್ನೆಗಿ ಮೆಲ್ಲನ್ ಯೂನಿವರ್ಸಿ-ಟಿಯಲ್ಲಿ 'ರಿಯಲಿ ಅಚೀವಿಂಗ್ ಯುವರ್ ಚೈಲ್ಡ್‌ಹುಡ್ ಡ್ರೀಮ್ಸ್' ಎನ್ನುವ ವಿಷಯದ ಕುರಿತು ಒಂದು ವಿಶೇಷ ಉಪನ್ಯಾಸ ನೀಡುತ್ತಾರೆ. ಇದು 'ದಿ ಲಾಸ್ಟ್ ಲೆಕ್ಚರ್' ಎಂಬ ಹೆಸರಿನಲ್ಲಿ ಅತ್ಯಂತ ಜನಪ್ರಿಯವಾಗುತ್ತದೆ. ನೊಂದವರಿಗೆ, ಕುಗ್ಗಿ ಹೋದವರಿಗೆ ಇದು ಸಕಾರಾತ್ಮ-ಕತೆಯ ಸೆಲೆಯುಕ್ಕುವಂತೆ ಮಾಡುತ್ತದೆ.

ಈ ಉಪನ್ಯಾಸದಲ್ಲಿ, ಬದುಕಿನಲ್ಲಿ ಪ್ರತಿಯೊಂದು ಸನ್ನಿವೇಶವನ್ನೂ ನಾವು ಹೇಗೆ ಧನಾತ್ಮಕವಾಗಿ ನೋಡಬಹುದು ಎಂಬುದರ ಅದ್ಭುತ ಚಿತ್ರಣ ನೀಡುವ ಪಾಶ್, ಈ ರೀತಿಯ ಆಲೋಚನೆ ಇದ್ದರೆ ಯಾವುದೇ ಕ್ಷಣದಲ್ಲಿ ಸಾವು ಎದುರಾದರೂ ನಾವದನ್ನು ಸಕಾರಾತ್ಮಕವಾಗಿ ಸ್ವೀಕರಿಸಲು ಸಾಧ್ಯ ಎನ್ನುವುದನ್ನು ಮನವರಿಕೆ ಮಾಡಿಕೊಡುತ್ತಾರೆ. ಇದಕ್ಕೆ ಕೊಡುವ ಹಲವಾರು ಉದಾಹರಣೆಗಳ-ಲ್ಲಿ ಒಂದು ಉದಾಹರಣೆ ಇಲ್ಲಿ ಉಲ್ಲೇಖಾರ್ಹ. ಡಿಸ್ನಿಲ್ಯಾಂಡ್‌ನ ಗೇಟ್‌ಕೀಪರ್‌ಗಳ ಉದಾಹರಣೆಯ-ನ್ನು ನೀಡುತ್ತಾ 'ಡಿಸ್ನಿ ಲ್ಯಾಂಡಿನ ಗೇಟ್‌ಕೀಪರ್ ಬಳಿ ಇಲ್ಲಿನ ಗೇಟ್‌ಗಳು ಎಷ್ಟು ಹೊತ್ತಿಗೆ 'ಮುಚ್ಚುತ್ತವೆ' ಎಂದು ಕೇಳಿ ನೋಡಿ, ಆಗವರು ಇವು ಸಂಜೆ ಎಂಟು ಗಂಟೆಯವರೆಗೂ 'ತೆರೆದಿರುತ್ತವೆ' ಎಂದು ಉತ್ತರಿ-ಸುತ್ತಾರೆ. ಮುಚ್ಚುವುದು ಹಾಗೂ ತೆರೆದಿರುವುದು ಇಲ್ಲಿ ಒಂದೇ ಅರ್ಥವನ್ನು ನೀಡುತ್ತವೆ. ಆದರೆ ಅದರ ಸಕಾರಾತ್ಮಕತೆಯಲ್ಲಿ ಬಹುದೊಡ್ಡ ವ್ಯತ್ಯಾಸವಿದೆ. ನಮ್ಮ ಬದುಕನ್ನು ಹಾಗೆಯೇ ನಾವು ಎಲ್ಲಿಯವರೆಗೆ ತೆರೆದಿರುತ್ತದೆ ಎಂಬುದಾಗಿ ಯೋಚಿಸುತ್ತಾ ಬದುಕಬೇಕು' ಎನ್ನುತ್ತಾರೆ.

ಎಷ್ಟು ವಿಶೇಷವಾಗಿದೆಯಲ್ಲವೇ ಈ ಚಿಂತನೆ? ಪಾಶ್ ಅವರ ಈ ವಿಶೇಷ ಪುಸ್ತಕ 'ದಿ ಲಾಸ್ಟ್ ಲೆಕ್ಚರ್' ಕನ್ನಡದಲ್ಲೂ ಲಭ್ಯ. ಉಮೇಶ್ ಎಸ್. ಅವರು ಇದನ್ನು ಉತ್ತಮವಾಗಿ ಕನ್ನಡೀಕರಿಸಿದ್ದಾರೆ. ಎಲ್ಲರೂ ಖಂಡಿತವಾಗಿ ಓದಬೇಕಾದ ಪುಸ್ತಕ ಇದು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಜುಲೈ 15, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಆಷಾಢ ಶುಕ್ಲ ನವಮಿ ಗಂ. 19-20 ನಕ್ಷತ್ರ: ಸ್ವಾತಿ ಗಂ. 24-30 ಯೋಗ: ಸಿದ್ಧ ಗಂ. 7-00 ಕರಣ: ಬಾಲವ ಗಂ. 6-27, ಮಿಥುನ ಮಾಸದ 30 ನೇ ದಿನ, ಮಳೆನಕ್ಷತ್ರ: ಪುನರ್ವಸು 3.
ರಾಹುಕಾಲ : ಬೆಳಿಗ್ಗೆ 07-30 – 09-00
ಸೂರ್ಯೋದಯ : 06-15 ಸೂರ್ಯಾಸ್ತ : 06-58
ಮುಸ್ಲಿಂ ದಿನಾಂಕ : 08 ಮೊಹರಮ್
ಅದೃಷ್ಟ ಸಂಖ್ಯೆ : 2, 9

ಮೇಷ: ಮಕ್ಕಳಿಂದ ದುಬಾರಿ ಬೆಲೆಯ ವಸ್ತುಗಳ ಖರೀದಿಯ ಒತ್ತಡ ಬರುವುದು. ಜಗದ್ಗುರುವಿನ ಸೇವೆಯಿಂದ ಪುಣ್ಯ ಪ್ರಾಪ್ತಿ ಜತೆಗೆ ಶುಭ ದೊರಕುವುದು. ಸ್ವಯಂ ಉದ್ಯೋಗಿಗಳಿಗೆ ಶ್ರಮಕ್ಕೆ ತಕ್ಕ ಪ್ರತಿಫಲವಿರುವುದು.

ವೃಷಭ: ಸಮಯ ಕಳೆಯಲು ಮಾಡಿದ ಕೆಲಸದಿಂದ ಸೃಜನಶೀಲತೆ ಹೆಚ್ಚಲಿದೆ. ಅಕ್ಕ ಪಕ್ಕದ ಮನೆಯವರ ಉಪಟಳ ತಡೆಯಲಾಗದೆ ಏರುಧ್ವನಿಯಲ್ಲಿ ಮಾತನಾಡುವಿರಿ. ಪುನರಾವಲೋಕನದ ಅಗತ್ಯವಿದೆ

ಮಿಥುನ: ನಿಮ್ಮೊಳಗಿರುವ ಮಾತನ್ನು ಭಯವಿಲ್ಲದೇ ತಿಳಿಸಿರುವುದರಿಂದ ವ್ಯವಹಾರವನ್ನು ಗಿಟ್ಟಿಸಿಕೊಳ್ಳುವಿರಿ. ಆಹಾರ ಸೇವನೆ ವಿಧಾನ ಬದಲಾಯಿಸಿ ಕೊಳ್ಳಬೇಕಾಗುವುದು. ಈ ದಿನ ನಿಮ್ಮ ವಚನದಲ್ಲಿ ಹಿಡಿತವಿರಲಿ.

ಕರ್ಕಾಟಕ: ಬಹಳ ದಿನಗಳ ನಂತರ ಸೋದರನ ಆಗಮನದಿಂದಾಗಿ ಮನೆಯಲ್ಲಿ ಹೆಚ್ಚಿನ ಸಂಭ್ರಮದ ವಾತಾವರಣ ಇರುವುದು. ಕನಸು ಕಾಣುವುದು ಮಾತ್ರವಲ್ಲದೆ ಅದನ್ನು ಸಾಕಾರಗೊಳಿಸಲು ಶ್ರಮವಹಿಸಿ.

ಸಿಂಹ: ಉಪಕಾರವನ್ನು ಮಾಡುವವರೆಲ್ಲರೂ ಹಿತಚಿಂತಕರೆಂದು ತಿಳಿಯಬೇಡಿ. ನಯವಂಚಕರೂ ಆಗಬಹುದು. ವ್ಯಾಪಾರ ವ್ಯವಹಾರದಲ್ಲಿ ಸ್ವಲ್ಪ ಬುದ್ಧಿವಂತಿಕೆಯಿಂದ ಕಾರ್ಯ ನಿರ್ವಹಿಸಬೇಕಾಗುವುದು.

ಕನ್ಯಾ: ನಡವಳಿಕೆ ಸಮಾಜದಲ್ಲಿ ಎಲ್ಲರ ಕೇಂದ್ರ ಬಿಂದುವಾಗಲಿದೆ. ಅವಿರತ ಶ್ರಮದ ಫಲ ಏನು ಎಂಬುದು ಮಕ್ಕಳಿಗೆ ಅರಿವಾಗಲಿದೆ. ನೆಂಟರಿಷ್ಟರ ಆಗಮನ ಮನೆಯಲ್ಲಿ ಹಬ್ಬದ ವಾತಾವರಣವನ್ನು ಮೂಡಿಸಲಿದೆ.

ತುಲಾ: ಸ್ವಯಂ ಸಾಮರ್ಥ್ಯದಿಂದ ಅವಕಾಶಗಳನ್ನು ಪಡೆದುಕೊಳ್ಳುವ ಹಾದಿ ನೋಡಿರಿ. ಸ್ಪರ್ಧಾತ್ಮಕ ಮನೋಭಾವವು ಅತ್ಯುನ್ನತ ಮಟ್ಟಕ್ಕೆ ಏರುವಂತೆ ಮಾಡುತ್ತದೆ. ಕ್ರಿಮಿ ಕೀಟಗಳಿಂದ ಅಲರ್ಜಿ ಉಂಟಾಗಬಹುದು.

ವೃಶ್ಚಿಕ: ಮೇಲಧಿಕಾರಿಗಳು ಮೇಲಿಟ್ಟಿದ್ದ ಭರವಸೆ ಹುಸಿಯಾಗದಂತೆ ಕಾರ್ಯ ನಿರ್ವಹಿಸಲು ಅಶಕ್ತರಾಗುವ ಸಂಭವವಿದೆ. ವೃತ್ತಿ ಕ್ಷೇತ್ರದಲ್ಲಿ ನಿಮ್ಮ ನಿಷ್ಠೆ, ಪ್ರಾಮಾಣಿಕತೆ ಮತ್ತು ಸಾಧನೆಗೆ ಪುರಸ್ಕಾರಗಳು ದೊರಕಲಿದೆ.

ಧನು: ಬಹಳ ದಿನಗಳಿಂದ ವರ್ತಮಾನ ಕಾಲದಲ್ಲಿರುವ ಕೆಲಸವು ಶುಭ ಅಂತ್ಯವನ್ನು ನೋಡುತ್ತದೆ. ಆರ್ಥಿಕವೃದ್ಧಿ, ಆರೋಗ್ಯವೃದ್ಧಿ, ಆಕಸ್ಮಿಕ ಧನ ಪ್ರಾಪ್ತಿ ಯೋಗ ಈ ದಿನದಲ್ಲಿದೆ. ಆಫೀಸಿನ ಕೆಲಸ ಕಾರ್ಯಗಳು ಹೆಚ್ಚಿನಿಸುವುದು.

ಮಕರ: ಹಲವು ಕಾಲದಿಂದ ನಿಂತು ಹೋಗಿದ್ದ ಕೆಲಸಗಳು ದೈವಾನುಗ್ರಹ-ದಿಂದ ಆರಂಭವಾಯಿತೆಂದು ಸಂತೋಷ ಪಡುವಿರಿ. ವಾತಾವರಣದಲ್ಲಾಗುವ ಬದಲಾವಣೆಯು ದೇಹದ ಮೇಲೆ ಪ್ರಭಾವ ಬೀರಲಿದೆ.

ಕುಂಭ: ಸವಾಲು ಸಾಮರ್ಥ್ಯದ ಬಗ್ಗೆ ಬಂದಾಗ ಎಂಥ ಕೆಲಸವನ್ನಾದರೂ ಮಾಡಲು ಮುಂದಾಗುತ್ತೀರಿ. ಇತರರ ಭಾವನೆಗಳಿಗೆ ಹೆಚ್ಚಿನ ಆದ್ಯತೆಯನ್ನು ನೀಡುವುದು ಅನಿವಾರ್ಯ.

ಮೀನ: ರಾಜಕೀಯ ವ್ಯವಹಾರಗಳ ಪ್ರಬಲ ಆಕಾಂಕ್ಷಿಯಾಗಿರುವ ನೀವು ಚುರುಕಾಗಬೇಕಾಗಿದೆ. ಹಣಕಾಸಿನ ವಹಿವಾಟು ಉತ್ತಮವಾಗಿದ್ದು ಮಾರಾಟ ಕ್ಷೇತ್ರವನ್ನು ಹೆಚ್ಚಿಸಿಕೊಳ್ಳುವಿರಿ. ಅಶ್ವತ್ಥ ವೃಕ್ಷಕ್ಕೆ ಪ್ರದಕ್ಷಿಣೆ ಹಾಕಿ.

ಪದಬಂಧ 5742

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಪುರದ ಹತ್ತಿರದಲ್ಲೇ ರಾಣಿವಾಸ (4)
3.ಸೊಟ್ಟಗಿರುವ ಸೊಂಡಿಲುಳ್ಳವನು (4)
5.ವಾರಾಂತ್ಯಕ್ಕೆ ಬಂದಿಳಿದ ಆರೋಹಿ (3)
6.ನೀರಿನಲ್ಲಿಯೇ ಹುಟ್ಟಿರುವುದು (3)
8.ಜರೂರಿದ್ದಾಗ ಬಾರಿಸಿರುವ ಚರ್ಮವಾದ್ಯ (3)
9.ರಾಷ್ಟ್ರದ ಮುಖ್ಯಮಂತ್ರಿ (3)
10.ಎರಡು ವ್ಯಕ್ತಿಗಳ ನಡುವೆ ಸಂಧಾನ ನಡೆಸುವವ (3)
11.ಕಸ್ತೂರಿ ಕಂಪಿನ ನಮ್ಮ ಭಾಷೆ (3)
12.ನಯ ನಾಜೂಕನ್ನು ರೂಢಿಸಿಕೊಂಡಿರುವ ಮಗ (3)
14.ಆಸ್ತಿಯಲ್ಲಿ ಭಾಗ ಪಡೆಯುವವ ಜ್ಞಾತಿ (3)
16.ಮಲಗುವ ಕೋಣೆಯಿದು (4)
17.ಉಗುರಿನಿಂದಾದ ಪೆಟ್ಟು (4)

ಮೇಲಿಂದ ಕೆಳಕ್ಕೆ
1.ತತ್ತಿಯೊಡೆದು ಹುಟ್ಟುವ ಪ್ರಾಣಿ (3)
2.ನೀರು ಹಾಲು ಮುಂತಾದ ದ್ರವ ಪದಾರ್ಥ (2)
3.ವಠಾರದಲ್ಲಿರುವ ಮದುವೆ ಗಂಡು (2)
4.ಅಗಲ ಬಾಯುಳ್ಳ ಪಾತ್ರೆ (3)
7.ಜನರಿಂದ ಕಿಕ್ಕಿರಿದು ತುಂಬಿದುದು (5)
8.ಜನನಕ್ಕೆ ಕಾರಣನಾದ ತಂದೆ (5)
11.ಗೋಪುರಕ್ಕೆ ಹಾಕುವ ಶಿಖರ (3)
13.ದೇವಯಾನಿ ಮತ್ತು ಶರ್ಮಿಷ್ಠೆಯ ಪತಿ (3)
14.ಹರಿದಾರಿಯಲ್ಲಿ ಸಾಗುತ್ತಿರುವಾಗ ಆದ ತೃಷೆ (2)
15.ಇಪ್ಪತ್ತು ನಾಲ್ಕು ಗಂಟೆಗಳ ಕಾಲ (2)

1			2	■	3			4
	■	■	5			■	■	
6		7	■	■	■	8		
■	■		■	■	■		■	■
9			■	■	■	10		
■	■		■	■	■		■	■
11			■	■	■	12		13
	■	■	14		15	■	■	
16				■	17			

5741ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಬತ್ತಳಿಕೆ 3.ಮಧುಕರ 5.ರಪಣ 7.ಮಂದಿ 8.ಗತಿ 10.ಜಟಕ 11.ಸಾವಿರ 13.ಸಮ 14.ಚೌತಿ 16.ಮುಕ್ತಕ 18.ಸರಕಾರ 19.ಡಕಾಯಿತ

ಮೇಲಿಂದ ಕೆಳಕ್ಕೆ: 1.ಬಹಿರಂಗ 2.ಕೆರ 3.ಮಣ 4.ರಸೀದಿ 6.ಪಲ್ಲಟ 7.ಮಂದಹಾಸ 9.ತಿರುಪತಿ 12.ವಿಮುಕ್ತ 14.ಮಡಿವಂತ 15.ಚೌರಸ 16.ಮುರ 17.ಕಡ

ಸುಡೊಕು 6127

				2		5		
5		4			7		2	3
	2	8	5			6		7
8		1		3				9
			9		8			
9		2		5		3		6
7		3		9				
	8		7		5	9	3	
		9		8			7	5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6126 ಸುಡೊಕು

3	4	7	6	5	1	8	2	9
8	2	9	4	7	3	1	6	5
1	6	5	8	9	2	3	4	7
4	8	2	7	1	6	9	5	3
9	7	3	5	2	8	4	1	6
6	5	1	9	3	4	7	8	2
5	3	4	2	8	9	6	7	1
2	9	8	1	6	7	5	3	4
7	1	6	3	4	5	2	9	8

ಬಜೆಟ್ ಅಧಿವೇಶನದಲ್ಲಿ ಮಸೂದೆ ಮಂಡನೆ ಸಾಧ್ಯತೆ

ವಿಮಾ ಕಾಯ್ದೆಗೆ ತಿದ್ದುಪಡಿ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು 2047ರ ವೇಳೆಗೆ ದೇಶದ ಎಲ್ಲ ನಾಗರಿಕರಿಗೂ ವಿಮಾ ಸೌಲಭ್ಯ ಕಲ್ಪಿಸುವ ಗುರಿ ಹೊಂದಿದೆ. ಹಾಗಾಗಿ, ಇದೇ 22ರಿಂದ ಸಂಸತ್‌ನಲ್ಲಿ ಆರಂಭವಾಗಲಿರುವ ಬಜೆಟ್ ಅಧಿವೇಶನದಲ್ಲಿ ವಿಮಾ ಕಾಯ್ದೆ 1938ಕ್ಕೆ ತಿದ್ದುಪಡಿ ತರುವ ಸಂಬಂಧ ಮಸೂದೆ ಮಂಡಿಸುವ ಸಾಧ್ಯತೆಯಿದೆ ಎಂದು ಹೇಳಲಾಗಿದೆ.

ಸಂಯೋಜಿತ ಪರವಾನಗಿ, ಋಣಾತ್ಮಕ ಪರಿಹಾರ ಕುರಿತ ಮಾನದಂಡದಲ್ಲಿ ಸಡಿಲಿಕೆ, ಬಂಡವಾಳ ಹೂಡಿಕೆ ನಿಯಮಾವಳಿಗಳಲ್ಲಿ ಬದಲಾವಣೆ, ಮಧ್ಯವರ್ತಿಗಳು ಒಂದು ಬಾರಿ ನೋಂದಣಿ ಹಾಗೂ ವಿಮಾ ಕಂಪನಿಗಳು ಇತರೆ ಹಣಕಾಸು ಸೇವೆ ಒದಗಿಸುವ ಬಗ್ಗೆ ತಿದ್ದುಪಡಿ ಮಸೂದೆ ಮೂಲಕ ಅವಕಾಶ ಕಲ್ಪಿಸುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

ಪ್ರಸ್ತುತ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಗ್ರಾಹಕರಿಗೆ ಉತ್ತಮ ಸೇವೆ ಒದಗಿಸುವುದಕ್ಕೆ ಸಂಬಂಧಿಸಿದಂತೆ ಸಹಕಾರಿ ಬ್ಯಾಂಕ್, ಸಣ್ಣ ಹಣಕಾಸು ಸಂಸ್ಥೆಗಳು ಮತ್ತು ಪಾವತಿ ಬ್ಯಾಂಕ್‌ಗಳಿಗೆ ಪರವಾನಗಿ ನೀಡಲಾಗುತ್ತದೆ. ಇದೇ ಮಾದರಿಯ ವರ್ಗೀಕರಣಕ್ಕೆ ನಿರ್ಧರಿಸಿದೆ ಎಂದು ಹೇಳಿವೆ.

ಜೀವ ವಿಮಾ ಕಾಯ್ದೆ ಪ್ರಕಾರ ಜೀವ ವಿಮೆ ಒದಗಿಸುವ ಕಂಪನಿಯು ಆ ಸೌಲಭ್ಯವನ್ನಷ್ಟೇ ವಿಮಾದಾರರಿಗೆ ಕಲ್ಪಿಸುತ್ತಿವೆ. ಸಾಮಾನ್ಯ ಅಥವಾ ಆರೋಗ್ಯ ವಿಮಾ ಸೌಲಭ್ಯ ಒದಗಿಸಲು ಅವಕಾಶವಿಲ್ಲ.

ಸಾಮಾನ್ಯ ವಿಮಾ ಸೌಲಭ್ಯ ಒದಗಿಸುವ ಕಂಪನಿಗಳು ಆರೋಗ್ಯ, ಮೋಟಾರ್, ಅಗ್ನಿ ಅವಘಡ ಸೇರಿ ಇತರೆ ಅವಘಡಗಳಿಗೆ ವಿಮೆ ಸೌಲಭ್ಯವನ್ನಷ್ಟೇ ಒದಗಿಸಲು ಅವಕಾಶವಿದೆ.

ಒಂದೇ ಕಂಪನಿ ಜೀವ ವಿಮೆ, ಸಾಮಾನ್ಯ ಅಥವಾ ಆರೋಗ್ಯ ವಿಮಾ ಸೌಲಭ್ಯ ಒದಗಿಸಲು ಸಂಯೋಜಿತ ಪರವಾನಗಿ ನೀಡುವಂತಿಲ್ಲ ಎಂದು ಭಾರತೀಯ ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರದ ನಿಯಮಾವಳಿಗಳು ಹೇಳುತ್ತವೆ.

ತಿದ್ದುಪಡಿ ಮಸೂದೆಯ ಕರಡು ಸಿದ್ಧವಾಗಿದೆ. ಇದಕ್ಕೆ ಸಚಿವ ಸಂಪುಟ ಸಭೆಯಲ್ಲಿ ಒಪ್ಪಿಗೆ ಪಡೆದ ಬಳಿಕ ಅಧಿವೇಶನದಲ್ಲಿ ಮಂಡಿಸಲು ಹಣಕಾಸು ಸಚಿವಾಲಯವು ಸಿದ್ಧತೆ ನಡೆಸಿದೆ ಎಂದು ಮೂಲಗಳು ತಿಳಿಸಿವೆ.

ಪ್ರಸ್ತುತ ದೇಶದಲ್ಲಿ 25 ಜೀವ ವಿಮಾ ಕಂಪನಿಗಳು ಮತ್ತು 32 ಸಾಮಾನ್ಯ ವಿಮಾ ಕಂಪನಿಗಳು ಕಾರ್ಯ ನಿರ್ವಹಿಸುತ್ತಿವೆ.

ಮನೆಯಿಂದ ಕೆಲಸಕ್ಕೆ ಶೀಘ್ರ ಅಂತ್ಯ: ಟಿಸಿಎಸ್

ಮುಂಬೈ (ಪಿಟಿಐ): ಉದ್ಯೋಗಿಗಳು ಮನೆಯಿಂದ ಕೆಲಸ ನಿರ್ವಹಿಸುವುದು ಕಡಿಮೆಯಾಗಿದೆ. ಕಚೇರಿಯಲ್ಲಿ ಕೆಲಸ ನಿರ್ವಹಿಸುವ ಉದ್ಯೋಗಿಗಳ ಸಂಖ್ಯೆಯು ಕೋವಿಡ್ ಸಾಂಕ್ರಾಮಿಕದ ಪೂರ್ವ ಸ್ಥಿತಿಗೆ ತಲುಪಿದೆ ಎಂದು ದೇಶದ ಅತಿದೊಡ್ಡ ಸಾಫ್ಟ್‌ವೇರ್ ಕಂಪನಿ ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿಸಿಎಸ್) ತಿಳಿಸಿದೆ.

'ಕಂಪನಿಯಲ್ಲಿ 6 ಲಕ್ಷಕ್ಕೂ ಹೆಚ್ಚು ಉದ್ಯೋಗಿಗಳಿದ್ದಾರೆ. ಯಾವುದೇ ಅಡೆತಡೆ ಇಲ್ಲದ ಕಾರ್ಯಾಚರಣೆ ನಡೆಯುತ್ತಿದೆ' ಎಂದು ಕಂಪನಿಯ ಮಾನವ ಸಂಪನ್ಮೂಲ ವಿಭಾಗದ ಮುಖ್ಯಸ್ಥ ಮಿಲಿಂದ್ ಲಕ್ಕಡ್ ತಿಳಿಸಿದ್ದಾರೆ.

ಕೋವಿಡ್ ಸಾಂಕ್ರಾಮಿಕದ ವೇಳೆ ಉದ್ಯೋಗಿಗಳು ಮನೆಯಿಂದಲೇ ಕೆಲಸ ನಿರ್ವಹಿಸುತ್ತಿದ್ದರು. ಸದ್ಯ ವಾರದಲ್ಲಿ ಐದು ದಿನಗಳವರೆಗೆ ಕಚೇರಿಯಿಂದ ಕೆಲಸ ನಿರ್ವಹಿಸುವ ಉದ್ಯೋಗಿಗಳ ಸಂಖ್ಯೆಯು ಶೇ 70ರಷ್ಟು ಹೆಚ್ಚಿದೆ. 18 ತಿಂಗಳ ಕಠಿಣ ಶ್ರಮದಿಂದಾಗಿ ಇದು ಕಾರ್ಯಸಾಧ್ಯವಾಗಿದೆ. ಶೀಘ್ರವೇ, ಮನೆಯಲ್ಲಿ ಕೆಲಸ ಮಾಡುವ ಉದ್ಯೋಗಿಗಳ ಸಂಖ್ಯೆಯು ಸಂಪೂರ್ಣವಾಗಿ ಸ್ಥಗಿತಗೊಳ್ಳಲಿದೆ ಎಂದು ತಿಳಿಸಿದ್ದಾರೆ.

ಪ್ರಸಕ್ತ ವರ್ಷದ ಜೂನ್ ಅಂತ್ಯಕ್ಕೆ ಕಂಪನಿಯಲ್ಲಿ ಮಹಿಳಾ ಉದ್ಯೋಗಿಗಳ ಸಂಖ್ಯೆ ಶೇ 35.5ರಷ್ಟು ಕಡಿಮೆಯಾಗಿದೆ ಎಂದು ಟಿಸಿಎಸ್ ವರದಿ ತಿಳಿಸಿದೆ.

'ಮಹಿಳಾ ಉದ್ಯೋಗಿಗಳ ಸಂಖ್ಯೆ ಕಡಿಮೆಯಾಗಲು ಹಲವು ಕಾರಣಗಳಿವೆ. ಕೋವಿಡ್ ಸಾಂಕ್ರಾಮಿಕಕ್ಕೂ ಮೊದಲು ಕಂಪನಿಯು ಹಲವು ನೀತಿಗಳನ್ನು ಅಳವಡಿಸಿ-ಕೊಂಡಿತ್ತು. ಉದ್ಯೋಗಿಗಳ ಅಗತ್ಯ ಪೂರೈಸಲು ಕಂಪನಿಯು ಬದ್ಧವಾಗಿದೆ ಎಂದು ಲಕ್ಕಡ್ ಪ್ರತಿಕ್ರಿಯಿಸಿದ್ದಾರೆ.

ಷೇರು ಹೂಡಿಕೆ; ಜಾರಿ ಬೀಳದಿರಿ

ಬಂಡವಾಳ ಮಾರುಕಟ್ಟೆ

ಕಾವ್ಯ ಡಿ.

ಷೇರು ಮಾರುಕಟ್ಟೆಗೆ ಮೊದಲ ಬಾರಿಗೆ ಪ್ರವೇಶ ಮಾಡುವ ಬಹುಪಾಲು ಮಂದಿ ಹಣ ಕಳೆದುಕೊಳ್ಳುತ್ತಾರೆ. ಮಾರುಕಟ್ಟೆ ಬಗ್ಗೆ ಸರಿಯಾದ ಅರಿವಿಲ್ಲದಿರುವುದೇ ಇದಕ್ಕೆ ಮೂಲ ಕಾರಣ. ಅರಿತು ಹೂಡಿಕೆ ಮಾಡಿದರೆ ಷೇರುಪೇಟೆ ಸಂಪತ್ತಿನ ಗಣಿಯಾಗುತ್ತದೆ. ಅಳತೆ ಅಂದಾಜಿಲ್ಲದ ಹೂಡಿಕೆ ಮಾಡಿ ದಿಢೀರ್ ಶ್ರೀಮಂತರಾಗಿ ಬಿಡಬೇಕು ಎಂದು ಆತುರಪಟ್ಟರೆ ನಿಮ್ಮ ಸಂಪತ್ತು ಅರಿವಿಗೆ ಬಾರದೆ ಕರಗಿಬಿಡುತ್ತದೆ. ಬನ್ನಿ, ಷೇರು ಹೂಡಿಕೆ ವೇಳೆ ಆಗುವ ಸಾಮಾನ್ಯ ತಪ್ಪುಗಳ ಬಗ್ಗೆ ಅರಿತು ಜಾಗೃತ ಹೂಡಿಕೆದಾರರಾಗೋಣ.

● **ಇನ್ವೆಸ್ಟಿಂಗ್ ಮತ್ತು ಟ್ರೇಡಿಂಗ್ ವ್ಯತ್ಯಾಸ ಅರಿಯಿರಿ:** ಷೇರುಪೇಟೆಯಲ್ಲಿ ಭವಿಷ್ಯದ ಬೆಳವಣಿಗೆಯ ನೋಟವಿರುವ ಕಂಪನಿಗಳನ್ನು ಅಧ್ಯಯನದ ಮೂಲಕ ಆಯ್ಕೆ ಮಾಡಬೇಕು. ಆ ನಿರ್ದಿಷ್ಟ ಕಂಪನಿಗಳ ಷೇರುಗಳಲ್ಲಿ ಹಣ ತೊಡಗಿಸಿ ಕೆಲ ವರ್ಷಗಳ ಕಾಲ ಮಾರುಕಟ್ಟೆ ಏರಿಳಿತಗಳಿಗೆ ಹೆಚ್ಚು ತಲೆಕೆಡಿಸಿಕೊಳ್ಳದೆ ಸುಮ್ಮನಿರೋದು ಇನ್ವೆಸ್ಟಿಂಗ್. ಇಲ್ಲಿ ಹೂಡಿಕೆದಾರ ದೀರ್ಘಾವಧಿಯಲ್ಲಿ ಉತ್ತಮ ಲಾಭಗಳಿಸುವ ಉದ್ದೇಶ ಹೊಂದಿರುತ್ತಾನೆ. ಇನ್ವೆಸ್ಟಿಂಗ್‌ಗೆ ಪೂರ್ಣಾವಧಿ ಸಮಯ ಮೀಸಲಿಡಬೇಕಿಲ್ಲ. ಜೊತೆಗೆ ಇಲ್ಲಿ ಜಾಸ್ತಿ ರಿಸ್ಕ್ ಇರುವುದಿಲ್ಲ.

ಆದರೆ, ಮಾರುಕಟ್ಟೆ ಏಳಲಿ ಅಥವಾ ಬೀಳಲಿ ಟ್ರೇಡಿಂಗ್‌ನ ಮುಖ್ಯ ಉದ್ದೇಶ ಥಟ್ ಅಂತ ಲಾಭ ಗಳಿಸಲು ಪ್ರಯತ್ನಿಸೋದು. ಟ್ರೇಡಿಂಗ್ ಅನ್ನೋದು ಸೆಕೆಂಡ್, ನಿಮಿಷ ಮತ್ತು ದಿನಗಳ ಲೆಕ್ಕದಲ್ಲಿ ನಡೆಯುತ್ತದೆ. ಇಲ್ಲಿ ರಿಸ್ಕ್ ಹೆಚ್ಚು. ಆದರೆ, ಹೂಡಿಕೆ ನಿರ್ಧಾರ ಸರಿಯಾದರೆ ಲಾಭದ ಸಾಧ್ಯತೆಯೂ ಜಾಸ್ತಿ. ವಾಸ್ತವದಲ್ಲಿ ಟ್ರೇಡಿಂಗ್‌ನಲ್ಲಿ ಬಹುಪಾಲು ಮಂದಿ ದುಡ್ಡು ಕಳೆದುಕೊಳ್ಳುತ್ತಾರೆ. ಟ್ರೇಡಿಂಗ್ ಅನ್ನೋ ಪದದ ಪರಿಚಯವೇ ಇಲ್ಲದೆ ಅನೇಕರು ಲಕ್ಷಾಂತರ ಹಣ ಕಳೆದುಕೊಂಡು ಕೈ ಸುಟ್ಟುಕೊಂಡಿರುವ ಸಾಕಷ್ಟು ನಿದರ್ಶನಗಳಿವೆ.

ಟ್ರೇಡಿಂಗ್ ಅನ್ನೋದು ಪರಿಣತರ ಆಟ. ಅದು ಸರಿಯಾಗಿ ಗೊತ್ತಿದ್ದರಷ್ಟೇ ಅದರ ಬಗ್ಗೆ ಯೋಚಿಸಬೇಕು. ಆದರೆ, ಹೂಡಿಕೆ ಅನ್ನೋದು ನಿಧಾನಗತಿಯ ನಿಶ್ಚಿತ ಓಟ. ಇಲ್ಲಿ ಪ್ರತಿಯೊಬ್ಬರೂ ಅರಿತು, ಕಲಿತು ಬಳಿಕ ಹೂಡಿಕೆ ಮಾಡಿದರೆ ಲಾಭದ ಸಿಹಿ ಕಾಣಬಹುದು.

● **ತುರ್ತಿನ ಹಣದಲ್ಲಿ ಷೇರು ಖರೀದಿ, ಸಾಲ ಮಾಡಿ ಷೇರು ಹೂಡಿಕೆ:** ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿ ಕೆಲವರು ದಿಢೀರ್ ಶ್ರೀಮಂತರಾಗುವ ಹಗಲುಗನಸು ಕಾಣುತ್ತಾರೆ. ಮಕ್ಕಳ ಶಾಲಾ ಶುಲ್ಕಕ್ಕೆ ಕೂಡಿಟ್ಟಿರುವ ಹಣ, ಸಾಲ ಮರುಪಾವತಿಗೆ ಮೀಸಲಿಟ್ಟಿರುವ ನಗದು, ಇನ್ಶೂರೆನ್ಸ್ ಪ್ರೀಮಿಯಂಗಾಗಿ ಹೊಂದಿಸಿರುವ ಮೊತ್ತ, ತುರ್ತು ಅಗತ್ಯಗಳಿಗೆ ಕಾಯ್ದಿರಿಸಿರುವ ದುಡ್ಡನ್ನು ಷೇರು ಮಾರುಕಟ್ಟೆಯಲ್ಲಿ ತೊಡಗಿಸಲು ಮುಂದಾಗುತ್ತಾರೆ. ಇದು ಅತ್ಯಂತ ಅಪಾಯಕಾರಿ ನಿರ್ಧಾರ. ಷೇರು ಹೂಡಿಕೆಯಲ್ಲಿ ರಿಸ್ಕ್ ಹೆಚ್ಚಿಗೆ ಇರುವ ಕಾರಣ ಲಾಭದ ಸಾಧ್ಯತೆ ಎಷ್ಟಿದೆಯೋ, ನಷ್ಟದ ಸಾಧ್ಯತೆಯೂ ಅಷ್ಟೇ ಇರುತ್ತದೆ ಎನ್ನುವುದನ್ನು ಮರೆಯಬಾರದು.

ತುರ್ತು ಅಗತ್ಯಕ್ಕೆ ಬೇಕಿರುವ ಹಣವನ್ನು ಉಳಿತಾಯ ಖಾತೆ, ಅಲ್ಪಾವಧಿ ಎಫ್.ಡಿ, ಲಿಕ್ವಿಡ್ ಮ್ಯೂಚುವಲ್ ಫಂಡ್‌ಗಳಲ್ಲಿ ಇಡುವುದು ಒಳಿತು. ಇನ್ನು ಶೇ 13ರಿಂದ ಶೇ 18ರ ವರೆಗೂ ಬಡ್ಡಿ ಇರುವ ವೈಯಕ್ತಿಕ ಸಾಲ ಪಡೆದು ಷೇರು ಹೂಡಿಕೆ ಮಾಡುವುದು ಸಹ ಮೂರ್ಖತನದ ನಿರ್ಧಾರವಾಗುತ್ತದೆ.

● **ಯಾರೋ ಹೇಳಿದರು ಅಂತ ಹೂಡಿಕೆ ಮಾಡೋದು:** ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿ ನಷ್ಟ ಮಾಡಿಕೊಂಡೆ ಎಂದು ಕೆಲವರು ನನಗೆ ಹೇಳುತ್ತಾರೆ. ಆ ಕೂಡಲೇ ನಾನು ಅವರಿಗೆ ನೀವು ಯಾವ ಕಂಪನಿಯ ಷೇರಿನಲ್ಲಿ ಹೂಡಿಕೆ ಮಾಡಿದ್ದೀರಿ, ಅದರ ಬಗ್ಗೆ ಅಧ್ಯಯನ ಮಾಡಿದ್ದೀರಾ, ಆ ಕಂಪನಿಯ ಆಡಳಿತ ಮಂಡಳಿಯಲ್ಲಿ ಯಾರಿದ್ದಾರೆ, ಈ ಹಿಂದೆ ಕಂಪನಿ ಎಷ್ಟು ಲಾಭ ಗಳಿಸಿತ್ತು, ಕಂಪನಿ ಯಾವ ವಲಯಕ್ಕೆ ಸೇರಿದ್ದು ಮತ್ತು ಯಾವ ಉತ್ಪನ್ನ- ಸೇವೆಯನ್ನು ಒದಗಿಸುತ್ತಿದೆ ಎಂದು ಪ್ರಶ್ನಿಸುತ್ತೇನೆ.

ಬಹುತೇಕರಿಗೆ ಆ ಕಂಪನಿಯ ಹೆಸರು ಬಿಟ್ಟರೆ ಮತ್ತೇನು ಗೊತ್ತಿರುವುದಿಲ್ಲ. ಹೀಗೆ ಪೂರ್ವಾಪರ ಅರಿಯದೆ ಯಾರೋ ಹೇಳಿದರು ಎಂಬ ಕಾರಣಕ್ಕೆ ಹೂಡಿಕೆ ಮಾಡಿದರೆ ಲಾಭಗಳಿಸುವುದಕ್ಕೆ ಹೇಗೆ ಸಾಧ್ಯ ಅಲ್ಲವೇ? ಜಗತ್ತಿನ ಶ್ರೇಷ್ಠ ಹೂಡಿಕೆದಾರ ವಾರನ್ ಬಫೆಟ್ ಯಾವುದೇ ಷೇರಿನಲ್ಲಿ ಹೂಡಿಕೆ ಮಾಡುವ ಮುನ್ನ ಸಾಕಷ್ಟು ಅಧ್ಯಯನ ಮಾಡುತ್ತಾರೆ. ಅವರ ಹಿಂದೆ ಒಂದು ತಜ್ಞರ ತಂಡವೇ ಇರುತ್ತದೆ. ಅಷ್ಟೆಲ್ಲಾ ಪರಿಣತಿ ಹೊಂದಿರುವವರೇ ಲೆಕ್ಕಾಚಾರ ಮಾಡಿ ಹೂಡಿಕೆ ಮಾಡುತ್ತಾರೆ ಅಂದರೆ, ನಾವು ಅಧ್ಯಯನ ಮಾಡದೆ ಷೇರಿನಲ್ಲಿ ಹೂಡಿಕೆ ಮಾಡೋದು ತಪ್ಪಲ್ಲವೇ?

● **ಷೇರು ಹೂಡಿಕೆ ಮಾಡಿ ತಾಳ್ಮೆ ಕಳೆದುಕೊಳ್ಳುವುದು:** ಶ್ರೀಮಂತಿಕೆಯತ್ತ ನಿಧಾನಗತಿಯ ನಡಿಗೆಯೇ ವಾರನ್ ಬಫೆಟ್ ಅನುಸರಿಸಿದ ಮಾರ್ಗ. ಸಂಪತ್ತು ವೃದ್ಧಿಗೆ ಸಮಯ ಬೇಕು ಎನ್ನುವ ಸರಳ ಸತ್ಯ ನಮಗೆ ಗೊತ್ತಿರಬೇಕು.

ನೀವೇ ಒಂದು ಬ್ಯುಸಿನೆಸ್ ಅನ್ನು ಇವತ್ತು ಆರಂಭ ಮಾಡಿದ್ದೀರಿ ಅಂದರೆ, ಅದು ಲಾಭ ಗಳಿಸಿ ಉತ್ತಮ ಸ್ಥಿತಿಗೆ ಬರಲು ವರ್ಷಗಳೇ ಬೇಕು. ಆದರೆ, ಷೇರು ಖರೀದಿ ಮಾಡುವವರು ಮಾತ್ರ ಇವತ್ತು ಖರೀದಿ ಮಾಡಿದ ಷೇರು ನಾಳೆಯೇ ಹೆಚ್ಚು ಲಾಭ ಕೊಡಬೇಕು ಎಂದು ಬಯಸುತ್ತಾರೆ. ದಿಢೀರ್ ಲಾಭ ಸಿಗದಿದ್ದಾಗ ಆ ಷೇರುಗಳನ್ನು ಕೊಂಡ ಬೆಲೆಗಿಂತ ಕಡಿಮೆ ಬೆಲೆಗೆ ಮಾರಾಟ ಮಾಡಿ ಕೈ ಸುಟ್ಟುಕೊಳ್ಳುತ್ತಾರೆ. ಶೇ 90ರಷ್ಟು ರಿಟೇಲ್ ಹೂಡಿಕೆದಾರರು ಷೇರು ಹೂಡಿಕೆಯಲ್ಲಿ ನಷ್ಟ ಮಾಡಿಕೊಳ್ಳುವುದು ಹೀಗೆಯೇ.

● **ಹಿಂದಿನ ಗಳಿಕೆ ಆಧಾರದಲ್ಲಿ ಭವಿಷ್ಯದ ಅಂದಾಜು:** 'ಇವತ್ತು ಹೂಡಿಕೆ ಮಾಡಿದವನು ನಿನ್ನೆ ಷೇರುಪೇಟೆಯಲ್ಲಿ ಉಂಟಾದ ಪ್ರಗತಿಯಿಂದ ಲಾಭ ನಿರೀಕ್ಷಿಸಲು ಸಾಧ್ಯವಿಲ್ಲ' ಎಂದು ವಾರನ್ ಬಫೆಟ್ ಹೇಳುತ್ತಾರೆ. ಹೌದು ಕಳೆದ 10 ವರ್ಷಗಳಲ್ಲಿ ಆ ಕಂಪನಿ ಇಷ್ಟು ಲಾಭಾಂಶ ಕೊಟ್ಟಿದೆ. ಮುಂದಿನ ಕೆಲ ವರ್ಷಗಳಲ್ಲಿ ಇಷ್ಟು ಲಾಭ ಸಿಗಬಹುದು ಎಂದು ನಾವು ಹಲವು ರೀತಿಯಲ್ಲಿ ಲೆಕ್ಕಾಚಾರ ಮಾಡಬಹುದು.

ಆದರೆ, ಈ ಹಿಂದೆ ಲಾಭ ಗಳಿಸಿರುವ ಕಂಪನಿ ಮುಂದೆ ಹೆಚ್ಚು ಲಾಭ ಗಳಿಸದೇ ಇರಬಹುದು. ಈವರೆಗೆ ಹೆಚ್ಚು ಲಾಭ ಕೊಡದ ಕಂಪನಿ ಮುಂದೆ ಉತ್ತಮ ಲಾಭಾಂಶ ನೀಡಬಹುದು. ಲಾಭದ ಲೆಕ್ಕಾಚಾರ ಕಂಪನಿಯ ಪ್ರಸ್ತುತ ಬೆಳವಣಿಗೆ ಮತ್ತು ಆರ್ಥಿಕ ಸ್ಥಿತಿಯನ್ನು ಅವಲಂಬಿಸಿರುತ್ತದೆ. ಇದನ್ನು ಅರ್ಥ ಮಾಡಿಕೊಳ್ಳಲು ಕಂಪನಿಯ ಬ್ಯಾಲೆನ್ಸ್ ಶೀಟ್ ನೋಡುವುದು ಮುಖ್ಯವಾಗುತ್ತದೆ.

(ಲೇಖಕಿ: ಚಾರ್ಟರ್ಡ್ ಅಕೌಂಟೆಂಟ್)

ಆರನೇ ವಾರವೂ ಗೂಳಿ ಓಟ

ಷೇರುಪೇಟೆಯಲ್ಲಿ ಗೂಳಿ ಆರ್ಭಟ ಜೋರಾಗಿದ್ದು, ಸತತ ಆರು ವಾರಗಳಿಂದ ಸೂಚ್ಯಂಕಗಳು ಗಳಿಕೆಯ ಹಾದಿಯಲ್ಲಿವೆ.

ಜುಲೈ 12ಕ್ಕೆ ಕೊನೆಗೊಂಡ ವಾರದಲ್ಲಿ ಷೇರು ಸೂಚ್ಯಂಕಗಳು ಉತ್ತಮ ಗಳಿಕೆ ದಾಖಲಿಸಿವೆ. 80,519 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್, ವಾರದ ಅವಧಿಯಲ್ಲಿ ಶೇ 0.65ರಷ್ಟು ಗಳಿಸಿಕೊಂಡಿದೆ. 24,502 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 0.73ರಷ್ಟು ಜಿಗಿದಿದೆ.

ಬಜೆಟ್ ಮೇಲಿನ ನಿರೀಕ್ಷೆ, ಅಮೆರಿಕದಲ್ಲಿ ಹಣದುಬ್ಬರ ಪ್ರಮಾಣ ಇಳಿಕೆ, ಅಮೆರಿಕ ಫೆಡರಲ್ ರಿಸರ್ವ್ ಬ್ಯಾಂಕ್ ಮುಂಬರುವ ದಿನಗಳಲ್ಲಿ ಬಡ್ಡಿ ದರ ಇಳಿಕೆ ಮಾಡಬಹುದು ಎಂಬ ನಿರೀಕ್ಷೆ, ಮಾಹಿತಿ ತಂತ್ರಜ್ಞಾನ ಕಂಪನಿಗಳ ತ್ರೈಮಾಸಿಕ ವರದಿಯಲ್ಲಿ ಸಕಾರಾತ್ಮಕತೆ ಸೇರಿ ಹಲವು ಅಂಶಗಳು ಮಾರುಕಟ್ಟೆಯ ಸಕಾರಾತ್ಮಕ ವಹಿವಾಟಿಗೆ ಕಾರಣವಾಗಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಲೋಹ ವಲಯ ಶೇ 2.63, ರಿಯಲ್ ಎಸ್ಟೇಟ್ ಶೇ 2.32, ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 2.09, ವಾಹನ ಉತ್ಪಾದನೆ ಶೇ 1, ನಿಫ್ಟಿ ಬ್ಯಾಂಕ್ ಶೇ 0.72 ಮತ್ತು ನಿಫ್ಟಿ ಫೈನಾನ್ಸ್ ಶೇ 0.16 ರಷ್ಟು ಕುಸಿದಿವೆ. ನಿಫ್ಟಿ ಎಫ್‌ಎಂಸಿಜಿ ಶೇ 3.56, ಮಾಹಿತಿ ತಂತ್ರಜ್ಞಾನ ಸೂಚ್ಯಂಕ ಶೇ 3.45, ಅನಿಲ ಮತ್ತು ತೈಲ ಶೇ 2.46, ಮಾಧ್ಯಮ ಶೇ 1.3, ಫಾರ್ಮಾ ಶೇ 0.78, ಎನರ್ಜಿ ಶೇ 0.76ರಷ್ಟು ಜಿಗಿತ ಕಂಡಿವೆ.

ವಾರದ ಏರಿಕೆ–ಇಳಿಕೆ: ಒಎನ್‌ಜಿಸಿ ಶೇ 6.51, ಐಟಿಸಿ ಶೇ 5.85, ವಿಪ್ರೊ ಶೇ 4.68, ಎಚ್‌ಡಿಎಫ್‌ಸಿ ಲೈಫ್ ಇನ್ಶೂರೆನ್ಸ್ ಶೇ 4.61, ಬ್ರಿಟಾನಿಯಾ ಶೇ 4.44, ಟಿಸಿಎಸ್ ಶೇ 4.3, ಮಾರುತಿ ಸುಜುಕಿ ಶೇ 3.36, ಇನ್ಫೊಸಿಸ್ ಶೇ 3.93, ಗ್ರಾಸಿಮ್ ಇಂಡಸ್ಟ್ರೀಸ್ ಶೇ 3.37, ಡಾ.ರೆಡ್ಡೀಸ್ ಲ್ಯಾಬ್ಸ್ ಶೇ 3.05, ಟೆಕ್ ಮಹೀಂದ್ರ ಶೇ 3.03 ಮತ್ತು ಹಿಂದುಸ್ತಾನ್ ಯೂನಿಲಿವರ್ ಶೇ 2.95ರಷ್ಟು ಗಳಿಸಿಕೊಂಡಿವೆ.

ಮಹೀಂದ್ರ ಆ್ಯಂಡ್ ಮಹೀಂದ್ರ ಶೇ 6.19, ಟಾಟಾ ಸ್ಟೀಲ್ ಶೇ 3.46, ಅದಾನಿ ಎಂಟರ್‌ಪ್ರೈಸಸ್ ಶೇ 2.66, ಶ್ರೀರಾಮ್ ಫೈನಾನ್ಸ್ ಶೇ 2.6, ಬಜಾಜ್ ಆಟೊ ಶೇ 2.16, ಜೆಎಸ್‌ಡಬ್ಲ್ಯು ಸ್ಟೀಲ್ ಶೇ 2.07 ಮತ್ತು ಬಜಾಜ್ ಫೈನಾನ್ಸ್ ಶೇ 1.86ರಷ್ಟು ಕುಸಿದಿವೆ.

ಮುನ್ನೋಟ: ಈ ವಾರ ಜಿಯೊ ಫೈನಾನ್ಶಿಯಲ್, ಎಚ್‌ಡಿಎಫ್‌ಸಿ ಅಸೆಟ್ ಮ್ಯಾನೇಜ್‌ಮೆಂಟ್, ಎಚ್‌ಡಿಎಫ್‌ಸಿ ಲೈಫ್ ಇನ್ಶೂರೆನ್ಸ್, ಏಂಜಲ್ ಒನ್, ಬಜಾಜ್ ಆಟೊ, ಕ್ರಿಸಿಲ್, ಏಷ್ಯನ್ ಪೇಂಟ್ಸ್, ಇನ್ಫೊಸಿಸ್, ಹ್ಯಾವೆಲ್ಸ್ ಇಂಡಿಯಾ, ಪಾಲಿಕ್ಯಾಬ್ ಇಂಡಿಯಾ, ಸಿಯೆಟ್, ವಿಪ್ರೊ, ಕೋಟಕ್ ಮಹೀಂದ್ರ ಬ್ಯಾಂಕ್ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸಲಿವೆ.

ತ್ರೈಮಾಸಿಕ ಫಲಿತಾಂಶಗಳು, ಜಾಗತಿಕ ಹಾಗೂ ದೇಶೀಯ ಬೆಳವಣಿಗೆಗಳು ಷೇರುಪೇಟೆ ಮೇಲೆ ಪರಿಣಾಮ ಬೀರಲಿವೆ.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

15ನೇ ವರ್ಷದ ಚಿರಸ್ಮರಣೆ

ಶ್ರೀಮತಿ|| ಯಶೋಧರ ಚಿಂದಯ್ಯ

ನೀವು ನಮ್ಮನ್ನೆಲ್ಲಾ ಅಗಲಿ ಇಂದಿಗೆ
ಹದಿನೈದು ವರ್ಷವಾಯಿತು
ನೀವು ನಮ್ಮ ಹೃದಯಗಳಲ್ಲಿ ಚಿರಸ್ಥಾಯಿಯಾಗಿರುವಿರಿ
ನಿಮ್ಮ ಆತ್ಮಕ್ಕೆ ಶಾಂತಿನೀಡಲೆಂದು
ದೇವರಲ್ಲಿ ಪ್ರಾರ್ಥಿಸುತ್ತೇವೆ.
ಮಕ್ಕಳು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು

3ನೇ ವರ್ಷದ ಪುಣ್ಯಸ್ಮರಣೆ

ಶ್ರೀಮತಿ ಲಕ್ಷ್ಮಮ್ಮ
ಲೇಟ್ ರೈಲ್ವೆ ವೆಂಕಟಯ್ಯನವರ ಧರ್ಮಪತ್ನಿ
ಜನನ: 24.04.1933
ಮರಣ: 18.07.2021

ಶ್ರೀಮತಿ ಲಕ್ಷ್ಮಮ್ಮರವರ 3ನೇ ವರ್ಷದ ಪುಣ್ಯಸ್ಮರಣೆಯನ್ನು ದಿನಾಂಕ: 16.07.2024, ಮಂಗಳವಾರ ಮಧ್ಯಾಹ್ನ 12.30 ಗಂಟೆಗೆ, ಛೇರ್ಮನ್ ಕರಿಯಣ್ಣ ಪಾರ್ಟಿಹಾಲ್, ನಂ. 254, ವಿಜಯಬ್ಯಾಂಕ್ ಹತ್ತಿರ, ಮಾಗಡಿ ಮುಖ್ಯರಸ್ತೆ, ಸುಂಕದಕಟ್ಟೆ, ಬೆಂಗಳೂರು-91 ರಲ್ಲಿ ಏರ್ಪಡಿಸಲಾಗಿದೆ.

ಇಂತಿ : ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು. ಮೊಬೈಲ್ : 94800 72308

ರಫ್ತು ಏರಿಕೆ: ಸಚಿವ

ನವದೆಹಲಿ (ಪಿಟಿಐ): ಜಾಗತಿಕ ಸವಾಲುಗಳ ನಡುವೆಯೂ ಪ್ರಸಕ್ತ ಹಣಕಾಸು ವರ್ಷದ ಜೂನ್ ತ್ರೈಮಾ-ಸಿಕದಲ್ಲಿ ದೇಶದ ರಫ್ತು ವಹಿವಾಟು ಸಕಾರಾತ್ಮಕ ಬೆಳವಣಿಗೆಯನ್ನು ದಾಖಲಿಸಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಹೇಳಿದ್ದಾರೆ.

ಸೇವಾ ವಲಯದ ಬೆಳವಣಿಗೆಯು ಒಟ್ಟಾರೆ ರಫ್ತು ಪ್ರಮಾಣದ ಹೆಚ್ಚಳಕ್ಕೆ ಕಾರಣವಾಗಿದೆ ಎಂದು ತಿಳಿಸಿದ್ದಾರೆ.

ಮೇ ತಿಂಗಳಲ್ಲಿ ಸರಕುಗಳ ರಫ್ತು ಮೌಲ್ಯವು ₹3.18 ಲಕ್ಷ ಕೋಟಿ ಆಗಿದ್ದು, ಶೇ 9.1ರಷ್ಟು ಏರಿಕೆಯಾಗಿದೆ. ಏಪ್ರಿಲ್–ಮೇ ಅವಧಿಯಲ್ಲಿ ಸಾಗಣೆಯ ಒಟ್ಟು ಮೊತ್ತ ₹6.10 ಲಕ್ಷ ಕೋಟಿಯಾಗಿದ್ದು, ಶೇ 5.1ರಷ್ಟು ಬೆಳವಣಿಗೆ ದಾಖಲಿಸಿದೆ.

ರಷ್ಯಾ–ಉಕ್ರೇನ್, ಇಸ್ರೇಲ್–ಹಮಾಸ್ ಯುದ್ಧ, ಕೆಂಪು ಸಮುದ್ರ ಬಿಕ್ಕಟ್ಟಿನ ನಡುವೆಯೂ ದೇಶದ ರಫ್ತು ಸದೃಢವಾಗಿದೆ. ಜೊತೆಗೆ ಸೇವಾ ವಲಯದ ಬೆಳವಣಿಗೆಯು ವೇಗ ಪಡೆದಿದೆ ಎಂದು ಹೇಳಿದ್ದಾರೆ.

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)
₹290-428
ದ್ವಿತಳಿ (ಬಿ.ವಿ)
₹266-593

ಎನ್‌ಇಸಿಸಿ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹565
12 ಕ್ಕೆ	₹76
ಮೈಸೂರು	
100ಕ್ಕೆ	₹570

ಎಫ್‌ಪಿಐ: ₹15 ಸಾವಿರ ಕೋಟಿ ಹೂಡಿಕೆ

ನವದೆಹಲಿ (ಪಿಟಿಐ): ದೇಶದ ಷೇರುಪೇಟೆಗಳಲ್ಲಿ ಪ್ರಸಕ್ತ ತಿಂಗಳ ಮೊದಲ ಎರಡು ವಾರದಲ್ಲಿ ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ), ₹15,352 ಕೋಟಿ ಹೂಡಿಕೆ ಮಾಡಿದ್ದಾರೆ.

ಕೇಂದ್ರ ಸರ್ಕಾರ ಕೈಗೊಂಡಿರುವ ಆರ್ಥಿಕ ಸುಧಾರಣಾ ಕ್ರಮಗಳು, ಅಮೆರಿಕದ ಫೆಡರಲ್ ರಿಸರ್ವ್ ಬಡ್ಡಿದರ ಕಡಿತಗೊಳಿಸುವ ನಿರೀಕ್ಷೆ ಮತ್ತು ದೇಶೀಯ ಮಾರುಕಟ್ಟೆಯಲ್ಲಿನ ಬೇಡಿಕೆ ಹೆಚ್ಚಳವೇ ಹೂಡಿಕೆ ಪ್ರಮಾಣದಲ್ಲಿ ಏರಿಕೆಗೆ ಕಾರಣವಾಗಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಇದೇ ಅವಧಿಯಲ್ಲಿ ಸರ್ಕಾರಿ ಸಾಲ ಪತ್ರಗಳಲ್ಲಿ ಒಟ್ಟು ₹8,484 ಕೋಟಿ ಹೂಡಿಕೆ ಮಾಡಿದ್ದಾರೆ. ಜನವರಿಯಿಂದ ಇಲ್ಲಿಯವರೆಗೆ ಸಾಲ ಪತ್ರಗಳಲ್ಲಿನ ಹೂಡಿಕೆ ಮೊತ್ತವು ₹77,109 ಕೋಟಿ ಆಗಿದೆ ಎಂದು ಷೇರುಪೇಟೆ ಅಂಕಿಅಂಶ ತಿಳಿಸಿವೆ.

'ದೇಶದ ಆರ್ಥಿಕತೆ ಬೆಳವಣಿಗೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ಬಜೆಟ್‌ನಲ್ಲಿ ಯಾವ ಯೋಜನೆಗಳನ್ನು ಜಾರಿಗೊಳಿಸಲಿದೆ ಎಂಬುದನ್ನು ಹೂಡಿಕೆದಾರರು ಎದುರು ನೋಡುತ್ತಿದ್ದಾರೆ' ಎಂದು ಮಾರ್ನಿಂಗ್‌ಸ್ಟಾರ್ ಇನ್‌ವೆಸ್ಟ್‌ಮೆಂಟ್ಸ್ ರಿಸರ್ಚ್ ಇಂಡಿಯಾದ ಸಹ ನಿರ್ದೇಶಕ (ಸಂಶೋಧನಾ ವಿಭಾಗ) ಹಿಮಾಂಶು ಶ್ರೀವಾಸ್ತವ ಹೇಳಿದ್ದಾರೆ.

ಬಸ್ ಪ್ರಯಾಣಿಕರಿಗೆ 2 ಕ್ವಿಂಟಲ್ ಮೊಗ್ಗು ಹಂಚಿದ ಬೆಳೆಗಾರರು

ಹಡಗಲಿ ಮಲ್ಲಿಗೆ ದರ ದಿಢೀರ್ ಕುಸಿತ

● ಸಿ.ಶಿವಾನಂದ

ಹಗರಿಬೊಮ್ಮನಹಳ್ಳಿ (ವಿಜಯನಗರ ಜಿಲ್ಲೆ): 'ಹಡಗಲಿ ಮಲ್ಲಿಗೆ' ಮೊಗ್ಗಿನ ಬೆಲೆ ದಿಢೀರ್ ಕುಸಿತ ಕಂಡಿದ್ದು, ಬೆಳೆಗಾರರು ಕಂಗಾಲಾಗಿದ್ದಾರೆ.

ತಾಲ್ಲೂಕಿನ ಪಿಂಜಾರ್ ಹೆಗ್ಡಾಳು ಗ್ರಾಮದಲ್ಲಿ ಅತಿಹೆಚ್ಚು ಪ್ರಮಾಣದಲ್ಲಿ ಈ ಮಲ್ಲಿಗೆ ಬೆಳೆಯಲಾಗುತ್ತಿದೆ. ಬೆಲೆ ಇಳಿಕೆಯಿಂದ ಬೇಸರಗೊಂಡ ಬೆಳೆಗಾರರು ಭಾನುವಾರ ಬೆಳಿಗ್ಗೆ ಈ ಮಾರ್ಗವಾಗಿ ಹೊಸಪೇಟೆ ಮತ್ತು ದಾವಣಗೆರೆ ಕಡೆಗೆ ತೆರಳುತ್ತಿದ್ದ ಬಸ್ ಪ್ರಯಾಣಿಕರಿಗೆ ಪ್ಲಾಸ್ಟಿಕ್ ಚೀಲದಲ್ಲಿ ತಲಾ ಅರ್ಧ ಕೆ.ಜಿಯಷ್ಟು ಮೊಗ್ಗು ತುಂಬಿ ಉಚಿತವಾಗಿ ಹಂಚಿದರು. ರಸ್ತೆಯಲ್ಲಿ ಸಂಚರಿಸುತ್ತಿದ್ದ ಇತರೆ ವಾಹನಗಳ ಪ್ರಯಾಣಿಕರಿಗೂ ನೀಡಿದರು.

ಪ್ರತಿ ವರ್ಷ ಮೊಹರಂ ಹಬ್ಬಕ್ಕೂ ಮೊದಲು ರೈತರಿಗೆ ಮಲ್ಲಿಗೆ ವ್ಯಾಪಾರದಿಂದ ಕೈತುಂಬಾ ಲಾಭ ದೊರೆಯುತ್ತಿತ್ತು. ಈ ಬಾರಿ ಕಾಕಡ ಮಲ್ಲಿಗೆ ಮಾರುಕಟ್ಟೆಗೆ ಲಗ್ಗೆ ಇಟ್ಟಿದೆ. ಇದರಿಂದ ಹಡಗಲಿ ಮಲ್ಲಿಗೆ ದರವು ಇಳಿಕೆಯಾಗಿದೆ ಎಂದು ಬೆಳೆಗಾರರು ಹೇಳುತ್ತಾರೆ.

ಪಿಂಜಾರ್ ಹೆಗ್ಡಾಳು ಗ್ರಾಮದಲ್ಲಿ 162 ರೈತರು, ಸುಮಾರು 350 ಎಕರೆ ಪ್ರದೇಶದಲ್ಲಿ ಹಡಗಲಿ ಮಲ್ಲಿಗೆ (ಸುವಾಸನೆ ಮಲ್ಲಿಗೆ) ಮತ್ತು ದುಂಡುಮಲ್ಲಿಗೆ ಬೆಳೆದಿದ್ದಾರೆ. ಮೊಹರಂ ಸಂದರ್ಭದಲ್ಲಿ ಪ್ರತಿ ಕೆ.ಜಿಗೆ ₹350ರಿಂದ ₹400ರ ವರೆಗೂ ಬೆಲೆ ದೊರೆಯುತ್ತಿತ್ತು.

'ಈ ಬಾರಿ ಹೊಸಪೇಟೆ ಮತ್ತು ಶಿವಮೊಗ್ಗ ಮಾರುಕಟ್ಟೆಯಲ್ಲಿ ಬೆಳಿಗ್ಗಿನ ವ್ಯಾಪಾರದಲ್ಲಿ ಕೆ.ಜಿ.ಗೆ ₹100ರಂತೆ ಹಾಗೂ ಸಂಜೆ ₹60ಕ್ಕೆ ಮಾರಾಟ ವಾಗುತ್ತದೆ. ಗಿಡದಿಂದ ಕೀಳುವ ಪ್ರತಿ ಕೆ.ಜಿ ಮೊಗ್ಗಿಗೆ ₹100 ಕೂಲಿ ಕೊಡಬೇಕು. ಸಾಗಣೆ ವೆಚ್ಚದ ಜತೆಗೆ ಖರೀದಿದಾರರಿಗೆ ಕಮಿಷನ್ ನೀಡಬೇಕು. ಮಾರುಕಟ್ಟೆಯಲ್ಲಿ ಕಡಿಮೆ ದರ ಲಭಿಸುತ್ತಿರುವುದರಿಂದ ನಷ್ಟ ಅನುಭವಿಸುವಂತಾಗಿದೆ. ಹಾಗಾಗಿ, 2 ಕ್ವಿಂಟಲ್‌ನಷ್ಟು ಮೊಗ್ಗನ್ನು ಹಂಚಿದ್ದೇವೆ' ಎಂದು ರೈತರು ತಿಳಿಸಿದರು.

ಈ ತಿಂಗಳು ನಷ್ಟವಾಗಿದೆ. ಮುಂದಿನ ತಿಂಗಳು ಶ್ರಾವಣದಲ್ಲಿ ಬೆಲೆ ಏರಿಕೆಯಾಗಲಿದೆ ಎಂಬ ವಿಶ್ವಾಸ ಬೆಳೆಗಾರರಲ್ಲಿದೆ. ಆದರೆ, ಆ ವೇಳೆಗೆ ಮಲ್ಲಿಗೆ ಇಳುವರಿ ಕಡಿಮೆ ಆಗುವ ಆತಂಕವೂ ಅವರಿಗೆ ಕಾಡುತ್ತಿದೆ.

ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಪಿಂಜಾರ್ ಹೆಗ್ಡಾಳು ಗ್ರಾಮದಲ್ಲಿ ಬೆಳೆಗಾರರು ಭಾನುವಾರ ಬಸ್ ಪ್ರಯಾಣಿಕರಿಗೆ ಉಚಿತವಾಗಿ ಮಲ್ಲಿಗೆ ಮೊಗ್ಗುಗಳನ್ನು ಹಂಚಿದರು

ಮಲ್ಲಿಗೆ ಬೆಳೆಯಲು ನರೇಗಾ ದಡಿ ಸೌಲಭ್ಯ ಸಿಗಲಿದೆ. ಇದರಿಂದ ಬೆಳೆಗಾರರ ಸಂಖ್ಯೆ ಹೆಚ್ಚಿದೆ. ಹೆಚ್ಚಿನ ಪ್ರಮಾಣದಲ್ಲಿ ಹೂ ಕಟಾವಿಗೆ ಬಂದಿರುವುದೇ ಬೆಲೆ ಕುಸಿತಕ್ಕೆ ಕಾರಣ

ಎಚ್. ರಾಜೇಂದ್ರ, ಹಿರಿಯ ಉಪ ನಿರ್ದೇಶಕ, ತೋಟಗಾರಿಕೆ ಇಲಾಖೆ

ಕೆ.ಜಿ ಕಾಕಡಕ್ಕೆ ₹300 ದರ

ತುಂಗಭದ್ರಾ ಜಲಾಶಯ ಆಶ್ರಿತ ಗಂಗಾವತಿ ಮತ್ತು ಕಂಪ್ಲಿ ಭಾಗದಲ್ಲಿ ಯಥೇಚ್ಛವಾಗಿ ಕಾಕಡ ಮಲ್ಲಿಗೆ ಬೆಳೆಯಲಾಗುತ್ತಿದೆ. ಸದ್ಯ ಪ್ರತಿ ಕೆ.ಜಿ.ಗೆ ₹300 ಧಾರಣೆ ಇದೆ.

ಗಿಡದಿಂದ ಕಿತ್ತ ನಂತರ ಮೂರು ದಿನಗಳವರೆಗೆ ಈ ಹೂವನ್ನು ಸಂಗ್ರಹಿಸಬಹು-ದಾಗಿದೆ.

ಆದರೆ, ಹಡಗಲಿ ಮಲ್ಲಿಗೆ ಮೊಗ್ಗು ಉತ್ತಮ ಗುಣಮಟ್ಟ ಮತ್ತು ಸುವಾಸನೆ ಭರಿತವಾಗಿದೆ. ಆದರೆ, ಗಿಡದಿಂದ ಕಿತ್ತ ನಂತರ ಗರಿಷ್ಠ ಎರಡು ದಿನಗಳವರೆಗೆ ಮಾತ್ರ ಸಂಗ್ರಹಿಸಬಹುದಾಗಿದೆ. ಇದರಿಂದ ಖರೀದಿದಾರರು ಕಾಕಡ ಮಲ್ಲಿಗೆಗೆ ಆದ್ಯತೆ ನೀಡುತ್ತಿದ್ದಾರೆ ಎಂಬುದು ಹೂವಿನ ಸಗಟು ಖರೀದಿದಾರರ ವಿವರಣೆ.

ಟ್ರಂಪ್ ಮೇಲೆ ಗುಂಡಿನ ದಾಳಿ

ಒಂದನೇ ಪುಟದಿಂದ...

ಈ ವೇಳೆ ಅವರ ಮುಖದಲ್ಲಿ ರಕ್ತದ ಕಲೆ ಇರುವುದು ಗೋಚರಿಸಿತು. ಈ ಎಲ್ಲ ದೃಶ್ಯಗಳು ಕ್ಯಾಮೆರಾದಲ್ಲಿ ಸೆರೆಯಾಗಿವೆ. 'ಟ್ರಂಪ್ ಅವರು ಸುರಕ್ಷಿತವಾಗಿದ್ದು, ಅವರಿಗೆ ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗಿದೆ' ಎಂದು ಟ್ರಂಪ್ ಅವರ ವಕ್ತಾರ ಸ್ಟೀವನ್ ಚೆಯುಂಗ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ದಾಳಿಯನ್ನು ಪಕ್ಷಾತೀತವಾಗಿ ಮುಖಂಡರು ಖಂಡಿಸಿದ್ದಾರೆ. ಅಧ್ಯಕ್ಷ ಜೋ ಬೈಡನ್, ಉಪಾಧ್ಯಕ್ಷೆ ಕಮಲಾ ಹ್ಯಾರಿಸ್, ಮಾಜಿ ಅಧ್ಯಕ್ಷರಾದ ಬರಾಕ್ ಒಬಾಮಾ, ಜಾರ್ಜ್ ಡಬ್ಲ್ಯು. ಬುಷ್, ಬಿಲ್ ಕ್ಲಿಂಟನ್ ಅವರು ದಾಳಿಯನ್ನು ತೀವ್ರವಾಗಿ ಖಂಡಿಸಿದ್ದಾರೆ.

ಬಂದೂಕುಧಾರಿಯ ಹತ್ಯೆ: ಟ್ರಂಪ್ ಮೇಲೆ ದಾಳಿ ನಡೆಸಿದ ಬಂದೂಕುಧಾರಿಯನ್ನು ಹತ್ಯೆ ಮಾಡಿರುವುದಾಗಿ 'ಅಮೆರಿಕ ಸೀಕ್ರೆಟ್ ಸರ್ವೀಸ್' ತಿಳಿಸಿದೆ. ದಾಳಿ ನಡೆದ ಕೂಡಲೇ ರಕ್ಷಣಾತ್ಮಕ ಕ್ರಮಗಳನ್ನು ತೆಗೆದುಕೊಳ್ಳಲಾಯಿತು ಮತ್ತು ಮಾಜಿ ಅಧ್ಯಕ್ಷರು ಸುರಕ್ಷಿತರಾಗಿದ್ದಾರೆ ಎಂದು 'ಸೀಕ್ರೆಟ್ ಸರ್ವೀಸ್'ನ ವಕ್ತಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಂತಕನ ಉದ್ದೇಶ ಏನಾಗಿತ್ತು ಎಂಬುದು ಇನ್ನೂ ಗೊತ್ತಾಗಿಲ್ಲ. ಆತನ ವಾಹನದಲ್ಲಿ ಶಸ್ತ್ರಾಸ್ತ್ರ ತಯಾರಿಸುವ ಪರಿಕರಗಳು ಪತ್ತೆಯಾಗಿವೆ. ಘಟನೆ ಕುರಿತು ತನಿಖೆ ನಡೆಸಲಾಗುತ್ತಿದ್ದು, ಇನ್ನಷ್ಟು ಮಾಹಿತಿ ಲಭ್ಯವಾದೊಡನೆ ತಿಳಿಸಲಾಗುವುದು ಎಂದು ಅವರು ಹೇಳಿದ್ದಾರೆ.

ಚಾವಣಿ ಮೇಲಿದ್ದ ಬಂದೂಕುಧಾರಿ: ಟ್ರಂಪ್ ರ‍್ಯಾಲಿಯ ವೇಳೆ ಚಾವಣಿ ಮೇಲಿದ್ದ ವ್ಯಕ್ತಿಯನ್ನು ನೋಡಿದ್ದಾಗಿ ಪ್ರತ್ಯಕ್ಷದರ್ಶಿಯೊಬ್ಬರು ಬಿಬಿಸಿಗೆ ತಿಳಿಸಿದ್ದಾರೆ.

'ನಮ್ಮಿಂದ 50 ಅಡಿ ದೂರದಲ್ಲಿದ್ದ ವ್ಯಕ್ತಿ, ನಮ್ಮ ಪಕ್ಕದಲ್ಲಿದ್ದ ಕಟ್ಟಡದ ಚಾವಣಿಯ ಮೇಲೆ ತೆವಳುತ್ತಿದ್ದುದನ್ನು ಗಮನಿಸಿದ್ದೇನೆ. ಆತನ ಬಳಿ ರೈಫಲ್ ಇದ್ದದ್ದು ಸ್ಪಷ್ಟವಾಗಿ ಕಾಣುತ್ತಿತ್ತು. ಇಷ್ಟಾದರೂ ಟ್ರಂಪ್ ಏಕೆ ಇನ್ನೂ ಮಾತನಾಡುತ್ತಿದ್ದಾರೆ, ಅವರನ್ನು ವೇದಿಕೆಯಿಂದ ಏಕೆ ಕರೆದೊಯ್ದಿಲ್ಲ ಎಂದು ನಾನು ಯೋಚಿಸುತ್ತಿದ್ದೆ, ಅಷ್ಟರಲ್ಲಿ ಏನಾಯಿತು ಎಂಬುದು ಎಲ್ಲರಿಗೂ ತಿಳಿದಿರುವ ವಿಷಯ. ಐದು ಬಾರಿ ಗುಂಡು ಹಾರಿತು' ಎಂದು ಎಂದು ಗ್ರೆಗ್ ಎಂಬವರು ವಿವರಿಸಿದ್ದಾರೆ.

'ರಿಪಬ್ಲಿಕನ್' ಎಂದು ನೋಂದಣಿ

ವಾಷಿಂಗ್ಟನ್ (ಪಿಟಿಐ): ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ಹತ್ಯೆ ಮಾಡಲು ಯತ್ನಿಸಿದ್ದ ಥಾಮಸ್ ಮ್ಯಾಥ್ಯೂ ಕ್ರೂಕ್ಸ್ ಎಂಬಾತನು 20 ವರ್ಷದ ಯುವಕನಾಗಿದ್ದು, ತನ್ನನ್ನು ರಿಪಬ್ಲಿಕನ್ ಎಂದು ನೋಂದಾಯಿಸಿಕೊಂಡಿದ್ದನು.

ಇದೇ ವರ್ಷದ ನವೆಂಬರ್‌ನಲ್ಲಿ ನಡೆಯುವ ಅಧ್ಯಕ್ಷೀಯ ಚುನಾವಣೆಯಲ್ಲಿ ಆತನಿಗೆ ಮೊದಲ ಬಾರಿಗೆ ಮತ ಚಲಾಯಿಸುವ ಹಕ್ಕು ದೊರೆಯುತ್ತಿತ್ತು ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಆತನು, ಟ್ರಂಪ್ ಅವರ ಚುನಾವಣಾ ರ‍್ಯಾಲಿ ನಡೆದ ಸ್ಥಳದಿಂದ 56 ಕಿ.ಮೀ ದೂರದಲ್ಲಿರುವ ಬೆಥೆಲ್ ಪಾರ್ಕ್‌ನ ಪಿಟ್ಸ್‌ಬರ್ಗ್ ಹೊರವಲಯದ ನಿವಾಸಿ ಎಂದು ಅವರು ಹೇಳಿದ್ದಾರೆ. ಪೆನ್ಸಿಲ್ವೇನಿಯಾದ ಮತದಾರರ ಪಟ್ಟಿಯಲ್ಲಿ ರಿಪಬ್ಲಿಕನ್ ಮತದಾರ ಎಂದು ಕ್ರೂಕ್ಸ್ ನೋಂದಣಿ ಮಾಡಿಕೊಂಡಿದ್ದನು.

2021ರ ಜನವರಿಯಲ್ಲಿ ಕ್ರೂಕ್ಸ್ ಇದೇ ವಿಳಾಸ ನೀಡಿ, ಡೆಮಾಕ್ರಟಿಕ್ ಪಕ್ಷಕ್ಕೆ ಸಂಬಂಧಿಸಿದ ಸಂಸ್ಥೆಯೊಂದಕ್ಕೆ 15 ಡಾಲರ್ ದೇಣಿಗೆ ನೀಡಿದ್ದ ಎಂದು ಅಧಿಕಾರಿಗಳು ಹೇಳಿದ್ದಾರೆ.

ತಂದೆಯ ಪ್ರತಿಕ್ರಿಯೆ: 'ಏನಾಗಿದೆ ಎಂಬುದು ನಮಗೆ ಗೊತ್ತಿಲ್ಲ. ಮಗ ಏನು ಮಾಡುತ್ತಿದ್ದ ಎಂಬುದು ನಮಗೆ ತಿಳಿದಿರಲಿಲ್ಲ. ಕಾನೂನು ಜಾರಿ ಸಂಸ್ಥೆಯ ಅಧಿಕಾರಿಗಳ ಜತೆ ಮಾತನಾಡಿದ ಬಳಿಕ ಪ್ರತಿಕ್ರಿಯಿಸುತ್ತೇನೆ' ಎಂದು ಥಾಮಸ್ ತಂದೆ ಮ್ಯಾಥ್ಯೂ ಕ್ರೂಕ್ಸ್ ಹೇಳಿರುವುದಾಗಿ ಸಿಎನ್‌ಎನ್ ವರದಿ ಮಾಡಿದೆ.

ಟ್ರಂಪ್ ಯೋಗಕ್ಷೇಮ ವಿಚಾರಿಸಿದ ಬೈಡನ್

ಷಿಕಾಗೊ (ಪಿಟಿಐ): ಗುಂಡಿನ ದಾಳಿಯಲ್ಲಿ ಗಾಯಗೊಂಡಿರುವ ಟ್ರಂಪ್ ಅವರೊಂದಿಗೆ ಅಧ್ಯಕ್ಷ ಜೋ ಬೈಡನ್ ಶನಿವಾರ ರಾತ್ರಿ ಮಾತನಾಡಿ, ಯೋಗಕ್ಷೇಮ ವಿಚಾರಿಸಿದ್ದಾರೆ. ಅಲ್ಲದೆ, ಅಧ್ಯಕ್ಷರು ಪೆನ್ಸಿಲ್ವೇನಿಯಾದ ಗವರ್ನರ್ ಜೋಶ್ ಶಿಪಿರೊ ಮತ್ತು ಬಟ್ಲರ್ ನಗರದ ಮೇಯರ್ ಬಾಬ್ ಡ್ಯಾಂಡೋಯ್ ಅವರ ಜತೆಗೂ ಮಾತುಕತೆ ನಡೆಸಿದ್ದಾರೆ ಎಂದು ಎಂದು ಶ್ವೇತಭವನ ತಿಳಿಸಿದೆ.

ತೀವ್ರ ಖಂಡನೆ: ಟ್ರಂಪ್ ಮೇಲಿನ ಗುಂಡಿನ ದಾಳಿಯನ್ನು ತೀವ್ರವಾಗಿ ಖಂಡಿಸಿರುವ ಜೋ ಬೈಡನ್ 'ಅಮೆರಿಕದಲ್ಲಿ ಈ ರೀತಿಯ ಹಿಂಸಾಚಾರಕ್ಕೆ ಯಾವುದೇ ಸ್ಥಳವಿಲ್ಲ' ಎಂದು ಹೇಳಿದ್ದಾರೆ.

ಎಚ್ಚರ ವಹಿಸಬೇಕು: 'ಪೆನ್ಸಿಲ್ವೇನಿಯಾದಲ್ಲಿ ಮಾಜಿ ಅಧ್ಯಕ್ಷ ಟ್ರಂಪ್ ಅವರ ಮೇಲಿನ ದಾಳಿ ಕುರಿತು ಮಾಹಿತಿ ಪಡೆದುಕೊಂಡಿದ್ದೇನೆ. ಅವರಿಗೆ ಗಂಭೀರ ಗಾಯವಾಗಿಲ್ಲ ಎಂಬುದು ಸಮಾಧಾನದ ವಿಷಯ. ಟ್ರಂಪ್, ಅವರ ಕುಟುಂಬ, ಘಟನೆಯಲ್ಲಿ ಗಾಯಗೊಂಡವರಿಗಾಗಿ ಪ್ರಾರ್ಥಿಸುತ್ತೇನೆ' ಎಂದು ಅಮೆರಿಕದ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಪ್ರತಿಕ್ರಿಯಿಸಿದ್ದಾರೆ.

ಮೋದಿ ವಿರುದ್ಧ ಹಿಂಸೆ ಉತ್ತೇಜಿಸುವ ರಾಹುಲ್: ಬಿಜೆಪಿ

ನವದೆಹಲಿ (ಪಿಟಿಐ): ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಹಿಂಸಾಚಾರವನ್ನು ಉತ್ತೇಜಿಸುತ್ತಿದ್ದಾರೆ ಎಂದು ಬಿಜೆಪಿ ಭಾನುವಾರ ಆರೋಪಿಸಿದೆ.

ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಹತ್ಯೆ ಯತ್ನದ ಬೆನ್ನಲ್ಲೇ ಬಿಜೆಪಿ ಐ.ಟಿ ವಿಭಾಗದ ಮುಖ್ಯಸ್ಥ ಅಮಿತ್ ಮಾಳವೀಯಾ ಅವರು ರಾಹುಲ್ ಗಾಂಧಿ ಅವರನ್ನು ಟೀಕಿಸಿದ್ದಾರೆ.

ಬಲಪಂಥೀಯ ನಾಯಕರು ತೀವ್ರಗಾಮಿ ಎಡಪಂಥೀಯರಿಂದ ಗುರಿಯಾಗುತ್ತಿದ್ದಾರೆ. ಈ ರೀತಿ ದಾಳಿಗಳಿಂದ 'ದೇಶವೇ ಮೊದಲು' ಸಿದ್ಧಾಂತವನ್ನು ಮಣಿಸಲು ಆಗುವುದಿಲ್ಲ

ಹಿಮಂತ ಬಿಸ್ವಾ ಶರ್ಮಾ, ಅಸ್ಸಾಂ ಮುಖ್ಯಮಂತ್ರಿ

'ಮೂರನೇ ಬಾರಿ ವಿಫಲರಾಗಿರುವ ರಾಹುಲ್ ಗಾಂಧಿ ಅವರು ಪ್ರಧಾನಿ ಮೋದಿ ವಿರುದ್ಧ ಹಿಂಸಾಚಾರವನ್ನು ಪ್ರೋತ್ಸಾಹಿಸಿ, ಸಮರ್ಥಿಸಿದ್ದಾರೆ. ಪಂಜಾಬಿನಲ್ಲಿ ಕಾಂಗ್ರೆಸ್ ಸರ್ಕಾರವಿದ್ದಾಗ ಪೊಲೀಸರು ಉದ್ದೇಶಪೂರ್ವಕವಾಗಿಯೇ ಪ್ರಧಾನಿಯ ಭದ್ರತೆಯೊಂದಿಗೆ ರಾಜಿ ಮಾಡಿಕೊಂಡಿದ್ದರು. ಇದರಿಂದ ಪ್ರಧಾನಿಯ ಬೆಂಗಾವಲು ಪಡೆ ಮೇಲ್ಸೇತುವೆ ಮೇಲೆ ಸಿಲುಕಿಕೊಂಡಿತ್ತು. ಇದನ್ನು ಭಾರತ ಹೇಗೆ ಮರೆಯುತ್ತದೆ' ಎಂದು ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಕೆ.ಪಿ ಶರ್ಮ ಓಲಿ ನೇಪಾಳದ ನೂತನ ಪ್ರಧಾನಿ

ಕಠ್ಮಂಡು (ಪಿಟಿಐ): ಕೆ.ಪಿ.ಶರ್ಮ ಓಲಿ ಅವರು ಮೂರನೇ ಬಾರಿಗೆ ನೇಪಾಳದ ಪ್ರಧಾನಿಯಾಗಿ ಆಯ್ಕೆಯಾಗಿದ್ದು, ಸೋಮವಾರ ಪ್ರಮಾಣವಚನ ಸ್ವೀಕರಿಸಲಿದ್ದಾರೆ.

ನೇಪಾಳದ ಅಧ್ಯಕ್ಷ ರಾಮಚಂದ್ರ ಪೌಡೆಲ್ ಅವರು, ಕಮ್ಯುನಿಸ್ಟ್ ಪಾರ್ಟಿ ಆಫ್ ನೇಪಾಳ- ಯುನಿಫೈಡ್ ಮಾರ್ಕ್ಸಿಸ್ಟ್ ಲೆನಿನಿಸ್ಟ್ (ಸಿಪಿಎನ್–ಯುಎಮ್‌ಎಲ್) ಮತ್ತು ನೇಪಾಳಿ ಕಾಂಗ್ರೆಸ್ (ಎನ್‌ಸಿ) ಪಕ್ಷಗಳ ಸಮ್ಮಿಶ್ರ ಸರ್ಕಾರದ ಪ್ರಧಾನಿಯಾಗಿ ಓಲಿ ಅವರನ್ನು ಭಾನುವಾರ ನೇಮಕ ಮಾಡಿದ್ದಾರೆ. ಓಲಿ ಅವರೊಂದಿಗೆ ಅವರ ಸಚಿವ ಸಂಪುಟದ ಸದಸ್ಯರೂ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ತಕ್ಷಣಬೇಕಾಗಿದ್ದಾರೆ. ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ,TVSಗಳಿಗೆ, ಆಫೀಸ್‌ಗಳಿಗೆ, SSLC, PUC,Degree, ITIನವರುಗಳು. 18,100- 76,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 7259552930

ರಾವ್ ಸಂಸ್ಥೆಗೆವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆ ಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡುಗಿಯರು ಬೇಕಾಗಿದ್ದಾರೆ ಊಟ ವಸತಿವಿದೆ13,000-17,000. 8951315839, 9141634619

Multiple Vacancy

REQUIRED EXPERIENCED Telecaller & Field executive For Bank Loan collection Salary + Incentive. 9916276701, 7899040499

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 15,000 20,000ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 6364468422 9663542555

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಅಣಬೆ ತರಬೇತಿ ಪಡೆದು ಮನೆಯಿಂದಲೇ ಅಣಬೆ ಬೆಳಸಿ ತಿಂಗಳಿಗೆ 30,000ಕ್ಕೂ ಹೆಚ್ಚು ಸಂಪಾದಿಸಿ ತರಬೇತಿಗಾಗಿ ಬೆಂಗಳೂರು 8095555516 ಶಿವಮೊಗ್ಗ 8095555517

Wanted

ವರ್ಕ್ ಫ್ರಮ್ ಹೋಮ್, ಆಫೀಸ್ ಕೆಲಸಕ್ಕೆ ಬೇಕಾಗಿದ್ದಾರೆ. 15,000–43,500/– ವಯೋಮಿತಿ ಇರುವುದಿಲ್ಲ. ಮೊದಲು ಬಂದವರಿಗೆ ಆದ್ಯತೆ. 8861041526, 9945791526.

ಪ್ರವಾಸ

Travel

29.08.2024: 6`ದಿನಗಳು ವಿಮಾನದಲ್ಲಿ ಕಾಶಿ,ಅಯೋಧ್ಯ ಗಯಾ,ಅಲಹಾಬದ್ 32000/ (ಕೆಲವೇ`ಸೀಟುಗಳಿವೆ) 16.09.2024: 12/16`ದಿನಗಳು ದೆಹಲಿ,ಹರಿದ್ವರ್ ಬದ್ರಿನಾಥ್,ಕೇದಾರನಾಥ ಗಂಗೋತ್ರಿ,ಯಮುನೋತ್ರಿ 30000/`42000/ ಶ್ರೀಸಾಯಿ`ರಾಘವೇಂದ್ರ ಟ್ರಾವೆಲ್ಸ್ 9739847429/ 9845560219/ 9886968166

★ಶ್ರೀಶ್ರೇಯಸ್ ಟೂರ್ಸ್★ 09.09.2024,14.10.2024 10ದಿನಗಳು ಅಖಂಡ ರಾಜಸ್ಥಾನ ರಾಜ್ಯ ಪ್ರವಾಸ.09.09.2024, 04.10.2024 12ದಿನಗಳು ಚಾರ್-ದಾಮ್ ಯಾತ್ರಾಪ್ರವಾಸ. 20.09.2024,04.10.2024 6ದಿನಗಳು ಅಯೋಧ್ಯೆ ಕಾಶಿ, ಗಯಾ,ಪ್ರಯಾಗ. 20.09.2024,13.10.2024 10ದಿನಗಳು ಅಖಂಡ ಗುಜರಾತ್ ರಾಜ್ಯಪ್ರವಾಸ.04.10.2024, 7ದಿನಗಳು ಒರಿಸ್ಸಾ,ಕಲ್ಕತ್ತಾ ಪ್ರವಾಸ.14.09.2024 10 ದಿನಗಳು ದೆಹಲಿ,ಸಿಮ್ಲಾ,ಮನಾಲಿ 5ದೇವಿಯರು ವೈಷ್ಣೋದೇವಿ, ಅಮೃತಸರ್,ವಾಘಗಡಿ ಕುರುಕ್ಷೇತ್ರ.13.10.2024 13ದಿನಗಳು 4ರಾಜ್ಯಗಳ ಈಶಾನ್ಯ ಭಾರತ ಪ್ರವಾಸ ಅಸ್ಸಾಂ ಅರುಣಾಚಲ,ಮೇಘಾಲಯ ನಾಗಲ್ಯಾಂಡ್.9743351212, 7676804971

★ಶ್ರೀಶ್ರೇಯಸ್ ಟೂರ್ಸ್★ 05.08.2024 8ದಿನಗಳು ಅಹೋಬಲಂ ನವನಾರಸಿಂಹ, ನವನಂದಿ,ಶ್ರೀಶೈಲಂ, ಹೈದರಾಬಾದ್,ರಾಮೋಜಿ, ಅಲಂಪುರ,ಮಂತ್ರಾಲಯ. 21.08.2024 10ದಿನಗಳು ಅಖಂಡ ಕೇರಳ ರಾಜ್ಯಪ್ರವಾಸ. 14.10.2024 15ದಿನಗಳು ಉತ್ತರಕಾಂಡ ವಿಶೇಷ ಓಂಪರ್ವತ ಆದಿಕೈಲಾಸ್,ನೈನಿತಾಲ್ ಬೀಮ್ ತಾಲ್, ಔಗೇಶ್ವರ,ಭಾಗೇಶ್ವರ, ಮುಕ್ತೇಶ್ವರ.9743351212, 7676804971

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಸಾರ್ವಜನಿಕ ಪ್ರಕಟಣೆ
BOOK YOUR PUBLIC NOTICE ADS IN PRAJAVANI ALL KARNATAKA, ON ALL DAYS
@500/-* PER SQCM
www.dhclassifieds.com
BOOK NOW
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9886213331 | +91 9731810277
+91 9901641752 | 9845114560
*Conditions apply

ಆಭರಣಗಳ ಮೌಲ್ಯಮಾಪನ, ಪಟ್ಟಿ ರೂಪಿಸಲು ಕ್ರಮ • ದುರಸ್ತಿಗೂ ಸಿದ್ಧತೆ

46 ವರ್ಷದ ಬಳಿಕ ತೆರೆದ 'ರತ್ನ ಭಂಡಾರ'

ಪುರಿ (ಪಿಟಿಐ): ಒಡಿಶಾದ ಪುರಿಯಲ್ಲಿರುವ ಹೆಸರಾಂತ, 12ನೇ ಶತಮಾನದ ಶ್ರೀ ಜಗನ್ನಾಥ ದೇಗುಲದ 'ರತ್ನ ಭಂಡಾರ'ವನ್ನು 46 ವರ್ಷದ ಬಳಿಕ ಭಾನುವಾರ ತೆರೆಯಲಾಯಿತು.

ಖಜಾನೆಯಲ್ಲಿರುವ ಆಭರಣಗಳ ಪರಿಶೀಲನೆ ಮಾಡುವುದು ಮತ್ತು ಖಜಾನೆ ವ್ಯವಸ್ಥೆಯ ದುರಸ್ತಿ ಕೈಗೊಳ್ಳುವುದು ಇದರ ಉದ್ದೇಶವಾಗಿದೆ ಎಂದು ಅಧಿಕಾರಿಗಳು ತಿಳಿಸಿದರು.

'ರತ್ನ ಭಂಡಾರವನ್ನು ಈಗ ತೆರೆದರೂ ಆಭರಣಗಳು ಸೇರಿ ಅಲ್ಲಿರುವ ಮೌಲ್ಯಯುತ ವಸ್ತುಗಳ ತಪಶೀಲು ಕಾರ್ಯ ತಕ್ಷಣವೇ ನಡೆಯುವುದಿಲ್ಲ' ಎಂದು ಶ್ರೀ ಜಗನ್ನಾಥ ದೇವಸ್ಥಾನ ಆಡಳಿತದ ಮುಖ್ಯ ಆಡಳಿತಾಧಿಕಾರಿ ಅರಬಿಂದಾ ಪಾಢೀ ಅವರು ತಿಳಿಸಿದ್ದಾರೆ.

ಖಜಾನೆಯ ಒಳ ಮತ್ತು ಹೊರಗಿನ ಕಪಾಟುಗಳಲ್ಲಿ ಇರಿಸಿರುವ ಆಭರಣಗಳು ಮತ್ತು ಇತರೆ ಮೌಲ್ಯಯುತ ವಸ್ತುಗಳನ್ನು ಮರದ ಪೆಟ್ಟಿಗೆಗಳಲ್ಲಿ ಇರಿಸಿ ತಾತ್ಕಾಲಿಕವಾಗಿ ಸ್ಟ್ರಾಂಗ್ ರೂಂಗೆ ಸ್ಥಳಾಂತರಿಸಲಾಗುತ್ತದೆ. ತಾತ್ಕಾಲಿಕ ಸ್ಟ್ರಾಂಗ್ ರೂಂ ಗುರುತಿಸಲಾಗಿದೆ. ಭದ್ರತೆಗೆ ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಕೆ ಸೇರಿದಂತೆ ಎಲ್ಲ ಅಗತ್ಯ ಸಿದ್ಧತೆಗಳು ಆಗಿವೆ ಎಂದರು.

'ಸರ್ಕಾರದ ಅನುಮೋದನೆ ಆಧರಿಸಿ ಆಭರಣಗಳ ವರ್ಗೀಕರಣ ಮತ್ತು ಪಟ್ಟಿ ಮಾಡುವ ಕಾರ್ಯ ಆರಂಭವಾಗಲಿದೆ. ಆಭರಣಗಳ ಮೌಲ್ಯಮಾಪಕರು, ಅಕ್ಕಸಾಲಿಗರು, ತಜ್ಞರ ನೆರವು ಪಡೆಯಲಾಗುತ್ತದೆ. ರತ್ನ ಭಂಡಾರದ ಸುರಕ್ಷತೆಯೇ ಆದ್ಯತೆಯಾಗಿದೆ' ಎಂದು ಹೇಳಿದರು.

ಪುರಿಯ ಜಗನ್ನಾಥ ದೇಗುಲದ ರತ್ನ ಭಂಡಾರದಲ್ಲಿ ಇರುವ ಆಭರಣ,ಮೌಲ್ಯಯುತ ವಸ್ತುಗಳನ್ನು ಇಡಲು ವಿಶೇಷವಾಗಿ ರೂಪಿಸಿರುವ, ಹಿತ್ತಾಳೆಯ ಒಳಕವಚವಿರುವ, ತೇಗದ ಮರದಲ್ಲಿ ಸಿದ್ಧಪಡಿಸಿರುವ ಬೃಹತ್ ಪೆಟ್ಟಿಗೆಗಳು —ಪಿಟಿಐ ಚಿತ್ರ

ಖಜಾನೆ ತೆರೆಯಲು ಮಧ್ಯಾಹ್ನ 1.28 ಗಂಟೆ ಸುಮುಹೂರ್ತ ಎಂದು ಗುರುತಿಸಲಾಗಿತ್ತು. ಈ ಉದ್ದೇಶಕ್ಕಾಗಿ ಸರ್ಕಾರ ರಚಿಸಿದ್ದ ಸಮಿತಿಯ ಸದಸ್ಯರು ಮಧ್ಯಾಹ್ನ 12 ಗಂಟೆಗೆ ದೇಗುಲದ ಆವರಣವನ್ನು ಪ್ರವೇಶಿಸಿದರು. ಪೂಜಾವಿಧಿಯ ಬಳಿಕ ರತ್ನಭಂಡಾರ ತೆರೆಯಲಾಯಿತು.

ರತ್ನಭಂಡಾರ ತೆರೆಯುವುದು ಒಡಿಶಾ ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ಬಿಸಿ ಚರ್ಚೆಗೆ ಗ್ರಾಸವಾಗಿತ್ತು. ಆಗ ಆಡಳಿತ ಪಕ್ಷವಾಗಿದ್ದ ಬಿಜೆಡಿಯನ್ನು ಗುರಿಯಾಗಿಸಿ ಬಿಜೆಪಿ ವಾಗ್ದಾಳಿ ನಡೆಸಿತ್ತು. ಅಧಿಕಾರಕ್ಕೆ ಬಂದರೆ ರತ್ನ ಭಂಡಾರ ತೆರೆಯುವುದಾಗಿ ಭರವಸೆ ಕೊಟ್ಟಿತ್ತು.

'ಶ್ರೀ ಜಗನ್ನಾಥ ದೇವರ ಕೃಪೆ, ಒಡಿಯಾ ಸಮುದಾಯ ಮತ್ತು ಒಡಿಯಾ ಅಸ್ಮಿತೆಯ ಆಶಯದಂತೆ ಈಗ ಪ್ರಯತ್ನಗಳು ಆರಂಭವಾಗಿವೆ' ಎಂದು ಮುಖ್ಯಮಂತ್ರಿ ಯವರ ಸಚಿವಾಲಯವು 'ಎಕ್ಸ್'ನಲ್ಲಿ ಒಡಿಯಾ ಭಾಷೆಯಲ್ಲಿ ಸಂದೇಶವನ್ನು ಹಂಚಿಕೊಂಡಿದೆ.

'ನಿಮ್ಮ ಆಶಯದಂತೆ ದೇವಸ್ಥಾನದ ನಾಲ್ಕೂ ಗೇಟ್ ತೆರೆಯಲಾಗಿದೆ. 46 ವರ್ಷದ ಬಳಿಕ ಸದುದ್ದೇಶಕ್ಕಾಗಿ ಇಂದು ರತ್ನ ಭಂಡಾರವನ್ನು ತೆರೆಯಲಾಗುತ್ತದೆ ಎಂದೂ ಸರ್ಕಾರ ತನ್ನ ಸಂದೇಶದಲ್ಲಿ ತಿಳಿಸಿದೆ.

ರತ್ನ ಭಂಡಾರ ತೆರೆದ ಸಂದರ್ಭದಲ್ಲಿ ಒಡಿಶಾ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಬಿಸ್ವನಾಥ್ ರಥ್, ದೇವಸ್ಥಾನ ಮಂಡಳಿಯ ಮುಖ್ಯ ಆಡಳಿತಾಧಿಕಾರಿ ಅರಬಿಂದಾ ಪಾಢೀ, ಪುರಾತತ್ವ ಸರ್ವೇಕ್ಷಣಾ ಇಲಾಖೆಯ ಸೂಪರಿಂಟೆಂಡೆಂಟ್ ಡಿ.ಬಿ. ಗಡನಾಯಕ್ ಮತ್ತು ಪುರಿಯ ರಾಜಮನೆತನದ 'ಗಜಪತಿ ಮಹಾರಾಜ'ರ ಪ್ರತಿನಿಧಿಗಳು ಇದ್ದರು.

ಪ್ರತ್ಯೋಷಿ ಮಹಾಪಾತ್ರ, ಭಂಡಾರ್ ಮೇಕಪ್, ಚಾಂದೌಕರಾಣ, ದಿಯೊಲಿಕರಣ್ ಅವರು ವಿಧಿ-ವಿಧಾನಗಳನ್ನು ನಡೆಸಿಕೊಟ್ಟರು.

'ಆರು ಬೃಹತ್ ಪೆಟ್ಟಿಗೆಗಳು ಸಜ್ಜು'

ಖಜಾನೆಯ ಹೊರ ಕಪಾಟಿನ ಮೂರು ಕೀಗಳು ಲಭ್ಯವಿದೆ. ಒಂದು ಗಜಪತಿ ಮಹಾರಾಜರು, ಉಳಿದೆರಡು ದೇಗುಲದ ಆಡಳಿತ ಮತ್ತು ಸೇವಕರ ಬಳಿ ಇವೆ.

'ಕೀ ಕಾಣೆಯಾಗಿರುವ ಒಂದು ಕಪಾಟಿಗೆ ಹೆಚ್ಚುವರಿ ಬೀಗ ಹಾಕಿ ಮುದ್ರೆ ಹಾಕಲಿದ್ದು, ಅದರ ಕೀ ಅನ್ನು ಜಿಲ್ಲಾಧಿಕಾರಿಗಳ ಮೇಲುಸ್ತುವಾರಿಯಲ್ಲಿ ಜಿಲ್ಲಾ ಖಜಾನೆಯಲ್ಲಿ ಇಡಲಾಗುವುದು' ಎಂದು ದೇವಸ್ಥಾನದ ಆಡಳಿತಾಧಿಕಾರಿ ಅರಬಿಂದಾ ಪಾಢೀ ತಿಳಿಸಿದರು.

ಹಿತ್ತಾಳೆ ಒಳ ಆವರಣ ಒಳಗೊಂಡ ಆರು ಮರದ ಪೆಟ್ಟಿಗೆಗಳನ್ನು ದೇವಸ್ಥಾನದ ಆವರಣದಲ್ಲಿ ಸಜ್ಜುಗೊಳಿಸಲಾಗಿದೆ. ಈ ಪೆಟ್ಟಿಗೆಗಳನ್ನು ತೇಗದ ಮರದಿಂದ ಮಾಡಲಾಗಿದ್ದು, 4.5 ಅಡಿ ಉದ್ದ, 2.5 ಅಡಿ ಎತ್ತರ ಮತ್ತು ಅಗಲ ಇವೆ. ರತ್ನ ಭಂಡಾರ ತೆರೆದ ಬಳಿಕ ಅಲ್ಲಿರುವ ಆಭರಣ, ಮೌಲ್ಯಯುತ ವಸ್ತುಗಳನ್ನು ಇವುಗಳಿಗೆ ಸ್ಥಳಾಂತರಿಸಲಾಗುತ್ತದೆ ಎಂದು ತಿಳಿಸಿದರು.

ಈ ಹಿಂದೆ ರತ್ನ ಭಂಡಾರವನ್ನು 1978ರಲ್ಲಿ ತೆರೆಯಲಾಗುತ್ತದೆ. ರತ್ನ ಭಂಡಾರ ತೆರೆಯುವ ವೇಳೆ ಅನುಸರಿಸಬೇಕಾದ ಕ್ರಮಗಳನ್ನು (ಎಸ್‌ಒಪಿ) ಸರ್ಕಾರ ಈಗಾಗಲೇ ಪ್ರಕಟಿಸಿದೆ.

ರತ್ನ ಭಂಡಾರದಲ್ಲಿ ಇರುವ ವಸ್ತುಗಳ ವಿವರಗಳನ್ನು ಒಳಗೊಂಡ ಡಿಜಿಟಲ್ ಪಟ್ಟಿಯನ್ನು ಸಿದ್ಧಪಡಿಸಲು ಸರ್ಕಾರ ತೀರ್ಮಾನಿಸಿದೆ.

ದುರಸ್ತಿಗೆ ಸಂಬಂಧಿಸಿದಂತೆ ಎಎಸ್‌ಐನ ವಾಸ್ತುಶಿಲ್ಪಿ ತಂತ್ರಜ್ಞರು, ಮೆಕ್ಯಾನಿಕಲ್ ಎಂಜಿನಿಯರುಗಳು, ಸಿವಿಲ್ ಎಂಜಿನಿಯರ್‌ಗಳು ಪರಿಶೀಲನೆ ನಡೆಸುವರು ಎಂದು ಎಎಸ್‌ಐ ಅಧಿಕಾರಿ ಗದನಾಯಕ್ ಅವರು ತಿಳಿಸಿದರು.

ಎನ್‌ಆರ್‌ಎ ನಿಷ್ಕ್ರಿಯ:ಕಾಂಗ್ರೆಸ್

ಪ್ರಧಾನಿ ಮೋದಿ ಹೇಳಿಕೆ ಸುಳ್ಳುಗಳ ಸರಮಾಲೆ —ಖರ್ಗೆ

ನವದೆಹಲಿ (ಪಿಟಿಐ): 'ರಾಷ್ಟ್ರೀಯ ನೇಮಕಾತಿ ಏಜೆನ್ಸಿ (ಎನ್‌ಆರ್‌ಎ) ಕಳೆದ 4 ವರ್ಷಗಳಲ್ಲಿ ಒಂದೂ ಪರೀಕ್ಷೆ ನಡೆಸಿಲ್ಲವೇಕೆ' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಭಾನುವಾರ ಪ್ರಶ್ನಿಸಿದ್ದಾರೆ.

ಆರ್‌ಎಸ್‌ಎಸ್ ಮತ್ತು ಬಿಜೆಪಿ ದೇಶದಲ್ಲಿನ ಶಿಕ್ಷಣದ ವ್ಯವಸ್ಥೆಯನ್ನು ನಾಶಪಡಿಸುವ ಕಾರ್ಯಾಚರಣೆ ಕೈಗೊಂಡಿದೆ ಎಂದೂ ವಾಗ್ದಾಳಿ ನಡೆಸಿದ್ದು, ಎನ್‌ಆರ್‌ಎ ಕುರಿತು ಮೂರು ಪ್ರಶ್ನೆಗಳನ್ನು ಎತ್ತಿದ್ದಾರೆ.

'3-4 ವರ್ಷಗಳಲ್ಲಿ ಎಂಟು ಕೋಟಿ ಹೊಸ ಉದ್ಯೋಗ ಸೃಷ್ಟಿಯಾಗಿದೆ. ಇದು ನಿರುದ್ಯೋಗ ಕುರಿತ ಅಪಪ್ರಚಾರವನ್ನು ತಣ್ಣಗಾಗಿಸಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಮುಂಬೈನಲ್ಲಿ ಹೇಳಿದ್ದರು.

ಇದಕ್ಕೆ 'ಎಕ್ಸ್'ನಲ್ಲಿ ಪ್ರತಿಕ್ರಿಯಿಸಿರುವ ಖರ್ಗೆ, 'ನರೇಂದ್ರ ಮೋದಿಯವರೇ, ಉದ್ಯೋಗ ಸೃಷ್ಟಿ ಕುರಿತು ಮುಂಬೈನಲ್ಲಿ ಶನಿವಾರ ಸುಳ್ಳುಗಳ ಸರಮಾಲೆಯನ್ನೇ ಹೆಣೆದಿದ್ದೀರಿ. ಎನ್‌ಆರ್‌ಎ ಸ್ಥಾಪನೆ ಘೋಷಿಸುವಾಗ ನೀವು ಏನು ಹೇಳಿದ್ದೀರಿ ಎಂದು ನೆನಪಿಸಲು ಬಯಸುತ್ತೇನೆ' ಎಂದಿದ್ದಾರೆ.

2020ರ ಆಗಸ್ಟ್‌ನಲ್ಲಿ ಎನ್‌ಆರ್‌ಎ ಉದ್ಘಾಟಿಸುತ್ತಾ, 'ಇದು ಕೋಟ್ಯಂತರ ಯುವಜನರಿಗೆ ವರದಾನ. ಇದು ಸಾಮಾನ್ಯ ಅರ್ಹತಾ ಪರೀಕ್ಷೆ ನಡೆಸಲಿದ್ದು, ಬಹುಹಂತದ ಪರೀಕ್ಷೆಗಳು ಇರುವುದಿಲ್ಲ. ಸಮಯ ಮತ್ತು ಸಂಪನ್ಮೂಲ ಉಳಿಸಲಿದೆ, ಪಾರದರ್ಶಕತೆ ಇರಲಿದೆ ಎಂದಿದ್ದಿರಿ' ಎಂದು ಹೇಳಿದ್ದಾರೆ.

ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ಅನ್ನು 'ವಂಚನೆ, ಪ್ರಶ್ನೆಪತ್ರಿಕೆ ಸೋರಿಕೆ, ಹಗರಣ'ಕ್ಕೆ ಬಳಸಲಾಯಿತು. ಇದೇ ವೇಳೆ ಪರೀಕ್ಷೆ ನಡೆಸಲು ಎನ್‌ಆರ್‌ಎಗೆ ಅವಕಾಶ ನೀಡಲಿಲ್ಲ. ಆರ್‌ಎಸ್‌ಎಸ್-ಬಿಜೆಪಿ ವ್ಯವಸ್ಥೆಯನ್ನೇ ಹಾಳುಗೆಡವಿ, ಯುವಜನರ ಭವಿಷ್ಯ ಹೊಸಕಿಹಾಕಿತು ಎಂದು ಖರ್ಗೆ ಟೀಕಿಸಿದ್ದಾರೆ.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು ಇದೇ ವಿಷಯ ಕುರಿತು ಎಕ್ಸ್‌ನಲ್ಲಿ ಪ್ರಶ್ನಿಸಿದ್ದು, 'ಎನ್‌ಆರ್‌ಎ ಕೂಡ ಎನ್‌ಟಿಎ ರೀತಿಯಲ್ಲಿಯೇ ವಿಫಲವಾಗಿದೆ' ಎಂದರು.

ಮೂರು ಪ್ರಶ್ನೆಗಳು

- ಎನ್‌ಆರ್‌ಎ 4 ವರ್ಷಗಳಲ್ಲಿ ಏಕೆ ಒಂದೂ ಪರೀಕ್ಷೆಯನ್ನು ನಡೆಸಿಲ್ಲ?
- ₹1,517.57 ಕೋಟಿ ಹಣ ಲಭ್ಯವಿದ್ದರೂ 4 ವರ್ಷಗಳಲ್ಲಿ ₹ 58 ಕೋಟಿ ಅಷ್ಟೇ ವೆಚ್ಚವಾಗಿದೆ ಏಕೆ?
- ಸರ್ಕಾರಿ ಉದ್ಯೋಗಗಳಿಗೆ ನೇಮಕಾತಿಗಾಗಿ ಎನ್‌ಆರ್‌ಎ ರಚಿಸಲಾಗಿತ್ತು. ಪರಿಶಿಷ್ಟರು, ಒಬಿಸಿ ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗಗಳ ಯುವಜನರು ಮೀಸಲು ಹಕ್ಕುಗಳಿಂದ ವಂಚಿತರಾಗಿದ್ದಾಗ ಎನ್‌ಆರ್‌ಎ ಉದ್ದೇಶಪೂರ್ವಕವಾಗಿಯೇ ನಿಷ್ಕ್ರಿಯವಾಗಿತ್ತೆ?

ಠಾಣೆ: 11 ವರ್ಷದ ಬಾಲಕಿ ಮೇಲೆ ಅತ್ಯಾಚಾರ

ಠಾಣೆ (ಪಿಟಿಐ): 11 ವರ್ಷದ ಬಾಲಕಿಯನ್ನು ಇಬ್ಬರು ಪುರುಷರು ಅಪಹರಿಸಿ ಅತ್ಯಾಚಾರ ಮಾಡಿದ್ದಾರೆ ಎಂದು ಮಹಾರಾಷ್ಟ್ರದ ಠಾಣೆ ಜಿಲ್ಲೆಯ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಬಾಲಕಿಯು ಜುಲೈ 12ರಂದು ಅಂಬರನಾಥ ರೈಲು ನಿಲ್ದಾಣದ ಕಡೆಗೆ ತೆರಳುತ್ತಿದ್ದ ವೇಳೆ ತಂದೆ ಹಾಗೂ ಅಜ್ಜಿ ಕಡೆಯವರು ಎಂದು ಪರಿಚಯಿಸಿಕೊಂಡ ಇಬ್ಬರು, ಆಕೆಯನ್ನು ಬೆದರಿಸಿ ಆಟೊರಿಕ್ಷಾದಲ್ಲಿ ನಿರ್ಜನ ಪ್ರದೇಶಕ್ಕೆ ಕರೆದುಕೊಂಡು ಹೋಗಿ ಕೃತ್ಯ ಎಸಗಿದ್ದಾರೆ ಎಂದು ಆರೋಪಿಸಲಾಗಿದೆ.

ನಂತರ ಬಾಲಕಿಯು ಮನೆಗೆ ತೆರಳಿ, ನಡೆದ ಘಟನೆಯ ಬಗ್ಗೆ ಪೋಷಕರಿಗೆ ಹೇಳಿದ್ದಾಳೆ ಎಂದು ಅಧಿಕಾರಿಗಳು ತಿಳಿಸಿದರು.

ಬಾಲಕಿಯ ಪಾಲಕರು ಶನಿವಾರ ದೂರು ದಾಖಲಿಸಿದ್ದಾರೆ.

ಪಯಣ... ಪಶ್ಚಿಮ ಬಂಗಾಳದ ನಾದಿಯಾ ಜಿಲ್ಲೆಯಲ್ಲಿ ಭಾನುವಾರ ಸೂರ್ಯಾಸ್ತದ ವೇಳೆ ಹೂಗ್ಲಿ ನದಿಯಲ್ಲಿ ವ್ಯಕ್ತಿಯೊಬ್ಬ ದೋಣಿಯಲ್ಲಿ ಸಾಗಿದ ದೃಶ್ಯ – ಪಿಟಿಐ ಚಿತ್ರ

ಭಯೋತ್ಪಾದಕ ಲಾಂಡಾನ ಐವರು ಆಪ್ತರ ಬಂಧನ

ಚಂಡೀಗಢ (ಪಿಟಿಐ): ಕೆನಡಾ ಮೂಲದ ಭಯೋತ್ಪಾದಕ ಲಖ್ಬೀರ್ ಸಿಂಗ್ ಅಲಿಯಾಸ್ ಲಾಂಡಾ ಎಂಬಾತನ ಐವರು ಸಹಚರರನ್ನು ಪೊಲೀಸರು ಬಂಧಿಸಿದ್ದಾರೆ.

'ಮಹತ್ವದ ಕಾರ್ಯಾಚರಣೆ ನಡೆಸಿದ ಜಲಂಧರ್ ವ್ಯಾಪ್ತಿಯ ಪೊಲೀಸರು ಭಯೋತ್ಪಾದಕ ಲಖ್ಬೀರ್‌ನ ಐವರು ಆಪ್ತರನ್ನು ಬಂಧಿಸಿದ್ದಾರೆ. ಬಂಧಿತರಿಂದ 3 ಪಿಸ್ತೂಲ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮಹಾನಿರ್ದೇಶಕ ಗೌರವ್ ಯಾದವ್ ಅವರು ಭಾನುವಾರ 'ಎಕ್ಸ್'ನಲ್ಲಿ ತಿಳಿಸಿದ್ದಾರೆ.

'ಇದರೊಂದಿಗೆ ಲಾಂಡಾ ಗ್ಯಾಂಗ್‌ನ ಬಂಧಿತರ ಸಂಖ್ಯೆ 13ಕ್ಕೆ ಏರಿಕೆಯಾಗಿದೆ. ಈ ಗ್ಯಾಂಗ್ ಪಂಜಾಬ್‌ನ ಹಲವು ಜಿಲ್ಲೆಗಳಲ್ಲಿ ಕೊಲೆ, ದರೋಡೆ ಸೇರಿದಂತೆ ಇತರ ಅಪರಾಧ ಕೃತ್ಯಗಳನ್ನು ಎಸಗಿದೆ' ಎಂದು ತಿಳಿಸಿದ್ದಾರೆ.

ಲಾಂಡಾ ಗ್ಯಾಂಗ್‌ನ ಮೂವರನ್ನು ಜೂನ್ 10ರಂದು ಬಂಧಿಸಲಾಗಿತ್ತು. ಜೂನ್ 30ರಂದು ಮತ್ತೆ ಐವರನ್ನು ಬಂಧಿಸಲಾಗಿತ್ತು.

ದೆಹಲಿ: ರೋಗಿಗೆ ಗುಂಡಿಕ್ಕಿ ಹತ್ಯೆ

ನವದೆಹಲಿ (ಪಿಟಿಐ): 'ಇಲ್ಲಿನ ಜಿಬಿಟಿ ಆಸ್ಪತ್ರೆಯಲ್ಲಿ ದಾಖಲಾಗಿದ್ದ 32 ವರ್ಷದ ರಿಯಾಜುದ್ದೀನ್ ಎಂಬ ರೋಗಿಯ ಮೇಲೆ 18 ವರ್ಷದ ಯುವಕನೊಬ್ಬ ಭಾನುವಾರ ಗುಂಡು ಹಾರಿಸಿ ಹತ್ಯೆ ಮಾಡಿದ್ದಾನೆ' ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

'ಜೂನ್ 23ರಂದು ರಿಯಾಜುದ್ದೀನ್ ಆಸ್ಪತ್ರೆಗೆ ದಾಖಲಾಗಿದ್ದರು. ಹೊಟ್ಟೆಗೆ ಸಂಬಂಧಿಸಿದ ರೋಗಕ್ಕೆ ಚಿಕಿತ್ಸೆ ಪಡೆಯುತ್ತಿದ್ದರು. ಭಾನುವಾರ ಸಂಜೆ 4ರ ಸುಮಾರಿಗೆ ಘಟನೆ ನಡೆದಿದೆ. ಈ ಬಗ್ಗೆ ಠಾಣೆಗೆ ಕರೆ ಬಂದಿತ್ತು' ಎಂದರು.

'ಘಟನೆ ಕುರಿತು ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಗುಂಡು ಹಾರಿಸಿದ ಯುವಕನಿಗಾಗಿ ಹುಡುಕಾಟ ನಡೆಯುತ್ತಿದೆ. ವೈಯಕ್ತಿಕ ಕಾರಣಕ್ಕಾಗಿ ಹತ್ಯೆ ನಡೆದಿರಬಹುದು ಎಂದು ಮೇಲ್ನೋಟಕ್ಕೆ ಕಾಣಿಸುತ್ತಿದೆ' ಎಂದು ಪೊಲೀಸರು ವಿವರಿಸಿದರು.

ಗಡಿ ನಿಯಂತ್ರಣ ರೇಖೆ: ಒಳನುಸುಳುವಿಕೆ ಯತ್ನ ವಿಫಲಗೊಳಿಸಿದ ಸೇನೆ

ಜಮ್ಮು–ಕಾಶ್ಮೀರ: ಮೂವರು ಉಗ್ರರ ಹತ್ಯೆ

ಶ್ರೀನಗರ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಕೆರಾನ್ ವಲಯದ ಗಡಿ ನಿಯಂತ್ರಣ ರೇಖೆ ಬಳಿ ಭಾನುವಾರ ಒಳನುಸುಳಲು ಯತ್ನಿಸುತ್ತಿದ್ದ ಭಯೋತ್ಪಾದಕರನ್ನು ಸೇನೆಯು ಹಿಮ್ಮೆಟ್ಟಿಸಿದ್ದು, ಮೂವರನ್ನು ಹತ್ಯೆ ಮಾಡಿದೆ.

ಗಡಿ ಭಾಗದಲ್ಲಿ ಉಗ್ರರ ಒಳನುಸುಳುವಿಕೆಯನ್ನು ಹಿಮ್ಮೆಟ್ಟಿಸುವ ಕಾರ್ಯಾಚರಣೆ ರಾತ್ರಿಯೂ ಮುಂದುವರಿದಿದೆ ಎಂದು ಸೇನೆಯ ಮೂಲಗಳು ತಿಳಿಸಿವೆ.

'ಕಾರ್ಯಾಚರಣೆಯಲ್ಲಿ ಇದುವರೆಗೆ ಮೂವರು ಉಗ್ರರನ್ನು ಕೊಲ್ಲಲಾಗಿದ್ದು, ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ' ಎಂದು ಶ್ರೀನಗರದಲ್ಲಿ ನೆಲೆ ಹೊಂದಿರುವ ಸೇನೆಯ ಚಿನಾರ್ ಕೋರ್‌ನ ಅಧಿಕಾರಿ 'ಎಕ್ಸ್'ನಲ್ಲಿ ತಿಳಿಸಿದ್ದಾರೆ.

ಉಗ್ರರ 'ಗೋಪ್ಯ ಬೆದರಿಕೆ': ನುಸುಳುಕೋರರು ಅನುಸರಿಸುತ್ತಿರುವ 'ಗೋಪ್ಯ ಬೆದರಿಕೆ' ಭೇದಿಸುವುದು ಜಮ್ಮು ಮತ್ತು ಕಾಶ್ಮೀರದ ಭದ್ರತಾ ಸಂಸ್ಥೆಗಳಿಗೆ ಸವಾಲಾಗಿ ಪರಿಣಮಿಸಿದೆ. ನುಸುಳುಕೋರರು 'ಸಂರಕ್ಷಣೆ ಮತ್ತು ಬಲವರ್ಧನೆಯ' ಕಾರ್ಯತಂತ್ರವನ್ನು ಅನುಸರಿಸುತ್ತಿದ್ದಾರೆ. ಇದಕ್ಕೆ ಇತ್ತೀಚೆಗೆ ಕಠುವಾ ಜಿಲ್ಲೆಯಲ್ಲಿ ನಡೆದ ದಾಳಿ, ಚಕಮಕಿ ಸಂದರ್ಭಗಳು ನಿದರ್ಶನವಾಗಿವೆ.

ಭಯೋತ್ಪಾದಕರ ಜೊತೆಗಿನ ಚಕಮಕಿಯನ್ನು ವಿಶ್ಲೇಷಿಸಿರುವ, ಈ ಬೆಳವಣಿಗೆಗಳನ್ನು ಗಮನಿಸುತ್ತಿರುವ ಅಧಿಕಾರಿಗಳ ಪ್ರಕಾರ, ಭದ್ರತಾ ಪಡೆಗಳು ಕಟ್ಟೆಚ್ಚರ ವಹಿಸಿವೆ. ಆದರೆ, ಕೆಳಹಂತದಲ್ಲಿ ಗುಪ್ತದಳ ಮತ್ತು ಕಣ್ಗಾವಲು ವ್ಯವಸ್ಥೆಯಲ್ಲಿನ ಲೋಪ ಒಟ್ಟು ಕಾರ್ಯಾಚರಣೆಗೆ ಅಡ್ಡಿಯಾಗಿದೆ.

ತಾಂತ್ರಿಕ ಜಾಣ್ಮೆಯ ಮೇಲಿನ ಅವಲಂಬನೆಯು ಹೆಚ್ಚೇನೂ ಉಪಯೋಗಕ್ಕೆ ಬಾರದು. ಏಕೆಂದರೆ ಅಧಿಕಾರಿಗಳ ದಾರಿ ತಪ್ಪಿಸಲು ಉಗ್ರರು ಆನ್‌ಲೈನ್ ಬಳಕೆ ಮಾಡುತ್ತಾರೆ. ಹೀಗಾಗಿ ಜಮ್ಮು ಪ್ರದೇಶದಲ್ಲಿ ಉಗ್ರರನ್ನು ಸದೆಬಡಿಯಲು ಕಣ್ಗಾವಲು ವ್ಯವಸ್ಥೆಯನ್ನು ಮೇಲ್ದರ್ಜೆಗೆ ಏರಿಸಬೇಕು ಎಂದು ಅವರು ಹೇಳಿದರು.

ಶಾಂತವಾಗಿದ್ದ ಪ್ರದೇಶದಲ್ಲಿ ಇತ್ತೀಚೆಗೆ ಉಗ್ರರ ಉಪಟಳ ಹೆಚ್ಚಾಗಿದೆ. ಅದರಲ್ಲೂ ಪೂಂಛ್, ರಜೌರಿ ಮತ್ತಿತರ ಕಡೆಗಳಲ್ಲಿ ಐಎಎಫ್ ಬೆಂಗಾವಲು ವಾಹನ, ಯಾತ್ರಾರ್ಥಿಗಳ ಬಸ್ ಮೇಲಿನ ದಾಳಿ ಹೆಚ್ಚಾಗಿದೆ. ಕಠುವಾದಲ್ಲಿ ಯೋಧರ ಹತ್ಯೆಯು ಭಯೋತ್ಪಾದಕ ಬೆದರಿಕೆ ಹೆಚ್ಚಾಗಿದೆ ಎಂಬುದಕ್ಕೆ ಪುರಾವೆಯಾಗಿದೆ.

'ಸಂರಕ್ಷಣೆ ಮತ್ತು ಬಲವರ್ಧನೆ ತಂತ್ರ'ದ ಮೂಲಕ ಭಯೋತ್ಪಾದಕರು ಜಮ್ಮು ಮತ್ತು ಕಾಶ್ಮೀರಕ್ಕೆ ನುಸುಳುತ್ತಿದ್ದಾರೆ. ಮೊದಲು ಶಾಂತವಾಗಿದ್ದು, ಸ್ಥಳೀಯರೊಂದಿಗೆ ಬೆರೆಯುತ್ತಾರೆ. ಯಾವುದೇ ದಾಳಿ ಕೈಗೊಳ್ಳುವ ಮುನ್ನ ಮುಖ್ಯಸ್ಥರ ನಿರ್ದೇಶನಕ್ಕಾಗಿ ಕಾಯುತ್ತಾರೆ' ಎಂದು ಹೇಳಿದರು.

ಮಣಿಪುರ: ಸಿಆರ್‌ಪಿಎಫ್ ಯೋಧ ಹುತಾತ್ಮ

ಇಂಫಾಲ್ (ಪಿಟಿಐ): ಮಣಿಪುರದ ಜಿರಿಬಾಮ್ ಜಿಲ್ಲೆಯಲ್ಲಿ ಭಾನುವಾರ ಮುಂಜಾನೆ ಶಂಕಿತ ಬಂಡುಕೋರರು ನಡೆಸಿದ ಗುಂಡಿನ ದಾಳಿಯಲ್ಲಿ ಕೇಂದ್ರ ಮೀಸಲು ಪೊಲೀಸ್ ಪಡೆಯ (ಸಿಆರ್‌ಪಿಎಫ್) ಯೋಧರೊಬ್ಬರು ಹುತಾತ್ಮರಾಗಿದ್ದಾರೆ.

'ಬಿಹಾರ ಮೂಲದ ಅಜಯ್ ಕುಮಾರ್ ಮಿಶ್ರಾ (43) ಮೃತ ಯೋಧ. ಇನ್ನೊಬ್ಬರು ಪೊಲೀಸ್ ಸಿಬ್ಬಂದಿಗೆ ಗಾಯಗಳಾಗಿವೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಗಾಯಗೊಂಡವರು ಚಿಕಿತ್ಸೆ ಪಡೆಯುತ್ತಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಶನಿವಾರ ರಾತ್ರಿಯಿಂದ ಗುಂಡಿನ ಚಕಮಕಿ ಆರಂಭವಾಗಿತ್ತು. ದಾಳಿಯಿಂದಾಗಿ ಭದ್ರತಾ ಸಿಬ್ಬಂದಿ ಇದ್ದ ವಾಹನಕ್ಕೂ ಹಾನಿಯಾಗಿದೆ. ಮಾಂಗ್‌ಬಂಗ್ ಸೇರಿದಂತೆ ಪರ್ವತ ಪ್ರದೇಶಗಳಲ್ಲಿ ಹೆಚ್ಚುವರಿ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ' ಎಂದು ತಿಳಿಸಿದ್ದಾರೆ.

ಶಸ್ತ್ರಾಸ್ತ್ರ, ಮದ್ದು–ಗುಂಡುಗಳು ಜಪ್ತಿ

ಇಂಫಾಲ್ (ಪಿಟಿಐ): ಮಣಿಪುರದ ಇಂಫಾಲ್ ಪೂರ್ವ ಮತ್ತು ಪಶ್ಚಿಮ ಜಿಲ್ಲೆಗಳಲ್ಲಿ ಕಾರ್ಯಾಚರಣೆ ನಡೆಸಿದ ಪೊಲೀಸರು ಶಸ್ತ್ರಾಸ್ತ್ರ ಮತ್ತು ಮದ್ದು–ಗುಂಡುಗಳನ್ನು ಜಪ್ತಿ ಮಾಡಿದ್ದಾರೆ.

'ಇಂಫಾಲ್ ಪೂರ್ವ ಜಿಲ್ಲೆಯ ಹೈನ್‌ಗ್ಯಾಂಗ್ ಚಿಂಗ್‌ನಲ್ಲಿ ಶನಿವಾರ ಕಾರ್ಯಾಚರಣೆ ನಡೆಸಲಾಗಿದ್ದು, ಒಂದು ಎಕೆ 56 ಬಂದೂಕು, 2 ಇತರ ಬಂದೂಕುಗಳು, 3 ಪಿಸ್ತೂಲ್, ಎರಡು ಹ್ಯಾಂಡ್ ಗ್ರೆನೇಡ್, ಮದ್ದು–ಗುಂಡುಗಳನ್ನು ಜಪ್ತಿ ಮಾಡಲಾಗಿದೆ' ಎಂದು ಮಣಿಪುರ ಪೊಲೀಸರ ಪ್ರಕಟಣೆ ತಿಳಿಸಿದೆ.

'ಖುಯತೋಂಗ್ ಮತ್ತು ನಾಗಂಪಾಲ್‌ನಲ್ಲಿ ಶುಕ್ರವಾರ ನಡೆದ ಕಾರ್ಯಾಚರಣೆಯ ವೇಳೆ ಮೂರು ಬಂದೂಕುಗಳು ಮತ್ತು ಮದ್ದು–ಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

'ಇಂಫಾಲ್ ಪೂರ್ವ ಜಿಲ್ಲೆಯಲ್ಲಿ ಶನಿವಾರ ಕಾರ್ಯಾಚರಣೆ ನಡೆಸಿ, ಇಬ್ಬರು ಶಂಕಿತರನ್ನು ಬಂಧಿಸಲಾಗಿದ್ದು, 2 ಪಿಸ್ತೂಲ್ ಮತ್ತು ಜೀವಂತ ಮದ್ದು–ಗುಂಡುಗಳನ್ನು ವಶಕ್ಕೆ ಪಡೆಯಲಾಗಿದೆ' ಎಂದು ತಿಳಿಸಿದ್ದಾರೆ.

ಔಡಿ ಕಾರಿಗೆ ಕೆಂಪು ದೀಪ ಅಳವಡಿಕೆ ಪ್ರಕರಣ

ಪೂಜಾ ಖೇಡ್ಕರ್ ಕಾರು ಜಪ್ತಿ

ಪೂಜಾ ಖೇಡ್ಕರ್

ಪುಣೆ (ಪಿಟಿಐ): ವಿವಾದಿತ ಐಎಎಸ್ ಪ್ರೊಬೇಷನರಿ ಅಧಿಕಾರಿ ಪೂಜಾ ಖೇಡ್ಕರ್ ಅವರು ಬಳಸುತ್ತಿದ್ದ ಐಷಾರಾಮಿ ಔಡಿ ಕಾರನ್ನು ಪುಣೆ ಪೊಲೀಸರು ಭಾನುವಾರ ಜಪ್ತಿ ಮಾಡಿದ್ದಾರೆ.

34 ವರ್ಷದ ಖೇಡ್ಕರ್ ಅವರು ತಮ್ಮ ಔಡಿ ಕಾರಿನ ಮೇಲೆ ಅಕ್ರಮವಾಗಿ ಕೆಂಪು ದೀಪವನ್ನು ಅಳವಡಿಸಿ, 'ಮಹಾರಾಷ್ಟ್ರ ಸರ್ಕಾರ' ಎಂದು ನಾಮಫಲಕ ಅಳವಡಿಸಿಕೊಂಡಿದ್ದರು. ಈ ಸಂಬಂಧ ಪುಣೆಯ ಪ್ರಾದೇಶಿಕ ಸಾರಿಗೆ ಕಚೇರಿ (ಆರ್‌ಟಿಒ) ಗುರುವಾರ ನೋಟಿಸ್ ಜಾರಿಗೊಳಿಸಿತ್ತು.

'ಖೇಡ್ಕರ್ ಅವರು ಬಳಸುತ್ತಿದ್ದ ಕಾರನ್ನು ಜಪ್ತಿ ಮಾಡಲಾಗಿದ್ದು, ಅದರ ದಾಖಲೆಗಳನ್ನು ಪರಿಶೀಲಿಸಲಿದ್ದೇವೆ. ಅಲ್ಲದೆ, ಈ ಕುರಿತು ಹೆಚ್ಚಿನ ತನಿಖೆ ನಡೆಸಲಿದ್ದೇವೆ' ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಕಾರಿಗೆ ಜಾಮರ್ ಹಾಕಲಾಗಿದ್ದು, ಸುತ್ತಲೂ ಬ್ಯಾರಿಕೇಡ್ ಅಳವಡಿಸಲಾಗಿದೆ ಎಂದು ಅವರು ಹೇಳಿದ್ದಾರೆ.

₹27,000 ದಂಡ: ಪುಣೆ ಆರ್‌ಟಿಒದಲ್ಲಿ ಸಂಚಾರ ನಿಯಮಗಳ ಉಲ್ಲಂಘನೆ ಆರೋಪದಡಿ ಈ ಔಡಿ ಕಾರಿನ ವಿರುದ್ಧ ಒಟ್ಟು ₹27,000 ದಂಡ ವಿಧಿಸಲಾಗಿತ್ತು. ಆ ಮೊತ್ತ ಪಾವತಿಯಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಖೇಡ್ಕರ್ ಅವರು ಐಎಎಸ್ ಸೇವೆಗೆ ಸೇರ್ಪಡೆಗೊಳ್ಳುವ ವೇಳೆ ಇತರೆ ಹಿಂದುಳಿದ ವರ್ಗ–ಅಂಗವಿಕಲ ಕೋಟಾ ದುರುಪಯೋಗ ಪಡಿಸಿಕೊಂಡಿದ್ದಾರೆ ಎಂಬ ಆರೋಪ ಕೇಳಿಬಂದಿದೆ.

ಇದರ ಬೆನ್ನಲ್ಲೇ ಅವರು ಸೇವೆಗೆ ಆಯ್ಕೆಯಾದದ್ದು ಸಮರ್ಪಕವಾಗಿ ಇದೆಯೇ ಎನ್ನುವುದನ್ನು ಪರಿಶೀಲಿಸಲು ಕೇಂದ್ರ ಸರ್ಕಾರ ಗುರುವಾರ ಏಕಸದಸ್ಯ ಸಮಿತಿಯನ್ನೂ ರಚಿಸಿದೆ. ಹೆಚ್ಚುವರಿ ಕಾರ್ಯದರ್ಶಿ ಶ್ರೇಣಿಯ ಅಧಿಕಾರಿಯಿಂದ ತನಿಖೆ ನಡೆಸಲಾಗುತ್ತದೆ ಎಂದು ಕೇಂದ್ರ ಹೇಳಿದೆ. ಈ ಪ್ರಕರಣದಲ್ಲಿ ಖೇಡ್ಕರ್ ಅವರು ತಪ್ಪಿತಸ್ಥೆ ಎಂದು ಸಾಬೀತಾದರೆ, ಕೆಲಸದಿಂದ ವಜಾಗೊಳ್ಳಬಹುದು ಎಂದು ಮೂಲಗಳು ಹೇಳಿವೆ.

ಕೇಜ್ರಿವಾಲ್ ಆರೋಗ್ಯ ಸ್ಥಿತಿ ಗಂಭೀರ: ಎಎಪಿ

ನವದೆಹಲಿ (ಪಿಟಿಐ): 'ನ್ಯಾಯಾಂಗ ಬಂಧನದಲ್ಲಿರುವ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಆರೋಗ್ಯ ಸ್ಥಿತಿಯು ಗಂಭೀರವಾಗಿದೆ. ಜೊತೆಗೆ ಜೈಲಿನಲ್ಲಿ ಅವರಿಗೆ ಸೂಕ್ತವಾದ ವೈದ್ಯಕೀಯ ನೆರವನ್ನೂ ನೀಡಲಾಗುತ್ತಿಲ್ಲ' ಎಂದು ಎಎಪಿ ಭಾನುವಾರ ಆರೋಪಿಸಿದೆ.

ಸಚಿವೆ ಆತಿಶಿ ಪತ್ರಿಕಾಗೋಷ್ಠಿ ನಡೆಸಿ, 'ಕೇಜ್ರಿವಾಲ್ ಅವರಿಗೆ ಮಧುಮೇಹವಿದೆ. ರಕ್ತದಲ್ಲಿನ ಸಕ್ಕರೆ ಅಂಶವು ಅಪಾಯಕಾರಿ ಎನ್ನುವಂತೆ ಕುಸಿಯುತ್ತಿದೆ. ರಾತ್ರಿ ಮಲಗಿದಾಗ ಅವರ ರಕ್ತದಲ್ಲಿನ ಸಕ್ಕರೆ ಅಂಶವು 50 ಎಂ.ಜಿ/ಡಿ.ಎಲ್‌ಗಿಂತ ಐದು ಬಾರಿ ಕಡಿಮೆಯಾಗುತ್ತಿದೆ. ಅವರ ತೂಕ ಕೂಡ 8.5 ಕೆ.ಜಿಯಷ್ಟು ಇಳಿಕೆಯಾಗಿದೆ' ಎಂದು ಆತಂಕ ವ್ಯಕ್ತಪಡಿಸಿದರು.

'ಸುಳ್ಳು ಪ್ರಕರಣದಲ್ಲಿ ಕೇಜ್ರಿವಾಲ್ ಅವರನ್ನು ಜೈಲಿಗೆ ಕಳುಹಿಸುವ ಕುತಂತ್ರವನ್ನು ಬಿಜೆಪಿ ಮಾಡುತ್ತಿದೆ. ಒಂದೊಮ್ಮೆ ಕೇಜ್ರಿವಾಲ್ ಅವರಿಗೆ ಪಾರ್ಶ್ವವಾಯು ಆದರೆ, ಮಿದುಳಿಗೆ ತೊಂದರೆಯಾದರೆ ಅಥವಾ ಯಾವುದೇ ರೀತಿಯ ಶಾಶ್ವತ ಊನವಾದರೆ, ಇದರ ಜವಾಬ್ದಾರಿಯನ್ನು ಯಾರು ಹೊರುತ್ತಾರೆ? ಹೀಗಾದರೆ, ದೇಶದ ಜನರಷ್ಟೇ ಅಲ್ಲ... ದೇವರು ಕೂಡ ಬಿಜೆಪಿಯನ್ನು ಕ್ಷಮಿಸುವುದಿಲ್ಲ' ಎಂದರು.

'ಈ ಬಗ್ಗೆ ನ್ಯಾಯಾಲಯದ ಮೆಟ್ಟಿಲೇರುತ್ತೀರಾ' ಎಂಬ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ಆತಿಶಿ, 'ವಕೀಲರು ಹಾಗೂ ವೈದ್ಯರ ಬಳಿ ಸಮಾಲೋಚನೆ ನಡೆಸುತ್ತಿದ್ದೇವೆ' ಎಂದು ಹೇಳಿದರು.

ಕೋಪಾ ಅಮೆರಿಕ: ಫೈನಲ್‌ನಲ್ಲಿ ಕೊಲಂಬಿಯಾ ಎದುರಾಳಿ

ದಾಖಲೆ ಮೇಲೆ ಅರ್ಜೆಂಟೀನಾ ಕಣ್ಣು

ಮಿಯಾಮಿ ಗಾರ್ಡನ್ (ರಾಯಿಟರ್ಸ್): ಹದಿನೈದು ಬಾರಿಯ ಚಾಂಪಿಯನ್ ಅರ್ಜೆಂಟೀನಾ ತಂಡವು ಕೊಪಾ ಅಮೆರಿಕ ಫುಟ್‌ಬಾಲ್ ಟೂರ್ನಿಯ ಫೈನಲ್‌ನಲ್ಲಿ ಕೊಲಂಬಿಯಾ ತಂಡವನ್ನು ಎದುರಿಸಲಿದೆ.

ಸೋಮವಾರ (ಭಾರತೀಯ ಕಾಲಮಾನ) ಫ್ಲೋರಿಡಾದಲ್ಲಿ ನಡೆಯುವ ಫೈನಲ್‌ನಲ್ಲಿ ಹಾಲಿ ಚಾಂಪಿಯನ್ ಲಯೊನೆಲ್ ಮೆಸ್ಸಿ ಬಳಗವು ದಾಖಲೆಯ 16ನೇ ಪ್ರಶಸ್ತಿಯ ಮೇಲೆ ಕಣ್ಣಿಟ್ಟಿದೆ. ಪ್ರಸ್ತುತ, ಉರುಗ್ವೆ ತಂಡದೊಂದಿಗೆ (15 ಪ್ರಶಸ್ತಿ) ಗರಿಷ್ಠ ಪ್ರಶಸ್ತಿ ಗೆದ್ದ ದಾಖಲೆಯನ್ನು ಹಂಚಿಕೊಂಡಿದೆ.

ಕಳೆದ ಆವೃತ್ತಿಯ (2021) ಫೈನಲ್‌ನಲ್ಲಿ ಬ್ರೆಜಿಲ್ ತಂಡವನ್ನು 1–0ಯಿಂದ ಮಣಿಸಿ ಪ್ರಶಸ್ತಿಯನ್ನು ಗೆದ್ದಿರುವ ಅರ್ಜೆಂಟೀನಾ, 2022ರ ಫಿಫಾ ವಿಶ್ವಕಪ್ ಕಿರೀಟವನ್ನು ಮುಡಿಗೇರಿಸಿಕೊಂಡಿತ್ತು. ಫೈನಲ್‌ನಲ್ಲಿ ಕೊಲಂಬಿಯಾ ವಿರುದ್ಧ ಗೆದ್ದರೆ ಪ್ರಮುಖ ಟೂರ್ನಿಗಳಲ್ಲಿ ಸತತ ಮೂರು ಪ್ರಶಸ್ತಿ ಗೆದ್ದ ದಾಖಲೆ ನಿರ್ಮಿಸಲಿದೆ. ಇಂತಹದೇ ಸಾಧನೆಯನ್ನು ಈ ಹಿಂದೆ ಸ್ಪೇನ್ ತಂಡ ಮಾಡಿತ್ತು. 2008 ಮತ್ತು 2012ರಲ್ಲಿ ಯುರೋ ಕಪ್ ಗೆದ್ದಿರುವ ಸ್ಪೇನ್, 2010ರಲ್ಲಿ ವಿಶ್ವಕಪ್ ಜಯಿಸಿತ್ತು.

ಅರ್ಜೆಂಟೀನಾ ತಂಡದ ನಾಯಕ ಲಯೊನೆಲ್ ಮೆಸ್ಸಿ —ಎಎಫ್‌ಪಿ ಚಿತ್ರ

'ನಾವು ಯಾವಾಗಲೂ ಒಂದೇ ರೀತಿಯಲ್ಲಿ ಆಡಲು ಪ್ರಯತ್ನಿಸುತ್ತೇವೆ. ನಮ್ಮ ತಂಡ ಸಮತೋಲನದಲ್ಲಿದ್ದು, ಫೈನಲ್ ಪಂದ್ಯವನ್ನು ಗೆಲ್ಲಲು ಶಕ್ತಿಮೀರಿ ಪ್ರಯತ್ನ ನಡೆಸಲಿದೆ' ಎಂದು ಅರ್ಜೆಂಟೀನಾ ಕೋಚ್ ಲಯೋನೆಲ್ ಸ್ಕಾಲೋನಿ ಹೇಳಿದರು.

ಮತ್ತೊಂದೆಡೆ, ಕೊಲಂಬಿಯಾ ತಂಡವು 23 ವರ್ಷಗಳ ಬಳಿಕ ಮತ್ತೆ ಕಿರೀಟ ಮುಡಿಗೇರಿಸಿಕೊಳ್ಳುವ ಕನಸು ಕಾಣುತ್ತಿದೆ. 2001ರಲ್ಲಿ ಆತಿಥ್ಯ ವಹಿಸಿದ್ದ ಕೊಲಂಬಿಯಾ ತಂಡವು ಫೈನಲ್‌ನಲ್ಲಿ 1–0ಯಿಂದ ಮೆಕ್ಸಿಕೊ ತಂಡವನ್ನು ಮಣಿಸಿ ಚೊಚ್ಚಲ ಪ್ರಶಸ್ತಿ ಗೆದ್ದಿತ್ತು.

ಸೆಮಿಫೈನಲ್‌ನ ರೋಚಕ ಹಣಾಹಣಿಯಲ್ಲಿ ತಂಡದ ಪ್ರಮುಖ ಆಟಗಾರ ಡೇನಿಯಲ್ ಮುನೋಜ್ ಕೆಂಪು ಕಾರ್ಡ್ ಪಡೆದರೂ ಕೊಲಂಬಿಯಾ 1–0ಯಿಂದ ಬಲಿಷ್ಠ ಉರುಗ್ವೆ ತಂಡವನ್ನು ಮಣಿಸಿ ಫೈನಲ್‌ಗೆ ತಲುಪಿದೆ. ಅಲ್ಲದೆ, ಸತತ ಗೆಲುವಿನ ಸರಣಿಯನ್ನು 28 ಪಂದ್ಯಗಳಿಗೆ ವಿಸ್ತರಿಸಿಕೊಂಡಿತು. ತಂಡವು 2022ರ ಫೆಬ್ರುವರಿಯಲ್ಲಿ ಕೊನೆಯ ಬಾರಿ ಅರ್ಜೆಂಟೀನಾ ವಿರುದ್ಧವೇ ಸೋತಿತ್ತು.

'ಫೈನಲ್‌ನಲ್ಲಿ ಎದುರಾಳಿ ಯಾರೆಂದು ನಮಗೆ ತಿಳಿದಿದೆ. ತಂಡಕ್ಕೆ ಮೇಲುಗೈ ಸಾಧಿಸಲು ಅವಕಾಶವಿದೆ. ವಿಶ್ವ ಚಾಂಪಿಯನ್ ತಂಡದ ವಿರುದ್ಧದ ಪಂದ್ಯವನ್ನು ನಾವು ಆನಂದಿಸಲು ಎದುರು ನೋಡುತ್ತಿದ್ದೇವೆ' ಎಂದು ಕೊಲಂಬಿಯಾ ಕೋಚ್ ನೆಸ್ಟರ್ ಲೊರೆಂಜೊ ಹೇಳಿದ್ದಾರೆ.

ಪಂದ್ಯ ಆರಂಭ: ಬೆಳಿಗ್ಗೆ 5.30 (ಭಾರತೀಯ ಕಾಲಮಾನ)

ಗಾಯಕವಾಡ್‌ಗೆ ಕ್ಯಾನ್ಸರ್ ₹1 ಕೋಟಿ ನೆರವು

ಮುಂಬೈ (ಪಿಟಿಐ): ರಕ್ತದ ಕ್ಯಾನ್ಸರ್‌ನಿಂದ ಬಳಲುತ್ತಿರುವ ಮಾಜಿ ಕ್ರಿಕೆಟಿಗ, ಭಾರತ ತಂಡದ ಮಾಜಿ ಕೋಚ್ ಅಂಶುಮಾನ್ ಗಾಯಕವಾಡ್ ಅವರ ಚಿಕಿತ್ಸೆಗಾಗಿ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ₹1 ಕೋಟಿ ನೆರವು ಘೋಷಿಸಿದೆ.

ಭಾರತ ತಂಡದ ಮಾಜಿ ನಾಯಕ ಡಿ.ಕೆ. ಗಾಯಕವಾಡ್ ಅವರ ಪುತ್ರನಾಗಿರುವ ಅಂಶುಮಾನ್ ಅವರು ಪ್ರಸ್ತುತ ಲಂಡನ್‌ನ ಕಿಂಗ್ಸ್ ಕಾಲೇಜು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಆರ್ಥಿಕ ಸಂಕಷ್ಟದಲ್ಲಿರುವ ಗಾಯಕವಾಡ್ ಅವರ ನೆರವಿಗೆ ಧಾವಿಸುವಂತೆ ಮಾಜಿ ಕ್ರಿಕೆಟಿಗರಾದ ಕಪಿಲ್ ದೇವ್ ಮತ್ತು ಸಂದೀಪ್ ಪಾಟೀಲ ಅವರು ಈಚೆಗೆ ಬಿಸಿಸಿಐಗೆ ಮನವಿ ಮಾಡಿದ್ದರು. ಅದರ ಬೆನ್ನಲ್ಲೇ ಬಿಸಿಸಿಐ ನೆರವು ಪ್ರಕಟಿಸಿದೆ.

'ಕ್ಯಾನ್ಸರ್ ವಿರುದ್ಧ ಹೋರಾಡುತ್ತಿರುವ ಅಂಶುಮಾನ್ ಗಾಯಕವಾಡ್ ಅವರ ಚಿಕಿತ್ಸೆಗಾಗಿ ತಕ್ಷಣವೇ ಜಾರಿಗೆ ಬರುವಂತೆ ₹ 1 ಕೋಟಿ ಬಿಡುಗಡೆ ಮಾಡುವಂತೆ ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಸೂಚನೆ ನೀಡಿದ್ದಾರೆ. ಅವರ ಆರೋಗ್ಯದ ಕುರಿತು ಬಿಸಿಸಿಐ ನಿರಂತರವಾಗಿ ಗಮನ ಹರಿಸಲಿದೆ. ಅವರು ಈ ಹೋರಾಟದಲ್ಲಿ ಗೆದ್ದು ಬರುತ್ತಾರೆ ಎಂಬ ವಿಶ್ವಾಸವಿದೆ' ಎಂದು ಬಿಸಿಸಿಐ ಅಪೆಕ್ಸ್ ಕೌನ್ಸಿಲ್ ಹೇಳಿಕೆಯಲ್ಲಿ ತಿಳಿಸಿದೆ.

71 ವರ್ಷದ ಅಂಶುಮಾನ್ 1975ರಿಂದ 1987ರ ಅವಧಿಯಲ್ಲಿ ಭಾರತ ತಂಡವನ್ನು ಪ್ರತಿನಿಧಿಸಿದ್ದರು. ಅವರು 40 ಟೆಸ್ಟ್ ಮತ್ತು 15 ಏಕದಿನ ಪಂದ್ಯಗಳನ್ನು ಆಡಿದ್ದಾರೆ. 1997-99 ಅವಧಿಯಲ್ಲಿ ಅವರು ಭಾರತ ತಂಡದ ಕೋಚ್ ಆಗಿ ಕಾರ್ಯ ನಿರ್ವಹಿಸಿದ್ದರು.

ಮಧ್ಯಪ್ರದೇಶ: 55 ಜಿಲ್ಲೆಗಳಲ್ಲಿ 'ಪಿ.ಎಂ ಕಾಲೇಜ್ ಆಫ್ ಎಕ್ಸಲೆನ್ಸ್' ಲೋಕಾರ್ಪಣೆ

ಮೋದಿ ದೂರದೃಷ್ಟಿಗೆ ಶಾ ಶ್ಲಾಘನೆ

ಇಂದೋರ್ (ಪಿಟಿಐ): 'ಪ್ರಧಾನಿ ನರೇಂದ್ರ ಮೋದಿ ಅವರು ದೂರದೃಷ್ಟಿಯಿಂದ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಜಾರಿಗೆ ತಂದಿದ್ದು, ಇದರಿಂದ 2047ರ ವೇಳೆಗೆ ದೇಶವು ಅಭಿವೃದ್ಧಿ ಹೊಂದಿದ ದೇಶವಾಗಲಿದೆ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅಭಿಪ್ರಾಯಪಟ್ಟರು.

ಇಂದೋರ್‌ನ ಅಟಲ್ ಬಿಹಾರಿ ವಾಜಪೇಯಿ ಸರ್ಕಾರಿ ಕಾಲೇಜಿನಲ್ಲಿ ಭಾನುವಾರ ನಡೆದ ಮಧ್ಯಪ್ರದೇಶದ 55 ಜಿಲ್ಲೆಗಳಲ್ಲಿ ಆರಂಭಗೊಂಡ 'ಪ್ರಧಾನಮಂತ್ರಿ ಕಾಲೇಜ್ ಆಫ್ ಎಕ್ಸಲೆನ್ಸ್'ಗೆ ಚಾಲನೆ ನೀಡಿ ಅವರು ಮಾತನಾಡಿದರು.

'ಮಧ್ಯಪ್ರದೇಶ ಸೇರಿದಂತೆ ಇತರೆ ರಾಜ್ಯಗಳಲ್ಲಿ ಎನ್‌ಇಪಿ ಜಾರಿಗೊಳಿಸಿದ್ದನ್ನು ಶ್ಲಾಘಿಸಿದ ಶಾ, 2047ರ ವೇಳೆಗೆ ದೇಶವು ಅಭಿವೃದ್ಧಿ ಹೊಂದಿದ ದೇಶವಾಗಿರಬೇಕು ಎಂದು ಪ್ರಧಾನಿ ಮೋದಿ ಗುರಿ ನಿಗದಿಪಡಿಸಿದ್ದಾರೆ. ಇದು ಸಾಧ್ಯವಾಗಲು ಎನ್‌ಇಪಿಯು ಪ್ರಮುಖ ಪಾತ್ರ ವಹಿಸುತ್ತದೆ. ದೇಶ ಅಭಿವೃದ್ಧಿ ಯಾಗಬೇಕಾದರೆ, ಶಿಕ್ಷಣವೇ ಮುಖ್ಯ ಅಡಿಪಾಯ. ಮುಂದಿನ 25 ವರ್ಷದ ದೂರದೃಷ್ಟಿ ಇಟ್ಟುಕೊಂಡು ಎನ್‌ಇಪಿ ಜಾರಿಗೆ ತರಲಾಗಿದೆ' ಎಂದು ಅಮಿತ್ ಶಾ ಹೇಳಿದರು.

11 ಲಕ್ಷ ಸಸಿ ನೆಡುವ ಕಾರ್ಯಕ್ರಮಕ್ಕೆ ಚಾಲನೆ



ಇಂದೋರ್ (ಪಿಟಿಐ): ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಆರಂಭಿಸಿದ 'ಏಕ್ ಪೇಡ್ ಮಾ ಕೆ ನಾಮ್" (ತಾಯಿಯ ಹೆಸರಿನಲ್ಲಿ ಒಂದು ಮರ) ಅಭಿಯಾನವು ಹವಾಮಾನ ಬದಲಾವಣೆಯ ಸವಾಲುಗಳಿಗೆ ಸೂಕ್ತ ಉತ್ತರವಾಗಿದೆ ಎಂದು ಭಾನುವಾರ ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದರು.

'ಏಕ್ ಪೇಡ್ ಮಾ ಕೆ ನಾಮ್" ಅಭಿಯಾನದ ಭಾಗವಾಗಿ, ಮಧ್ಯಪ್ರದೇಶದ ಇಂದೋರ್‌ನಲ್ಲಿ ಒಂದೇ ದಿನ 11 ಲಕ್ಷ ಸಸಿಗಳನ್ನು ನೆಡುವ ಮೂಲಕ ವಿಶ್ವದಾಖಲೆ ನಿರ್ಮಿಸುವ ಗುರಿಯ ಕಾರ್ಯಕ್ರಮದಲ್ಲಿ ಶಾ ಅವರು ಪಾಲ್ಗೊಂಡರು.

'ಪರಿಸರ ಸಂರಕ್ಷಣೆ ಮೋದಿ ಸರ್ಕಾರದ ದೊಡ್ಡ ಆದ್ಯತೆಗಳಲ್ಲಿ ಒಂದಾಗಿದೆ, ಇದು ಸಸಿಗಳನ್ನು ನೆಡುವುದು ಸಾರ್ವಜನಿಕ ಜಾಗೃತಿಯ ವಿಷಯವನ್ನಾಗಿ ಮಾಡಿದೆ. ಪರಿಸರ ಕಾಳಜಿ ದೇಶಕ್ಕೆ ಮಾತ್ರವಲ್ಲ, ಕಾರ್ಬನ್ ಡೈಆಕ್ಸೈಡ್ ಮತ್ತು ಮಾನಾಕ್ಸೈಡ್‌ಗಳಿಂದ ಓಝೋನ್ ಪದರದ ರಕ್ಷಣೆಗೂ ಮುಖ್ಯವಾಗಿದೆ' ಎಂದು ಶಾ ಹೇಳಿದರು.

ಜೂನ್ 5ರಂದು ವಿಶ್ವ ಪರಿಸರ ದಿನದಂದು ಮೋದಿ ಅವರು 'ಏಕ್ ಪೇಡ್ ಮಾ ಕೆ ನಾಮ್" ಅಭಿಯಾನ ಪ್ರಾರಂಭಿಸಿದರು. ಇದರ ಅಡಿಯಲ್ಲಿ ಮಧ್ಯಪ್ರದೇಶದಲ್ಲಿ 5.5 ಕೋಟಿ ಸೇರಿದಂತೆ ದೇಶದಾದ್ಯಂತ ಸುಮಾರು 140 ಕೋಟಿ ಮರಗಳನ್ನು ನೆಡಲಾಗುತ್ತದೆ.

ಯುವಕರು ನಮ್ಮ ಸಿದ್ಧಾಂತಕ್ಕೆ ಆಕರ್ಷಿತರಾಗಿದ್ದಾರೆ

ರಾಂಚಿ (ಪಿಟಿಐ): ಹೆಚ್ಚಿನ ಸಂಖ್ಯೆಯಲ್ಲಿ ಯುವಕರು ಆರ್‌ಎಸ್‌ಎಸ್ ಸಿದ್ಧಾಂತಕ್ಕೆ ಆಕರ್ಷಿತರಾಗುತ್ತಿದ್ದು, ಪ್ರತಿ ವರ್ಷ ಅದರ ಭಾಗವಾಗುತ್ತಿದ್ದಾರೆ ಎಂದು ರಾಷ್ಟ್ರೀಯ ಪ್ರಚಾರ ಮುಖ್ಯಸ್ಥ ಸುನಿಲ್ ಅಂಬೇಕರ್ ಭಾನುವಾರ ತಿಳಿಸಿದರು.

ರಾಂಚಿಯಲ್ಲಿ ನಡೆದ ಮೂರು ದಿನಗಳ 'ಪ್ರಾಂತ್ಯ ಪ್ರಚಾರಕರ' ಸಭೆಯ ಸಮಾರೋಪ ಸಮಾರಂಭದಲ್ಲಿ ಮಾಧ್ಯಮಗಳನ್ನು ಉದ್ದೇಶಿಸಿ ಆರ್‌ಎಸ್‌ಎಸ್‌ನ ಮಾತನಾಡಿದರು.

'ಈ ವರ್ಷದ ಜೂನ್‌ವರೆಗೆ ಒಟ್ಟು 66,529 ಮಂದಿ ಆರ್‌ಎಸ್‌ಎಸ್‌ಗೆ ಸೇರ್ಪಡೆಯಾಗಿದ್ದಾರೆ' ಎಂದರು.

ಭಾರತ ತಂಡದಲ್ಲಿ ಪ್ರಜ್ಞಾನಂದ, ಗುಕೇಶ್

ಚೆನ್ನೈ (ಪಿಟಿಐ): ಯುವತಾರೆಗಳಾದ ಡಿ.ಗುಕೇಶ್ ಮತ್ತು ಪ್ರಜ್ಞಾನಂದ ಅವರು ಹಂಗೆರಿಯ ರಾಜಧಾನಿ ಬುಡಾಪೆಸ್ಟ್‌ನಲ್ಲಿ ಸೆಪ್ಟೆಂಬರ್ ತಿಂಗಳಲ್ಲಿ ನಡೆಯಲಿರುವ 45ನೇ ಚೆಸ್ ಒಲಿಂಪಿಯಾಡ್‌ನಲ್ಲಿ ಭಾಗವಹಿಸುವ ಭಾರತ ತಂಡದಲ್ಲಿ ಪ್ರಮುರಾಗಿದ್ದಾರೆ.



ಡಿ. ಗುಕೇಶ್



ಆರ್. ಪ್ರಜ್ಞಾನಂದ

ವರ್ಷಾಂತ್ಯಕ್ಕೆ ನಡೆಯಲಿರುವ ವಿಶ್ವ ಚೆಸ್ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ಡಿಂಗ್ ಲಿರೆನ್ ಅವರಿಗೆ ಗುಕೇಶ್ ಚಾಲೆಂಜರ್ ಆಗಿದ್ದಾರೆ. ಅದಕ್ಕೆ ಮೊದಲು ನಡೆಯುವ ಒಲಿಂಪಿಯಾಡ್ ಗುಕೇಶ್ ಅವರಿಗೆ ಸಿದ್ಧತೆ ನಡೆಸಲು ಅವಕಾಶ ಒದಗಿಸಿದೆ. ಭಾರತ ತಂಡಗಳ ಆಯ್ಕೆಯನ್ನು ಎಐಸಿಎಫ್ ಅಧ್ಯಕ್ಷ ನಿತಿನ್ ನಾರಂಗ್ ಸುದ್ದಿಸಂಸ್ಥೆಗೆ ಖಚಿತಪಡಿಸಿದರು.

ಗುಕೇಶ್, ಪ್ರಜ್ಞಾನಂದ ಜೊತೆ ಅರ್ಜುನ್ ಇರಿಗೇಶಿ, ವಿದಿತ್ ಗುಜರಾತಿ ಮತ್ತು ಪೆಂಟ್ಯಾಲ ಹರಿಕೃಷ್ಣ ಪುರುಷರ ತಂಡದ ಇತರ ಆಟಗಾರರಾಗಿದ್ದಾರೆ.

ಮಹಿಳಾ ತಂಡದಲ್ಲಿ ದ್ರೋಣವಲ್ಲಿ ಹಾರಿಕ, ವೈಶಾಲಿ ರಮೇಶ್‌ಬಾಬು, ದಿವ್ಯಾ ದೇಶಮುಖ್, ವಂತಿಕಾ ಅಗರವಾಲ್ ಮತ್ತು ತನಿಯಾ ಸಚ್‌ದೇವ್ ಇದ್ದಾರೆ. 2022ರಲ್ಲಿ ಕಂಚು ಗೆದ್ದ ತಂಡದಲ್ಲಿದ್ದ ಅನುಭವಿ ಆಟಗಾರ್ತಿ ಕೋನೇರು ಹಂಪಿ ಈ ಬಾರಿ ಅವಕಾಶ ಪಡೆದಿಲ್ಲ. ಕಾರಣ ತಿಳಿದುಬಂದಿಲ್ಲ.

ಒಲಿಂಪಿಯಾಡ್ ಪೂರ್ವದಲ್ಲಿ ತಂಡಗಳಿಗೆ ಶಿಬಿರ ನಡೆಸಲು ಕೋಚ್‌ಗಳ ಜೊತೆ ಚರ್ಚೆ ನಡೆಯುತ್ತಿದೆ ಎಂದು ನಾರಂಗ್ ಹೇಳಿದರು. ಶಿಬಿರ ಆಗಸ್ಟ್‌ನಲ್ಲಿ ನಡೆಯಲಿದ್ದು, ಸ್ಥಳ ಮತ್ತು ದಿನಾಂಕವನ್ನು ಶೀಘ್ರದಲ್ಲೇ ಅಂತಿಮಗೊಳಿಸಲಾಗುವುದು ಎಂದರು. 2022ರಲ್ಲಿ ಭಾರತ ಮೊದಲ ಬಾರಿ ಚೆಸ್ ಒಲಿಂಪಿಯಾಡ್‌ನ ಆತಿಥ್ಯ ವಹಿಸಿತ್ತು. ಚೆನ್ನೈನಲ್ಲಿ ನಡೆದ ಒಲಿಂಪಿಯಾಡ್‌ನಲ್ಲಿ ಭಾರತ ಓಪನ್ ಮತ್ತು ಮಹಿಳಾ ವಿಭಾಗದಲ್ಲಿ ಕಂಚಿನ ಪದಕಗಳನ್ನು ಪಡೆದಿತ್ತು.

ವಿಂಬಲ್ಡನ್: ಫೈನಲ್‌ನಲ್ಲಿ ಜೊಕೊವಿಚ್‌ಗೆ ಮತ್ತೆ ನಿರಾಸೆ

ಅಲ್ಕರಾಜ್ ಮುಡಿಗೆ ಮತ್ತೊಮ್ಮೆ ಕಿರೀಟ

ಪ್ರಶಸ್ತಿಯೊಂದಿಗೆ ಕಾರ್ಲೋಸ್ ಅಲ್ಕರಾಜ್ ಮತ್ತು ರನ್ನರ್ ಅಪ್ ಪ್ರಶಸ್ತಿಯೊಂದಿಗೆ ನೊವಾಕ್ ಜೊಕೊವಿಚ್ —ಎಎಫ್‌ಪಿ ಚಿತ್ರ

ಲಂಡನ್ (ಎಎಫ್‌ಪಿ): ಯುವತಾರೆ ಕಾರ್ಲೋಸ್ ಅಲ್ಕರಾಜ್ ಅವರು ಭಾನುವಾರ ನಡೆದ ಫೈನಲ್‌ನಲ್ಲಿ ನೇರ ಸೆಟ್‌ಗಳಿಂದ ಏಳು ಬಾರಿಯ ಚಾಂಪಿಯನ್ ನೊವಾಕ್ ಜೊಕೊವಿಚ್ ಅವರನ್ನು ಸದೆಬಡಿದು ವಿಂಬಲ್ಡನ್ ಟೆನಿಸ್ ಸಿಂಗಲ್ಸ್ ಪ್ರಶಸ್ತಿ ಉಳಿಸಿಕೊಂಡರು. ಪುರುಷರ ಟೆನಿಸ್‌ನಲ್ಲಿ ಹೊಸಬರ ಯುಗ ಆರಂಭವಾಗಿದೆ ಎಂಬುದನ್ನು ತಮ್ಮ ನಿರ್ದಯ ಆಟದ ಮೂಲಕ ಒತ್ತಿ ಹೇಳಿದರು.

ಶಕ್ತಿಶಾಲಿ ಹೊಡೆತಗಳ ಜೊತೆಗೆ ನವಿರಾದ 'ಡ್ರಾಪ್'ಗಳ ಮಿಶ್ರಣ ಮಾಡಿ ಆಡಿದ ಮೂರನೇ ಶ್ರೇಯಾಂಕದ ಅಲ್ಕರಾಜ್ 6–2, 6–2, 7–6 (7–4)ರಿಂದ ಜಯಗಳಿಸಿದರು. ಇದು ಸ್ಪೇನ್ ಆಟಗಾರನಿಗೆ ವೃತ್ತಿ ಜೀವನದ ನಾಲ್ಕನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ.

1968ರಲ್ಲಿ ಟೆನಿಸ್‌ನಲ್ಲಿ ಓಪನ್ ಯುಗ ಆರಂಭವಾದ ಮೇಲೆ 21 ವರ್ಷ ವಯಸ್ಸಿನೊಳಗೇ ಅತಿ ಹೆಚ್ಚು (ತಲಾ ನಾಲ್ಕು) ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗಳನ್ನು ಗೆದ್ದು ದಾಖಲೆ ಸ್ಥಾಪಿಸಿದ ಮೂವರು ಮಹಾನ್ ಆಟಗಾರರ ಸಾಲಿಗೆ ಈಗ ಅಲ್ಕರಾಜ್ ಸೇರ್ಪಡೆಯಾದರು. ಜರ್ಮನಿಯ ಬೋರಿಸ್ ಬೆಕರ್, ಸ್ವೀಡನ್‌ನ ಬ್ಯೋನ್ ಬೋರ್ಗ್ ಮತ್ತು ಮ್ಯಾಟ್ಸ್ ವಿಲಾಂಡರ್ ಇತರ ಮೂವರು.

ಕೆಲವೇ ವಾರಗಳ ಹಿಂದೆ ಮೊಣಗಂಟಿನ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದ 37 ವರ್ಷದ ಜೊಕೊವಿಚ್ ಅವರು 25ನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಗೆಲುವಿನ ಯತ್ನದಲ್ಲಿದ್ದರು. ಸರ್ಬಿಯಾದ ಆಟಗಾರ ಅದನ್ನು ಸಾಧಿಸಿದಲ್ಲಿ ಪುರುಷರ ಅಥವಾ ಮಹಿಳೆಯರ ಟೆನಿಸ್‌ನಲ್ಲಿ ದಾಖಲೆಯಾಗುತಿತ್ತು.

ನಿರುತ್ತರರಾದ ಜೋಕೊವಿಚ್: ಆದರೆ ಹದವಾದ ಬಿಸಿಲಿನ ಮಧ್ಯೆ ಸೆಂಟರ್‌ಕೋರ್ಟ್‌ನಲ್ಲಿ ನಡೆದ ಪಂದ್ಯದಲ್ಲಿ ಅಲ್ಕರಾಜ್ ಅವರ ಮಿಂಚಿನ ಆಟದೆದುರು ಜೊಕೊ ನಿರುತ್ತರರಾದರು. ಬ್ಯಾಕ್ ಕೋರ್ಟ್‌ನಿಂದ ಒಂದರ ಮೇಲೊಂದು ಪ್ರಬಲ ಹೊಡೆತಗಳನ್ನು ಅಟ್ಟುತ್ತಿದ್ದ ಅಲ್ಕರಾಜ್, ತಮ್ಮ ಟ್ರೇಡ್‌ಮಾರ್ಕ್ 'ಡ್ರಾಪ್' ಶಾಟ್‌ಗಳನ್ನೂ ಆಗಾಗ ಆಡಿ ಪ್ರೇಕ್ಷಕರಿಗೆ ರಸದೌತಣ ಬಡಿಸಿದರು.

ಮೊದಲ ಗೇಮ್‌ನಿಂದಲೇ ಸ್ಪೇನ ಆಟಗಾರ ಹಿಡಿತ ಪಡೆದರು. ಐದನೇ ಗೇಮ್‌ಅನ್ನು ಜೊಕೊವಿಚ್ ಡಬಲ್‌ಫಾಲ್ಟ್ ಮೂಲಕ ಕಳೆದುಕೊಂಡಾಗ ಅಲ್ಕರಾಜ್ 4–1 ಮುನ್ನಡೆ ಪಡೆದರು. ಹತ್ತನೇ ಬಾರಿ ಇಲ್ಲಿ ಫೈನಲ್ ಆಡುತ್ತಿರುವ ಜೊಕೊವಿಚ್ ತಮ್ಮ ಮುಂದಿನ ಸರ್ವ್ ವೇಳೆ ಒಂದೂ ಪಾಯಿಂಟ್ ಬಿಟ್ಟುಕೊಡದೇ ಹಿನ್ನಡೆಯನ್ನು 5–2ಕ್ಕೆ ಇಳಿಸಿದರು. ಆದರೆ ಅಲ್ಕರಾಜ್ ತಮ್ಮ ಗೇಮ್ ಉಳಿಸಿ ಸೆಟ್ ಗೆದ್ದರು.

ಎರಡನೇ ಸೆಟ್‌ನಲ್ಲೂ ಅಲ್ಕರಾಜ್ ಹಿಡಿತ ಮುಂದುವರಿಯಿತು. ಮೂರನೇ ಸೆಟ್‌ನಲ್ಲಿ ಜೊಕೊವಿಚ್ ಹೋರಾಟ ತೋರಿ ಟೈಬ್ರೇಕರ್‌ವರೆಗೆ ಬೆಳೆಸುವಲ್ಲಿ ಯಶಸ್ವಿ ಆದರು.

ಒಳ್ಳೆಯ ಹಣಾಹಣಿಯ ನಿರೀಕ್ಷೆಯೊಡನೆ ಬಂದಿದ್ದ ಪ್ರೇಕ್ಷಕರಲ್ಲಿ ವೇಲ್ಸ್‌ನ ರಾಜಕುಮಾರಿ ಕ್ಯಾಥರಿನ್ ಅವರೂ ಒಳಗೊಂಡಿದ್ದರು. ಆದರೆ ಅವರಿಗೆ ಏಕಪಕ್ಷೀಯ ಪಂದ್ಯ ನಡೆದಿದ್ದು ನಂಬಲಾಗಲಿಲ್ಲ.

ಜೊಕೊವಿಚ್ ಈ ವರ್ಷ ಒಂದೂ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಗೆಲ್ಲಲು ಆಗಿಲ್ಲ.

ಕರ್ನಾಟಕದ ಸನೀತ್‌ಗೆ ಪ್ರಶಸ್ತಿ

ಪುಣೆ (ಪಿಟಿಐ): ಕರ್ನಾಟಕದ ಡಿ.ಎಸ್. ಸನೀತ್ ಮತ್ತು ಗುಜರಾತಿನ ತಸ್ನೀಮ್ ಮೀರ್ ಅವರು ಭಾನುವಾರ ಇಲ್ಲಿ ನಡೆದ ವಿ.ವಿ. ನಾಥು ಸ್ಮಾರಕ ಅಖಿಲ ಭಾರತ ಸೀನಿಯರ್ ರ್‍ಯಾಂಕಿಂಗ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಕ್ರಮವಾಗಿ ಪುರುಷ ಮತ್ತು ಮಹಿಳೆಯರ ಸಿಂಗಲ್ಸ್ ಪ್ರಶಸ್ತಿ ಜಯಿಸಿದರು.

ಪುರುಷರ ಫೈನಲ್‌ನಲ್ಲಿ ಮೂರನೇ ಶ್ರೇಯಾಂಕದ ಸನೀತ್ ಅವರು 21–15, 21–12ರಿಂದ ತುಷಾರ್ ಸುವೀರ್ ಅವರನ್ನು ಮಣಿಸಿದರು. ಕರ್ನಾಟಕದವರಾದ ಈ ಇಬ್ಬರ ಹಣಾಹಣಿಯು 44 ನಿಮಿಷ ನಡೆಯಿತು. ಮಹಿಳೆಯರ ಫೈನಲ್ ಪಂದ್ಯದಲ್ಲಿ ತಸ್ನೀಮ್ 21–16, 21–13ರಿಂದ ಬೆಂಗಳೂರಿನ ದೇವಿಕಾ ಅವರನ್ನು ಪರಾಭವಗೊಳಿಸಿದರು.

ಮಹಿಳೆಯರ ಡಬಲ್ಸ್‌ನಲ್ಲಿ ಅನುಭವಿ ಆಟಗಾರ್ತಿ ಆರತಿ ಸಾರಾ ಸುನಿಲ್ ಮತ್ತು ವಿ.ಎಸ್. ವರ್ಷಿಣಿ ಜೋಡಿಯು 17–21, 22–20, 21–18ರಿಂದ ಶಿಖಾ ಗೌತಮ್ ಮತ್ತು ಅಶ್ವಿನಿ ಭಟ್ ಜೋಡಿಯ ವಿರುದ್ಧ ಜಯಿಸಿತು.

ಒಲಿಂಪಿಕ್ಸ್: ಅಥ್ಲೆಟಿಕ್ಸ್ ಸಂಸ್ಥೆ ಪ್ರಕಟಿಸಿದ ಪಟ್ಟಿಯಲ್ಲಿ ಆಭಾ ಹೆಸರು ನಾಪತ್ತೆ

ನವದೆಹಲಿ (ಪಿಟಿಐ): ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಳ್ಳುವ ಭಾರತದ ಅಥ್ಲೀಟುಗಳ ಪಟ್ಟಿಯನ್ನು ವಿಶ್ವ ಅಥ್ಲೆಟಿಕ್ಸ್ (ವರ್ಲ್ಡ್ ಅಥ್ಲೆಟಿಕ್ಸ್) ಶುಕ್ರವಾರ ರಾತ್ರಿ ಪ್ರಕಟಿಸಿದ್ದು, ಇದರಲ್ಲಿ ಷಾಟ್‌ಪಟ್ ಸ್ಪರ್ಧಿ ಅಭಾ ಖತುವಾ ಅವರ ಹೆಸರು ಇಲ್ಲ. ಒಲಿಂಪಿಕ್ಸ್‌ಗೆ ಸಿದ್ಧತೆ ನಡೆಸಲು ಆಭಾ ಈಗ ಪೋಲೆಂಡ್‌ನಲ್ಲಿ ತರಬೇತಿಯಲ್ಲಿದ್ದಾರೆ.

ಆಭಾ ಅವರು ರ್‍ಯಾಂಕಿಂಗ್ ಮೂಲಕ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದಿದ್ದು, ಪೋಲೆಂಡ್‌ನ ಸ್ಪಾಲಾದಲ್ಲಿ ತರಬೇತಿ ಪಡೆಯಲು ಇತರ ಅಥ್ಲೀಟುಗಳ ಜೊತೆ ಕಳೆದ ಗುರುವಾರ ಇಲ್ಲಿಂದ ತೆರಳಿದ್ದರು. ಅಥ್ಲೀಟುಗಳು ತರಬೇತಿ ನಂತರ ಹೊರಟು ಜುಲೈ 28ರಂದು ಪ್ಯಾರಿಸ್ ತಲುಪಲಿದ್ದಾರೆ.

ಪಟ್ಟಿಯಲ್ಲಿ ಆಭಾ ಹೆಸರು ನಾಪತ್ತೆಗೆ ಕಾರಣ ತಿಳಿದುಬಂದಿಲ್ಲ. ಪ್ಯಾರಿಸ್ ಕೂಟದಲ್ಲಿ ಭಾಗವಹಿಸಲು ಕಳುಹಿಸಿದ್ದ 30 ಅಥ್ಲೀಟುಗಳ ಪಟ್ಟಿಯಲ್ಲಿ 29 ಮಂದಿಯ ಹೆಸರುಗಳು ವಿಶ್ವ ಅಥ್ಲೆಟಿಕ್ಸ್ ಬಿಡುಗಡೆ ಮಾಡಿರುವ ಪಟ್ಟಿಯಲ್ಲಿ ಇವೆ. ಭಾರತ ಒಲಿಂಪಿಕ್ ಸಂಸ್ಥೆ (ಐಒಎ) ಮೂಲಕ ಭಾರತ ಅಥ್ಲೆಟಿಕ್ ಫೆಡರೇಷನ್ (ಎಎಫ್‌ಐ) ಅಥ್ಲೀಟುಗಳ 30 ಮಂದಿಯ ಹೆಸರುಗಳನ್ನು ಕಳಿಸಿತ್ತು.

ಈ ಬಗ್ಗೆ ಅಂತರರಾಷ್ಟ್ರೀಯ ಸಂಸ್ಥೆ ಸಂಪರ್ಕಕ್ಕೆ ಸಿಕ್ಕಿಲ್ಲ. ಎಎಫ್‌ಐ ಅಧಿಕಾರಿ ಕೂಡ ಪ್ರತಿಕ್ರಿಯೆ ನೀಡಿಲ್ಲ. ಹೆಸರು ಕೈಬಿಟ್ಟುಹೋಗಿರುವ ವಿಷಯವನ್ನು ವಿಶ್ವ ಅಥ್ಲೆಟಿಕ್ಸ್ ಗಮನಕ್ಕೆ ತರಲಾಗಿದೆ ಎಂದು ಇನ್ನೊಬ್ಬ ಅಧಿಕಾರಿ ತಿಳಿಸಿದರು. ಆಭಾ ಅವರೂ ವಾಟ್ಸ್ ಆ್ಯಪ್ ಕರೆ ಅಥವಾ ಸಂದೇಶಕ್ಕೆ ಪ್ರತಿಕ್ರಿಯಿಸಿಲ್ಲ.

ಕಳೆದ ಏಪ್ರಿಲ್‌ನಲ್ಲಿ ಆಭಾ ಅವರು ಭುವನೇಶ್ವರದಲ್ಲಿ ನಡೆದ ಫೆಡರೇಷನ್ ಕಪ್‌ನಲ್ಲಿ 18.41 ಮೀ ಥ್ರೊದೊಡನೆ ರಾಷ್ಟ್ರೀಯ ದಾಖಲೆ ಮುರಿದಿದ್ದರು.

ಟಿ20 ಕ್ರಿಕೆಟ್: ಸಂಜು ತಾಳ್ಮೆಯ ಬ್ಯಾಟಿಂಗ್; ಮುಕೇಶ್ ಬಿರುಗಾಳಿ ದಾಳಿ

ಭಾರತದ ಮಡಿಲಿಗೆ ಸರಣಿ

ಹರಾರೆಯಲ್ಲಿ ಭಾನುವಾರ ಜಿಂಬಾಬ್ವೆ ತಂಡದ ಎದುರು ಟಿ20 ಸರಣಿ ಜಯಿಸಿದ ಭಾರತ ತಂಡದ ಆಟಗಾರರು ಟ್ರೋಫಿಯೊಂದಿಗೆ ಸಂಭ್ರಮಿಸಿದರು —ಎಪಿ/ಪಿಟಿಐ ಚಿತ್ರ

ಹರಾರೆ (ಪಿಟಿಐ): ಅನುಭವಿ ಆಟಗಾರ ಸಂಜು ಸ್ಯಾಮ್ಸನ್ ಅರ್ಧಶತಕ ಮತ್ತು ಮುಕೇಶ್ ಕುಮಾರ್ ಅವರ ಶಿಸ್ತಿನ ದಾಳಿಯ ಮುಂದೆ ಜಿಂಬಾಬ್ವೆ ಮುಗ್ಗರಿಸಿತು. ಭಾರತ ತಂಡವು 4–1ರಿಂದ ಟಿ20 ಕ್ರಿಕೆಟ್ ಸರಣಿಯನ್ನು ತನ್ನದಾಗಿಸಿಕೊಂಡಿತು.

ಭಾನುವಾರ ಇಲ್ಲಿ ನಡೆದ ಐದನೇ ಮತ್ತು ಕೊನೆಯ ಪಂದ್ಯದಲ್ಲಿ ಭಾರತ ತಂಡವು 42 ರನ್‌ಗಳಿಂದ ಜಿಂಬಾಬ್ವೆ ಎದುರು ಜಯಿಸಿತು.

ಹರಾರೆ ಸ್ಪೋರ್ಟ್ಸ್ ಕ್ಲಬ್ ಮೈದಾನದಲ್ಲಿ ಟಾಸ್ ಗೆದ್ದ ಜಿಂಬಾಬ್ವೆ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಭಾರತ ತಂಡವು 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 167 ರನ್ ಗಳಿಸಿತು. ಅದಕ್ಕುತ್ತರವಾಗಿ 18.3 ಓವರ್‌ಗಳಲ್ಲಿ 125 ರನ್ ಗಳಿಸಿ ಜಿಂಬಾಬ್ವೆ ಎಲ್ಲ ವಿಕೆಟ್ ಕಳೆದುಕೊಂಡಿತು. ವೇಗಿ ಮುಕೇಶ್ (22ಕ್ಕೆ4) ಮತ್ತು ಶಿವಂ ದುಬೆ (25ಕ್ಕೆ2) ಜಿಂಬಾಬ್ವೆ ಪತನಕ್ಕೆ ಕಾರಣರಾದರು.

ಜಿಂಬಾಬ್ವೆ ತಂಡದ ಟೆಡಿವನಾಶಿ ಮರುಮನಿ (27 ರನ್), ಡಿಯಾನ್ ಮೈಯರ್ಸ್ (34; 32ಎ) ಮತ್ತು ಫರಾಜ್ ಅಕ್ರಮ (27; 13ಎ) ಅವರು ಹೋರಾಟ ತೋರಿದರು.

ಸಂಜು ಸ್ಯಾಮ್ಸನ್– ರಿಯಾನ್ ಜೊತೆಯಾಟ: ಆತಿಥೇಯ ಬೌಲರ್‌ಗಳು ಭಾರತ ತಂಡಕ್ಕೆ ಆರಂಭದಲ್ಲಿಯೇ ಪೆಟ್ಟು ಕೊಟ್ಟರು. ಇದರಿಂದಾಗಿ ಪವರ್‌ಪ್ಲೇ ಅವಧಿಯಲ್ಲಿಯೇ ಭಾರತ ತಂಡವು 40 ರನ್‌ಗಳಿಗೆ 3 ವಿಕೆಟ್ ಕಳೆದುಕೊಂಡಿತು.

ನಾಲ್ಕನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಬಂದ ಸಂಜು (58; 45ಎ, 4X1, 6X4) ಹಾಗೂ ರಿಯಾನ್ ಪರಾಗ್ (22; 24ಎ, 6X1) ಐದನೇ ವಿಕೆಟ್ ಜೊತೆಯಾಟದಲ್ಲಿ 65 ರನ್ ಸೇರಿಸಿದರು. ಇದರಿಂದಾಗಿ ತಂಡದ ಮೊತ್ತವು ಶತಕದ ಗಡಿ ದಾಟಿತು. ಇನಿಂಗ್ಸ್‌ನಲ್ಲಿ ಐದು ಓವರ್‌ಗಳು ಬಾಕಿ ಇದ್ದಾಗ ಪರಾಗ್ ಔಟಾದರು. ಕ್ರೀಸ್‌ಗೆ ಬಂದ ಶಿವಂ ದುಬೆ (26;12ಎ) ಬೀಸಾಟವಾಡಿದರು. ಎರಡು ಬೌಂಡರಿ ಮತ್ತು ಎರಡು ಸಿಕ್ಸರ್ ಬಾರಿಸಿದರು. 216.67ರ ಸ್ಟ್ರೈಕ್ ರೇಟ್‌ನಲ್ಲಿ ರನ್ ಗಳಿಸಿದರು. ರಿಂಕು ಸಿಂಗ್ ಕೂಡ 9 ಎಸೆತಗಳಲ್ಲಿ 11 ರನ್ ಗಳಿಸಿದರು.

ಸಂಕ್ಷಿಪ್ತ ಸ್ಕೋರು: ಭಾರತ: 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 167 (ಸಂಜು ಸ್ಯಾಮ್ಸನ್ 58, ರಿಯಾನ್ ಪರಾಗ್ 22, ಶಿವಂ ದುಬೆ 26, ಬ್ಲೆಸಿಂಗ್ ಮುಜರಾಬಾನಿ 19ಕ್ಕೆ2) **ಜಿಂಬಾಬ್ವೆ:** 18.3 ಓವರ್‌ಗಳಲ್ಲಿ 125 (ಟೆಡಿವನಾಶೆ ಮರುಮನಿ 27, ಡಿಯಾನ್ ಮೆಯರ್ಸ್ 34, ಫರಾಜ್ ಅಕ್ರಂ 27, ಮುಕೇಶ್ ಕುಮಾರ್ 22ಕ್ಕೆ4, ಶಿವಂ ದುಬೆ 25ಕ್ಕೆ2) **ಫಲಿತಾಂಶ:** ಭಾರತ ತಂಡಕ್ಕೆ 42 ರನ್‌ಗಳ ಜಯ, 4–1ರಿಂದ ಸರಣಿ ಗೆಲುವು. **ಪಂದ್ಯಶ್ರೇಷ್ಠ:** ಶಿವಂ ದುಬೆ. **ಸರಣಿಶ್ರೇಷ್ಠ:** ವಾಷಿಂಗ್ಟನ್ ಸುಂದರ್.

ನಾಲ್ಕನೇ ಸುತ್ತಿಗೆ ಅನಾಹತ್ ಸಿಂಗ್, ಶೌರ್ಯ ಬಾವಾ

ನವದೆಹಲಿ (ಪಿಟಿಐ): ಭಾರತದ ಅನಾಹತ್ ಸಿಂಗ್ ಮತ್ತು ಶೌರ್ಯ ಬಾವಾ ಅವರು ವಿಶ್ವ ಜೂನಿಯರ್ ಸ್ಕ್ವಾಷ್ ಚಾಂಪಿಯನ್‌ಷಿಪ್‌ನ ನಾಲ್ಕನೇ ಸುತ್ತು ಪ್ರವೇಶಿಸಿದ್ದಾರೆ.

ಬಾಲಕಿಯರ ವಿಭಾಗದ ಮೂರನೇ ಸುತ್ತಿನಲ್ಲಿ ಅನಾಹತ್ ಅವರು 11-7, 12-10, 11-6 ಅಮೆರಿಕದ ಸಮಂತಾ ಜಫ್ ಅವರನ್ನು ಸೋಲಿಸಿದರು. ಕ್ವಾರ್ಟರ್ ಫೈನಲ್ ಪ್ರವೇಶಕ್ಕಾಗಿ ಮುಂದಿನ ಸುತ್ತಿನಲ್ಲಿ ಜಪಾನ್‌ನ ಅಕರಿ ಮಿಡೋರಿಕಾವಾ ಅವರ ವಿರುದ್ಧ ಸೆಣಸಲಿದ್ದಾರೆ.

ಬಾಲಕರ ವಿಭಾಗದ ಮೂರನೇ ಸುತ್ತಿನಲ್ಲಿ ಶೌರ್ಯ ಬಾವಾ ಅವರು 4-11, 11-7, 12-10, 11-6ರಿಂದ ಅಮೆರಿಕದ ರಸ್ಟಿನ್ ಡೈಸರ್ ವಿರುದ್ಧ ಜಯ ಗಳಿಸಿದರು. ಮುಂದಿನ ಸುತ್ತಿನಲ್ಲಿ ಅರ್ಜೆಂಟೀನಾದ ಸೆಗುಂಡೊ ಪೊರ್ಟಾಬ್ಲೆಸ್ ಅವರನ್ನು ಎದುರಿಸಲಿದ್ದಾರೆ.

ಬಾಲಕರ 3ನೇ ಸುತ್ತಿನ ಮತ್ತೊಂದು ಪಂದ್ಯದಲ್ಲಿ ಭಾರತದ ಯುವರಾಜ್ ಮಾಧವಾಣಿ ಅವರು 11-8, 6-11, 11-7, 8-11, 6-11ರಿಂದ ಈಕ್ವೆಡಾರ್‌ನ ಎಮಿಲಿಯೊ ಲೋಪೆಜ್ ವಿರುದ್ಧ ಸೋಲನುಭವಿಸಿದರು.

ಬಾಲಕಿಯರ ವಿಭಾಗದಲ್ಲಿ ಟಿಯಾನಾ ಪಾರಸ್‌ರಾಮ್‌ಪುರಿ ಅವರು ಫ್ರಾನ್ಸ್‌ನ ಲೌರೆನ್ ವಿರುದ್ಧ ಸೋತರು.

ಕ್ವಾರ್ಟರ್ ಫೈನಲ್‌ಗೆ ಸರ್ವಜ್ಞನಗರ, ರಾಜಾಜಿನಗರ ತಂಡಗಳು

ಬೆಂಗಳೂರು: ರಾಜಾಜಿನಗರ ವಿಧಾನಸಭಾ ಕ್ಷೇತ್ರ ತಂಡ ಮತ್ತು ಸರ್ವಜ್ಞ ನಗರ ವಿಧಾನಸಭಾ ಕ್ಷೇತ್ರ ತಂಡಗಳು ಮುಖ್ಯಮಂತ್ರಿ ಕಪ್ ಫುಟ್‌ಬಾಲ್ ಟೂರ್ನಿಯ ಕ್ವಾರ್ಟರ್ ಫೈನಲ್ ಪ್ರವೇಶಿಸಿವೆ.

ಭಾನುವಾರ ನಡೆದ ಸಿ ಗುಂಪಿನ ಪಂದ್ಯದಲ್ಲಿ ಅಗ್ರಸ್ಥಾನದಲ್ಲಿರುವ ರಾಜಾಜಿನಗರ ವಿಧಾನಸಭಾ ಕ್ಷೇತ್ರ ತಂಡವು 4–1 ಗೋಲುಗಳ ಅಂತರದಲ್ಲಿ ಸರ್ವಜ್ಞನಗರ ತಂಡವನ್ನು ಸೋಲಿಸಿತು. ಗುಂಪಿನಲ್ಲಿ ದ್ವಿತೀಯ ಸ್ಥಾನದಲ್ಲಿರುವ ಸರ್ವಜ್ಞ ನಗರ ತಂಡವೂ ಕ್ವಾರ್ಟರ್ ಫೈನಲ್‌ಗೆ ಅರ್ಹತೆ ಪಡೆದಿದೆ.

ರಾಜಾಜಿನಗರ ತಂಡದ ಪರ ಮೋನಿಷ್‌ಕುಮಾರ್ ಜಿ.(7ನೇ ನಿ), ಅರುಣ್ ಪಾಂಡೆ ಕೆ.(49ನೇ ನಿ), ಕವಿರಾಸನ್ (53ನೇ ನಿ), ಅಭಿಷೇಕ್ ಎ.(67ನೇ ನಿ) ಗೋಲು ಗಳಿಸಿದರು. ಸರ್ವಜ್ಞನಗರದ ಪರ ಯೋಗಿತ್ ಎನ್. (69ನೇ ನಿ) ಏಕೈಕ ಗೋಲು ದಾಖಲಿಸಿದರು.

ಸಿ ಗುಂಪಿನ ಮತ್ತೊಂದು ಪಂದ್ಯದಲ್ಲಿ ಗಾಂಧಿನಗರ ವಿಧಾನಸಭಾ ಕ್ಷೇತ್ರ ತಂಡವು 2–1 ಗೋಲುಗಳ ಅಂತರದಿಂದ ಗೋವಿಂದರಾಜ ನಗರ ವಿಧಾನಸಭಾ ಕ್ಷೇತ್ರ ತಂಡವನ್ನು ಸೋಲಿಸಿತು. ಗಾಂಧಿನಗರ ತಂಡದ ಪರ ಶರಣ್ ರಾಜ್ (9ನೇ ನಿ), ಸತೀಶ್ (50ನೇ ನಿ) ತಲಾ ಒಂದು ಗೋಲು ಗಳಿಸಿದರು. ಗೋವಿಂದರಾಜ ನಗರ ಪರ ಸೂರಜ್ ಡಿ.(21ನೇ ನಿ) ಒಂದು ಗೋಲು ದಾಖಲಿಸಿದರು.

ಮಂಗಳವಾರ ಕ್ವಾರ್ಟರ್ ಫೈನಲ್ ಪಂದ್ಯಗಳು ನಡೆಯಲಿವೆ. ಶಾಂತಿನಗರ ಮತ್ತು ಪುಲಕೇಶಿ ನಗರ, ರಾಜಾಜಿನಗರ ಮತ್ತು ಯಲಹಂಕ ವಿಧಾನಸಭಾ ಕ್ಷೇತ್ರ ತಂಡಗಳು ಸೆಣಸಲಿವೆ.

ರಾಜ್ಯ ಮಹಿಳಾ ಬ್ಯಾಸ್ಕೆಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್

ಭರತ್ ಸ್ಪೋರ್ಟ್ಸ್ ಯೂನಿಯನ್‌ಗೆ ಜಯ

ಬೆಂಗಳೂರು: ರಾಜ್ಯ ಮಹಿಳಾ ಬ್ಯಾಸ್ಕೆಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್ ಲೀಗ್ ಪಂದ್ಯದಲ್ಲಿ ಭರತ್ ಸ್ಪೋರ್ಟ್ಸ್ ಯೂನಿಯನ್ ತಂಡವು ರಿತಿಕಾ (16) ಮತ್ತು ವ್ಯೋಮಾ (13) ಅವರ ಉತ್ತಮ ಆಟದ ನೆರವಿನಿಂದ 67–32ರ ಅಂತರದಲ್ಲಿ ಅಪ್ಪಯ್ಯ ಬ್ಯಾಸ್ಕೆಟ್‌ಬಾಲ್ ಕ್ಲಬ್ ತಂಡದ ವಿರುದ್ಧ ಭರ್ಜರಿ ಜಯ ದಾಖಲಿಸಿತು.

ಕಂಠೀರವ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಇನ್ನೊಂದು ಪಂದ್ಯದಲ್ಲಿ ಕೋರಮಂಗಲ ಸ್ಪೋರ್ಟ್ಸ್ ಕ್ಲಬ್ ತಂಡವು 21–12ರಿಂದ ಕೋಲಾರ ಜಿಲ್ಲಾ ತಂಡವನ್ನು ಸೋಲಿಸಿತು. ಕೋರಮಂಗಲದ ಪರ ಯೋಗಿತಾ ಮತ್ತು ಕೋಲಾರದ ಪರ ಜಯಶ್ರೀಜಾ ತಲಾ 5 ವೈಯಕ್ತಿಕ ಸ್ಕೋರ್ ದಾಖಲಿಸಿದರು.

ಮತ್ತೊಂದು ಪಂದ್ಯದಲ್ಲಿ ಕ್ರೀಡಾ ಮತ್ತು ಯುವ ಸಬಲೀಕರಣ ಇಲಾಖೆ ವಿದ್ಯಾನಗರ ತಂಡವು ದೀಪಿಕಾ (25) ಮತ್ತು ಶೀತಲ್ (10) ಅವರ ಉತ್ತಮ ಆಟದ ನೆರವಿನಿಂದ 57–43ರಿಂದ ವಿಮಾನಪುರ ಸ್ಪೋರ್ಟ್ಸ್ ಕ್ಲಬ್ ತಂಡವನ್ನು ಸೋಲಿಸಿತು. ವಿಮಾನಪುರದ ಪರ ಮೋನಿದೀಪ್ ರಾಣಾ 23 ವೈಯಕ್ತಿಕ ಸ್ಕೋರ್ ದಾಖಲಿಸಿದರು.

ಬೆಂಗಳೂರು ವ್ಯಾನ್‌ಗಾರ್ಡ್ಸ್ ತಂಡವು 63–33ರ ಬೃಹತ್ ಅಂತರದಿಂದ ವಿಜಯಪುರ ಜಿಲ್ಲಾ ತಂಡವನ್ನು ಮಣಿಸಿತು.

ವ್ಯಾನ್‌ಗಾರ್ಡ್ಸ್ ಪರ ಪ್ರಿಯಾಂಕಾ 18, ಪ್ರಶಿತಾ 13 ವೈಯಕ್ತಿಕ ಸ್ಕೋರ್ ದಾಖಲಿಸಿ ಗೆಲುವಿಗೆ ಕಾರಣರಾದರು. ವಿಜಯಪುರ ಜಿಲ್ಲಾ ತಂಡದ ಪರ ಲಲಿತಾ 16 ಸ್ಕೋರ್ ಗಳಿಸಿದರು.

ಎಚ್‌ಬಿಆರ್ ಬ್ಯಾಸ್ಕೆಟ್‌ಬಾಲ್ ಕ್ಲಬ್ ತಂಡವು 43–40ರಿಂದ ರೋವರ್ಸ್ ಧಾರವಾಡ ತಂಡದ ವಿರುದ್ಧ ಜಯಗಳಿಸಿತು. ಎಚ್‌ಬಿಆರ್ ಪರ ಸುನೈನಾ 9 ಮತ್ತು ಧಾರವಾಡದ ಪರ ದೀಪಿಕಾ 18 ವೈಯಕ್ತಿಕ ಸ್ಕೋರ್ ದಾಖಲಿಸಿದರು.

ಯಂಗ್ ಓರಿಯನ್ಸ್ ಸ್ಪೋರ್ಟ್ಸ್ ಕ್ಲಬ್ ತಂಡವು 71–16ರಿಂದ ವಿವೇಕ್ ಸ್ಪೋರ್ಟ್ಸ್ ಕ್ಲಬ್ ವಿರುದ್ಧ ಬೃಹತ್ ಜಯ ದಾಖಲಿಸಿತು. ಓರಿಯನ್ಸ್ ಪರ ಮಧುರವಾಣಿ 10 ಮತ್ತು ವಿವೇಕ್ ಕ್ಲಬ್ ಪರ ಧ್ರುತಿ 9 ವೈಯಕ್ತಿಕ ಸ್ಕೋರ್ ಗಳಿಸಿದರು.

ಯಲಹಂಕ ನ್ಯೂಟೌನ್ ಬ್ಯಾಸ್ಕೆಟ್‌ಬಾಲ್ ಕ್ಲಬ್ ತಂಡವು 31–10ರಿಂದ ಮಲ್ಲಸಜ್ಜನ ಬ್ಯಾಸ್ಕೆಟ್‌ಬಾಲ್ ಕ್ಲಬ್ ಧಾರವಾಡ ತಂಡದ ವಿರುದ್ಧ ಜಯ ಗಳಿಸಿತು. ಯಲಹಂಕ ಪರ ಹಂಸ 11 ಮತ್ತು ಮಲ್ಲಸಜ್ಜನ ತಂಡದ ಪರ ಸಹನಾ 8 ವೈಯಕ್ತಿಕ ಸ್ಕೋರ್ ದಾಖಲಿಸಿದರು.

ಒಲಿಂಪಿಕ್ಸ್: ಪುರುಷರ 71 ಕೆ.ಜಿ. ವಿಭಾಗದಲ್ಲಿ ಸ್ಪರ್ಧೆ

ಚಿನ್ನಕ್ಕೆ ಪಂಚ್ ಮಾಡುವ ಛಲದಲ್ಲಿ ನಿಶಾಂತ್

ನವದೆಹಲಿ (ಪಿಟಿಐ): ಒಲಿಂಪಿಕ್ ಕೂಟಗಳ ಇತಿಹಾಸದಲ್ಲಿ ಭಾರತದ ಬಾಕ್ಸಿಂಗ್ ಕ್ರೀಡಾಪಟುಗಳು ಇದುವರೆಗೆ 3 ಕಂಚಿನ ಪದಕಗಳನ್ನು ಜಯಿಸಿದ್ದಾರೆ.

ಇದೇ ತಿಂಗಳು ಪ್ಯಾರಿಸ್‌ನಲ್ಲಿ ಆರಂಭವಾಗುವ ಒಲಿಂಪಿಕ್ಸ್‌ನಲ್ಲಿ ಚಿನ್ನ ಜಯಿಸುವ ಮೂಲಕ ಪದಕದ ಬಣ್ಣ ಬದಲಾಯಿಸುವುದಾಗಿ ಬಾಕ್ಸರ್ ನಿಶಾಂತ್ ದೇವ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ವಿಜೇಂದರ್ ಸಿಂಗ್ (2008), ಎಂ.ಸಿ. ಮೇರಿ ಕೋಮ್ (2012) ಮತ್ತು ಲವ್ಲೀನಾ ಬೊರ್ಗೊಹೈನ್ (2021) ಕಂಚು ಜಯಿಸಿದ್ದರು.

'ಭಾರತ ಚಿನ್ನದ ಪದಕ ಗೆದ್ದು ತರುವುದೇ ನನ್ನ ಪರಮ ಗುರಿ. ಪದಕದ ಬಣ್ಣ ಬದಲಿಸುವುದು ಧ್ಯೇಯ. ಈ ಹಿಂದೆ ನಮ್ಮ ಬಾಕ್ಸಿಂಗ್ ಕ್ರೀಡಾಪಟುಗಳು ಕಂಚು ಜಯಿಸಿದ್ದಾರೆ. ಆದರೆ ಇದುವರೆಗೆ ಯಾರೂ ಚಿನ್ನ ಅಥವಾ ಬೆಳ್ಳಿ ಜಯಿಸಿಲ್ಲ' ಎಂದು 23 ವರ್ಷದ ನಿಶಾಂತ್ ಜೆಎಸ್‌ಡಬ್ಲ್ಯು ಸ್ಪೋರ್ಟ್ಸ್ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದರು.

ಪುರುಷರ 71 ಕೆ.ಜಿ. ವಿಭಾಗದಲ್ಲಿ ಹರಿಯಾಣದ ನಿಶಾಂತ್ ರಿಂಗ್‌ಗೆ ಇಳಿಯಲಿದ್ದಾರೆ. 2021ರಲ್ಲಿ ಅವರು ವಿಶ್ವ ಚಾಂಪಿಯನ್‌ಷಿಪ್ ಕ್ವಾರ್ಟರ್‌ಫೈನಲ್ ತಲುಪಿ ಗಮನ ಸೆಳೆದಿದ್ದರು. ಹೋದ ವರ್ಷ ವಿಶ್ವ ಬಾಕ್ಸಿಂಗ್‌ನಲ್ಲಿ ಕಂಚು ಜಯಿಸಿದ್ದರು.

ನಿಶಾಂತ್ ದೇವ್

'ಅದು ನನ್ನ ಜೀವನದ ಮೊಟ್ಟಮೊದಲ ಅಂತರರಾಷ್ಟ್ರೀಯ ಪದಕವಾಗಿತ್ತು. ನನ್ನ ಪಾಲಿಗೆ ಅದು ದೊಡ್ಡ ಸಾಧನೆ' ಎಂದು ನಿಶಾಂತ್ ಹೇಳಿದರು.

'ಆ ಕ್ವಾರ್ಟರ್‌ಫೈನಲ್‌ನಲ್ಲಿ ನಾನು ಕ್ಯೂಬಾ ಸ್ಪರ್ಧಿಯನ್ನು ಸುಲಭವಾಗಿ ಸೋಲಿಸಿದ್ದೆ. ಆಗ ಶೇಕಡಾ 100ರಷ್ಟು ಸಮರ್ಪಣಾಭಾವದಿಂದ ಆಡಿದಾಗ ಯಶಸ್ಸು ಸಾಧ್ಯವೆಂಬುವು ನನ್ನ ಅರಿವಿಗೆ ಬಂದಿತು. ಜಗತ್ತಿನ ಯಾವುದೇ ದೇಶದ ಬಾಕ್ಸರ್ ಎದುರೂ ಜಯಿಸಬಲ್ಲೆ ಎಂಬ ಆತ್ಮವಿಶ್ವಾಸ ಮೂಡಿತು. ಅದರೊಂದಿಗೆ ಬಲಾಢ್ಯ ದೇಶದ ಸ್ಪರ್ಧಿಗಳನ್ನು ಎದುರಿಸುವ ಭಯದ ಭಾವನೆಯಿಂದ ನಾನು ಹೊರಬಂದೆ' ಎಂದರು.

'ಮೂರನೇ ಸುತ್ತಿನ ಹೊತ್ತಿಗೆ ನಾನು ಬಳಲಿಬಿಡುತ್ತಿದ್ದೆ. ಅದಕ್ಕಾಗಿ ಸಾಮರ್ಥ್ಯವೃದ್ಧಿಗಾಗಿ ಅಭ್ಯಾಸ ಮಾಡಿದೆ. ತಂತ್ರಗಾರಿಕೆ ಮತ್ತು ದೇಹದ ಆಕಾರದಲ್ಲಿ ಕೆಲವು ಬದಲಾವಣೆಗಳನ್ನು ಮಾಡಿಕೊಂಡಿರುವೆ' ಎಂದು ಹೇಳಿದರು.

ಹೋದ ಮೇ ತಿಂಗಳಿನಲ್ಲಿ ಬ್ಯಾಂಕಾಕ್‌ನಲ್ಲಿ ನಡೆದಿದ್ದ ಒಲಿಂಪಿಕ್ ಕ್ವಾಲಿಫೈಯಿಂಗ್ ಸ್ಪರ್ಧೆಯಲ್ಲಿ ಅವರು ಅರ್ಹತೆ ಗಿಟ್ಟಿಸಿದ್ದರು.